# ಅಧ್ಯಾಪಕರ ಪತ್ರ

# TEACHERS' TEXT

# ಕನ್ನಡ

# KANNADA

## ತರಗತಿ III

ಕೇರಳ ಸರಕಾರ
ಶಿಕ್ಷಣ ಇಲಾಖೆ

ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಸಮಿತಿ (SCERT), ಕೇರಳ
2014

## ರಾಷ್ಟ್ರಗೀತೆ

ಜನಗಣಮನ ಅಧಿನಾಯಕ ಜಯಹೇ
ಭಾರತ ಭಾಗ್ಯವಿಧಾತಾ,
ಪಂಜಾಬಸಿಂಧು ಗುಜರಾತ ಮರಾಠಾ
ದ್ರಾವಿಡ ಉತ್ಕಲ ಬಂಗಾ,
ವಿಂಧ್ಯಹಿಮಾಚಲ ಯಮುನಾಗಂಗಾ,
ಉಚ್ಛಲ ಜಲಧಿತರಂಗಾ,
ತವಶುಭನಾಮೇ ಜಾಗೇ,
ತವಶುಭ ಆಶಿಷ ಮಾಗೇ,
ಗಾಹೇ ತವ ಜಯ ಗಾಥಾ
ಜನಗಣಮಂಗಲದಾಯಕ ಜಯಹೇ
ಭಾರತ ಭಾಗ್ಯವಿಧಾತಾ
ಜಯಹೇ, ಜಯಹೇ, ಜಯಹೇ,
ಜಯ ಜಯ ಜಯ ಜಯಹೇ!

## ಪ್ರತಿಜ್ಞೆ

ಭಾರತವು ನನ್ನ ದೇಶ. ಭಾರತೀಯರೆಲ್ಲರೂ ನನ್ನ ಸಹೋದರ, ಸಹೋದರಿಯರು.

ನಾನು ನನ್ನ ದೇಶವನ್ನು ಪ್ರೀತಿಸುತ್ತೇನೆ. ಅದರ ಸಂಪನ್ನ ಹಾಗೂ ವೈವಿಧ್ಯಪೂರ್ಣವಾದ ಪರಂಪರೆಗೆ ನಾನು ಹೆಮ್ಮೆಪಡುತ್ತೇನೆ.

ನಾನು ನನ್ನ ತಂದೆ, ತಾಯಿ ಮತ್ತು ಗುರುಹಿರಿಯರನ್ನು ಗೌರವಿಸುತ್ತೇನೆ ಮತ್ತು ಎಲ್ಲರೊಡನೆ ಸೌಜನ್ಯದಿಂದ ವರ್ತಿಸುತ್ತೇನೆ.

ನಾನು ನನ್ನ ದೇಶದ ಮತ್ತು ಜನತೆಯ ಕ್ಷೇಮ ಮತ್ತು ಸಮೃದ್ಧಿಗಾಗಿ ಸದಾ ಪ್ರಯತ್ನಿಸುತ್ತೇನೆ.

***Prepared by*** :
**State Council of Educational Research and Training (SCERT)**
Poojappura, Thiruvananthapuram 695 012, Kerala

*Website* : www.scertkerala.gov.in
*E-mail* : scertkerala@gmail.com
Phone : 0471-2341883, Fax : 0471-2341869
Typesetting and Layout : SCERT
Printed at : KBPS, Kakkanad, Kochi
© Department of Education, Government of Kerala

# ಮುನ್ನುಡಿ

ಆತ್ಮೀಯ ಅಧ್ಯಾಪಕರೇ,

ಭಾಷಾ ತರಗತಿಯಲ್ಲಿ ಮಕ್ಕಳು ಬಹಳಷ್ಟು ಸಾಮರ್ಥ್ಯಗಳನ್ನು ಗಳಿಸಬೇಕಲ್ಲವೇ? ಈ ಉದ್ದೇಶಕ್ಕಾಗಿಯೇ ಪಠ್ಯಪುಸ್ತಕ, ಅಧ್ಯಾಪಕರ ಕೈಪಿಡಿ ಹಾಗೂ ಧ್ವನಿ ಮುದ್ರಿಕೆಗಳನ್ನು ತಯಾರಿಸಲಾಗಿದೆ. ಪಠ್ಯಪುಸ್ತಕದಲ್ಲಿ ಸೂಚಿಸಿದಂತೆ ಭಾಷಾ ಸಾಮರ್ಥ್ಯಗಳನ್ನು ಬೆಳೆಸಿಕೊಳ್ಳಲು ಅನುಕೂಲವಾಗುವಂತೆ ಕನ್ನಡ ಸಾಮರ್ಥ್ಯಗಳನ್ನು ಬೆಳೆಸಿಕೊಳ್ಳಲು ಅನುಕೂಲವಾಗುವಂತೆ ಕನ್ನಡ ಪಠ್ಯಪುಸ್ತಕವನ್ನು ರಚಿಸಲಾಗಿದೆ. ಪಠ್ಯಪುಸ್ತಕದಲ್ಲಿ ಹೇಳಿದ ಕಲಿಕಾ ಸಾಧನೆಗಳನ್ನು ಪೂರೈಸಲು ಸಾಧ್ಯವಾಗುವಂತೆ ಮಕ್ಕಳಿಗೆ ನೆರವಾಗುವುದು ಅಧ್ಯಾಪಕರ ಜವಾಬ್ದಾರಿಯಲ್ಲವೇ? ಈ ನಿಟ್ಟಿನಲ್ಲಿ ಭಾಷಾ ಕಲಿಕೆಗೆ ಸಹಾಯವಾಗುವಂತೆ ಪ್ರಕೃತ ಕೈಪಿಡಿಯನ್ನು ರೂಪಿಸಲಾಗಿದೆ. ಇದರಲ್ಲಿ ನೀಡಿರುವ ನಿರ್ದೇಶಗಳು, ಸೂಚನೆಗಳು, ಚಟುವಟಿಕೆಗಳು, ಉದಾಹರಣೆಗಳು, ಮಾದರಿ ಎಲ್ಲವೂ ಅಧ್ಯಾಪಕರ ಸಹಾಯಕ್ಕಾಗಿ ರೂಪುಗೊಂಡವು ಎಂಬುದನ್ನು ಪರಿಗಣಿಸಿ ಬೋಧನಾ ಪ್ರಕ್ರಿಯೆಯನ್ನು ಫಲಪ್ರದವಾಗಿಸಲು ನೀವೆಲ್ಲರೂ ಶ್ರಮಿಸುವಿರೆಂದು ಭಾವಿಸುತ್ತೇನೆ. ನಿಮ್ಮ ಅಧ್ಯಾಪನ ಪ್ರಕ್ರಿಯೆಯಲ್ಲಿ ಮಕ್ಕಳು ಪರಿಪೂರ್ಣ ಜ್ಞಾನ ಸಂಪನ್ನರಾಗಲು
ಈ ಕೈಪಿಡಿಯು ಸಹಕಾರಿಯಾಗಲಿ.

ಶುಭಾಶಯಗಳೊಂದಿಗೆ

**ಪ್ರೊ. ಕೆ.ಎ. ಹಾಷಿಂ**
ನಿರ್ದೇಶಕರು
ಎಸ್.ಸಿ.ಇ.ಆರ್.ಟಿ

# TEACHER TEXT

## KANNADA - III

**Participants**

Divyashree, Udyawara
Harisha, NHSS Perdala
Jyothikumari P.V., GHSS Uppala
Kamalaksha Nayak, GWLPS Kajampady
Kumara Subrahmanya M., DIET Lab School, Maipady.
Mamatha K., AUPS Pallathadka.
Prakash B.M., GJBS Pilankatte.
Shriharsha M.P., GWLPS Kasaragod.
Usha Kumari K., GFHSS Bekal.
Vanishree C.H., SSALPS Marikana.

**Experts**

Dr. Rathnakara Mallamoole, Asst. Professor, Govt.College, Kasaragod.
Shridhara N., Asst. Professor, Govt.College, Kasaragod.
Dr. Srikrishna Bhat P., Professor (Rtd), Govt. College, Kasaragod.

**Academic Co-ordinator**

Dr. C. Bhamini, Research Officer, SCERT, Thiruvananthapuram

**State Council of Educational Research and Training (SCERT)**
Vidyabhavan, Poojappura, Thiruvananthapuram-695012

# ಅನುಕ್ರಮಣಿಕೆ


| | | |
|---|---|---|
| | ಸಾಮಾನ್ಯ ಸಮೀಪನಗಳು | 7–62 |
| 1. | ನಿಸರ್ಗದ ಮಡಿಲಲ್ಲಿ | 63–82 |
| 2. | ಕಟ್ಟುವೆವು ಹೊಸ ನಾಡೊಂದನು | 83–102 |
| 3. | ಹರುಷದ ವರುಷ | 103–118 |
| 4. | ದುಡಿಮೆಯ ಹಿರಿಮೆ | 119–132 |
| 5. | ಸಮರಸವೇ ಜೀವನ | 133–150 |
| 6. | ಬಿತ್ತಿದಂತೆ ಬೆಳೆ | 151–166 |
| 7. | ಕೂಡಿ ಬಾಳೋಣ | 167–178 |
| 8. | ಮಮತೆಯ ಮಡಿಲು | 179–190 |
| 9. | ಕಲ್ಲು ಸಕ್ಕರೆ | 191–204 |

# 1. ನಿಸರ್ಗದ ಮಡಿಲಲ್ಲಿ

ಪ್ರಕೃತಿಯು ನಮ್ಮ ಜೀವನದ ಅವಿಭಾಜ್ಯ ಅಂಗ. ಹಸುರಿನಿಂದ ಕಂಗೊಳಿಸುವ ಗಿಡಮರಗಳು. ಎತ್ತರವಾದ ಗುಡ್ಡಬೆಟ್ಟಗಳು ಬೀಸುವ ತಂಪಾದ ಗಾಳಿ ಜುಳು ಜುಳು, ಹರಿಯುವ ನೀರಿನ ನಿನಾದ, ಹಾರಾಡುತ್ತಿರುವ ಹಕ್ಕಿಗಳ ಕಲರವ ಇವೆಲ್ಲ ನಮ್ಮ ಮನಸ್ಸನ್ನು ಮುದಗೊಳಿಸುತ್ತವೆ.

ಇಂತಹ ಸೌಂದರ್ಯವನ್ನು ಸವಿಯಲು, ಪ್ರಕೃತಿಯ ಮಹತ್ವವನ್ನು ತಿಳಿದು ಅದನ್ನು ಸಂರಕ್ಷಿಸಿ ಮುಂದಿನ ಪೀಳಿಗೆಗೆ ಹಸ್ತಾಂತರಿಸುವಂತೆ ಮಕ್ಕಳನ್ನು ಪ್ರೇರೇಪಿಸುವುದು ಈ ಘಟಕದ ಉದ್ದೇಶವಾಗಿದೆ.

ಬೀರಪ್ಪ ಕುರಿಯ ಬಿಟ್ಟ ಎಂಬ ಜನಪದ ಗೀತೆಯಲ್ಲಿ ಮಳೆ ಬಂದಾಗ ಪರಿಸರದಲ್ಲಿ ಉಂಟಾಗುವ ಬದಲಾವಣೆಗಳು ಮತ್ತು ಜನರು ತಮ್ಮನ್ನು ಕೃಷಿ ಕೆಲಸಗಳಲ್ಲಿ ತೊಡಗಿಸಿಕೊಳ್ಳುವ ಬಗೆಗಿನ ಚಿತ್ರಣವಿದೆ.

ಈ ಘಟಕದ ಎರಡನೇ ಪಾಠವಾಗಿ ಹೊಳೆಯ ಆತ್ಮಕಥೆಯನ್ನು ಕೊಡಲಾಗಿದೆ. ಹೊಳೆಯೊಂದು ಹುಟ್ಟುವಲ್ಲಿಂದ ಸಮುದ್ರವನ್ನು ಸೇರುವವರೆಗಿನ ವಿವಿಧ ಹಂತಗಳು ಹಾಗೂ ಹೊಳೆಯ ವಿವಿಧ ಪ್ರಯೋಜನಗಳನ್ನು ಹೇಳಲಾಗಿದೆ. 'ಆತ್ಮಕಥೆ' ಎಂಬ ವ್ಯವಹಾರ ರೂಪವನ್ನು ಪರಿಚಯಿಸುವುದು ಈ ಪಾಠಭಾಗದ ಪ್ರಧಾನ ಉದ್ದೇಶವಾಗಿದೆ.

'ಭಾಗ್ಯದೇವತೆ' ಎಂಬ ಕಥಾಭಾಗದಲ್ಲಿ ಪ್ರಕೃತಿನಾಶದಿಂದ ಉಂಟಾಗುವ ತೊಂದರೆಗಳು ಮತ್ತು ಆ ತೊಂದರೆಗಳನ್ನು ದೂರೀಕರಿಸಿದ ರೀತಿಯನ್ನು ತಿಳಿಸಲಾಗಿದೆ. ಪ್ರಕೃತಿಯನ್ನು ಹಾಳು ಮಾಡದೆ ಉಳಿಸಿ ಬೆಳೆಸಿ ಮುಂದಿನ ಪೀಳಿಗೆಗೆ ಹಸ್ತಾಂತರಿಸಬೇಕೆಂಬ ಮನೋಭಾವವನ್ನು ಈ ಪಾಠದ ಮೂಲಕ ಮಕ್ಕಳಲ್ಲಿ ಬೆಳೆಸಲು ಉದ್ದೇಶಿಸಲಾಗಿದೆ.

ಪಾಠದ ಸಂದರ್ಭದಲ್ಲಿ I.C.T. ಯನ್ನು ತರಗತಿಕೋಣೆಯಲ್ಲಿ ಯೋಗ್ಯವಾದ ರೀತಿಯಲ್ಲಿ ಬಳಸಬೇಕು.

**ಕಲಿಕಾ ಸಾಧನೆಗಳು**

- ದೃಶ್ಯಗಳು, ಘಟನೆಗಳು ಮೊದಲಾದವುಗಳನ್ನು ವಿಶ್ಲೇಷಿಸಿ ಸೂಕ್ತವಾದ ಭಾಷೆ, ಉಚ್ಚಾರ ಸ್ಪಷ್ಟತೆಯೊಂದಿಗೆ ಬಾಯ್ದೆರೆಯಾಗಿ ವಿವರಿಸುವುದು.
- ಪದ ಪ್ರಯೋಗಗಳು, ಶೈಲಿಗಳು, ಆಲಿಸಿದ ನೂತನ ಪದಗಳು ಮೊದಲಾದವುಗಳನ್ನು ಸಂದರ್ಭಕ್ಕನು ಗುಣವಾಗಿ ಮಾತುಗಾರಿಕೆಯಲ್ಲಿ ಬಳಸುವುದು.
- ಕಥೆ, ಕವಿತೆ, ಲಘು ಟಿಪ್ಪಣಿಗಳನ್ನು ಆಲಿಸಿ, ಓದಿ ತನ್ನದೇ ಭಾಷೆಯಲ್ಲಿ ಹೇಳುವುದು ಹಾಗೂ ಬರೆಯುವುದು.
- ಕವಿತೆಗಳನ್ನು ಆಲಿಸಿ, ಆಸ್ವಾದಿಸಿ ಅವುಗಳ ಆಶಯವನ್ನು ಅರ್ಥೈಸಿಕೊಂಡು ರಾಗ, ತಾಳ, ಭಾವಗಳಿಂದ ಹಾಡುವುದು.
- ಸಮಾನ ಪದಗಳು ಮತ್ತು ಸರ್ವನಾಮಗಳನ್ನು ಉಪಯೋಗಿಸಿಕೊಂಡು ಸೃಜನಾತ್ಮಕ ರಚನೆಗಳಾದ, ಲಘುಟಿಪ್ಪಣಿಗಳು, ಸರಳಕಥೆಗಳು ಮೊದಲಾದವುಗಳನ್ನು ರಚಿಸುವುದು.
- ನಿರ್ದಿಷ್ಟ ಭಾಷಾ ವ್ಯವಹಾರ ರೂಪಗಳನ್ನು ಶ್ರೋತೃಗಳಿಗೆ ಆಶಯ ಸ್ಪಷ್ಟವಾಗುವ ರೀತಿಯಲ್ಲಿ ಉಚ್ಚಾರ ಸ್ಪಷ್ಟತೆಯಿಂದ ಸರಾಗವಾಗಿ ಓದುವುದು.
- ಜನಪದ ಗೀತೆಗಳು, ಕವಿತೆಗಳು ಮೊದಲಾದವುಗಳ ಶಬ್ದಸೌಂದರ್ಯವನ್ನು ಅರ್ಥೈಸಿಕೊಂಡು ಹಾಡುವುದು.
- ಕಥೆ, ಕವಿತೆಗಳನ್ನು ಆಲಿಸಿ ಅವುಗಳಿಗೆ ಸೂಕ್ತವಾದ ಶೀರ್ಷಿಕೆಗಳನ್ನು ಸೂಚಿಸಿ ಔಚಿತ್ಯವನ್ನು ತಿಳಿಸುವುದು.
- ಭಾಷಾ ವ್ಯವಹಾರ ರೂಪಗಳನ್ನು ಬೇರೆ ಬೇರೆ ರೀತಿಯಲ್ಲಿ ರೂಪಾಂತರಿಸುವುದು.

# ಯೂನಿಟ್ ಗ್ರಿಡ್ : 1. ನಿಸರ್ಗದ ಮಡಿಲಲ್ಲಿ

| ಆಶಯ | ಪ್ರಕ್ರಿಯೆಗಳು | ಕಲಿಕಾ ಸಾಧನೆಗಳು |
|---|---|---|
| **1. ಬೀರಪ್ಪ ಕುರಿಯ ಬಿಟ್ಟ** | | **ಸಮಯ : 5 ಗಂಟೆಗಳು** |
| • ರಾಗ, ತಾಳ ಭಾವಗಳೊಂದಿಗೆ ಲಯಬದ್ಧವಾಗಿ ಜನಪದ ಗೀತೆಗಳನ್ನು ಹಾಡುವಾಗ ಪದ್ಯವು ಆಸ್ವಾದಕರವಾಗುವುದು.<br>• ಬೀರಪ್ಪ ಕುರಿಯ ಬಿಟ್ಟ ಪದ್ಯವನ್ನು ರಾಗ, ತಾಳ, ಲಯ ಬದ್ಧವಾಗಿ ವೈಯಕ್ತಿಕವಾಗಿಯೂ ಗುಂಪಿನಲ್ಲಿಯೂ ಹಾಡುವುದು. | • ಹಾಡಿನ ಧ್ವನಿ ಮುದ್ರಿಕೆಯನ್ನು ಆಲಿಸಲು ಅವಕಾಶ ನೀಡುವುದು.<br>• ಪದ್ಯದ ಸಾಲುಗಳನ್ನು ಮಾದರಿಯಂತೆ ಬದಲಾಯಿಸಿ ಬರೆಯುವುದು.<br>• ಕಥೆ ಕವಿತೆ ಲಘು ಟಿಪ್ಪಣಿಗಳನ್ನು | • ಜನಪದ ಗೀತೆಗಳನ್ನು ಹಾಡಿ ಕವಿತೆಗಳು ಮೊದಲಾದವುಗಳ ಶಬ್ದ ಸೌಂದರ್ಯವನ್ನು ಅರ್ಥೈಸಿಕೊಂಡು ಹಾಡುವುದು.<br>• ಕವಿತೆಗಳನ್ನು ಆಲಿಸಿ ಆಸ್ವಾದಿಸಿ ಅವುಗ ಳ ಆಶಯಗಳನ್ನು ಅರ್ಥೈಸಿಕೊಂಡು ರಾಗ, ತಾಳ ಭಾವಗಳಿಂದ ಹಾಡುವುದು. |
| • ಸರಳ ವಾಕ್ಯಗಳಲ್ಲಿ ಪದ, ವಾಕ್ಯ ಅಕ್ಷರ ದೋಷವಿಲ್ಲದೆ ವಿವರಣೆಯು ಆಶಯ ಕ್ರಮೀಕೃತ ರಚನೆಯಾಗಿದೆ. | • ಮಳೆಗಾಲದ ಪ್ರಕೃತಿಯಲ್ಲಿ ಕಂಡುಬರುವ ದೃಶ್ಯಗಳನ್ನು ಬರೆಯುವುದು. | ಆಲಿಸಿ ಓದಿತನ್ನದೇ ಭಾಷೆಯಲ್ಲಿ ಹೇಳುವುದು ಹಾಗೂ ಬರೆಯುವುದು. |
| **2. ಹೊಳೆಯ ಆತ್ಮಕಥೆ** | | **ಸಮಯ : 7 ಗಂಟೆಗಳು** |
| • ನದಿಗಳು ನಮ್ಮ ಬದುಕಿಗೆ ಆಧಾರವಾಗಿವೆ.<br>• ಸರಳ ವಾಕ್ಯಗಳನ್ನು ಉಚ್ಚಾರ ಸ್ಪಷ್ಟತೆಯೊಂದಿಗೆ ಸರಾಗವಾಗಿ ಓದಿ ಪಾಠಭಾಗವನ್ನು ಅರ್ಥೈಸುವುದು. | • ಪಾಠ ಭಾಗವನ್ನು ಉಚ್ಚಾರ ಸ್ಪಷ್ಟತೆಯೊಂದಿಗೆ ಸರಾಗವಾಗಿ ಓದುವುದು.<br>• ಪಾಠ ಭಾಗದಲ್ಲಿ ನೀಡಿದ ಪ್ರಶ್ನೆಗಳಿಗೆ ಉತ್ತರವನ್ನು ಕಂಡುಹಿಡಿಯುವುದು. | • ಕಥೆ, ಕವಿತೆ, ಲಘುಟಿಪ್ಪಣಿಗಳನ್ನು ಆಲಿಸಿ ಓದಿ ತನ್ನದೇ ಭಾಷೆಯಲ್ಲಿ ಹೇಳುವುದು ಹಾಗೂ ಬರೆಯುವುದು.<br>• ನಿರ್ದಿಷ್ಟ ಭಾಷಾ ವ್ಯವಹಾರ ರೂಪವನ್ನು ಶ್ರೋತೃಗಳಿಗೆ ಆಶಯ ಸ್ಪಷ್ಟವಾಗುವ ರೀತಿಯಲ್ಲಿ ಉಚ್ಚಾರ ಸ್ಪಷ್ಟತೆಯಿಂದ ಸರಾಗವಾಗಿ ಓದುವುದು. |
| • ದೃಶ್ಯಗಳನ್ನು ನೋಡಿ, ವಿಚಾರಗಳನ್ನು ತಿಳಿದು ಆಶಯಗಳನ್ನು ತನ್ನದೇ ಮಾತುಗಳಲ್ಲಿ ಹೇಳುವುದು. | • ಕೃಷಿ ಬೆಳೆಗಳಿಗೆ ನೀರು ಹಾಯಿಸುವ ವಿಧಾನಗಳನ್ನು ತಿಳಿದು ಚರ್ಚೆಯಲ್ಲಿ ತಮ್ಮ ಅಭಿಪ್ರಾಯಗಳನ್ನು ಮಂಡಿಸುವುದು. | • ದೃಶ್ಯಗಳು ಘಟನೆಗಳು ಮೊದಲಾದವುಗಳನ್ನು ವಿಶ್ಲೇಷಿಸಿ ಸೂಕ್ತವಾದ ಭಾಷೆ ಉಚ್ಚಾರ ಸ್ಪಷ್ಟತೆಯೊಂದಿಗೆ ಬಾಯ್ದೆರೆಯಾಗಿ ವಿವರಿಸುವುದು.<br>• ಪದ ಪ್ರಯೋಗಗಳು ಶೈಲಿಗಳು ಆಲಿಸಿದ ನೂತನ ಪದಗಳು ಮೊದಲಾದವುಗಳನ್ನು ಸಂದರ್ಭಕ್ಕನುಗುಣವಾಗಿ ಮಾತುಗಾರಿಕೆಯಲ್ಲಿ ಬಳಸುವುದು. |

| ಆಶಯ | ಪ್ರಕ್ರಿಯೆಗಳು | ಕಲಿಕಾ ಸಾಧನೆಗಳು |
|---|---|---|
| • ನಾಮ ಪದಗಳಿಗೆ ಬದಲಾಗಿ ಯೋಗ್ಯವಾದ ಸರ್ವನಾಮಗಳನ್ನು ಉಪಯೋಗಿಸಿಕೊಂಡು ವಾಕ್ಯಗಳನ್ನು ಪೂರ್ತಿಗೊಳಿಸುವುದು.<br>• ಸರ್ವನಾಮಗಳ ಉಪಯೋಗವು ವಾಕ್ಯದಲ್ಲಿ ಬರುವ ನಾಮಪದಗಳ ಆವರ್ತನೆಯನ್ನು ಕಡಿಮೆ ಮಾಡುತ್ತದೆ. | • ಪಾಠಭಾಗದದ ಮಾದರಿಯಂತೆ ವಾಕ್ಯಗಳನ್ನು ಬದಲಾಯಿಸಿ ಬರೆಯುವುದು.<br>• ಮಾವಿನಕಾಯಿಯ ಆತ್ಮಕಥೆಯನ್ನು ತನ್ನದೇ ಶೈಲಿಯಲ್ಲಿ ಬರೆದು ಮಂಡಿಸುವುದು. | • ನವೀನ ಪದಗಳು ಮತ್ತು ಸರ್ವನಾಮಗಳನ್ನು ಉಪಯೋಗಿಸಿಕೊಂಡು ಸೃಜನಾತ್ಮಕ ರಚನೆಗಳಾದ ಲಘುಟಿಪ್ಪಣಿಗಳು, ಸರಳ ಕಥೆಗಳು ಮೊದಲಾದವುಗಳನ್ನು ರಚಿಸುವುದು. |
| **3. ಭಾಗ್ಯದೇವತೆ** | | **ಸಮಯ : 9 ಗಂಟೆಗಳು** |
| • ಭಾಷಾ ವ್ಯವಹಾರ ರೂಪಗಳನ್ನು ಸೂಕ್ತ ಸ್ವರ ಭಾರದೊಂದಿಗೆ ಉಚ್ಚಾರ ಸ್ಪಷ್ಟತೆ ಮತ್ತು ಆಶಯ ಸ್ಪಷ್ಟತೆಯೊಂದಿಗೆ ಓದುವುದು.<br>• ನೀರಿನ ಕ್ಷಾಮದ ಕಷ್ಟವನ್ನು ಅನುಭವಿಸುವವರು ನಮ್ಮೊಂದಿಗಿದ್ದಾರೆ.<br>• ಮರಗಳಿದ್ದರೆ ಮಾತ್ರ ಭೂಮಿಯಲ್ಲಿ ನೀರಿರಬಹುದು. | • ಪಾಠಭಾಗವನ್ನು ಉಚ್ಚಾರ ಸ್ಪಷ್ಟತೆಯೊಂದಿಗೆ ಸರಾಗವಾಗಿ ಓದುವುದು.<br>• ಕೊಟ್ಟಿರುವ ಪ್ರಶ್ನೆಗಳಿಗೆ ಪಾಠಭಾಗದಿಂದ ಉತ್ತರವನ್ನು ಕಂಡುಹಿಡಿದು ಬರೆಯುವುದು.<br>• ಪಾಠಭಾಗದ ಆಶಯಕ್ಕೆ ಅನುಗುಣವಾಗಿ ಕೊಟ್ಟಿರುವ ವಾಕ್ಯಗಳನ್ನು ಕ್ರಮೀಕರಿಸಿ ಬರೆಯುವುದು.<br>• ಕೊಟ್ಟಿರುವ ಪದಗಳನ್ನು ವಿಂಗಡಿಸಿ ಬರೆಯುವುದು.<br>• ಆವರಣದಲ್ಲಿ ಕೊಟ್ಟ ಪದಗಳನ್ನು ಬಿಟ್ಟ ಸ್ಥಳದಲ್ಲಿ ಬರೆದು ಗದ್ಯವನ್ನು ಪೂರ್ತಿಗೊಳಿಸು ಮಂಡಿಸುವುದು. | • ನಿರ್ದಿಷ್ಟ ಭಾಷಾ ವ್ಯವಹಾರ ರೂಪಗಳನ್ನು ಶ್ರೋತೃಗಳಿಗೆ ಆಶಯ ಸ್ಪಷ್ಟವಾಗುವ ರೀತಿಯಲ್ಲಿ ಉಚ್ಚಾರ ಸ್ಪಷ್ಟತೆಯಿಂದ ಸರಾಗವಾಗಿ ಓದುವುದು. |
| • ಕಥೆಯನ್ನು ಓದಿ, ಕಥಾಪಾತ್ರಗಳನ್ನು ತಿಳಿದುಕೊಂಡು ಆಶಯ ಸ್ಪಷ್ಟವಾಗುವಂತೆ ಸಂಭಾಷಣೆಯನ್ನು ರಚಿಸುವ ಸಾಮರ್ಥ್ಯವನ್ನು ಗಳಿಸುವುದು.<br>• ಕಥೆಯ ಆಶಯವನ್ನು ಕಂಡುಕೊಳ್ಳುವುದು.<br>• ಕಥಾವಸ್ತು, ಸೂಕ್ತವಾದ ಕಥಾಪಾತ್ರಗಳು, ಕಥಾಪಾತ್ರಕ್ಕೆ ಯೋಗ್ಯವಾದ ಭಾಷೆ ಎಂಬಿವುಗಳೊಂದಿಗೆ ನೈಜವಾಗಿ ಆವಿಷ್ಕರಿಸಿದಾಗ ಕಥೆಯು ಉತ್ತಮವಾಗುವುದು. | • ಸುಮತಿ ಮತ್ತು ರಾಜನೊಳಗೆ ನಡೆದ ಸಂಭಾಷಣೆಯನ್ನು ತರಗತಿಯಲ್ಲಿ ಚರ್ಚಿಸಿ ಯೋಗ್ಯ ರೀತಿಯಲ್ಲಿ ಅಭಿನಯಿಸುವುದು.<br>• ಅಭಿನಯಿಸಿದ ಪಾತ್ರಕ್ಕೆ ಯೋಗ್ಯವಾದ ಸಂಭಾಷಣೆಯನ್ನು ತರಗತಿಯಲ್ಲಿ ಬರೆದು ಮಂಡಿಸುವುದು. | • ಭಾಷಾ ವ್ಯವಹಾರ ರೂಪಗಳನ್ನು ಬೇರೆ ಬೇರೆ ರೀತಿಯಲ್ಲಿ ರೂಪಾಂತರಿಸುವುದು.<br>• ಓದಿ ಆಸ್ವಾದಿಸಿದ ಕಥೆಗಳು, ಕವಿತೆಗಳ ಪಾತ್ರಗಳ ಅಭಿನಯ ಮೂಕಾಭಿನಯ ಮಾಡುವುದು. |

| ಆಶಯ | ಪ್ರಕ್ರಿಯೆಗಳು | ಕಲಿಕಾ ಸಾಧನೆಗಳು |
|---|---|---|
| • ಚಿತ್ರವನ್ನು, ದೃಶ್ಯಗಳನ್ನು ನಿರೀಕ್ಷಣೆ ಮಾಡಿ, ಪದ, ವಾಕ್ಯ, ಅಕ್ಷರ ದೋಷವಿಲ್ಲದೆ ವಿವರಣೆಯನ್ನು ತಯಾರಿಸುವುದು.<br>• ಚಿತ್ರವನ್ನು ನಿರೀಕ್ಷಣೆ ಮಾಡುವುದು | ಪ್ರತ್ಯೇಕತೆಗಳನ್ನು ತಿಳಿದು ಅಕ್ಷರದೋಷವಿಲ್ಲದೆ ಬರೆದು ಮಂಡಿಸುವುದು. | • ದೃಶ್ಯಗಳು, ಘಟನೆಗಳು ಮೊದಲಾದವುಗಳನ್ನು ವಿಶ್ಲೇಷಿಸಿ ಸೂಕ್ತವಾದ ಭಾಷೆಯನ್ನು ಉಪಯೋಗಿಸಿ ಉಚ್ಚಾರ ಸ್ಪಷ್ಟತೆಯೊಂದಿಗೆ ಬಾಯ್ದೆರೆಯಾಗಿ ವಿವರಿಸುವುದು.<br>• ಕಥೆ, ಕವಿತೆ, ಲಘುಟಿಪ್ಪಣಿಗಳನ್ನು ಆಲಿಸಿ ಓದಿ ತನ್ನದೇ ಭಾಷೆಯಲ್ಲಿ ಹೇಳುವುದು ಹಾಗೂ ಬರೆಯುವುದು. |
| • ಚರ್ಚೆಯಲ್ಲಿ ಭಾಗವಹಿಸಿ ತನ್ನ ಅಭಿಪ್ರಾಯಗಳನ್ನು ಸ್ಪಷ್ಟವಾಗಿ ಹೇಳುವುದು. | • ರಾಜ ಸುಮತಿಯ ಸಲಹೆ ಪಡೆಯದಿದ್ದರೆ ಏನಾಗುತ್ತಿತ್ತು ಎಂದು ಚರ್ಚಿಸಿ ತಿಳಿದು ಅಭಿಪ್ರಾಯವನ್ನು ಕ್ರೋಡೀಕರಿಸುವುದು.<br>• ಭಾಷಾ ಆಟದ ಚಟುವಟಿಕೆಯನ್ನು ನಡೆಸಿ ಹೂಗಳ ಹೆಸರುಗಳನ್ನು ಬರೆಯುವುದು. | • ಪದ ಪ್ರಯೋಗಗಳು, ಶೈಲಿಗಳು, ಆಲಿಸಿದ ನೂತನ ಪದಗಳು ಮೊದಲಾದವುಗಳನ್ನು ಸಂದರ್ಭಕ್ಕನುಗುಣವಾಗಿ ಮಾತುಗಾರಿಕೆಯಲ್ಲಿ ಬಳಸುವುದು. |
| • ಆಶಯಗಳನ್ನು ಪ್ರತಿಬಿಂಬಿಸುವ ಸಾಲುಗಳು, ಸಾಲುಗಳಲ್ಲಿ ಸೂಕ್ತವಾದ ಪದಗಳು, ಸಾಲುಗಳ ಕ್ರಮೀಕರಣ, ತಾಳ ಎಂಬಿವುಗಳನ್ನು ಒಳಗೊಂಡಂತೆ ಕವಿತೆಗಳನ್ನು ಬರೆಯುವುದು.<br>• ಆಶಯ ಸ್ಪಷ್ಟತೆಯೊಂದಿಗೆ ಸೂಕ್ತವಾದ ಪದಗಳನ್ನು ಬಳಸಿಕೊಂಡು ಸಂಕ್ಷಿಪ್ತವಾದ ಶೀರ್ಷಿಕೆಯನ್ನು ಬರೆಯುವುದು. | • ಕೊಟ್ಟಿರುವ ವಾಕ್ಯಗಳನ್ನು ಓದಿ ಆಶಯವನ್ನು ತಿಳಿದು ಯೋಗ್ಯವಾದ ಸರಳ ಕವಿತೆಯನ್ನು ಬರೆದು ಮಂಡಿಸುವುದು. | • ಸರಳ ಕವಿತೆಗಳನ್ನು ರಾಗ, ತಾಳ, ಭಾವಗಳೊಂದಿಗೆ ಹಾಡುವುದು ಹಾಗೂ ಸಮಾನರಾಗದಲ್ಲಿ ಹಾಡಬಹುದಾದ ಸಾಲುಗಳನ್ನು ಬರೆಯುವುದು.<br>• ಕಥೆ, ಕವಿತೆಗಳನ್ನು ಆಲಿಸಿ ಅವುಗಳಿಗೆ ಸೂಕ್ತವಾದ ಶೀರ್ಷಿಕೆಗಳನ್ನು ಔಚಿತ್ಯವನ್ನು ತಿಳಿಸುವುದು. |
| • ರಜೆ ಅರ್ಜಿಯ ಪ್ರತ್ಯೇಕತೆಯನ್ನು ತಿಳಿದು ಬರೆಯುವ ಸಾಮರ್ಥ್ಯಗಳನ್ನು ಗಳಿಸುವುದು. | • ರಜೆ ಅರ್ಜಿ ಬರೆಯುವುದು. | • ಭಾಷಾ ವ್ಯವಹಾರ ರೂಪವನ್ನು ಬೇರೆ ಬೇರೆ ರೀತಿಯಲ್ಲಿ ರೂಪಾಂತರಿಸುವುದು. |

# ಬೀರಪ್ಪ ಕುರಿಯ ಬಿಟ್ಟ

## ❑ ಪಾಠಭಾಗದೆಡೆಗೆ

ಮಳೆಗಾಲದಲ್ಲಿ ಕಂಡುಬರುವ ದೃಶ್ಯಗಳ ಹಾಗೂ ಪರಿಸರದಲ್ಲಿ ಉಂಟಾಗುವ ಬದಲಾವಣೆಗಳ ಕುರಿತು ಮಕ್ಕಳಲ್ಲಿ ಪ್ರಶ್ನೆಗಳನ್ನು ಕೇಳುವುದು. ಕಲಿಕೆಯಲ್ಲಿ ಹಿಂದುಳಿದ ಮಕ್ಕಳಿಗೆ ಚಟುವಟಿಕೆಗಳಲ್ಲಿ ಅಗತ್ಯವಾದ ಬದಲಾವಣೆಗಳನ್ನು ಮಾಡುವುದು.

ಉದಾ:

- ಮಳೆ ಬಂದಾಗ ಅಂಗಳವು ಹೇಗಿರುತ್ತದೆ?
- ಮಳೆ ಬಂದಾಗ ಗಿಡಮರಗಳು ಹೇಗೆ ಕಾಣುತ್ತವೆ?
- ಮಳೆಗಾಲದಲ್ಲಿ ಕೃಷಿಕರು ಏನು ಮಾಡುತ್ತಾರೆ?
- ಮಕ್ಕಳ ಅಭಿಪ್ರಾಯಗಳನ್ನು ಅಧ್ಯಾಪಕರು ಕ್ರೋಡೀಕರಿಸಿ ಹೇಳುವುದು.

ಕೆಳಗಿನ ಪದ್ಯವನ್ನು ತರಗತಿಯಲ್ಲಿ ಹಾಡಿ ಆಸ್ವಾದಿಸುವುದು.

## ಮಾಯದಂತ ಮಳೆ ಬಂತಣ್ಣ

ಮಾಯದಂತ ಮಳೆ ಬಂತಣ್ಣ ಮದಗಾದ ಕೆರೆಗೆ
ಅಂಗೈಯಗಲ ಮೋಡ ನಾಡಿ
ಭೂಮಿ ತೂಕದ ಗಾಳಿ ಬೀಸಿ
ಗುಡುಗಿ ಗೂಡಾಡಿ ಚೆಲ್ಲಿದಳೋ
ಗಂಗಮ್ಮ ತಾಯಿ ।। ಮಾಯದಂತ।।

ಏರಿ ಮ್ಯಾಗಳ ಬೆಳ್ಳಾನು ರಾಯ
ಕೇರಿಯ ಕೆಳಗಡ ಬೆಸ್ತರ ಹುಡುಗ
ಓಡಿ ಓಡಿ ಸುದ್ದಿಯ ಕೊಡಿರಯ್ಯಾ
ನಾ ನಿಲ್ಲುವಳಲ್ಲ ।। ಮಾಯದಂತ।।

ಆರು ಸಾವಿರ ಒಡ್ಡರ ಕರೆಸಿ
ಮೂರು ಸಾವಿರ ಗುದ್ದಲಿತರಿಸಿ
ಸೋಲು ಸೋಲಿಗೆ ಮಣ್ಣನು ಹಾಕಿಸಯ್ಯೋ
ನಾ ನಿಲ್ಲುವಳಲ್ಲ ।। ಮಾಯದಂತ।।

ಆರು ಸಾವಿರ ಕುರಿಗಳ ತರಿಸಿ
ಮೂರು ಸಾವಿರ ಕುಡುಗೋಲು ತರಿಸಿ
ಕಲ್ಲುಕಲ್ಲಿಗೆ ರೈತವ ಬಿಡಿಸಯ್ಯಾ
ನಾ ನಿಲ್ಲುವಳಲ್ಲ ।। ಮಾಯದಂತ।।

ಒಂದು ಬಂಡಿಲಿ ವೀಳ್ಯದ ಅಡಿಕೆ
ಒಂದು ಬಂಡಿಲಿ ಚಿಗಳಿ ತಂಟ
ಮೂಲೆ ಮೂಲೆಗೆ ಗಂಗಮ್ಮ ಮಾಡ್ಸಿಯ್ಯಾ
ನಾ ನಿಲ್ಲುವಳಲ್ಲ ।। ಮಾಯದಂತ।।

ಮಾಯದಂಥ ಮಳೆ ಬಂತಣ್ಣ ಪದ್ಯದಲ್ಲಿ ಮಳೆ ಬರುವ ರೀತಿ, ಮಳೆಬಂದಾಗ ಉಂಟಾಗುವ ಬದಲಾವಣೆಗಳು ಕುರಿತು ಹೇಳಲಾಗಿದೆ. ಪದ್ಯವನ್ನು ಆಲಿಸಿದಿರಲ್ಲವೆ? ಈ ಹಾಡು ಉಳಿದ ಪದ್ಯಗಳಿಗಿಂತ ಹೇಗೆ ಭಿನ್ನವಾಗಿದೆ? ಚರ್ಚಿಸುವುದು.

ಅದೇ ರೀತಿ 'ಬೀರಪ್ಪ ಕುರಿಯ ಬಿಟ್ಟ' ಎಂಬ ಪದ್ಯದಲ್ಲಿ ಯಾವ ವಿಚಾರಗಳನ್ನು ಹೇಳಲಾಗಿದೆ? ಎಂದು ನೋಡೋಣ.

ಪಾಠಭಾಗದಲ್ಲಿ ನೀಡಲಾದ ಪದ್ಯವನ್ನು ಓದಲು ಹೇಳುವುದು.

### ಜನಪದ ಗೀತೆಯ ವಿಶೇಷತೆಗಳು

- ಗ್ರಾಮ್ಯ ಭಾಷೆಯಲ್ಲಿರುವುದು
- ಹಾಡುವ ಶೈಲಿ ಪ್ರತ್ಯೇಕವಾಗಿದೆ
- ಕೃತಿಕಾರರು ಯಾರು ಎಂದು ತಿಳಿಯದು.
- ಗ್ರಾಮೀಣ ಬದುಕಿನ ಸುತ್ತ ಹೆಣೆಯಲಾಗಿದೆ.

- ಪದ್ಯಭಾಗವನ್ನು ಮಕ್ಕಳು ವೈಯಕ್ತಿಕವಾಗಿ ಆಶಯಗ್ರಹಣದೊಂದಿಗೆ ಓದಲಿ. ಆ ಬಳಿಕ ವಿದ್ಯಾರ್ಥಿಗಳನ್ನು ಗುಂಪು ಮಾಡುವುದು. ಗುಂಪಿನಲ್ಲಿ ಪದ್ಯಕ್ಕೆ ರಾಗ ಹಾಕಲಿ. ಪ್ರತಿಯೊಂದು ಗುಂಪಿನವರು ಹಾಡಲಿ. ಯಾವ ಗುಂಪಿನವರ ಹಾಡು ಉತ್ತಮವಾಗಿ ಹಾಡಿದ್ದಾರೆ. ಯಾಕೆ? ಸೂಚಕಗಳ ಆಧಾರದಲ್ಲಿ ಕಂಡುಕೊಳ್ಳಲಿ. ಅಧ್ಯಾಪಕರು ಹಾಡುವುದು. ಈ ಜನಪದ ಗೀತೆಯನ್ನು ಐ.ಸಿ.ಟಿ. ಯ ಮೂಲಕ ಆಲಿಸಲು ಅವಕಾಶ ನೀಡುವುದು.

### ಮೌಲ್ಯನಿರ್ಣಯ ಸೂಚಕಗಳು

- ❑ **ಕವಿತೆ ಹಾಡುವಿಕೆ**
  **ಗುಂಪು ಚಟುವಟಿಕೆ**

- ❖ ರಾಗ, ತಾಳ, ಭಾವದೊಂದಿಗೆ ಹಾಡುವುದು.
- ❖ ಎಲ್ಲರ ಭಾಗವಹಿಸುವಿಕೆ.
- ❖ ಆಶಯವನ್ನು ಗ್ರಹಿಸಿ ಹಾಡುವುದು.
- ❖ ಗುಂಪಿನ ಹೊಂದಾಣಿಕೆ.
- ❖ ಗುಂಪಿನಲ್ಲಿ ಎಲ್ಲರೂ ಹಾಡುವುದು.
- ❖ ಪರಸ್ಪರ ಆಶಯ ವಿನಿಮಯ.

### ❑ ಪದಗಳ ಅರ್ಥ ಕಂಡುಹಿಡಿಯುವ

ಮೂರನೇ ತರಗತಿಗೆ ಬರುವ ಮಗುವಿಗೆ ಒಂದು ಮತ್ತು ಎರಡನೇ ತರಗತಿಗಳಲ್ಲಿ ಕನ್ನಡದ ಎಲ್ಲ ಅಕ್ಷರಗಳನ್ನೂ ಕಲಿತು ಓದಲೂ ಬರೆಯಲೂ ತಿಳಿದಿದೆ. ಮೂರನೇ ತರಗತಿಯ ಆರಂಭದಿಂದಲೇ ಹೊಸ ಪದಗಳ ಅರ್ಥವನ್ನು ತಿಳಿಯಲು ಅರ್ಥಕೋಶವನ್ನು ಉಪಯೋಗಿಸುವ ಅಭ್ಯಾಸವಾಗಬೇಕು. ಈ ನಿಟ್ಟಿನಲ್ಲಿ ಪ್ರತಿ ಪಾಠದಲ್ಲಿಯೂ ಅರ್ಥಕೋಶವನ್ನು ಬಳಸುವ ಅವಕಾಶವನ್ನು ನೀಡಲಾಗಿದೆ. ಅರ್ಥಕೋಶವನ್ನು ಉಪಯೋಗಿಸುವ ಸುಲಭ ವಿಧಾನವನ್ನು ಮಕ್ಕಳಿಗೆ ಮನವರಿಕೆ ಮಾಡಿಸುವುದು ಅಗತ್ಯವಾಗಿದೆ.

ಪದ್ಯ ಭಾಗದಲ್ಲಿ ಬಂದಿರುವ ನವೀನ ಪದಗಳನ್ನು ಮಕ್ಕಳು ಹುಡುಕಿ ನೀಡಲಾದ ಕೋಣೆಗಳಲ್ಲಿ ಬರೆಯಲಿ. ಅರ್ಥಕೋಶದ ಸಹಾಯದಿಂದ ಆ ಪದಗಳಿಗೆ ಸೂಕ್ತವಾದ ಅರ್ಥಗಳನ್ನು ಗುಂಪಿನಲ್ಲಿ ಕಂಡುಕೊಂಡು ಪಟ್ಟಿಯನ್ನು ಪೂರ್ತಿಗೊಳಿಸಲಿ. ಸೂಕ್ತವಾದ ಅರ್ಥಗಳನ್ನು ಅಧ್ಯಾಪಕರು ಬರೆದು ಪ್ರದರ್ಶಿಸುವುದು. ಅದರ ಆಧಾರದಲ್ಲಿ ತಮ್ಮ ಪಟ್ಟಿಯನ್ನು ಉತ್ತಮಪಡಿಸಲಿ.

| | | |
|---|---|---|
| ಕುಂತನು | – | ಕುಳಿತನು |
| ದೊಣ್ಣೆ | – | ಕೋಲು |
| ಉಣ್ಣಲು | – | ತಿನ್ನಲು |
| ಹೊಲ | – | ಗದ್ದೆ |
| ನಕ್ಕಳು | – | ನಗಾಡಿದಳು |

## ಚಟುವಟಿಕೆಗಳು

### ❑ ಉತ್ತರಿಸಿರಿ

- ಪಾಠಭಾಗದ ಆಶಯಗಳು ಮಕ್ಕಳಿಗೆ ಮನವರಿಕೆಯಾಗಿವೆಯೇ ಎಂದು ತಿಳಿಯುವ ಉದ್ದೇಶದಿಂದ ಈ ಚಟುವಟಿಕೆಯನ್ನು ನೀಡಲಾಗಿದೆ. ಪಾಠಭಾಗದಲ್ಲಿ ನೀಡಲಾದ ಪ್ರಶ್ನೆಗಳಿಗೆ ಮಕ್ಕಳು ವೈಯಕ್ತಿಕವಾಗಿ ಉತ್ತರಗಳನ್ನು ಅಭ್ಯಾಸ ಪುಸ್ತಕದಲ್ಲಿ ಬರೆದು ಮಂಡಿಸಲಿ. ಅಗತ್ಯ ಸಂದರ್ಭಗಳಲ್ಲಿ ಅಧ್ಯಾಪಕರು ಯೋಗ್ಯವಾದ ಸಲಹೆ ಸೂಚನೆಗಳನ್ನು ನೀಡುವುದು. ಸೂಚನೆಯ ಆಧಾರದಲ್ಲಿ ಉತ್ತಮಗೊಳಿಸುವುದು.

### ❑ ವಿಂಗಡಿಸಿ ಬರೆಯುವ

- ಪದ್ಯದಲ್ಲಿರುವ ಸಂಧಿಪದಗಳನ್ನು ಪಾಠಪುಸ್ತಕದಲ್ಲಿ ನೀಡಲಾಗಿದೆ. ಮಕ್ಕಳನ್ನು ಗುಂಪುಗಳಾಗಿ ಮಾಡುವುದು. ಗುಂಪಿನಲ್ಲಿ ಸಂಧಿ ಪದಗಳನ್ನು ಎರಡು ಪದಗಳಾಗಿ ವಿಂಗಡಿಸಿ ಬರೆಯಲು ಹೇಳುವುದು. ಗುಂಪಿನಿಂದ ಒಬ್ಬರಂತೆ ಮಂಡಿಸುವುದು. ಅಧ್ಯಾಪಕರು ವಿಂಗಡಿಸಿ ಬರೆದ ಪದಗಳನ್ನು ಪ್ರದರ್ಶಿಸುವುದು. ಅಧ್ಯಾಪಕರು ಬರೆದ ಪದಗಳೊಂದಿಗೆ ತಾವು ಬರೆದುದನ್ನು ಹೋಲಿಸಿ ಮಕ್ಕಳು ಉತ್ತಮಪಡಿಸಲಿ. ಅಧ್ಯಾಪಕರು ಮೌಲ್ಯನಿರ್ಣಯ ಮಾಡುವುದು.

ತಂದಳಣ್ಣ – ತಂದಳು + ಅಣ್ಣ
ಕುಂತನಣ್ಣ – ಕುಂತನು + ಅಣ್ಣ
ಕದ್ದನಣ್ಣ – ಕದ್ದನು + ಅಣ್ಣ
ಅತ್ತನಣ್ಣ – ಅತ್ತನು + ಅಣ್ಣ
ನಕ್ಕಳಣ್ಣ – ನಕ್ಕಳು + ಅಣ್ಣ

### ❑ ವಾಕ್ಯ ಬರೆಯುವ

ಪದ್ಯಭಾಗವನ್ನು ಗದ್ಯಭಾಗವಾಗಿ ಬದಲಾಯಿಸಿ ಬರೆಯಲು ಮಕ್ಕಳಿಗೆ ಸಾಧ್ಯವಾಗಬೇಕು. ಇದಕ್ಕಾಗಿ ಪದ್ಯದ ಸಾಲುಗಳನ್ನು ವಾಕ್ಯಗಳಾಗಿ ಬರೆಯುವ ಚಟುವಟಿಕೆಯನ್ನು ನೀಡಲಾಗಿದೆ.

ಪಾಠಪುಸ್ತಕದಲ್ಲಿ ನೀಡಲಾದ ಪದ್ಯದ ಸಾಲುಗಳನ್ನು ವೈಯಕ್ತಿಕವಾಗಿ ಓದಲು ಹೇಳುವುದು. ಇದನ್ನು ಮಾದರಿಯಲ್ಲಿ ನೀಡಿದಂತೆ ವಾಕ್ಯರೂಪದಲ್ಲಿ ಬದಲಾಯಿಸಿ ಬರೆಯಲು ಹೇಳುವುದು. ಮಕ್ಕಳು ವೈಯಕ್ತಿಕವಾಗಿ ಬರೆಯಲಿ. ಗುಂಪಿನಲ್ಲಿ ಪರಸ್ಪರ ಮೌಲ್ಯನಿರ್ಣಯ ಮಾಡಿ ತರಗತಿಯಲ್ಲಿ ಮಂಡಿಸಲಿ. ಸರಿಯಾದ ವಾಕ್ಯಗಳನ್ನು ಅಧ್ಯಾಪಕರು ತಖ್ತೆಯಲ್ಲಿ ಬರೆದು ಪ್ರದರ್ಶಿಸುವುದು. ಪ್ರದರ್ಶಿಸಿದ ವಾಕ್ಯಗಳನ್ನು ನೋಡಿ ತಾವು ಬರೆದುದನ್ನು ಮಕ್ಕಳು ಉತ್ತಮಪಡಿಸಲಿ.

- ❖ ಬೀರಪ್ಪನು ಕುರಿಗಳನ್ನು ಬಿಟ್ಟನು ಅಣ್ಣ.
- ❖ ತೋಳವು ಕುರಿಯನ್ನು ಕದ್ದದ್ದನ್ನು ಕಂಡು.
- ❖ ಮಾದವ್ವಳು ಮುದ್ದೆಯನ್ನು ತಂದಳು ಅಣ್ಣ.
- ❖ ಬೀರಪ್ಪನು ಬಿಕ್ಕಿ ಬಿಕ್ಕಿ ಅಳುವುದನ್ನು ಕಂಡು.

### ❑ ದೃಶ್ಯಗಳನ್ನು ಬರೆಯುವ

ನೋಡಿದ ವಸ್ತು /ಘಟನೆ/ ದೃಶ್ಯಗಳ ಆಶಯಗಳನ್ನು ತಿಳಿಯುವುದು ಹಾಗೂ ಅವುಗಳನ್ನು ಪ್ರಕಟಪಡಿಸುವ ಸಾಮರ್ಥ್ಯವನ್ನು ಮಕ್ಕಳಲ್ಲಿ ಬೆಳೆಸುವುದು ಈ ಚಟುವಟಿಕೆಯ ಉದ್ದೇಶವಾಗಿದೆ. ಐ.ಸಿ.ಟಿ. ಮತ್ತು ಇತರ ವಿಧಾನಗಳನ್ನು ಬಳಸಿ ಮಳೆಗಾಲದ ವಿವಿಧ ದೃಶ್ಯಗಳನ್ನು, ಚಿತ್ರಗಳನ್ನು ವೀಕ್ಷಿಸಿ ಮಳೆಗಾಲದಲ್ಲಿ ಕಂಡುಬರುವ ದೃಶ್ಯಗಳ ಬಗ್ಗೆ ಚರ್ಚಿಸುವುದು. ಮಕ್ಕಳು ವೈಯಕ್ತಿಕವಾಗಿ ಬರೆಯಲಿ.

ಕೆಲವು ಮಕ್ಕಳು ಮಂಡಿಸಲಿ. ಅನಂತರ ಗುಂಪಿನಲ್ಲಿ ಉತ್ತಮವಾದುದನ್ನು ಆರಿಸಿ ಒಬ್ಬರು ಮಂಡಿಸಲಿ. ಯಾವ ಗುಂಪಿನ ಮಂಡನೆ ಉತ್ತಮ ಎಂದು ಕಂಡುಕೊಳ್ಳುವುದು. ಅಧ್ಯಾಪಕರ ಸಹಾಯದೊಂದಿಗೆ ವಿವರಣೆಯನ್ನು ಉತ್ತಮಪಡಿಸುವುದು. ಅಧ್ಯಾಪಕರು ತಾವು ಬರೆದ ವಿವರಣೆಯನ್ನು ಪ್ರದರ್ಶಿಸುವುದು. ಮಕ್ಕಳಿಗೆ ತಮ್ಮ ವಿವರಣೆಯನ್ನು ಉತ್ತಮಪಡಿಸಲು ಅವಕಾಶ ನೀಡುವುದು. ಕಲಿಕೆಯಲ್ಲಿ ಹಿಂದುಳಿದ ಮಕ್ಕಳಿಗೆ ಬರೆಯಲು ಸಾಧ್ಯವಾಗದಿದ್ದರೆ ಹೇಳಿದರೆ ಸಾಕು. ಅವರಿಗೆ ಬರೆಯಲು ಅಗತ್ಯವಾದ ಸಹಾಯವನ್ನು ಅಧ್ಯಾಪಕರು ನೀಡುವುದು.

❑ **ದೃಶ್ಯ ಬರೆಯುವ**

ಮಾದರಿ :

ಗುಡುಗು ಗುಡುಗುತ್ತದೆ
ಮಿಂಚು ಮಿಂಚುತ್ತದೆ
ಸಿಡಿಲು ಬೀಳುತ್ತದೆ
ಬಿರುಗಾಳಿ ಬೀಸುತ್ತದೆ
ಮರಗಳು ಮುರಿಯುತ್ತವೆ
ಮಳೆ ಜೋರಾಗಿ ಸುರಿಯುತ್ತದೆ
ನದಿಯ ನೀರು ಉಕ್ಕಿ ಹರಿಯುತ್ತದೆ

* * *

## ಹೊಳೆಯ ಆತ್ಮಕಥೆ

❑ **ಪಾಠಭಾಗದೆಡೆಗೆ**

● ಪಾಠಪುಸ್ತಕದಲ್ಲಿರುವ ಚಿತ್ರವನ್ನು ಮಕ್ಕಳು ವೀಕ್ಷಿಸಲಿ. ಚಿತ್ರದ ಕುರಿತು ತಮ್ಮ ಅಭಿಪ್ರಾಯಗಳನ್ನು ಹೇಳಲಿ. ಪಾಠಭಾಗದ ಆಶಯವು ಪೂರ್ಣವಾಗಿ ಬರುವ ರೀತಿಯಲ್ಲಿ ಚರ್ಚಿಸಿ ಮಕ್ಕಳ ಅಭಿಪ್ರಾಯವನ್ನು ಅಧ್ಯಾಪಕರು ಕ್ರೋಡೀಕರಿಸುವುದು. ಐ.ಸಿ.ಟಿ. ಯ ಮೂಲಕ ನದಿಯ ವಿವಿಧ ಚಿತ್ರಗಳನ್ನು, ದೃಶ್ಯಗಳನ್ನು ತೋರಿಸಿ ಚರ್ಚಿಸುವುದು. ಬಳಿಕ ಹೊಳೆಯ ಆತ್ಮಕಥೆಯನ್ನು ಓದಲು ಹೇಳುವುದು. ಪಾಠಭಾಗದ ಓದಿನ ಚಟುವಟಿಕೆಯನ್ನು ನಡೆಸುವುದು.

❑ **ಓದಿನ ಚಟುವಟಿಕೆಯನ್ನು ನಡೆಸುವುದು ಹೇಗೆ?**

● ಮಕ್ಕಳು ಪಾಠಭಾಗವನ್ನು ವೈಯಕ್ತಿಕವಾಗಿ ಓದಲಿ ಓದುವಾಗ ಕಂಡುಕೊಂಡ ನವೀನ ಪದಗಳ ಅರ್ಥಗಳನ್ನು ಅರ್ಥಕೋಶದ ಸಹಾಯದಿಂದ ಗುರುತಿಸಿಕೊಳ್ಳಲಿ. ಬಳಿಕ ಅಧ್ಯಾಪಕರು ಓದುವುದು. ಆಶಯಗಳ ಕ್ರೋಡೀಕರಣ ಮಾಡುವುದು. (ಅಧ್ಯಾಪಕರು ತಮ್ಮ ತರಗತಿಯ ಮಕ್ಕಳ ಮಟ್ಟಕ್ಕೆ ಅನುಸಾರವಾದ ಇತರ ಓದುವ ವಿಧಾನಗಳನ್ನು ಬಳಸಿಕೊಳ್ಳಬಹುದು.) ಅಧ್ಯಾಪಕರು ಪಾಠಭಾಗವನ್ನು ಗಟ್ಟಿಯಾಗಿ ಓದುವುದು. ಓದುವಾಗ ಕೆಲವು ಪದಗಳನ್ನೋ, ಅಕ್ಷರಗಳನ್ನೋ ತಪ್ಪಿಸಿ ಓದುವುದು. ಆಗ ಮಕ್ಕಳು 'ಅಯ್ಯೋ' ತಪ್ಪಿತು ಎಂದು ಸರಿಯಾಗಿ ಓದುವುದು. ಇದೇ ರೀತಿ ಥೆ ಥೆ ಓದು, ರಿಲೇ ಓದು ಇತ್ಯಾದಿಗಳನ್ನು ಬಳಸಬಹುದು.

**ಚಟುವಟಿಕೆಗಳು**

❑ **ಉತ್ತರಿಸಿರಿ**

ಪಾಠಭಾಗದ ಆಶಯದ ಕುರಿತು ಚರ್ಚಿಸುವುದು. ನೀಡಲಾದ ಪ್ರಶ್ನೆಗಳಿಗೆ ಚರ್ಚೆಯ ಮೂಲಕ ಉತ್ತರಗಳನ್ನು

ಕಂಡುಕೊಳ್ಳುವುದು. ಮಕ್ಕಳು ವೈಯಕ್ತಿಕವಾಗಿ ಉತ್ತರವನ್ನು ಬರೆಯಲಿ. ತರಗತಿಯಲ್ಲಿ ಮಂಡಿಸಲಿ. ಅಧ್ಯಾಪಕರು ಉತ್ತರವನ್ನು ಕ್ರೋಢೀಕರಿಸಿ ಕರಿಹಲಗೆಯಲ್ಲಿ ಬರೆಯುವುದು. ಮಕ್ಕಳಿಗೆ ಉತ್ತಮಪಡಿಸಲು ಅವಕಾಶವನ್ನು ನೀಡುವುದು. ಅಧ್ಯಾಪಕರು ಮೌಲ್ಯನಿರ್ಣಯ ಮಾಡುವುದು.

❑ **ಚರ್ಚಿಸುವ**

ತಮ್ಮ ಅಭಿಪ್ರಾಯಗಳನ್ನು ಆಶಯಕ್ಕನುಗುಣವಾಗಿ ಸ್ವತಂತ್ರವಾಗಿ ವ್ಯಕ್ತಪಡಿಸುವ ಸಾಮರ್ಥ್ಯವು ಮಕ್ಕಳಲ್ಲಿ ಬೆಳೆಯಬೇಕಾಗಿದೆ. ಮಕ್ಕಳ ಮಾತುಗಾರಿಕೆಯ ಮೌಲ್ಯನಿರ್ಣಯವು ಇಲ್ಲಿ ನಡೆಯಬೇಕು.

❑ **ಚರ್ಚಿಸುವ**

ವಿವಿಧ ನೀರಾವರಿ ವಿಧಾನಗಳ ಬಗ್ಗೆ ಮಕ್ಕಳಲ್ಲಿ ಪ್ರಶ್ನಿಸುವುದು.

- ನಿಮ್ಮ ತೋಟಕ್ಕೆ ಯಾವ ರೀತಿಯಲ್ಲಿ ನೀರು ಹಾಯಿಸುತ್ತಾರೆ?
- ತರಕಾರಿ ಗಿಡಗಳಿಗೆ/ಹೂವಿನ ಗಿಡಗಳಿಗೂ ನೀರು ಹಾಯಿಸುವುದು ಇದೇ ರೀತಿಯಲ್ಲಿಯೇ.
- ಗದ್ದೆಗಳಿಗೆ ನೀರು ಹಾಯಿಸುವುದು ಯಾವ ರೀತಿಯಲ್ಲಿ?
- ಬೇರೆ ಯಾವೆಲ್ಲ ರೀತಿಯಲ್ಲಿ ನೀರು ಹಾಯಿಸುವುದನ್ನು ನೋಡಿದ್ದೀರಿ?

ICT ಹಾಗೂ ಇತರ ಸಾಧ್ಯತೆಗಳನ್ನು ಬಳಸಿ ವಿವಿಧ ನೀರಾವರಿ ವಿಧಾನಗಳ ದೃಶ್ಯಗಳನ್ನು ತೋರಿಸುವುದು. ಆ ವಿಧಾನಗಳ ಪಟ್ಟಿ ತಯಾರಿಸುವುದು.

- ಏತ ನೀರಾವರಿ
- ದಂಬೆ ನೀರಾವರಿ
- ಜಲಚಕ್ರ
- ಪಂಪು
- ಹನಿ ನೀರಾವರಿ
- ಸ್ಪ್ರಿಂಕ್ಲರ್

ಪ್ರತಿಯೊಂದು ನೀರಾವರಿ ವಿಧಾನದ ವಿಶೇಷತೆಗಳನ್ನು ಚರ್ಚೆಯ ಮೂಲಕ ತಿಳಿಯಲಿ. ಅಧ್ಯಾಪಕರು ಮಕ್ಕಳ ಅಭಿಪ್ರಾಯಗಳನ್ನು ಕ್ರೋಢೀಕರಿಸುವುದು.

❑ **ಬರೆಯುವ**

ಪಾಠಭಾಗದಲ್ಲಿ ನೀಡಲಾದ ಮಾದರಿ ವಾಕ್ಯಗಳನ್ನು ಮಕ್ಕಳು ವೈಯಕ್ತಿಕವಾಗಿ ಓದಿ ವ್ಯತ್ಯಾಸವನ್ನು ಕಂಡುಕೊಳ್ಳಲಿ.

ಪಾಠಭಾಗದಲ್ಲಿ ನೀಡಲಾದ ಮಾದರಿಯಂತೆ ಮಕ್ಕಳು ವಾಕ್ಯಗಳನ್ನು ಬದಲಾಯಿಸಿ ಬರೆಯಲಿ. ಬದಲಾಯಿಸಿ ಬರೆದ ವಾಕ್ಯಗಳನ್ನು ಮಕ್ಕಳು ತರಗತಿಯಲ್ಲಿ ಮಂಡಿಸಲಿ. ಅಧ್ಯಾಪಕರು ಕರಿಹಲಗೆಯಲ್ಲಿ ಬರೆಯುವುದು. ಮಕ್ಕಳಿಗೆ ಉತ್ತಮಪಡಿಸಲು ಅವಕಾಶವನ್ನು ನೀಡುವುದು. ಅಧ್ಯಾಪಕರು ಮೌಲ್ಯನಿರ್ಣಯ ಮಾಡುವುದು.

- ಹೊಳೆಯು ಕಣಿವೆಯಲ್ಲಿ ರಭಸದಿಂದ ಓಡಿತು
- ಹೊಳೆಯು ಬೆಟ್ಟವನ್ನು ಕೊರೆಯುತ್ತಾ ಇಳಿಯಿತು
- ಹೊಳೆಯು ನೀರನ್ನು ಕೊಟ್ಟಿತು
- ಹೊಳೆಯು ಸಮುದ್ರ ರಾಜನನ್ನು ಸೇರಿಕೊಳ್ಳುವುದು

- **ವಾಕ್ಯ ಬರೆಯುವ**

ಪಾಠಭಾಗದಲ್ಲಿ ನೀಡಲಾದ ವಾಕ್ಯಗಳನ್ನು ಮಕ್ಕಳು ವೈಯಕ್ತಿಕವಾಗಿ ಓದಲಿ.

ವಾಕ್ಯದಲ್ಲಿ ಉಂಟಾದ ಬದಲಾವಣೆಗಳನ್ನು ಮಕ್ಕಳು ತಿಳಿಯುವಂತೆ ಮಾಡುವುದು. ಅವರು ಮಾದರಿಯಂತೆ ಉಳಿದ ವಾಕ್ಯಗಳನ್ನು ಬದಲಾಯಿಸಿ ವೈಯಕ್ತಿಕವಾಗಿ ಬರೆಯಲಿ. ಬರೆದುದನ್ನು ಮಕ್ಕಳು ಮಂಡಿಸಲಿ. ಮಕ್ಕಳಿಗೆ ಉತ್ತಮಪಡಿಸಲು ಅವಕಾಶವನ್ನು ನೀಡುವುದು. ಅಧ್ಯಾಪಕರು ಮೌಲ್ಯನಿರ್ಣಯ ಮಾಡುವುದು.

- **ಆತ್ಮಕಥೆ ಬರೆಯಿರಿ**

| |
|---|
| ವ್ಯಕ್ತಿಯು ತನ್ನ ಜೀವನದ ಕುರಿತು ತನ್ನದೇ ಆದ ರೀತಿಯಲ್ಲಿ ಬರೆಯುವುದನ್ನು ಆತ್ಮಕಥೆ ಎನ್ನುತ್ತೇವೆ. ಒಬ್ಬ ವ್ಯಕ್ತಿಯ ಬಗ್ಗೆ ಇತರರು ಬರೆಯುವುದನ್ನು ಜೀವನ ಚರಿತ್ರೆ ಎನ್ನುತ್ತೇವೆ. ವಸ್ತು, ಪ್ರಾಣಿ ಮೊದಲಾದವುಗಳ ಬಗ್ಗೆ ಕಲ್ಪಿಸಿ ಬರೆಯುವುದು ಕಲ್ಪಿತ ಆತ್ಮಕಥೆ ಎನ್ನುತ್ತೇವೆ. |

- ಹೋಳೆಯು ತನ್ನ ಕಥೆಯನ್ನು ಹೇಳಿದ ರೀತಿಯನ್ನು ಚರ್ಚಿಸುವುದು. ಆತ್ಮಕಥೆಯ ವೈಶಿಷ್ಟ್ಯಗಳನ್ನು ತಿಳಿಯುವುದು. ಮಾವಿನಕಾಯಿಯ ಆತ್ಮಕಥೆಯಲ್ಲಿ ಒಳಗೊಳ್ಳಬೇಕಾದ ವಿಚಾರಗಳ ಕುರಿತು ಓದುವುದು, ಆಶಯ ಭೂಪಟ ತಯಾರಿಸುವುದು.




- ಆಶಯ ಭೂಪಟದ ಆಧಾರದಲ್ಲಿ ಮಕ್ಕಳು ಮಾವಿನಕಾಯಿಯ ಆತ್ಮಕಥೆಯನ್ನು ವೈಯಕ್ತಿಕವಾಗಿ ಬರೆಯಲಿ. ಕೆಲವರು ಮಂಡಿಸಲಿ. ಮಕ್ಕಳು ಗುಂಪಿನಲ್ಲಿ ಪರಸ್ಪರ ಹಂಚಿ ಉತ್ತಮಪಡಿಸಿ ಮಂಡಿಸಲಿ. ಚರ್ಚೆಯ ಮೂಲಕ ಸೂಚಕಗಳನ್ನು ಕಂಡುಕೊಳ್ಳುವುದು. ಸೂಚಕಗಳ ಆಧಾರದಲ್ಲಿ ಉತ್ತಮವಾದ ಆತ್ಮಕಥೆಯನ್ನು ಕಂಡುಕೊಳ್ಳುವುದು. ಅಧ್ಯಾಪಕರ ಸಹಾಯದಿಂದ ಉತ್ತಮಪಡಿಸುವುದು. ಅಧ್ಯಾಪಕರು ಬರೆದ ಮಾವಿನಕಾಯಿಯ ಆತ್ಮಕಥೆಯನ್ನು ಪ್ರದರ್ಶಿಸುವುದು. ಮಕ್ಕಳಿಗೆ ಉತ್ತಮಪಡಿಸಲು ಅವಕಾಶವನ್ನು ನೀಡುವುದು. ಅಧ್ಯಾಪಕರು ಮೌಲ್ಯನಿರ್ಣಯ ಮಾಡುವುದು.

## ಮೌಲ್ಯನಿರ್ಣಯ ಸೂಚಕಗಳು

**ಆತ್ಮಕಥೆ**

- ಆಶಯ ಪೂರ್ಣತೆ.
- ವಿಷಯದ ಕ್ರಮೀಕರಣ ಮತ್ತು ವಸ್ತುನಿಷ್ಠತೆ.
- ಭಾಷಾ ಶೈಲಿ.

## ಮಾವಿನಕಾಯಿಯ ಆತ್ಮಕಥೆ

ನಾನೆಂದರೆ ಮಕ್ಕಳಿಗೆ ತುಂಬಾ ಪ್ರೀತಿ. ನಾನು ಸಿಹಿಯಾಗಿಯೂ ಸ್ವಲ್ಪ ಹುಳಿಯಾಗಿಯೂ ಇರುತ್ತೇನೆ. ನಾನು ಹಣ್ಣಾದಾಗ ಹಳದಿ ಬಣ್ಣವಾದರೂ ಬೆಳೆಯುತ್ತಿರುವಾಗ ಹಸುರು. ನನ್ನ ಹೆಸರು ಹೇಳಿದರೆ ನಿಮ್ಮ ಬಾಯಲ್ಲಿ ನೀರೂರದೆ ಇರದು. ಮಕ್ಕಳಂತೂ ನನ್ನನ್ನು ಕಂಡರೆ ಕಲ್ಲು ಹೊಡೆಯದೆ ಇರಲಾರರು. 'ಹೋದರೆ ಒಂದು ಕಲ್ಲು,

ಸಿಕ್ಕಿದರೆ ಒಂದು ಹಣ್ಣು' ಎಂಬ ಗಾದೆ ನನ್ನಿಂದಲೇ ಉಂಟಾದದ್ದು. ಹೋಯ್! ನಾನಾರೆಂದು ಈಗಲಾದರೂ ತಿಳಿಯಿತೇ? ನಾನೇ ಮಾವಿನಕಾಯಿ.

ನಾನು ಮಾವಿನ ಮರದಲ್ಲಿ ಹೂಗಳೆಡೆಯಲ್ಲಿ ಜನಿಸಿದೆನು. ಎಳೆಯಕಾಲದಲ್ಲಿ ನಾನು ಮಿಡಿ. ಅಮ್ಮಂದಿರಿಗೆ ಆಗ ನಾನೆಂದರೆ ತುಂಬಾ ಪ್ರೀತಿ. ನನ್ನನ್ನು ಕೊಯ್ದು ಉಪ್ಪಿನಲ್ಲಿ ಹಾಕಿ ಮೆಣಸು ಹಾಕಿ ಕೊಡಬಾರದ ಹಿಂಸೆ ಕೊಟ್ಟು ಅದೇನೋ ಉಪ್ಪಿನಕಾಯಿ ಮಾಡುತ್ತಾರೆ. 'ಬೆಕ್ಕಿಗೆ ಆಟ ಇಲಿಗೆ ಪ್ರಾಣ ಸಂಕಟ.' ನನ್ನ ಕಷ್ಟ ಯಾರಲ್ಲಿ ಹೇಳಲಿ? ನಾನು ಮಿಡಿಯಾಗಿ ಬೆಳೆದಂದೇ ಮಕ್ಕಳ ಕಾಟ! ಕಲ್ಲಿನಿಂದ ಹೊಡೆದು ಬೀಳಿಸುತ್ತಾರೆ. ಉಪ್ಪು ಸೇರಿಸಿ ತಿನ್ನುತ್ತಾರೆ ಪಾಪ! ತಿನ್ನಲಿ ಮಕ್ಕಳಲ್ಲವೇ? ಆದರೆ ಮತ್ತೆ ಹೊಟ್ಟೆ ನೋವೆಂದು ನರಳುವುದು ಕಂಡಾಗ ಸಂಕಟವಾಗುತ್ತದೆ.

ನಾನು ಹಣ್ಣುಗಳ ರಾಜ. ಎಲ್ಲರಿಗೂ ಅಚ್ಚುಮೆಚ್ಚು. ನಮ್ಮ ಬಳಗ ದೊಡ್ಡದು. ಒಬ್ಬೊಬ್ಬರಿಗೆ ಒಂದೊಂದು ಹೆಸರು. ನಾನು ಹಣ್ಣಾದರೆ ಸಾಕು, ನನ್ನಿಂದ ಪಾಯಸ, ಪಾನೀಯ, ಮಾಂಬಳ, ಮೊದಲಾದ ಎಷ್ಟೆಷ್ಟೋ ಬಗೆಯ ಆಹಾರವಸ್ತುಗಳನ್ನು ತಯಾರಿಸುತ್ತಾರೆ. ಸರಿ. ಹೆಚ್ಚಿನದನ್ನು ಇನ್ನೊಮ್ಮೆ ಹೇಳುತ್ತೇನೆ. ನನಗೆ ಹೊತ್ತಾಯಿತು, ನಮಸ್ಕಾರ.

# ಭಾಗ್ಯದೇವತೆ

- **ಪಾಠಭಾಗದೆಡೆಗೆ**

ಕಾಡು, ಬಂಜರು ಭೂಮಿ ಇತ್ಯಾದಿ ಚಿತ್ರಗಳನ್ನು ಐ.ಸಿ.ಟಿ. ಯ ಮೂಲಕ ತೋರಿಸಿ ಕಾಡು ಹೇಗೆ ಮರುಭೂಮಿಯಾಗಿ ಬದಲಾಗುತ್ತದೆ ಮತ್ತು ಅದರಿಂದುಂಟಾಗುವ ತೊಂದರೆಗಳೇನು? ಎಂಬುದನ್ನು ಚರ್ಚಿಸುವುದು. ಬಳಿಕ ಈ ರೀತಿಯ ಆಶಯವಿರುವ ಒಂದು ಕಥೆ ಪಾಠಭಾಗದಲ್ಲಿದೆ ಎಂದು ಹೇಳುವುದು. ಆ ಪಾಠಭಾಗವನ್ನು ಮಕ್ಕಳಲ್ಲಿ ಓದಲು ಹೇಳುವುದು. ಮಕ್ಕಳು ವೈಯಕ್ತಿಕವಾಗಿ ಓದಲಿ. ಕಥೆಯ ಆಶಯವನ್ನು ಕೆಲವರು ತಮ್ಮದೇ ಆದ ರೀತಿಯಲ್ಲಿ ಮಂಡಿಸಲಿ. ಅಧ್ಯಾಪಕರು ಪಾಠಭಾಗವನ್ನು ಗಟ್ಟಿಯಾಗಿ ಓದುವುದು. ಬಳಿಕ ಮಕ್ಕಳು ಕಥೆಯನ್ನು ಹೇಳಲಿ.

ಕಥೆಯ ಮಂಡನೆ ಹೇಗೆ?

- ಉಚ್ಚಾರ ಶುದ್ಧಿಯೊಂದಿಗೆ ಸರಾಗವಾಗಿ ಹೇಳುವುದು.
- ಪ್ರಧಾನ ಆಶಯಗಳನ್ನು ಕಂಡುಕೊಳ್ಳಲು ಸಾಧ್ಯವಾಗುವಂತೆ ಹೇಳುವುದು.
- ಸ್ವರಭಾರದೊಂದಿಗೆ ಭಾವಪೂರ್ಣವಾಗಿ ಹೇಳುವುದು.

## ಚಟುವಟಿಕೆಗಳು

- **ಇಷ್ಟವಾದ ಕಥಾಪಾತ್ರ**

ಮಕ್ಕಳು ಕಥೆಯಲ್ಲಿ ಬರುವ ಪಾತ್ರಗಳನ್ನು ಕಂಡುಕೊಳ್ಳಲಿ.ತಮಗೆ ಇಷ್ಟವಾದ ಕಥಾಪಾತ್ರಗಳ ಕುರಿತು ಹೇಳಲಿ. ಇಷ್ಟಪಡಲಿರುವ ಕಾರಣವನ್ನು ತಿಳಿಸಲಿ. ಕಥಾಪಾತ್ರದ ಕುರಿತು ಬರೆಯಲಿ. ಅಧ್ಯಾಪಕರು ಅಗತ್ಯವಾದ ಕೆಲವು ಪ್ರಶ್ನೆಗಳನ್ನು ಕೇಳುವುದು.

- ಈ ಕಥೆಯಲ್ಲಿ ಬರುವ ಕಥಾ ಪಾತ್ರಗಳು ಯಾವುವು?
- ನಿಮಗಿಷ್ಟವಾದ ಕಥಾಪಾತ್ರ ಯಾವುದು?

- ಆ ಪಾತ್ರ ನಿಮಗೆ ಇಷ್ಟವಾಗಲು ಕಾರಣವೇನು?
- 

ಮೊದಲಾಗಿ ತರಗತಿಯಲ್ಲಿ ಚರ್ಚೆ ನಡೆಸುವುದು.

ಮಕ್ಕಳು ತಮಗೆ ಇಷ್ಟವಾದ ಕಥಾಪಾತ್ರ ಯಾವುದು? ಯಾಕೆ ಇಷ್ಟವಾಯಿತು? ಎಂದು ವೈಯಕ್ತಿಕವಾಗಿ ಬರೆದು ಮಂಡಿಸಲಿ. ಅಧ್ಯಾಪಕರಿಗೆ ಇಷ್ಟವಾದ ಕಥಾಪಾತ್ರ ಯಾವುದು? ಯಾಕೆ? ಎಂದು ಬರೆದು ಪ್ರದರ್ಶಿಸುವುದು. ಮಕ್ಕಳಿಗೆ ಉತ್ತಮಪಡಿಸಲು ಅವಕಾಶವನ್ನು ನೀಡುವುದು. ಅಧ್ಯಾಪಕರು ಮೌಲ್ಯನಿರ್ಣಯ ಮಾಡುವುದು.

> ಭಾಗ್ಯದೇವತೆ ಕಥೆಯಲ್ಲಿ ಸುಮತಿಯ ಪಾತ್ರ ನನಗೆ ಬಹಳ ಇಷ್ಟವಾಯಿತು. ಅವಳು ರಾಜನೊಡನೆ ಮರಕಡಿಯದಂತೆ ಕೇಳಿಕೊಂಡಳು. ಗಿಡಗಳನ್ನು ನೆಟ್ಟು ಬೆಳೆಸುವಂತೆ ರಾಜನಿಗೆ ಸೂಚಿಸಿದಳು. ಜಲಾಶಯಗಳನ್ನು ನಿರ್ಮಿಸಲು ವಿನಂತಿಸಿದಳು. ಇದರಿಂದಾಗಿ ಮಳೆಬಂದು ರಾಜ್ಯವು ಸುಭಿಕ್ಷವಾಯಿತು.

## ❑ ಉತ್ತರಿಸಿರಿ

ಪಾಠಭಾಗದ ಪ್ರಶ್ನೆಗಳಿಗೆ ಮಕ್ಕಳು ವೈಯಕ್ತಿಕವಾಗಿ ಉತ್ತರವನ್ನು ಬರೆದು ಮಂಡಿಸಲಿ. ತರಗತಿಯಲ್ಲಿ ಚರ್ಚಿಸಿ ಸರಿಯಾದ ಉತ್ತರವನ್ನು ತಿಳಿಯಲಿ. ಅಗತ್ಯವಿದ್ದಲ್ಲಿ ಅಧ್ಯಾಪಕರು ಸಹಾಯ ಮಾಡುವುದು. ಮಕ್ಕಳಿಗೆ ಉತ್ತಮಪಡಿಸಲು ಅವಕಾಶವನ್ನು ನೀಡುವುದು. ಅಧ್ಯಾಪಕರು ಮೌಲ್ಯನಿರ್ಣಯ ಮಾಡುವುದು.

## ❑ ಕ್ರಮೀಕರಿಸುವ

ಭಾಗ್ಯದೇವತೆ ಎಂಬ ಪಾಠಭಾಗದಲ್ಲಿರುವ ಕೆಲವು ವಾಕ್ಯಗಳನ್ನು ನೀಡಲಾಗಿದೆ. ಅವುಗಳನ್ನು ಪಾಠಭಾಗದ ಆಶಯಕ್ಕನುಗುಣವಾಗಿ ಕ್ರಮೀಕರಿಸಿ ಮಕ್ಕಳು ಅಭ್ಯಾಸ ಪುಸ್ತಕದಲ್ಲಿ ಬರೆಯಲಿ. ತರಗತಿಯಲ್ಲಿ ಮಂಡಿಸಲಿ. ತಪ್ಪಿದ್ದಲ್ಲಿ ಚರ್ಚಿಸಿ ಉತ್ತಮಪಡಿಸುವ ಅವಕಾಶವನ್ನು ಮಕ್ಕಳಿಗೆ ನೀಡುವುದು. ಅಧ್ಯಾಪಕರು ಮೌಲ್ಯನಿರ್ಣಯ ಮಾಡುವುದು.

## ❑ ವಿಂಗಡಿಸುವ

ಪದಗಳನ್ನು ವಿಂಗಡಿಸಿ ಬರೆಯುವ ವಿಧಾನವನ್ನು ತಿಳಿಸುವ ಚಟುವಟಿಕೆ ಇದಾಗಿದೆ. ಪಾಠಭಾಗದಲ್ಲಿ ನೀಡಿದ ಕೂಡುಪದಗಳನ್ನು ಓದಿ ಆ ಪದಗಳಲ್ಲಿರುವ ಎರಡು ಪದಗಳನ್ನು ವಿಂಗಡಿಸಿ ಮಕ್ಕಳು ಅಭ್ಯಾಸ ಪುಸ್ತಕದಲ್ಲಿ ಬರೆಯಲಿ.

ಅಧ್ಯಾಪಕರು ಬರೆದ ಮಾದರಿಯೊಂದಿಗೆ ಹೋಲಿಸಿ ಮಕ್ಕಳು ಉತ್ತಮಪಡಿಸಲಿ. ಅಧ್ಯಾಪಕರು ಮೌಲ್ಯನಿರ್ಣಯ ನಡೆಸುವುದು.

ಉದಾ:

ಆಳುತ್ತಿದ್ದನು – ಆಳುತ್ತ + ಇದ್ದನು
ಕಂಗಾಲಾದರು – ಕಂಗಾಲು + ಆದರು
ಹೀಗಿರಲು – ಹೀಗೆ + ಇರಲು
ಮಾಡಲಾಗದೆ – ಮಾಡಲು + ಆಗದೆ
ಬರಿದಾಗತೊಡಗಿತು – ಬರಿದು + ಆಗತೊಡಗಿತು
ನೋಡುವುದೇನು – ನೋಡುವುದು + ಏನು
ಬರಲಾರಂಭಿಸಿತು – ಬರಲು + ಆರಂಭಿಸಿತು

### ❑ ಪೂರ್ತಿಗೊಳಿಸುವ

ಆವರಣದಲ್ಲಿ ಕೊಟ್ಟ ಸೂಕ್ತ ಪದಗಳನ್ನು ಬಳಸಿಕೊಂಡು ಮಕ್ಕಳಿಗೆ ಮನವರಿಕೆಯಾಗುವಂತೆ ಅಧ್ಯಾಪಕರು ವಿಭಿನ್ನ ವಾಕ್ಯಗಳನ್ನು ನೀಡುವುದು. ಮಕ್ಕಳು ಗದ್ಯಭಾಗವನ್ನು ವೈಯಕ್ತಿಕವಾಗಿ ಓದಲಿ. ಆವರಣದಿಂದ ಸೂಕ್ತವಾದ ಪದಗಳನ್ನು ಆರಿಸಿ ಗದ್ಯಭಾಗವನ್ನು ಪೂರ್ತಿಗೊಳಿಸಲಿ. ಕೆಲವರು ಮಂಡಿಸಲಿ. ಮಕ್ಕಳಿಗೆ ಸರಿಪಡಿಸಲು ಅವಕಾಶವನ್ನು ನೀಡುವುದು. ಅಧ್ಯಾಪಕರು ಮೌಲ್ಯನಿರ್ಣಯ ಮಾಡುವುದು.

### ❑ ಸಂಭಾಷಣೆ ರಚಿಸುವ – ಅಭಿನಯಿಸುವ

ಪಾಠಭಾಗದಲ್ಲಿ ಬರುವ ಕಥಾಪಾತ್ರಗಳನ್ನು ಬಳಸಿ ಯೋಗ್ಯವಾದ ತಂತ್ರವನ್ನು ಬಳಸಿಕೊಂಡು ಮಕ್ಕಳನ್ನು ಗುಂಪು ಮಾಡುವುದು. ಗುಂಪಿನಲ್ಲಿ ಪಾಠಭಾಗವನ್ನು ಓದಲು ಹೇಳುವುದು. ಕೆಲವು ಪ್ರಶ್ನೆಗಳನ್ನು ಕೇಳುವುದು.

- ❖ ಕಥೆಯಲ್ಲಿ ಬರುವ ಪಾತ್ರಗಳು ಯಾವುವು?
- ❖ ಅವರು ತಮ್ಮೊಳಗೆ ನಡೆಸಿದ ಮಾತುಕತೆ ಏನು?

ಮಕ್ಕಳು ಪ್ರಶ್ನೆಗಳಿಗೆ ಉತ್ತರ ಹೇಳಲಿ. ಬಳಿಕ ಗುಂಪಿನಲ್ಲಿ ಕುಳಿತು ಸಂಭಾಷಣೆ ಬರೆಯಲಿ. ಅಗತ್ಯವಿದ್ದರೆ ಇತರ ಪಾತ್ರಗಳನ್ನು ಸೇರಿಸಲು ಸೂಚನೆ ನೀಡಬೇಕು. (ಸೇವಕರು, ಮಂತ್ರಿ, ರಾಣಿ, ದಾಸಿ, .....)

### ❑ ಸಂಭಾಷಣೆ ರಚಿಸುವ

ಚರ್ಚೆಯ ಆಧಾರದಲ್ಲಿ ಮಕ್ಕಳು ಗುಂಪಿನಲ್ಲಿ ಸಂಭಾಷಣೆಯನ್ನು ರಚಿಸಲಿ. ಅಗತ್ಯವಾದ ಕಥಾಪಾತ್ರಗಳನ್ನು ಸೇರಿಸಲಿ. ಸಂಭಾಷಣೆಯನ್ನು ಬರೆದು ಮಂಡಿಸಲಿ. ಗುಂಪಿನಲ್ಲಿ ಉತ್ತಮಪಡಿಸಲಿ. ಅಗತ್ಯವಾದ ತಿದ್ದುಪಡಿ ಮಾಡಿ ಪರಿಷ್ಕರಿಸುವುದು. ಅಧ್ಯಾಪಕರು ಬರೆದ ಸಂಭಾಷಣೆಯನ್ನು ಪ್ರದರ್ಶಿಸುವುದು. ತಮ್ಮ ವೈಯಕ್ತಿಕ ಸಂಭಾಷಣೆಯನ್ನು ಉತ್ತಮಪಡಿಸಲಿ.

ಸಂಭಾಷಣೆ ಹೇಗಿರಬೇಕು?

- ಆಶಯ ಸ್ಪಷ್ಟತೆ
- ವಾಕ್ಯ ಕ್ರಮೀಕರಣ
- ವಿಷಯದ ಪೂರ್ಣತೆ
- ಯೋಗ್ಯ ಪದಗಳ ಆಯ್ಕೆ
- ಪರಸ್ಪರ ಸಂಬಂಧ
- ಲೇಖನ ಚಿಹ್ನೆಗಳ ಬಳಕೆ

### ❑ ಅಭಿನಯಿಸುವ

- ಮಕ್ಕಳು ಪಾತ್ರಗಳನ್ನು ಹಂಚಿಕೊಂಡು ಗುಂಪಿನಲ್ಲಿ ಅಭಿನಯಿಸಲಿ.
- ತರಗತಿ ಚರ್ಚೆ.
- ಯಾವ ಗುಂಪಿನ ಅಭಿನಯ ಉತ್ತಮ? ಯಾಕೆ?
- ಪಾಠಭಾಗದ ಕಥಾಪಾತ್ರಗಳ ಮಾತುಗಳನ್ನು ಸರಿಯಾಗಿ ಹೇಳಿದ ಗುಂಪು ಯಾವುದು?
- ಗುಂಪಿನ ಎಲ್ಲರಿಗೂ ಭಾಗವಹಿಸಲು ಸಾಧ್ಯವಾಗಿದೆಯೇ?
- ಪಾತ್ರಗಳ ಸಂಭಾಷಣೆ ಒಂದಕ್ಕೊಂದು ಹೊಂದಿಕೆಯಾಗಿತ್ತೇ?

ಈ ಮೂಲಕ ಸಂಭಾಷಣೆ ರಚಿಸುವ ಪ್ರಾಧಾನ್ಯವನ್ನು ತಿಳಿಸುವುದು.

## ❑ ಸಂಭಾಷಣೆ

ಸೇವಕ : ಮಹಾರಾಜರಿಗೆ ಜಯವಾಗಲಿ.

ರಾಜ : ಏನು ಬಂದೆ?

ಸೇವಕ : ಮಹಾರಾಜರನ್ನು ಭೇಟಿಯಾಗಲು ಹಳ್ಳಿಯ ಹುಡುಗಿಯೊಬ್ಬಳು ಬಂದಿದ್ದಾಳೆ.

ರಾಜ : ಹೌದೇ? ಅವಳನ್ನು ಒಳಗೆ ಬಿಡು.

ಸೇವಕ : ಅಪ್ಪಣೆ ಮಹಾಪ್ರಭುಗಳೇ.

ಸುಮತಿ : ಮಹಾರಾಜರೇ, ವಂದನೆಗಳು.

ಮಹಾರಾಜ : ಯಾರಮ್ಮ ನೀನು? ಯಾಕೆ ಬಂದೆ? ನನ್ನಿಂದೇನಾಗಬೇಕು?

ಸುಮತಿ : ಮಹಾಪ್ರಭೂ! ರಾಜಭಟರು ಡಂಗುರ ಸಾರುವುದನ್ನು ಕೇಳಿದೆ. ವಿಷಯ ತಿಳಿದು ಪರಿಹಾರ ಸೂಚಿಸಲು ಬಂದಿದ್ದೇನೆ.

ಮಹಾರಾಜ : ಹೌದೇ? ಅದೇನು?

ಸುಮತಿ : ಮಹಾಪ್ರಭೂ! ಬಂಜರು ಭೂಮಿಯಲ್ಲಿ ಗಿಡಗಳನ್ನು ನೆಟ್ಟು ಬೆಳೆಸಬೇಕು. ಉಳಿದಿರುವ ಮರಗಳನ್ನು ಕಡಿಯದಂತೆ ಪ್ರಜೆಗಳಿಗೆ ಆಜ್ಞೆ ಮಾಡಬೇಕು. ಹಾಗಾದರೆ ಮಾತ್ರ ಸಮಸ್ಯೆ ಪರಿಹಾರವಾದೀತು.

ಮಹಾರಾಜ : ಹಾಗೆಯೇ ಆಗಲಿ ಮಗೂ. ಈಗಲೇ ಅದಕ್ಕೆ ಬೇಕಾದ ಏರ್ಪಾಟು ಮಾಡುತ್ತೇನೆ. ಯಾರಲ್ಲಿ?

ಸೇವಕ : ಅಪ್ಪಣೆ ಮಹಾಪ್ರಭೂ.

ಮಹಾರಾಜ : ಮಂತ್ರಿಗಳನ್ನು ಬರಹೇಳು.

ಮಂತ್ರಿ : ಮಹಾರಾಜರಿಗೆ ಜಯವಾಗಲಿ. ಕರೆಸಿದಿರಂತೆ, ಕಾರಣವೇನು?

ಮಹಾರಾಜ : ಇನ್ನು ಮುಂದೆ ಯಾರೂ ರಾಜ್ಯದಲ್ಲಿ ಮರಗಳನ್ನು ಕಡಿಯಬಾರದು. ಪ್ರತಿಯೊಬ್ಬರೂ ಗಿಡಗಳನ್ನು ನೆಟ್ಟು ಬೆಳೆಸಬೇಕು ಎಂದು ಡಂಗುರ ಸಾರಿಸಿರಿ.

ಮಂತ್ರಿ : ಅಪ್ಪಣೆ ಮಹಾಪ್ರಭೂ. ಈಗಲೇ ಅದಕ್ಕೆ ಬೇಕಾದ ವ್ಯವಸ್ಥೆಯನ್ನು ಮಾಡುತ್ತೇನೆ.

## ❑ ಚಿತ್ರದಲ್ಲೇನಿದೆ?

ಚಿತ್ರವನ್ನು ಸೂಕ್ಷ್ಮವಾಗಿ ಗಮನಿಸಲು ಮಕ್ಕಳಲ್ಲಿ ಹೇಳುವುದು. ಐ.ಸಿ.ಟಿ. ಯನ್ನು ಬಳಸಿ ಚಿತ್ರವನ್ನು ಪ್ರದರ್ಶಿಸುವುದು. ಚಿತ್ರದ ಕುರಿತು ಅಧ್ಯಾಪಕರು ಮಕ್ಕಳೊಂದಿಗೆ ಚರ್ಚಿಸುವುದು.

- ಚಿತ್ರದಲ್ಲಿ ಏನು ಕಾಣಿಸುತ್ತದೆ?
- ಹೊಲದ ಬದಿಯಲ್ಲಿ ಏನಿದೆ?
- ಹೊಲದಲ್ಲಿ ಯಾವ ಕೆಲಸಗಳು ನಡೆಯುತ್ತವೆ?

ಮಕ್ಕಳು ಚಿತ್ರದ ಕುರಿತು ವಾಕ್ಯಗಳನ್ನು ವೈಯಕ್ತಿಕವಾಗಿ ಬರೆಯಲಿ. ಕೆಲವರು ಮಂಡಿಸಲಿ. ಗುಂಪಿನಲ್ಲಿ ಚರ್ಚಿಸಿ ಮೌಲ್ಯನಿರ್ಣಯ ಸೂಚಕವನ್ನು ಕಂಡುಕೊಳ್ಳುವುದು. ಅಧ್ಯಾಪಕರ ಸಹಾಯದಿಂದ ಉತ್ತಮಪಡಿಸುವುದು. ಅಧ್ಯಾಪಕರು ಬರೆದ ವಾಕ್ಯಗಳನ್ನು

ಬರೆದು ಪ್ರದರ್ಶಿಸುವುದು. ಮಕ್ಕಳಿಗೆ ಉತ್ತಮಪಡಿಸಲು ಅವಕಾಶವನ್ನು ನೀಡುವುದು. ಅಧ್ಯಾಪಕರು ಮೌಲ್ಯನಿರ್ಣಯ ಮಾಡುವುದು.

**ಮಾದರಿ ವಾಕ್ಯಗಳು**

- ಬೆಟ್ಟದ ಬದಿಯಲ್ಲಿ ಬಯಲು ಇದೆ.
- ಬಯಲಿನಲ್ಲಿ ಬೇಸಾಯ ಮಾಡುತ್ತಾರೆ.
- ಹೆಂಗಸರು ನೇಜಿ ನೆಡುತ್ತಾರೆ.
- ರೈತನು ಗದ್ದೆಯನ್ನು ಉಳುತ್ತಾನೆ.
- ಕೆರೆಯಲ್ಲಿ ಎತ್ತನ್ನು ಮೇಯಿಸುತ್ತಾನೆ.
- ಗದ್ದೆಯ ಬದಿಯಲ್ಲಿ ಮರಗಳಿವೆ.
- ಮರದ ಬುಡದಲ್ಲಿ ಕೋಳಿ ಮತ್ತು ಮರಿಗಳಿವೆ.
- ಹಕ್ಕಿ ಹಾರುತ್ತಾ ಮರದ ಬಳಿಗೆ ಬರುತ್ತಿದೆ.
- ಗದ್ದೆಯ ಬದಿಯಲ್ಲಿ ತೋಟವಿದೆ.
- ತೋಟದ ಬದಿಯಲ್ಲಿ ಮನೆ ಇದೆ.

❑ **ಚರ್ಚಿಸುವ**

ರಾಜನಿಗೆ ಸುಮತಿಯು ನೀಡಿದ ಸಲಹೆಯೇನು? ಎಂದು ಮಕ್ಕಳಲ್ಲಿ ಪ್ರಶ್ನಿಸಿ ಪಾಠಭಾಗವನ್ನು ನೆನಪಿಸುವಂತೆ ಮಾಡುವುದು. ಆ ಬಳಿಕ ರಾಜನು ಸುಮತಿಯ ಸಲಹೆಯನ್ನು ಪಾಲಿಸದಿದ್ದರೆ ಏನಾಗುತ್ತಿತ್ತು? ಎಂಬ ಪ್ರಶ್ನೆಯನ್ನು ಕೇಳುವುದು. ಮಕ್ಕಳಿಗೆ ತಮ್ಮ ಅಭಿಪ್ರಾಯವನ್ನು ಹೇಳಲು ಅವಕಾಶವನ್ನು ನೀಡುವುದು. ಚರ್ಚಿಸಿದ ವಿಷಯಗಳನ್ನು ಕ್ರೋಡೀಕರಿಸುವುದು ಮತ್ತು ಕರಿಹಲಗೆಯಲ್ಲಿ ಬರೆಯುವುದು.

❑ **ರಜೆ ಅರ್ಜಿ**

ಮಕ್ಕಳು ಬೇರೆ ಬೇರೆ ಕಾರಣಗಳಿಂದಾಗಿ ಶಾಲೆಗೆ ರಜೆ ಮಾಡುತ್ತಾರೆ. ಅಂತಹ ಸಂದರ್ಭದಲ್ಲಿ ಅಧ್ಯಾಪಕರಿಗೆ ಬರಹದ ಮೂಲಕ ಕಾರಣವನ್ನು ತಿಳಿಸುತ್ತಾರೆ. ಇದಕ್ಕಾಗಿ ರಜೆ ಅರ್ಜಿಯನ್ನು ಉಪಯೋಗಿಸಬೇಕು.

ರಜೆ ಅರ್ಜಿ ಬರೆಯುವ ವಿಧಾನ ಮತ್ತು ಅದರ ಪ್ರಾಧಾನ್ಯದ ಕುರಿತು ತಿಳಿಯಲು ಮಕ್ಕಳಲ್ಲಿ ಕೆಲವು ಪ್ರಶ್ನೆಗಳನ್ನು ಕೇಳುವುದು.

- ನೀವು ಯಾವ ಯಾವ ಕಾರಣಗಳಿಗೆ ರಜೆ ಮಾಡುತ್ತೀರಿ?
- ಅದನ್ನು ಹೇಗೆ ನಿಮ್ಮ ತರಗತಿ ಅಧ್ಯಾಪಕರಿಗೆ ತಿಳಿಸುತ್ತೀರಿ?
- ಮಕ್ಕಳ ಸ್ವತಂತ್ರ ಪ್ರತಿಕ್ರಿಯೆಗೆ ಅವಕಾಶ ನೀಡುವುದು.
- ಅರ್ಜಿಯನ್ನು ಬರೆಯುವುದು ಹೇಗೆಂದು ತಿಳಿದಿದೆಯೆ?
- ಮಕ್ಕಳು ತಮ್ಮ ಅಭಿಪ್ರಾಯವನ್ನು ಮಂಡಿಸಲಿ.
- ರಜೆ ಅರ್ಜಿಯಲ್ಲಿ ಯಾವೆಲ್ಲ ವಿಷಯಗಳು ಒಳಗೊಳ್ಳಬೇಕು? ಚರ್ಚಿಸಿ ಕ್ರೋಡೀಕರಣ ಮಾಡುವುದು.
- ಬರೆಯುವ ವಿಧಾನ ಹೇಗಿರಬೇಕು?

ಚರ್ಚೆಯ ಆಧಾರದಲ್ಲಿ ಮಕ್ಕಳು ವೈಯಕ್ತಿಕವಾಗಿ ರಜೆ ಅರ್ಜಿ ಬರೆಯಲಿ. ಕೆಲವರು ಮಂಡಿಸಲಿ. ಅಧ್ಯಾಪಕರು ಬರೆದ ರಜೆ ಅರ್ಜಿಯನ್ನು ಪ್ರದರ್ಶಿಸುವುದು. ಮಕ್ಕಳಿಗೆ ಉತ್ತಮಪಡಿಸಲು ಅವಕಾಶವನ್ನು ನೀಡುವುದು. ಅಧ್ಯಾಪಕರು ಮೌಲ್ಯನಿರ್ಣಯ ಮಾಡುವುದು.

**ರಜೆ ಅರ್ಜಿ**

ಇವರಿಂದ,

ಅಂಜಲಿ

3ನೇ ತರಗತಿ

ಜಿ.ಎಲ್.ಪಿ.ಎಸ್. ಗಿರಿಪುರ

ಇವರಿಗೆ,

ತರಗತಿ ಅಧ್ಯಾಪಕರು

3 ನೇ ತರಗತಿ

ಜಿ.ಎಲ್.ಪಿ.ಎಸ್. ಗಿರಿಪುರ

ಸ್ವಾಮೀ,

ನನಗೆ ದಿನಾಂಕ 14.02.2014 ಶುಕ್ರವಾರ ಜ್ವರ ಬಂದ ಕಾರಣ ಶಾಲೆಗೆ ಬರಲು ಸಾಧ್ಯವಾಗಲಿಲ್ಲ. ನನ್ನ ಒಂದು ದಿನದ ಗೈರುಹಾಜರಿಯನ್ನು ಮನ್ನಿಸಬೇಕಾಗಿ ಕೇಳಿಕೊಳ್ಳುತ್ತೇನೆ.

ಇತಿ,

ತಮ್ಮ ವಿಧೇಯ ಶಿಷ್ಯೆ

ಸ್ಥಳ: ಗಿರಿಪುರ

ದಿನಾಂಕ: 15.2.2014

**ಅಂಜಲಿ**

ಹೆತ್ತವರ ಸಹಿ

- **ಹೆಸರು ಹುಡುಕುವ**

ಭಾಷಾ ಆಟಗಳು ಮಕ್ಕಳಿಗೆ ಸಂತೋಷವನ್ನು ನೀಡುವುದರೊಂದಿಗೆ ಪದಸಂಪತ್ತನ್ನು ಹೆಚ್ಚಿಸಲು ಸಹಾಯಕವಾಗಿವೆ. ಸಂದರ್ಭಕ್ಕೆ ಹೊಂದಿಕೊಂಡು ಇಂತಹ ಭಾಷಾ ಆಟಗಳನ್ನು ತರಗತಿಯಲ್ಲಿ ನೀಡಬಹುದು.

ಮಕ್ಕಳಿಗೆ ತಿಳಿದಿರುವ ಹೂಗಳ ಹೆಸರುಗಳನ್ನು ಹೇಳಿಸುವುದು. ಪಾಠಪುಸ್ತಕದಲ್ಲಿ ನೀಡಲಾದ ಚಟುವಟಿಕೆಯನ್ನು ಮಕ್ಕಳು ವೈಯಕ್ತಿಕವಾಗಿ ಮಾಡಲಿ. ಹೂಗಳ ಹೆಸರುಗಳನ್ನು ಗುರುತಿಸಿ ಉರುಟು ಹಾಕಲಿ. ಅವುಗಳ ಹೆಸರುಗಳನ್ನು ಬರೆದು ಮಂಡಿಸಲಿ. ಅಧ್ಯಾಪಕರು ಕರಿಹಲಗೆಯಲ್ಲಿ ಬರೆಯುವುದು. ತಾವು ಬರೆಯಲು ಬಿಟ್ಟುಹೋದ ಹೆಸರುಗಳನ್ನು ಸೇರಿಸಿ ಮಕ್ಕಳು ಪಟ್ಟಿಯನ್ನು ಬೆಳೆಸಲಿ. ಅಧ್ಯಾಪಕರು ಮೌಲ್ಯನಿರ್ಣಯ ಮಾಡುವುದು.

## ❑ ಪದ್ಯ ಬರೆಯುವ, ಶೀರ್ಷಿಕೆ ನೀಡುವ

ಕವಿತೆಗಳು ಮಕ್ಕಳ ಮನಸ್ಸಿಗೆ ಆನಂದವನ್ನುಂಟು ಮಾಡುತ್ತವೆ. ಮಕ್ಕಳ ಗಮನವನ್ನು ಸೆಳೆಯಲು ಕವಿತೆಗಳು ಸಹಾಯಕವಾಗಿವೆ. ಕೇವಲ ಕವಿತೆಗಳನ್ನು ಕೇಳಿ ಆಸ್ವಾದಿಸುವುದಲ್ಲದೆ, ಕವಿತೆಗಳನ್ನು ಓದುವುದು, ಹಾಡುವುದು, ಕವಿತೆಗಳ ಸಾಲುಗಳನ್ನು ಮುಂದುವರಿಸುವುದು, ಹೊಸ ಕವಿತೆಗಳನ್ನು ರಚಿಸುವುದು ಹಾಗೂ ಯೋಗ್ಯವಾದ ಶೀರ್ಷಿಕೆ ನೀಡುವುದು ಮೊದಲಾದ ಸಾಮರ್ಥ್ಯಗಳನ್ನು ಮಕ್ಕಳಲ್ಲಿ ಬೆಳೆಸಬೇಕಾಗಿದೆ. ಇಂತಹ ಸಾಮರ್ಥ್ಯವನ್ನು ಬೆಳೆಸುವುದು ಈ ಚಟುವಟಿಕೆಯ ಉದ್ದೇಶ.

ಕೆಲವು ಸರಳ ಕವಿತೆಗಳನ್ನು ಮಕ್ಕಳಿಗೆ ಪರಿಚಯಿಸಬೇಕು.

### ಪುಟ್ಟ ಮನೆ

ಮನೆ ಮನೆ ಮನೆ
ನನ್ನ ಪುಟ್ಟ ಮನೆ
ಮನೆಯ ಮೇಲೆ ಮಾಡು
ಸುತ್ತ ಗೋಡೆ ನೋಡು

### ಇರುವೆ

ಇರುವೆ ಇರುವೆ ಕೆಂಪಿರುವೆ
ಸುಮ್ಮನೆ ಯಾಕೆ ಕುಳಿತಿರುವೆ
ಬೆಲ್ಲದ ಉಂಡೆ ತಂದಿರುವೆ
ಬಂದರೆ ನಿನಗೆ ನಾ ಕೊಡುವೆ

### ರವೆ ಉಂಡೆ

ರವೆ ಉಂಡೆ ರವೆ ಉಂಡೆ
ಬೀರುವಿನಲ್ಲಿ ಕಂಡೆ
ಅಪ್ಪ ಇಲ್ಲ ಅಂದ್ಕೊಂಡೆ
ಅಮ್ಮ ಇಲ್ಲ ಅಂದ್ಕೊಂಡೆ
ಕೈಯಲೊಂದು ಹಿಡ್ಕೊಂಡೆ
ಬಾಯಲೊಂದು ಹಾಕ್ಕೊಂಡೆ
ಓಡಿ ಕಾಲು ಮುರ್ಕೊಂಡೆ

- ಈ ಪದ್ಯಗಳು ನಿಮಗೆ ಇಷ್ಟವಾಗಿವೆಯೆ?
- ಇದರಲ್ಲಿ ಒಂದೇ ಅಕ್ಷರದಿಂದ ಕೊನೆಗೊಳ್ಳುವ ಪದಗಳಿವೆಯೆ?
- ಇದನ್ನು ತಾಳ ಬದ್ಧವಾಗಿ ಹಾಡಲು ಸಾಧ್ಯವಾಗುತ್ತದೆಯೆ?

ಹಾಗಾದರೆ ಪದ್ಯ ಹೇಗಿರಬೇಕು? ತರಗತಿಯಲ್ಲಿ ಚರ್ಚಿಸುವುದು. ಬಳಿಕ ಪಾಠಪುಸ್ತಕದಲ್ಲಿ ಕೊಟ್ಟಿರುವ ಗದ್ಯ ಭಾಗವನ್ನು ಓದುವುದು. ಅದರ ಆಧಾರದಲ್ಲಿ ಸೂಚಕಗಳನ್ನು ಕಂಡುಕೊಳ್ಳುವುದು.

ಮಕ್ಕಳು ವೈಯಕ್ತಿಕವಾಗಿ ಕವಿತೆಯನ್ನು ಬರೆಯಲಿ. ಕೆಲವರು ಮಂಡಿಸಲಿ. ಗುಂಪಿನಲ್ಲಿ ಉತ್ತಮಪಡಿಸಲಿ. ಗುಂಪಿನಿಂದ ಮಂಡನೆ. ಅಧ್ಯಾಪಕರ ಸಹಾಯದಿಂದ ಉತ್ತಮಪಡಿಸಲಿ. ಅಧ್ಯಾಪಕರು ಬರೆದ ಕವಿತೆಯನ್ನು ಪ್ರದರ್ಶಿಸುವುದು. ಮಕ್ಕಳಿಗೆ ಉತ್ತಮಪಡಿಸಲು ಅವಕಾಶವನ್ನು ನೀಡುವುದು. ಅಧ್ಯಾಪಕರು ಮೌಲ್ಯನಿರ್ಣಯ ಮಾಡುವುದು.

**ಮೌಲ್ಯನಿರ್ಣಯ ಸೂಚಕಗಳು**

- ಆಶಯಕ್ಕೆ ಹೊಂದಿದ ಶೀರ್ಷಿಕೆ
- ಯೋಗ್ಯ ಪದವಿನ್ಯಾಸ
- ಆಶಯ ಪೂರ್ಣತೆ

## ಹಕ್ಕಿ

ಹಕ್ಕಿಯೊಂದು ಹಾರಿ ಬಂದು
ಮನೆಯ ಮೇಲೆ ಕುಳಿತಿತು
ಅತ್ತ ಇತ್ತ ಸುತ್ತ ಮುತ್ತ
ಕತ್ತು ತಿರುವಿ ನೋಡಿತು
ಮನೆಯ ಮುಂದೆ ಬಿದ್ದ ಕಾಳು
ಕಂಡು ಕೆಳಗೆ ಹಾರಿತು
ಕೊಕ್ಕಿನಿಂದ ಕುಕ್ಕಿ ತಂದು
ಹೊಟ್ಟೆ ತುಂಬ ತಿಂದಿತು
ಹೊಟ್ಟೆ ತಣಿಸಿಕೊಂಡ ಹಕ್ಕಿ
ಮುದದಿ ಹಾರಿ ಹೋಯಿತು

ಇಂತಹ ಇತರ ಪದ್ಯಗಳನ್ನು ಮಾದರಿಯಾಗಿ ನೀಡಬಹುದು.

❑ **ಪೂರಕ ಓದಿಗೆ**

## ಚಿನ್ಮಯಿ ಮತ್ತು ಮಾವಿನಮರ

ಚಿನ್ಮಯಿ ತನ್ನ ಅಪ್ಪ ಅಮ್ಮನ ಒಬ್ಬಳೇ ಮುದ್ದಿನ ಮಗಳು. ಬೇಸಿಗೆ ರಜೆ ಸಿಕ್ಕಿದ ಕೂಡಲೇ ಅವಳು ತನ್ನ ಅಜ್ಜನ ಮನೆಗೆ ಹೋಗುತ್ತಿದ್ದಳು. ಅವಳ ಅಜ್ಜ ಮತ್ತು ಅಜ್ಜಿ ಅವಳನ್ನು ಪ್ರೀತಿಯಿಂದ ಚಿನ್ನು ಎಂದೇ ಕರೆಯುತ್ತಿದ್ದರು.

ಅಜ್ಜನ ಮನೆಯಲ್ಲಿ ಒಂದು ದೊಡ್ಡ ಮಾವಿನ ಮರವಿತ್ತು. ಆ ಮರದ ಮೇಲೆ ಚಿನ್ನುಗೆ ಅತೀವ ಪ್ರೀತಿ. ಅದರಲ್ಲಿ ಆಗುವ ಮಾವಿನ ಹಣ್ಣುಗಳನ್ನು ತಿನ್ನುವುದು, ಆ ಮರದ ಕೆಳಗೆ ಆಟವಾಡುವುದು ಅಂದರೆ ಚಿನ್ನುಗೆ ತುಂಬಾ ಇಷ್ಟ. ಅದಕ್ಕಾಗಿಯೇ ಅವಳು ಅಜ್ಜನ ಮನೆಗೆ ಹೋಗುತ್ತಿದ್ದಳು.

ಆ ಮರವು ತುಂಬಾ ಹಳೆಯದಾಗಿತ್ತು ಹಾಗೂ ತುಂಬಾ ದೊಡ್ಡದಾಗಿತ್ತು. ಅಜ್ಜನ ಮನೆಯ ಬಳಿ ರಾಮು ಎಂಬವನಿದ್ದ. ಅವನಿಗೆ ಯಾವತ್ತೂ ಆ ಮರದ ಮೇಲೆ ಕಣ್ಣು. ಆ ಮರವನ್ನು ಕಡಿದು ಮಾರಿದರೆ ಎಷ್ಟೊಂದು ಹಣ ಸಿಗಬಹುದು ಎಂಬುದು ಅವನ ಯೋಚನೆಯಾಗಿತ್ತು. ಈ ವಿಷಯದ ಬಗ್ಗೆ ಅವನು ಅಜ್ಜನಲ್ಲಿ ಅನೇಕ ಬಾರಿ ಹೇಳಿದ್ದ. ಆದರೆ ಅಜ್ಜ ಆ ಮರವನ್ನು ಕಡಿಯುವುದಕ್ಕೆ ಒಪ್ಪುತ್ತಿರಲಿಲ್ಲ.

ಆ ವರ್ಷ ಬಂದ ತೀವ್ರವಾದ ಗಾಳಿಮಳೆಗೆ ಆ ಮಾವಿನ ಮರದ ಒಂದು ಭಾಗವು ಬಿದ್ದು ಹೋಯಿತು. ಇದೇ ಸಂದರ್ಭವನ್ನು ಕಾಯುತ್ತಿದ್ದ ರಾಮು ಅಜ್ಜನಲ್ಲಿ ಬಂದು, ಈಗಾಗಲೇ ಒಂದು ಭಾಗ ಬಿದ್ದು ಹೋಗಿದೆ, ಇನ್ನೊಂದು ಭಾಗವು ಸದ್ಯಕ್ಕೆ ಬಿದ್ದು ಹೋಗುತ್ತದೆ. ಈಗಲಾದರೂ ಅದನ್ನು ಮಾರಿಬಿಡಿ ಎಂದು ಹೇಳಿದನು. ಅಜ್ಜನಿಗೂ ಅದು ಸರಿಯೆನಿಸಿ ಆ ಮರವನ್ನು ಕಡಿದು ಮಾರಿದರು.

ಆ ವರ್ಷ ಬೇಸಿಗೆ ರಜೆ ಪ್ರಾರಂಭವಾದಾಗ ಚಿನ್ನು ಬಹಳ ಖುಷಿಯಿಂದಲೇ ಅಜ್ಜನ ಮನೆಗೆ ಬಂದಳು. ಆದರೆ ಅಜ್ಜನ ಮನೆಗೆ ಬರುವಾಗ ಅವಳ ಖುಷಿಯೆಲ್ಲಾ ಮಾಯವಾಯಿತು. ಯಾಕೆಂದರೆ ಅವಳ ಪ್ರೀತಿಯ ಮಾವಿನ ಮರವೇ ಅಲ್ಲಿರಲಿಲ್ಲ.

ಅವಳು ಅಜ್ಜನಲ್ಲಿ 'ಮಾವಿನ ಮರ ಎಲ್ಲಿ ಹೋಯ್ತು' ಎಂದು ಕೇಳಿದಾಗ ಅಜ್ಜ 'ಮರ ತುಂಬಾ ಹಳೆಯದಾಗಿ ಅರ್ಧ ಭಾಗ ಬಿದ್ದು ಹೋಗಿತ್ತಲ್ಲ. ಅದಕ್ಕೆ ಪೂರ್ತಿ ಕಡಿದು ಮಾರಿದೆ'

ಎಂದು ನಡೆದ ಸಂಗತಿಯನ್ನು ಚಿನ್ನುವಿಗೆ ತಿಳಿಸಿದರು. ಇದನ್ನು ಕೇಳಿ ಚಿನ್ನುಗೆ ತುಂಬಾ ಬೇಸರವಾಯಿತು.

ಆಗ ಅವಳು ಅಜ್ಜನಿಗೆ 'ನಿಮಗೆ ಅದರ ಮೇಲೆ ಪ್ರೀತಿಯೇ ಇಲ್ಲ. ಇಷ್ಟು ಸಮಯ ಅದು ಕೊಡುತ್ತಿದ್ದ ಹಣ್ಣುಗಳನ್ನು ತಿನ್ನುತ್ತಿದ್ದೆವು. ಆದರೆ ಈಗ ಅದು ಬಿದ್ದು ಹೋಯ್ತು. ಅಂದ ಕೂಡಲೇ ಮಾರಿಬಿಡುವುದಾ? ಹಾಗಾದರೆ ಮನುಷ್ಯರನ್ನು ಕೂಡಾ ಹಾಗೆಯೇ ಮಾಡಬಹುದಲ್ವ?' ಎಂದು ಬೇಸರದಲ್ಲಿ ಹೇಳಿದಳು. 'ನಾನು ಇನ್ನು ಮುಂದೆ ರಜೆಯಲ್ಲಿ ನಿಮ್ಮ ಮನೆಗೆ ಬರುವುದೇ ಇಲ್ಲ' ಎಂದು ತನ್ನ ಮನೆಗೆ ಹಿಂತಿರುಗಿದಳು.

ಚಿನ್ನು ತನ್ನ ಮನೆಗೆ ವಾಪಾಸಾಗಿದ್ದು ಅಜ್ಜನಿಗಂತೂ ತುಂಬಾ ಬೇಸರವಾಯಿತು. ಅನೇಕ ಪಕ್ಷಿಗಳಿಗೆ ಆಶ್ರಯವನ್ನು ನೀಡುತ್ತಿದ್ದ, ತುಂಬಾ ಹಣ್ಣುಗಳನ್ನು ನೀಡುತ್ತಿದ್ದ ಆ ಮರದ ಉಪಕಾರವನ್ನು ಪಡೆದು, ಈಗ ಅದು ಉಪಯೋಗವಿಲ್ಲ ಎಂದಾಗ ಅದನ್ನು ಮಾರುವುದು ನಿಜಕ್ಕೂ ತಪ್ಪು. 'ಅಷ್ಟು ಚಿಕ್ಕವಳಿಗೆ ಬಂದ ಯೋಚನೆ ನನಗೆ ಯಾಕೆ ಬರಲಿಲ್ಲ, ಚಿನ್ನು ಹೇಳಿದ್ದು ಎಷ್ಟು ಸತ್ಯ!' ಚಿನ್ನುವನ್ನು ಹೇಗಾದರೂ ಮಾಡಿ ಮತ್ತೆ ಹಿಂತಿರುಗಿ ಬರುವಂತೆ ಮಾಡಬೇಕು ಎಂದು ಯೋಚಿಸಿ ಕೊನೆಗೂ ಒಂದು ನಿರ್ಧಾರಕ್ಕೆ ಬಂದರು.

ಬೇಸಿಗೆ ಕಳೆದು ಮಳೆಗಾಲ ಪ್ರಾರಂಭವಾದಾಗ ಅಜ್ಜ ಪೇಟೆಗೆ ಹೋಗಿ ಒಂದು ಮಾವಿನ ಗಿಡವನ್ನು ತಂದು ಕಡಿದು ಹಾಕಿದ ಮರದ ಜಾಗದಲ್ಲೇ ನೆಟ್ಟರು. ನೆಟ್ಟ ಮರುದಿವಸವೇ ಚಿನ್ನುವಿನ ಮನೆಗೆ ಹೋಗಿ ಅವಳನ್ನು ಮನೆಗೆ ಬರುವಂತೆ ಹೇಳಿದರು. ಅಜ್ಜ ಚಿನ್ನುವನ್ನು ಮತ್ತು ಅವಳ ಅಪ್ಪ ಅಮ್ಮನನ್ನು ಕರೆದುಕೊಂಡು ತನ್ನ ಮನೆಗೆ ಬಂದರು.

ತಾನು ನೆಟ್ಟ ಗಿಡದ ಬಳಿ ಚಿನ್ನುವನ್ನು ಕರೆದುಕೊಂದು ಹೋಗಿ, 'ನಿನಗಾಗಿ ಹೊಸ ಮಾವಿನ ಗಿಡವನ್ನು ತಂದು ನೆಟ್ಟಿದ್ದೇನೆ. ಇದು ದೊಡ್ಡದಾಗಿ ಮೊದಲಿನ ರೀತಿಯಲ್ಲೇ ನಿನಗೆ ಹಣ್ಣುಗಳನ್ನು ನೀಡುತ್ತದೆ' ಎಂದು ಹೇಳಿದರು.

ಚಿನ್ನುವಿನ ಅಪ್ಪ ಅಮ್ಮನಿಗೆ ಒಂದೂ ಅರ್ಥವಾಗಲಿಲ್ಲ. ಅವರು ಇದೆಲ್ಲ ಏನು ಎಂದು ಕೇಳಿದಾಗ, ಅಜ್ಜ ಅವರಲ್ಲಿ 'ಚಿನ್ನು ನನ್ನ ಕಣ್ಣು ತೆರೆಸಿದ್ದಾಳೆ, ಅವಳೆದುರು ನಾನು ತುಂಬಾ ಚಿಕ್ಕವನಾದೆ' ಎಂದು ನಡೆದ ವಿಷಯವನ್ನು ತಿಳಿಸಿದರು.

ಚಿನ್ನು ತನ್ನ ತಂದೆ, ತಾಯಿಯ ಜೊತೆ ಮನೆಗೆ ಹೋಗಲು ಹೊರಟು ನಿಂತಳು ಆಗ ಅಜ್ಜ ಮತ್ತು ಅಜ್ಜಿ ಚಿನ್ನುವಿನಲ್ಲಿ 'ಇನ್ನು ಮುಂದೆ ಮೊದಲಿನ ರೀತಿಯಲ್ಲೇ ಬೇಸಿಗೆ ರಜೆಯಲ್ಲಿ ನಮ್ಮ ಮನೆಗೆ ಬರುತ್ತೀಯಲ್ಲಾ?' ಎಂದು ಕೇಳಿದರು. ಆಗ ಚಿನ್ನು 'ನೀವು ಯಾವತ್ತೂ ಆ ಮರವನ್ನು ಕಡಿಯುವುದಿಲ್ಲ ಎಂದಾದರೆ ಬರುತ್ತೇನೆ' ಎಂದಳು.

– *ಸಂಗ್ರಹ*

## ಹುಯ್ಯೋ ಹುಯ್ಯೋ ಮಳೆರಾಯ

ಹುಯ್ಯೋ ಹುಯ್ಯೋ ಮಳೆರಾಯ
ಹೂವಿನ ತೋಟಕೆ ನೀರಿಲ್ಲ
ಬಾರೋ ಬಾರೋ ಮಳೆರಾಯ
ಬಾಳೆಯ ತೋಟಕೆ ನೀರಿಲ್ಲ
ಕರೆಯೋ ಕರೆಯೋ ಮಳೆರಾಯ
ಕಬ್ಬಿನ ತೋಟಕೆ ನೀರಿಲ್ಲ.
ಕುಟ್ಟೋ ಕುಟ್ಟೋ ಮಳೆರಾಯ
ಕಟ್ಟೆಯ ಕೆರೆಯಲಿ ನೀರಿಲ್ಲ
ಹಚ್ಚೋ ಹಚ್ಚೋ ಮಳೆರಾಯ
ಹಚ್ಚನೆ ಹಸುವಿಗೆ ಮೇವಿಲ್ಲ
ಹುಯ್ಯೋ ಹುಯ್ಯೋ ಮಳೆರಾಯ
ತಗ್ಗಿನ ಗದ್ದೆಗೆ ನೀರಿಲ್ಲ

– *ಸಂಗ್ರಹ*

## ಬಾರೋ ಈ ಮಣ್ಣಿಗೆ ಮಳೆರಾಯ

ಬಾರೋ ಈ ಮಣ್ಣಿಗೆ ಮಳೆರಾಯ......
ತಾರೋ ನೀ ಸಂಪದ ಸೌಭಾಗ್ಯ........ ॥2॥
ಗುಡುಗೀನ ಕುದುರೆ ಏರಿ, ಬಿರುಗಾಳಿ ಬೆನ್ನನ್ನೇರಿ ॥2॥
ಮಿಂಚಿನ ಖಡ್ಗದ ಸರದಾರ....... ॥2॥ ಬಾರೋ
ಕಾರ್ಮೋಡ ಬೆಳ್ಳಿ ಮೋಡ ಮಳೆ ಮೋಡ ಮಿಂಚಿನ್ ಮೋಡ॥2॥
ಸ್ವಾತಿಯ ಮುತ್ತಿನ್ ಮೋಡ ಬಲು ಅಂದಾ...... ॥2॥ ಬಾರೋ॥
ಗಿಡಕೆಲ್ಲ ಹೂಗಳ ಮುಡಿಸಿ ವನಕೆಲ್ಲ ಹಸಿರನ್ನುಡಿಸಿ ॥2॥
ನೆಲಕೆಲ್ಲ ನೀರೂಡೊ ಮಳೆರಾಯ ॥2॥ ಬಾರೊ॥
ತೆಂಗೀನ ತೋಟದ ಚಂದ ಕಂಗೀನ ತೋಪಿನ ಅರ
ಮಾವಿ ಹೂವಿನ್ ಗಂಧ ನಿನ್ನಿಂದಾ ............... ॥2॥ ಬಾರೋ॥

– *ಸಂಗ್ರಹ*

## ಮೌಲ್ಯನಿರ್ಣಯ ಚಟುವಟಿಕೆಗಳು

ಕೆಳಗೆ ಕೊಟ್ಟ ಗೆರೆಗಳಿಗೆ ಸಮಾನವಾದ ಪದ್ಯದ ಸಾಲುಗಳನ್ನು ನೆನಪಿಸಿ ಬರೆಯಿರಿ.

1. ಬೀರಪ್ಪನು ಬಿಕ್ಕಿ ಬಿಕ್ಕಿ ಅಳುತ್ತಿದ್ದುದನ್ನು ಕಂಡು ಮಾದವ್ವಳು ಬಿದ್ದು ಬಿದ್ದು ನಕ್ಕಳು.

2. ಮಾದವ್ವಳು ಮುದ್ದೆಯನ್ನು ತಂದದ್ದನ್ನು ಕಂಡು ಬೀರಪ್ಪನು ಊಟಮಾಡಲು ಕುಳಿತುಕೊಂಡನು.

3. ಬೆಟ್ಟದ ಬುಡದಲ್ಲಿ ಹುಟ್ಟಿದ ನದಿಯು ಕಾಡಿನ ದಾರಿಯನ್ನು ಹಿಡಿಯಿತು. ಕಾಡಿನಲ್ಲಿ ವಿವಿಧ ಮೃಗ ಪಕ್ಷಿಗಳು ನೀರು ಕುಡಿಯಲು ನದಿಯ ದಡಕ್ಕೆ ಬರುತ್ತವೆ. ಕಾಡಿನಿಂದ ಮುಂದಕ್ಕೆ ಬಂದ ನದಿಯು ಊರನ್ನು ತಲುಪಿ ನಿಧಾನವಾಗಿ ಹರಿಯತೊಡಗಿತು. ನದಿಯು ಮನುಷ್ಯನಿಗೆ ಹೇಗೆ ಪ್ರಯೋಜನಕಾರಿಯಾಗಿದೆ? ಸ್ವಂತ ವಾಕ್ಯಗಳಲ್ಲಿ ಬರೆಯಿರಿ.

4. ಮಗಧ ದೇಶಕ್ಕೆ ಬರಗಾಲ ಬಂದಾಗ ರಾಜನು ಜನರ ತೆರಿಗೆಗಳನ್ನು ಮನ್ನಾ ಮಾಡಿದನು. ರಾಜನಿಗೆ ಬರಗಾಲದ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಲು ಸಾಧ್ಯವಾಗಿದೆ. ಪ್ರಜೆಗಳಲ್ಲಿ ಪರಿಹಾರ ಕೇಳಲು ತೀರ್ಮಾನಿಸಿದನು. ಇದರಂತೆ ಬರಗಾಲದ ಸಮಸ್ಯೆಗೆ ಪರಿಹಾರ ಹೇಳಲು ಸುಮತಿಯು ರಾಜನ ಬಳಿಗೆ ಬಂದಳು. ಸುಮತಿಯು ನೀಡಿದ ಪರಿಹಾರವೇನು? ಸುಮತಿಯ ಕುರಿತು ನಿಮ್ಮ ಅಭಿಪ್ರಾಯವನ್ನು ಬರೆಯಿರಿ.

5. ಮಳೆಗಾಲದಲ್ಲಿ ಆಕಾಶವು ಕಪ್ಪಾಗಿರುತ್ತದೆ. ಜೋರಾಗಿ ಗಾಳಿ ಬೀಸುತ್ತದೆ. ಗುಡುಗು ಮಿಂಚುಗಳು ಇರುತ್ತವೆ. ನೀವು ಮಳೆಗಾಲವನ್ನು ಕಂಡಿರುವಿರಲ್ಲವೇ? ನೀವು ಕಂಡ ಮಳೆಗಾಲವನ್ನು ವಿವರಿಸಿ ಬರೆಯಿರಿ.

6. ಕೆಳಗೆ ಕೊಟ್ಟಿರುವ ಪದ್ಯದ ಸಾಲುಗಳನ್ನು ಮುಂದುವರಿಸಿ ಬರೆಯಿರಿ.

ಪೂರ್ವದ ಬಾನಲಿ
ಸೂರ್ಯನು ಬಂದ
ಬೆಳಕನು ತಂದ ಜಗಕೆಲ್ಲ
..............................
..............................
..............................
..............................
..............................
..............................

* * *

# 2. ಕಟ್ಟುವೆವು ಹೊಸ ನಾಡೊಂದನು

ನಮ್ಮ ದೇಶವು ವಿವಿಧ ಭಾಷೆ, ಸಂಸ್ಕೃತಿಗಳ ತವರೂರು. ನಮ್ಮ ವೇಷ, ಭಾಷೆ ವಿಚಾರಗಳು ವಿಭಿನ್ನವಾಗಿದ್ದರೂ ನಾವೆಲ್ಲರೂ ಭಾರತೀಯರು ಎಂಬ ಭಾವನೆ ಮೂಡಬೇಕು. ನಮ್ಮ ದೇಶಕ್ಕೆ ಸ್ವಾತಂತ್ರ್ಯವನ್ನು ದೊರಕಿಸಿಕೊಡಲು ಸ್ವಾತಂತ್ರ್ಯ ಹೋರಾಟಗಾರರು ಮಾಡಿದ ತ್ಯಾಗ ನಮಗೆ ಆದರ್ಶವಾಗಬೇಕು. ಸ್ವಾರ್ಥಹಿತಕ್ಕಿಂತ ದೇಶಹಿತ ಮುಖ್ಯ ಎಂಬುದನ್ನು ನಾವು ಮನಗಾಣಬೇಕು. ದೇಶದ ಒಳಿತಿಗಾಗಿ ಭೇದ ಭಾವಗಳನ್ನು ಮರೆತು ಒಂದಾಗಿ ದುಡಿಯುವುದು ನಮ್ಮೆಲ್ಲರ ಕರ್ತವ್ಯವಾಗಿದೆ. ಇದಕ್ಕಾಗಿ ನಮ್ಮಲ್ಲಿ ರಾಷ್ಟ್ರೀಯ ಭಾವೈಕ್ಯ ನೆಲೆಗೊಳ್ಳಬೇಕು. ಸ್ವಾತಂತ್ರ್ಯ ಹೋರಾಟಗಾರರ ಬಗೆಗೆ ಗೌರವ ಭಾವನೆ ತುಂಬಿಕೊಳ್ಳಬೇಕು ಮತ್ತು ನಮ್ಮ ಭಾಷೆಯ ಬಗ್ಗೆ ಅಭಿಮಾನ ಗಟ್ಟಿಗೊಳ್ಳಬೇಕು.

ಕನ್ನಡ ನಾಡಿನ ವೀರ ಮಹಿಳೆಯರಲ್ಲಿ ಅಗ್ರಪಂಕ್ತಿಗೆ ಸೇರಿದವಳು ಕಿತ್ತೂರಿನ ರಾಣಿ ಚೆನ್ನಮ್ಮ. ಸ್ವಾತಂತ್ರ್ಯ ಹಾಗೂ ಸ್ವಾಭಿಮಾನದ ಸಾಕಾರಮೂರ್ತಿಯಾದ ರಾಣಿಯು ತನ್ನ ಪುಟ್ಟರಾಜ್ಯದ ಸ್ವಾತಂತ್ರ್ಯ ರಕ್ಷಣೆಗೆಗಾಗಿ ಬ್ರಿಟಿಷರ ದೊಡ್ಡ ಸೈನ್ಯದ ವಿರುದ್ಧ ನಡೆಸಿದ ಹೋರಾಟ, ತೋರಿಸಿದ ಧೈರ್ಯ, ಕೆಚ್ಚು ಸಾಹಸಗಳು ಅವಳನ್ನು ಕೀರ್ತಿಯ ಶಿಖರಕ್ಕೇರಿಸಿವೆ. ಇಂಥ ಸ್ವಾತಂತ್ರ್ಯ ಸಂಗ್ರಾಮದ ಕಥೆಗಳು ಮಕ್ಕಳಿಗೆ ಸ್ವಾತಂತ್ರ್ಯದ ಮಹತ್ವವನ್ನು ತಿಳಿಸುತ್ತವೆ. ಸ್ವಾತಂತ್ರ್ಯವನ್ನು ಪಡೆಯಲು ನಮ್ಮ ಹಿರಿಯರು ಮಾಡಿದ ಮಹಾತ್ಯಾಗ ತಮ್ಮ ಮಕ್ಕಳಿಗೆ ಸ್ಫೂರ್ತಿಯಾಗಬೇಕು. ತಾಯ್ನುಡಿಯ ಮೇಲಿನ ಪ್ರೇಮವು ದೇಶಪ್ರೇಮದ ಒಂದು ಭಾಗವಾಗಿದೆ. ನಮ್ಮ ಮಾತೃಭಾಷೆಯಾದ ಕನ್ನಡ ಭಾಷೆಯ ಮೇಲೆ ನಮಗೆ ಅಭಿಮಾನವಿರಬೇಕು. ಭಾಷೆಯ ಮಹತ್ವವನ್ನು ತಿಳಿಯಬೇಕು. ಇದಕ್ಕಾಗಿ 'ಕನ್ನಡ ಹಾ ಸವಿಗನ್ನಡ' ಪದ್ಯವನ್ನು ನೀಡಲಾಗಿದೆ.

ಪಾಠದ ಸಂದರ್ಭದಲ್ಲಿ I.C.T. ಯನ್ನು ತರಗತಿಕೋಣೆಯಲ್ಲಿ ಯೋಗ್ಯವಾದ ರೀತಿಯಲ್ಲಿ ಬಳಸಬೇಕು.

**ಕಲಿಕಾ ಸಾಧನೆಗಳು**

- ಪದಪ್ರಯೋಗಗಳು, ಶೈಲಿಗಳು, ಆಲಿಸಿದ ನೂತನ ಪದಗಳು ಮೊದಲಾದವುಗಳನ್ನು ಸಂದರ್ಭಕ್ಕನುಗುಣವಾಗಿ ಮಾತುಗಾರಿಕೆಯಲ್ಲಿ ಬಳಸುವುದು.
- ಕಥೆ, ಕವಿತೆ, ಲಘು ಟಿಪ್ಪಣಿಗಳನ್ನು ಆಲಿಸಿ/ಓದಿ ತನ್ನದೇ ಭಾಷೆಯಲ್ಲಿ ಹೇಳುವುದು ಹಾಗೂ ಬರೆಯುವುದು.
- ಕವಿತೆಗಳನ್ನು ಆಲಿಸಿ, ಆಸ್ವಾದಿಸಿ ಅವುಗಳ ಆಶಯವನ್ನು ಅರ್ಥೈಸಿಕೊಂಡು ರಾಗ, ತಾಳ, ಭಾವಗಳಿಂದ ಹಾಡುವುದು.
- ನಿರ್ದಿಷ್ಟ ಭಾಷಾ ವ್ಯವಹಾರ ರೂಪಗಳನ್ನು ಶ್ರೋತೃಗಳಿಗೆ ಆಶಯಸ್ಪಷ್ಟವಾಗುವ ರೀತಿಯಲ್ಲಿ ಉಚ್ಚಾರ ಸ್ಪಷ್ಟತೆಯಿಂದ ಸರಾಗವಾಗಿ ಓದುವುದು.
- ಸೃಜನಾತ್ಮಕ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡು ತನ್ನ ರಚನೆಗಳನ್ನು ತರಗತಿಯ ಹಸ್ತಪತ್ರಿಕೆಗಳಿಗೆ ನೀಡುವುದು.
- ಸರಳ ಕವಿತೆಗಳನ್ನು ರಾಗ, ತಾಳ, ಭಾವದೊಂದಿಗೆ ಹಾಡುವುದು ಹಾಗೂ ಸಮಾನ ರಾಗದಲ್ಲಿ ಹಾಡಬಹುದಾದ ಸಾಲುಗಳನ್ನು ಬರೆಯುವುದು.
- ಸಹಪಾಠಿಗಳ ರಚನೆಗಳನ್ನು ಮೌಲ್ಯನಿರ್ಣಯ ಮಾಡಿ ಇತರರ ರಚನೆಗಳಲ್ಲಿನ ಪ್ರಯೋಗಗಳು, ಶೈಲಿಗಳನ್ನು ವಿಶ್ಲೇಷಿಸಿ ತನ್ನ ರಚನೆಗಳನ್ನು ಉತ್ತಮಪಡಿಸುವುದು.
- ತನ್ನ ಆಶಯಗಳನ್ನು ತಪ್ಪಿಲ್ಲದೆ ಸೂಕ್ತ ವ್ಯವಹಾರರೂಪದಲ್ಲಿ (ಕಥೆ, ಕವಿತೆ ಇತ್ಯಾದಿ) ಬರೆಯುವುದು.

# ಯೂನಿಟ್ ಗ್ರಿಡ್ : 2. ಕಟ್ಟುವೆವು ನಾವು ಹೊಸ ನಾಡೊಂದನು

| ಆಶಯ | ಪ್ರಕ್ರಿಯೆಗಳು | ಕಲಿಕಾ ಸಾಧನೆಗಳು |
|---|---|---|
| **1. ನಾವೆಲ್ಲರೂ ಒಂದೇ** | | **ಸಮಯ : 7 ಗಂಟೆಗಳು** |
| ತಾಳಗಳಿಂದ ಭಾವನಾತ್ಮಕವಾಗಿ ಮಂಡಿಸುವಾಗ ಕವಿತೆಯು ಆಸ್ವಾದಕರವಾಗುವುದು.<br>• ವಿವಿಧತೆ ಇದ್ದರೂ ಭಾರತೀಯರಲ್ಲಿ ಏಕತೆ ಇದೆ ಎಂದು ತಿಳಿಯುವುದು.<br>• ಭಾರತಕ್ಕೆ ಮಹತ್ತಾದ ಪರಂಪರೆ ಇದೆ ಎಂದು ತಿಳಿಯುವುದು. | • ಭಾವ, ರಾಗ, ತಾಳಗಳನ್ನು ಒಳಗೊಂಡು ಪದ್ಯವನ್ನು ವೈಯಕ್ತಿಕವಾಗಿಯೂ ಗುಂಪಿನಲ್ಲಿಯೂ ಹಾಡಿ ಆಸ್ವಾದಿಸುವುದು.<br>• ಹಾಡಿನ ಧ್ವನಿ ಮುದ್ರಿಕೆಯನ್ನು ಆಲಿಸುವುದು.<br>• ಕೊಟ್ಟಿರುವ ಆಶಯಗಳಿಗೆ ಯೋಗ್ಯವಾದ ಸಾಲುಗಳನ್ನು ಪದ್ಯದಿಂದ ಆರಿಸಿ ಬರೆದು ಮಂಡಿಸುವುದು.<br>• ಅಡಿಗೆರೆ ಎಳೆದ ಪದಗಳನ್ನು ವಿಂಗಡಿಸಿ ಬರೆದು ಮಂಡಿಸುವುದು.<br>• ಘೋಷಣ ವಾಕ್ಯಗಳನ್ನು ಸಂಗ್ರಹಿಸುವುದು. | • ಕವಿತೆಗಳನ್ನು ಆಲಿಸಿ, ಆಸ್ವಾದಿಸಿ, ಅವುಗಳ ಆಶಯಗಳನ್ನು ಅರ್ಥೈಸಿಕೊಂಡು ರಾಗ, ತಾಳಗಳಿಂದ ಹಾಡುವುದು.<br>• ಕವಿತೆಯ ಆಶಯವನ್ನು ರಾಗ, |
| • ಆಶಯಕ್ಕೆ ಸಂಬಂಧಿಸಿದ ವಿಚಾರಗಳನ್ನು ಸೂಕ್ತವಾಗಿ ಕ್ರಮೀಕರಿಸಿ ಬರೆದ ರಚನೆ ಟಿಪ್ಪಣಿ ಎಂದು ತಿಳಿಯುವುದು.<br>• ಓದಿ ಆಶಯಗ್ರಹಣವನ್ನು ಮಾಡುವುದು. ಅವುಗಳನ್ನು ಅರ್ಥೈಸಿಕೊಂಡು ತನ್ನ ಬರವಣಿಗೆಯಲ್ಲಿ ಉಪಯೋಗಿಸುವುದರಿಂದ ಆಶಯ ಪೂರ್ಣತೆಯನ್ನು ಹೊಂದುತ್ತವೆ ಎಂದು ತಿಳಿಯುವುದು.<br>• ನಮ್ಮ ರಾಷ್ಟ್ರಧ್ವಜ, ಅದರ ವಿಶೇಷತೆಗಳನ್ನು ತಿಳಿಯುವುದು. | • ರಾಷ್ಟ್ರಧ್ವಜದ ಕುರಿತಾದ ವಿಚಾರಗಳನ್ನು ಓದಿ, ಚರ್ಚೆಯ ಮೂಲಕ ತಿಳಿದು ವೈಯಕ್ತಿಕವಾಗಿ ಬರೆದು, ಗುಂಪಿನಲ್ಲಿ ಪರಸ್ಪರ ಹೋಲಿಸಿ ಉತ್ತಮಪಡಿಸಿ ತರಗತಿಯಲ್ಲಿ ಮಂಡಿಸುವುದು.<br>• ಅಡಿಗೆರೆ ಎಳೆದ ಪದಗಳ ಪರ್ಯಾಯ ಪದಗಳನ್ನು ಪದ್ಯದಿಂದ ಹುಡುಕಿ ಬರೆದು ಆ ಪದಗಳನ್ನು ಉಪಯೋಗಿಸಿ ವಾಕ್ಯ ರಚನೆ ಮಾಡಿ ತರಗತಿಯಲ್ಲಿ ಮಂಡಿಸುವುದು. | • ನವೀನ ಪದಗಳು ಮತ್ತು ಸರ್ವನಾಮಗಳನ್ನು ಉಪಯೋಗಿಸಿಕೊಂಡು ಸೃಜನಾತ್ಮಕ ಚಟುವಟಿಕೆಗಳಾದ ಟಿಪ್ಪಣಿ, ಸರಳ ಕಥೆಗಳು ಮೊದಲಾದವುಗಳನ್ನು ರಚಿಸುವುದು.<br>• ಸಹಪಾಠಿಗಳ ರಚನೆಗಳನ್ನು ಮೌಲ್ಯನಿರ್ಣಯ ಮಾಡುವುದು. ಇಂತಹ ರಚನೆಗಳಲ್ಲಿನ ಪ್ರಯೋಗಗಳನ್ನು ಮತ್ತು ಶೈಲಿಗಳನ್ನು ವಿಶ್ಲೇಷಿಸಿ ತನ್ನ ರಚನೆಗಳನ್ನು ಉತ್ತಮಪಡಿಸುವುದು. |

| ಆಶಯ | ಪ್ರಕ್ರಿಯೆಗಳು | ಕಲಿಕಾ ಸಾಧನೆಗಳು |
|---|---|---|
| • ಒಂದಕ್ಕಿಂತ ಹೆಚ್ಚುಕಥೆ, ಕವಿತೆಯಲ್ಲಿರುವ ಆಶಯ ವ್ಯತ್ಯಾಸ, ಸಾಮ್ಯತೆ ಮೊದಲಾದುವುಗಳನ್ನು ತಿಳಿಯುವುದು/ ಕಂಡುಕೊಳ್ಳುವುದು, ಓದಿ ತಿಳಿದ ವಿಚಾರಗಳನ್ನು ಇತರರೊಂದಿಗೆ ಹಂಚಿಕೊಳ್ಳುವುದು. | • ನಾವೆಲ್ಲರೂ ಒಂದೇ, ಏಕತೆಯ ನಾಡು, ಕವಿತೆಗಳನ್ನು ಹೋಲಿಸಿ ಸಾಮ್ಯತೆ, ವ್ಯತ್ಯಾಸಗಳನ್ನು ತಿಳಿದು ತರಗತಿಯಲ್ಲಿ ಮಂಡಿಸುವುದು. | • ತನ್ನ ಇಷ್ಟ, ಆಸಕ್ತಿ ಹಾಗೂ ಆದ್ಯತೆಗಳನ್ನು ಪರಿಗಣಿಸಿಕೊಂಡು ಪುಸ್ತಕಗಳು ಮತ್ತು ಇತರ ಓದುವ ಸಾಮಗ್ರಿಗಳನ್ನು ಓದಿ ಆಶಯವನ್ನು ವಿಭಿನ್ನ ರೀತಿಯಲ್ಲಿ ಇತರರೊಂದಿಗೆ ಹಂಚಿಕೊಳ್ಳುವುದು. |
| **2. ಕಿತ್ತೂರಿನ ರಾಣಿ** | | **ಸಮಯ : 8 ಗಂಟೆಗಳು** |
| • ಉಚ್ಚಾರ ಶುದ್ಧಿಯೊಂದಿಗೆ ಓದುವುದು, ಓದಿದ ವಿಚಾರಗಳ ಆಶಯಗ್ರಹಣವನ್ನು ಮಾಡುವುದು.<br>• ಭಾರತದ ಸ್ವಾತಂತ್ರ್ಯ ಹೋರಾಟಕ್ಕೆ ಸುದೀರ್ಘವಾದ ಚರಿತ್ರೆ ಇದೆ ಎಂದು ತಿಳಿಯುವುದು.<br>• ನಮ್ಮ ದೇಶದ ಸ್ವಾತಂತ್ರ್ಯಕ್ಕಾಗಿ ಬಹಳಷ್ಟು ಜನ ತಮ್ಮ ಪ್ರಾಣ ತ್ಯಾಗ ಮಾಡಿದ್ದಾರೆ. ಅವರ ಕುರಿತು ತಿಳಿದು ದೇಶದ ಅಖಂಡತೆಯ ಪ್ರಾಧಾನ್ಯತೆಯನ್ನು ತಿಳಿಯುವುದು.<br>• ಪಾಠಭಾಗವನ್ನು ಆಶಯ ವ್ಯಕ್ತವಾಗುವಂತೆ | ಉಚ್ಚಾರ ಸ್ಪಷ್ಟತೆಯೊಂದಿಗೆ ಸರಾಗವಾಗಿ ಓದುವುದು.<br>• ಘಟನೆಗಳನ್ನು ಅನುಕ್ರಮವಾಗಿ ಬರೆದು ತರಗತಿಯಲ್ಲಿ ಮಂಡಿಸುವುದು.<br>• ಪಾಠಭಾಗವನ್ನು ಓದಿ ಅದರಿಂದ ಸಾಧ್ಯವಾದಷ್ಟು ಪ್ರಶ್ನೆಗಳನ್ನು ತಯಾರಿಸಿ ತರಗತಿಯಲ್ಲಿ ಪ್ರಶ್ನೋತ್ತರ ಸ್ಪರ್ಧೆ ನಡೆಸುವುದು.<br>• ಅಕ್ಷರಗಳನ್ನು ಕ್ರಮೀಕರಿಸಿ ಸ್ವಾತಂತ್ರ್ಯ ಹೋರಾಟಗಾರರ ಹೆಸರುಗಳನ್ನು ಕಂಡುಕೊಳ್ಳುವುದು, ಅವರ ಕುರಿತು ತಿಳಿಯುವುದು.<br>• ಸಹಪಾಠಿಗಳ ರಚನೆಗಳನ್ನು ಮೌಲ್ಯನಿರ್ಣಯ ಮಾಡಿ | • ನಿರ್ದಿಷ್ಠ ಭಾಷಾ ವ್ಯವಹಾರ ರೂಪಗಳನ್ನು ಶ್ರೋತೃಗಳಿಗೆ ಆಶಯಸ್ಪಷ್ಟವಾಗುವ ರೀತಿಯಲ್ಲಿ ಉಚ್ಚಾರ ಸ್ಪಷ್ಟತೆಯಿಂದ ಸರಾಗವಾಗಿ ಓದುವುದು.<br>• ಕಥೆ, ಕವಿತೆ, ಟಿಪ್ಪಣಿಗಳನ್ನು ಆಲಿಸಿ ತನ್ನದೇ ರೀತಿಯಲ್ಲಿ ಹೇಳುವುದು ಹಾಗೂ ಬರೆಯುವುದು. |
| ಅವುಗಳನ್ನು ವಿಭಿನ್ನ ಸಂದರ್ಭಗಳಲ್ಲಿ ಉಪಯೋಗಿಸಿ ಸಾಮರ್ಥ್ಯಗಳನ್ನು ಗಳಿಸುವುದು.<br>• ಮಾದರಿಯಂತೆ ವಾಕ್ಯಗಳನ್ನು ಬದಲಾಯಿಸಿ | ಬರೆದು ತರಗತಿಯಲ್ಲಿ ಮಂಡಿಸುವುದು. | ಇತರರ ರಚನೆಗಳಲ್ಲಿನ ಪ್ರಯೋಗಗಳು, ಶೈಲಿಗಳನ್ನು ವಿಶ್ಲೇಷಿಸಿ ತನ್ನ ರಚನೆಗಳನ್ನು ಉತ್ತಮಪಡಿಸುವುದು.<br>• ವಾಕ್ಯಗಳ ವಿಶೇಷತೆಗಳನ್ನು ತಿಳಿದುಕೊಳ್ಳುವುದು ಮತ್ತು |

| ಆಶಯ | ಪ್ರಕ್ರಿಯೆಗಳು | ಕಲಿಕಾ ಸಾಧನೆಗಳು |
|---|---|---|
| **3. ಕನ್ನಡ! ಹಾ ಸವಿಗನ್ನಡ!** | | **ಸಮಯ : 6 ಗಂಟೆಗಳು** |
| • ಭಾವ, ರಾಗ ತಾಳ ಮೊದಲಾದವುಗಳನ್ನು ಒಳಗೊಂಡು ಕವಿತೆಯನ್ನು ಹಾಡುವುದು.<br>• ರಾಗ, ತಾಳ, ಆಶಯಗಳನ್ನು ಒಳಗೊಂಡು ಭಾವಪೂರ್ಣವಾಗಿ ಮಂಡಿಸುವಾಗ ಕವಿತೆಯ ಆಸ್ವಾದನೆಯಾಗುವುದು. | • ಕವಿತೆಯನ್ನು ಯೋಗ್ಯ ರಾಗ, ತಾಳ, ಭಾವಗಳೊಂದಿಗೆ ವೈಯಕ್ತಿಕವಾಗಿಯೂ ಗುಂಪಿನಲ್ಲಿಯೂ ಹಾಡುವುದು.<br>• ಕೊಟ್ಟಿರುವ ವಾಕ್ಯಗಳಿಗೆ ಸಮಾನವಾದ ಸಾಲುಗಳನ್ನು ಕವಿತೆಯಿಂದ ಆರಿಸಿ ಬರೆಯುವುದು. | • ಕವಿತೆಗಳನ್ನು ಆರಿಸಿ ಆಸ್ವಾದಿಸಿ ಅವುಗಳ ಆಶಯಗಳನ್ನು ಅರ್ಥೈಸಿಕೊಂಡು ರಾಗ, ತಾಳ, ಭಾವಗಳಿಂದ ಹಾಡುವುದು. |
| • ವಾಕ್ಯಗಳ ವಿಶೇಷತೆ, ಪ್ರತ್ಯೇಕತೆಗಳನ್ನು ತಿಳಿದುಕೊಳ್ಳುವುದು ಮತ್ತು ಅವುಗಳನ್ನು ವಿಭಿನ್ನ ಸಂದರ್ಭಗಳಲ್ಲಿ ಉಪಯೋಗಿಸುವ ಸಾಮರ್ಥ್ಯಗಳನ್ನು ಗಳಿಸುವುದು. | • ಚಟುವಟಿಕೆಯಲ್ಲಿ ಕೊಟ್ಟಿರುವ ವಾಕ್ಯಗಳನ್ನು ಮಾದರಿಯಂತೆ ಬದಲಾಯಿಸಿ ಬರೆದು ಮಂಡಿಸುವುದು.<br>• ಕೊಟ್ಟಿರುವ ಕೋಣೆಯಿಂದ ಭಾರತದ ವಿವಿಧ ಭಾಷೆಗಳ ಹೆಸರುಗಳನ್ನು ಆರಿಸಿ ಬರೆಯುವುದು ತರಗತಿಯಲ್ಲಿ ಹೋಲಿಸಿ ಪಟ್ಟಿಯನ್ನು ಬೆಳೆಸುವುದು.<br>• ಆವರಣದಲ್ಲಿ ಕೊಟ್ಟಿರುವ ಪದಗಳ ಸರಿಯಾದ ರೂಪವನ್ನು ಬರೆದು ಬಿಟ್ಟ ಸ್ಥಳಗಳನ್ನು ತುಂಬಿಸುವುದು. | • ಸಹಪಾಠಿಗಳ ರಚನೆಗಳನ್ನು ಮೌಲ್ಯನಿರ್ಣಯ ಮಾಡಿ ಇತರರ ರಚನೆಗಳಲ್ಲಿನ ಪ್ರಯೋಗಗಳು ಶೈಲಿಗಳನ್ನು ವಿಶ್ಲೇಷಿಸಿ ತನ್ನ ರಚನೆಗಳನ್ನು ಉತ್ತಮಪಡಿಸುವುದು. |
| • ಮಾತೃಭಾಷೆಯ ಕುರಿತು ತಿಳಿಯುವುದು ಮತ್ತು ಭಾಷೆಯ ಕುರಿತು ಪ್ರೀತಿಯನ್ನು ಬೆಳೆಸಿಕೊಳ್ಳುವುದು. | • ಚರ್ಚಿಸಿ ಮಾತೃಭಾಷೆಯ ಕುರಿತು ಟಿಪ್ಪಣಿ ಬರೆದು ತರಗತಿಯಲ್ಲಿ ಮಂಡಿಸುವುದು. | • ಪದ ಪ್ರಯೋಗಗಳು, ಶೈಲಿಗಳು ಆಲಿಸಿದ ನೂತನ ಪದಗಳು ಮೊದಲಾದವುಗಳನ್ನು ಸಂದರ್ಭಕ್ಕನು ಗುಣವಾಗಿ ಮಾತುಗಾರಿಕೆಯಲ್ಲಿ ಬಳಸುವುದು.<br>• ತನ್ನ ಆಶಯಗಳನ್ನು ತಪ್ಪಿಲ್ಲದೆ ಸೂಕ್ತ ವ್ಯವಹಾರ ರೂಪದಲ್ಲಿ ಬರೆಯುವುದು. |
| • ತನ್ನ ಅನುಭವಗಳನ್ನು ಯೋಗ್ಯವಾದ ಪದ ಪ್ರಯೋಗಗಳನ್ನುಪಯೋಗಿಸಿಕೊಂಡು ಆಶಯ ಪೂರ್ಣವಾಗಿ ಕ್ರಮೀಕರಿಸಿ ಕವಿತೆಯನ್ನು ಬರೆಯುವುದು. | • ಕೊಟ್ಟಿರುವ ಪದಗಳನ್ನು ಉಪಯೋಗಿಸಿ ಪದ್ಯವನ್ನು ರಚಿಸಿ ಗೆಳೆಯರೊಂದಿಗೆ ಹಂಚಿ ಉತ್ತಮಪಡಿಸಿ ಮಂಡಿಸಿ ಹಸ್ತಪತ್ರಿಕೆಯಲ್ಲಿ ಪ್ರಕಟಪಡಿಸುವುದು. | • ಸೃಜನಾತ್ಮಕ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವುದು.<br>• ಸರಳ ಕವಿತೆಗನ್ನು ರಾಗ, ತಾಳ ಭಾವಗಳೊಂದಿಗೆ ಹಾಡುವುದು ಹಾಗೂ ಸಮಾನ ರಾಗಗಳಲ್ಲಿ ಹಾಡಬಹುದಾದ ಸಾಲುಗಳನ್ನು ಬರೆಯುವುದು. |

# ನಾವೆಲ್ಲರೂ ಒಂದೇ

- ❑ **ಪದ್ಯ ಹಾಡುವ**

ಮಿಲೆ ಸ್ವರ ಮೇರಾ ತುಮ್ಹಾರಾ.... ಪದ್ಯವನ್ನು ಮಕ್ಕಳಿಗೆ ಕೇಳಿಸುವುದು ಅಥವಾ ಇತರ ದೇಶಭಕ್ತಿ ಗೀತೆಯನ್ನು ಕೇಳಿಸುವುದು.

ಈ ರೀತಿಯ ಪದ್ಯಗಳನ್ನು ನೀವು ಕೇಳಿದ್ದೀರಾ? ಯಾವುವೆಲ್ಲಾ? ಮಕ್ಕಳು ಹೇಳಲಿ.

ಇದು ಯಾವುದಕ್ಕೆ ಸಂಬಂಧಪಟ್ಟದ್ದು? ಎಂದು ಮಕ್ಕಳಲ್ಲಿ ಚರ್ಚೆ ನಡೆಸುವುದು. ಈ ಗೀತೆಗಳು ವಿವಿಧತೆಯಲ್ಲಿ ಏಕತೆಯನ್ನು ಸಾರುವ ದೇಶಭಕ್ತಿಗೀತೆಗಳಾಗಿವೆ ಎಂದು ಕ್ರೋಡೀಕರಿಸುವುದು. ಇದೇ ರೀತಿಯ ಇನ್ನೊಂದು ಪದ್ಯ 'ನಾವೆಲ್ಲರೂ ಒಂದೇ' ಅದನ್ನು ಓದೋಣ.

- ವೈಯಕ್ತಿಕವಾಗಿ ಮಕ್ಕಳು ಓದಲಿ.
- ರಾಗ ಹಾಕಿ ಮಕ್ಕಳು ಗುಂಪಿನಲ್ಲಿ ಹಾಡಲಿ.
- ಮಕ್ಕಳಿಂದ ಮೌಲ್ಯಮಾಪನ : ಉತ್ತಮವಾಗಿ ಹಾಡಿದ ಗುಂಪು ಯಾವುದು? ಯಾಕೆ? ಇನ್ನೂ ಉತ್ತಮಗೊಳಿಸುವುದು ಹೇಗೆ? ಸೂಚಕಗಳ ತಯಾರಿ. ಸೂಚಕಗಳ ಆಧಾರದಲ್ಲಿ ಮೌಲ್ಯನಿರ್ಣಯ ಮಾಡುವುದು.
- ಅಧ್ಯಾಪಕರು ಮಕ್ಕಳು ಹಾಡಿದ ರಾಗಕ್ಕಿಂತ ಭಿನ್ನವಾದ ರಾಗದಲ್ಲಿ ಹಾಡುವುದು.
- ಹಾಡಿನ ಧ್ವನಿ ಮುದ್ರಿಕೆಯನ್ನು ಆಲಿಸಲು ಮಕ್ಕಳಿಗೆ ಅವಕಾಶವನ್ನು ನೀಡುವುದು.
- ಒಂದೇ ರಾಗದಲ್ಲಿ ತರಗತಿಯ ಎಲ್ಲಾ ಮಕ್ಕಳು ಜೊತೆಯಾಗಿ ಹಾಡಲಿ.

**ಮೌಲ್ಯನಿರ್ಣಯ ಸೂಚಕಗಳು**

- ❑ **ಪದ್ಯ ಹಾಡುವುದು**

- ಸ್ಪಷ್ಟವಾಗಿ ಹಾಡಿದ್ದಾರೆ
- ರಾಗವಾಗಿ ಹಾಡಿದ್ದಾರೆ
- ಗುಂಪಿನಲ್ಲಿ ಎಲ್ಲರೂ ಒಂದೇ ರೀತಿ ಹಾಡಿದ್ದಾರೆ
- ತಮ್ಮದೇ ಆದ ರಾಗವನ್ನು ಕಂಡುಕೊಂಡಿದ್ದಾರೆ

- ❑ **ಸಾಲು ಹುಡುಕುವ**

ಚಟುವಟಿಕೆಯ ಆರಂಭದಲ್ಲಿ ಪದ್ಯದ ಕುರಿತು ಕೆಲವು ಪ್ರಶ್ನೆಗಳನ್ನು ಕೇಳುವುದು.

- ನಿಮಗೆ ಪದ್ಯ ಇಷ್ಟವಾಯಿತೇ? ಯಾಕೆ?
- ಈ ಹಾಡಿನಲ್ಲಿ ನಿಮಗೆ ಇಷ್ಟವಾದ ಸಾಲು ಯಾವುದು? ಯಾಕೆ?
- ಈ ಹಾಡಿನಲ್ಲಿ ಕವಿ ಹೇಳಿದ ವಿಚಾರಗಳು ಯಾವುವು? ಮಕ್ಕಳು ತಮ್ಮ ಅಭಿಪ್ರಾಯಗಳನ್ನು ಮಂಡಿಸಲಿ.

ಅನಂತರ 'ಸಾಲು ಹುಡುಕುವ' ಎಂಬ ಚಟುವಟಿಕೆಯನ್ನು ತರಗತಿಯಲ್ಲಿ ನಡೆಸುವುದು. ಮಕ್ಕಳು ಪಠ್ಯ ಪುಸ್ತಕದಲ್ಲಿ ನೀಡಲಾದ ವಾಕ್ಯಗಳನ್ನು ವೈಯಕ್ತಿಕವಾಗಿ ಓದಲಿ. ಅನಂತರ ಪದ್ಯಭಾಗದಲ್ಲಿರುವ ಸಾಲುಗಳೊಂದಿಗೆ ಹೋಲಿಸಲಿ. ನೀಡಿದ ಸಾಲುಗಳಿಗೆ ಸಮಾನವಾದ ಅರ್ಥವನ್ನು ನೀಡುವ ಸಾಲುಗಳನ್ನು ಪದ್ಯಭಾಗದಿಂದ ಹುಡುಕಿ ಬರೆಯಲಿ. ಮಕ್ಕಳಲ್ಲಿ ಕೆಲವರು ತಾವು ಬರೆದುದನ್ನು ಮಂಡಿಸಲಿ. ಅಧ್ಯಾಪಕರ ಸಹಾಯದೊಂದಿಗೆ ಉತ್ತಮಪಡಿಸಲಿ. ಅಧ್ಯಾಪಕರು ಮೌಲ್ಯನಿರ್ಣಯ ಮಾಡುವುದು.

## ❑ ಟಿಪ್ಪಣಿ ಬರೆಯುವ

ರಾಷ್ಟ್ರಧ್ವಜದ ಕುರಿತು ಸರಳ ಪ್ರಶ್ನೆಗಳನ್ನು ಕೇಳಿ ಮಾಹಿತಿಗಳನ್ನು ನೀಡುವುದು. ಮಕ್ಕಳು ವೈಯಕ್ತಿಕವಾಗಿ ರಾಷ್ಟ್ರಧ್ವಜದ ಚಿತ್ರವನ್ನು ಬಿಡಿಸಲಿ. ರಾಷ್ಟ್ರಧ್ವಜದ ಕುರಿತು ವೈಯಕ್ತಿಕವಾಗಿ ಬರೆಯಲಿ. ಕೆಲವರು ಮಂಡಿಸಲಿ. ಗುಂಪಿನಲ್ಲಿ ಚರ್ಚಿಸಿ ಟಿಪ್ಪಣಿಯನ್ನು ಉತ್ತಮಪಡಿಸಲಿ ಬಳಿಕ ಅಧ್ಯಾಪಕರ ಸಹಾಯದಿಂದ ಉತ್ತಮಪಡಿಸಲಿ. ಅಧ್ಯಾಪಕರು ತಯಾರಿಸಿದ ಟಿಪ್ಪಣಿಯನ್ನು ತರಗತಿಯಲ್ಲಿ ಪ್ರದರ್ಶಿಸುವುದು. ಮಕ್ಕಳಿಗೆ ತಮ್ಮ ಆಶಯವನ್ನು ಉತ್ತಮಪಡಿಸಿ ಬರೆಯಲು ಅವಕಾಶವನ್ನು ನೀಡುವುದು. ಅಧ್ಯಾಪಕರು ಮೌಲ್ಯನಿರ್ಣಯ ಮಾಡುವುದು.

### ತ್ರಿವರ್ಣ ಧ್ವಜ

ನಮ್ಮ ರಾಷ್ಟ್ರಧ್ವಜವು ಮೂರು ಬಣ್ಣಗಳಿಂದ ಕೂಡಿದೆ. ಧ್ವಜದ ಮೇಲ್ಭಾಗದಲ್ಲಿ ಕೇಸರಿ, ಮಧ್ಯದಲ್ಲಿ ಬಿಳಿ, ಕೆಳಭಾಗದಲ್ಲಿ ಹಸಿರು ಬಣ್ಣವಿದೆ. ಧ್ವಜದ ಮಧ್ಯದಲ್ಲಿ ಅಶೋಕ ಚಕ್ರವಿದೆ. ಇದಕ್ಕೆ 24 ಅರಗಳಿವೆ. ಧ್ವಜದ ಕೇಸರಿ ಬಣ್ಣವು ತ್ಯಾಗ ಮತ್ತು ಬಲಿದಾನದ ಸಂಕೇತವಾಗಿದೆ. ಮಧ್ಯದಲ್ಲಿರುವ ಬಿಳಿ ಬಣ್ಣವು ಶಾಂತಿ ಮತ್ತು ಸಮಾಧಾನದ ಸಂಕೇತವಾಗಿದೆ. ಹಸಿರು ಬಣ್ಣವು ಸಮೃದ್ಧಿಯ ಸಂಕೇತವಾಗಿದೆ. ರಾಷ್ಟ್ರಧ್ವಜವನ್ನು ಖಾದಿ ಬಟ್ಟೆಯಿಂದ ತಯಾರಿಸುತ್ತಾರೆ. ಇದು ಆಯತಾಕಾರವಾಗಿದೆ. ಅದರ ಅಗಲವು ಎರಡು ಪಾಲಾದರೆ ಉದ್ದ ಮೂರು ಪಾಲಾಗಿದೆ. ಹರಿದ, ಬಣ್ಣಗುಂದಿದ, ವಿರೂಪವಾದ ಧ್ವಜಗಳನ್ನು ನಾವು ಬಳಸಬಾರದು. ಧ್ವಜವನ್ನು ವಿರೂಪಗೊಳಿಸುವುದು ರಾಷ್ಟ್ರಕ್ಕೆ ಮಾಡಿದ ಅವಮಾನವೆಂದೇ ಪರಿಗಣಿಸಲಾಗುತ್ತದೆ. ನಾವು ನಮ್ಮ ದೇಶವನ್ನು ಗೌರವಿಸುವಂತೆಯೇ ರಾಷ್ಟ್ರಧ್ವಜವನ್ನೂ ಗೌರವಿಸಬೇಕು.

## ಭಾರತದ ಬಾವುಟ

ಅದೋ ನೋಡು ಹಾರುತಿಹುದು
ಭಾರತದ ಬಾವುಟ
ಬಾ ಎಂದು ಕರೆಯುತಿಹುದು
ನಮ್ಮ ಭವ್ಯ ಬಾವುಟ
ಸ್ವಾತಂತ್ರ್ಯದ ಸಮರದಲ್ಲಿ
ಮೆರೆದಂತಹ ಬಾವುಟ
ಬಿಳಿಯ ಜನರ ಎದೆಯಲ್ಲಿ
ಭಯವ ತಂದ ಬಾವುಟ
ಹಲವು ಭಾಷೆ ಹಲವು ಜಾತಿ
ಒಂದೆ ನಮಗೆ ಬಾವುಟ
ವಿಶ್ವದಲ್ಲಿ ನಮ್ಮ ಖ್ಯಾತಿ
ಹರಡಿದಂಥ ಬಾವುಟ
ಕೇಸರಿ ಬಿಳಿ ಹಸಿರು ನಡುವೆ
ಚಕ್ರವಿರುವ ಬಾವುಟ
ಭಕ್ತಿಯಿಂದ ಕೈಯ ಮುಗಿವೆ
ಹಾರುತಿರಲಿ ಪಟಪಟ

**– ಜಿ.ಎಸ್. ಚಂದ್ರಶೇಖರ ಹೇರ್ಳೆ**

## ❑ ಸಂಗ್ರಹಿಸುವ

ನಾವು ಸ್ವಾತಂತ್ರ್ಯ ದಿನವನ್ನು ಯಾವಾಗ ಆಚರಿಸುತ್ತೇವೆ? ಆ ದಿನ ಶಾಲೆಯಲ್ಲಿ ಯಾವ ಯಾವ ಕಾರ್ಯಕ್ರಮಗಳನ್ನು ಮಾಡುತ್ತಾರೆ ಎಂದು ಪ್ರಶ್ನಿಸಿ ಮಕ್ಕಳಲ್ಲಿ ಚರ್ಚಿಸುವುದು.

- ಧ್ವಜಾರೋಹಣ
- ಧ್ವಜವಂದನೆ
- ಧ್ವಜಗೀತೆ
- ಮೆರವಣಿಗೆ
- ಸಭೆ
- ಸಿಹಿತಿಂಡಿ ವಿತರಣೆ
- ಇತರ ಸಾಂಸ್ಕೃತಿಕ ಕಾರ್ಯಕ್ರಮಗಳು

ನೀವು ಸ್ವಾತಂತ್ರ್ಯ ದಿನಾಚರಣೆಯಂದು ಮೆರವಣಿಗೆ ಹೋಗಿದ್ದೀರಾ? ಘೋಷಣೆಗಳನ್ನು ಕೂಗಿದ್ದೀರಾ? ಮೊದಲಾದ ಪ್ರಶ್ನೆಗಳನ್ನು ಕೇಳಿ. ಮೆರವಣಿಗೆಯ ಕುರಿತು ಮಕ್ಕಳಲ್ಲಿ ಚರ್ಚಿಸುವುದು. ಮೆರವಣಿಗೆಯಲ್ಲಿ ಹೇಳಲು ಕೆಲವು ಘೋಷಣ ವಾಕ್ಯ ಬೇಕು. ಅವುಗಳನ್ನು ತಯಾರಿಸೋಣ. ಮಕ್ಕಳು ಹೇಳಿದ ಸ್ವಾತಂತ್ರ್ಯ ದಿನಾಚರಣೆಗೆ ಸಂಬಂಧಿಸಿದ ಘೋಷಣ ವಾಕ್ಯಗಳನ್ನು ಕರಿಹಲಗೆಯಲ್ಲಿ ಬರೆಯುವುದು. ಘೋಷಣೆಗೆ ಸಂಬಂಧಿಸಿದ ಅಗತ್ಯ ಮಾಹಿತಿಗಳನ್ನು ಅಧ್ಯಾಪಕರು ನೀಡುವುದು.

- ಭಾರತ್ ಮಾತಾ ಕೀ ಜೈ
- ವಂದೇ ಮಾತರಂ
- ಮಹಾತ್ಮಾ ಗಾಂಧೀಕೀ ಜೈ
- ನಾವು ಭಾರತೀಯರು ಒಂದೇ ತಾಯ ಮಕ್ಕಳು
- ಭಾಷೆ ಬೇರೆ, ವೇಷ ಬೇರೆ, ದೇಶ ಒಂದೇ ಭಾರತ.

ಮಕ್ಕಳಿಗೆ ಘೋಷಣ ವಾಕ್ಯಗಳನ್ನು ಸಂಗ್ರಹಿಸಲು ಅಗತ್ಯವಾದ ಸಲಹೆ ಸೂಚನೆಗಳನ್ನು ನೀಡುವುದು. ಸಂಗ್ರಹಿಸಿದ ಘೋಷಣ ವಾಕ್ಯಗಳನ್ನು ಭಿತ್ತಿಪತ್ರಿಕೆಯಲ್ಲಿ ಪ್ರದರ್ಶಿಸುವುದು.

## ❑ ವಿಂಗಡಿಸಿ ಬರೆಯುವ

ಕೂಡುಪದಗಳು ಒಂದಕ್ಕಿಂತ ಹೆಚ್ಚು ಪದಗಳನ್ನು ಒಳಗೊಂಡಿರುತ್ತವೆ. ಇಂತಹ ಪದಗಳನ್ನು ತಿಳಿಯಲು ಈ ಚಟುವಟಿಕೆಯನ್ನು ನೀಡಲಾಗಿದೆ.

ಕೂಡುಪದಗಳನ್ನು ವಿಂಗಡಿಸಿ ಬರೆಯುವ ವಿಧಾನವನ್ನು ಅಧ್ಯಾಪಕರು ಮಕ್ಕಳಿಗೆ ತಿಳಿಸುವುದು. ಅದರ ಆಧಾರದಲ್ಲಿ ಮಕ್ಕಳು ಕೂಡುಪದಗಳನ್ನು ವಿಂಗಡಿಸಿ ಬರೆಯಲಿ. ತರಗತಿಯಲ್ಲಿ ಮಂಡಿಸಲಿ. ಅಧ್ಯಾಪಕರು ಕರಿಹಲಗೆಯಲ್ಲಿ ಬರೆಯುವುದು. ಮಕ್ಕಳಿಗೆ ತಾವು ಬರೆದುದನ್ನು ಸರಿಪಡಿಸಲು ಅವಕಾಶವನ್ನು ನೀಡುವುದು. ಅಧ್ಯಾಪಕರು ಮೌಲ್ಯನಿರ್ಣಯ ಮಾಡುವುದು.

- ಇದೇ ರೀತಿಯ ಇತರ ಪದಗಳನ್ನು ಪಠ್ಯಪುಸ್ತಕದಿಂದ ಹುಡುಕಿ ವಿಂಗಡಿಸಿ ಬರೆಯಲಿ.

| | |
|---|---|
| ನಾವೆಲ್ಲರೂ | – ನಾವು + ಎಲ್ಲರೂ |
| ಚುಕ್ಕೆಗಳಿದ್ದರೂ | – ಚುಕ್ಕೆಗಳು + ಇದ್ದರೂ |
| ಆರಾಧನೆಗಳಿವೆ | – ಆರಾಧನೆಗಳು + ಇವೆ |
| ದೇವರೊಬ್ಬನೆ | – ದೇವರು + ಒಬ್ಬನೆ |
| ನಮಗೊಂದೇ | – ನಮಗೆ + ಒಂದೇ |
| ಕಡಲೊಂದೇ | – ಕಡಲು + ಒಂದೇ |
| ದೇವರೆಲ್ಲರಿಗೂ | – ದೇವರು + ಎಲ್ಲರಿಗೂ |
| ದೇಶದೊಳೆಲ್ಲಿದ್ದರು | – ದೇಶದೊಳು + ಎಲ್ಲಿ + ಇದ್ದರು |

## ❑ ವಾಕ್ಯರಚನೆ ಮಾಡುವ

ಮಕ್ಕಳಲ್ಲಿ ವಾಕ್ಯರಚನಾ ಸಾಮರ್ಥ್ಯವನ್ನು ಬೆಳೆಸಲು ಈ ಚಟುವಟಿಕೆಯನ್ನು ನೀಡಲಾಗಿದೆ.

- ಗದ್ಯಭಾಗದಲ್ಲಿ ನೀಡಲಾದ ಅಡಿಗೆರೆ ಎಳೆದ ಪದಗಳನ್ನು ಆರಿಸಿ ಬರೆಯಲಿ.

| ಸೂರ್ಯ, ರಾತ್ರಿ, ಗಗನ, ನಕ್ಷತ್ರ, ಸಮುದ್ರ |
|---|

ಆರಿಸಿ ಬರೆದ ಪದಗಳ ಅರ್ಥವನ್ನು ಅರ್ಥಕೋಶ ಅಥವಾ ಅಧ್ಯಾಪಕರ ಸಹಾಯದಿಂದ ಕಂಡುಹಿಡಿಯಲಿ. ಬಳಿಕ ಆರಿಸಿ ಬರೆದ ಪದದ ಸಮಾನಾರ್ಥ ಪದವನ್ನು

ಪದ್ಯದಿಂದ ಹುಡುಕಿ ಬರೆಯಲಿ. ಬಳಿಕ ಮಕ್ಕಳು ಸ್ವತಂತ್ರವಾಗಿ ವಾಕ್ಯ ರಚಿಸಲಿ. ಕೆಲವರು ಮಂಡಿಸಲಿ. ಅಧ್ಯಾಪಕರು ಕರಿಹಲಗೆಯಲ್ಲಿ ಬರೆಯುವುದು. ಅಧ್ಯಾಪಕರು ಬರೆದ ವಾಕ್ಯಗಳನ್ನು ಪ್ರದರ್ಶಿಸುವುದು. ಮಕ್ಕಳಿಗೆ ಉತ್ತಮಪಡಿಸಲು ಅವಕಾಶವನ್ನು ನೀಡುವುದು. ಅಧ್ಯಾಪಕರು ಮೌಲ್ಯನಿರ್ಣಯ ಮಾಡುವುದು.

- ಮುಂಜಾನೆ ರವಿಯು ಪೂರ್ವದಲ್ಲಿ ಉದಯಿಸುತ್ತಾನೆ.
- ರಾಮು ಪಟ್ಟಣದಿಂದ ಮನೆಗೆ ತಲುಪುವಾಗ ಇರುಳಾಯಿತು.
- ಹಕ್ಕಿಗಳು ಆಕಾಶದಲ್ಲಿ ಹಾರುತ್ತವೆ
- ಗಗನದಲ್ಲಿ ರಾತ್ರಿ ಚುಕ್ಕಿಗಳು ಮಿನುಗುತ್ತವೆ.
- ಕಡಲಿನಲ್ಲಿ ತೆರೆಗಳು ಅಬ್ಬರಿಸುತ್ತವೆ.

### ❑ ಸಾಮ್ಯ ವ್ಯತ್ಯಾಸ ಬರೆಯುವ

ಮಕ್ಕಳು 'ಏಕತೆಯ ನಾಡು' ಪದ್ಯವನ್ನು ಓದಲಿ. ಬಳಿಕ ಪದ್ಯಕ್ಕೆ ರಾಗ ಹಾಕಿ ಹಾಡಲಿ. ಅಧ್ಯಾಪಕರು ಅಗತ್ಯವಿರುವ ಸಹಾಯವನ್ನು ಮಾಡುವುದು.

'ನಾವೆಲ್ಲರೂ ಒಂದೇ' ಪದ್ಯವನ್ನು ಅಧ್ಯಾಪಕರು ಹಾಡುವುದು ಮತ್ತು ಅದರ ಆಶಯದ ಬಗ್ಗೆ ಮಕ್ಕಳಿಗೆ ಸಂಕ್ಷಿಪ್ತವಾಗಿ ಹೇಳುವುದು. 'ಏಕತೆಯ ನಾಡು' ಮತ್ತು 'ನಾವೆಲ್ಲರೂ ಒಂದೇ' – ಈ ಪದ್ಯಗಳಲ್ಲಿ ಯಾವುದಾದರೂ ಸಾಮ್ಯವಿದೆಯೇ ಎಂದು ಕೇಳುವುದು. ಮಕ್ಕಳು ಎರಡು ಪದ್ಯಗಳನ್ನು ಓದಿ ಸಾಮ್ಯವನ್ನು ಹೇಳಲಿ.

ಇದೇ ರೀತಿಯಲ್ಲಿ ವ್ಯತ್ಯಾಸವನ್ನು ಕಂಡುಹಿಡಿಯುವುದು. ವೈಯಕ್ತಿಕವಾಗಿ ಬರೆದು ಅನಂತರ ಗುಂಪಿನಲ್ಲಿ ಉತ್ತಮಪಡಿಸಲಿ. ಗುಂಪಿನಿಂದ ಯೋಗ್ಯವಾದದ್ದನ್ನು ಮಕ್ಕಳು ಮಂಡಿಸಲಿ. ಅಧ್ಯಾಪಕರ ಸಹಾಯದೊಂದಿಗೆ ಉತ್ತಮಪಡಿಸುವುದು. ಅಧ್ಯಾಪಕರು ಬರೆದ ಸಾಮ್ಯ ವ್ಯತ್ಯಾಸಗಳನ್ನು ಪ್ರದರ್ಶಿಸುವುದು. ಮಕ್ಕಳಿಗೆ ತಮ್ಮ ಬರವಣಿಗೆಯನ್ನು ಉತ್ತಮಪಡಿಸಲು ಅವಕಾಶವನ್ನು ನೀಡುವುದು. ಅಧ್ಯಾಪಕರು ಮೌಲ್ಯನಿರ್ಣಯ ಮಾಡುವುದು.

**ಸಾಮ್ಯಗಳು**

❖ ಭಾರತೀಯರೆಲ್ಲರೂ ಒಂದೇ ಎಂದು ಹೇಳಲಾಗಿದೆ.

❖ ಭಾರತೀಯರಲ್ಲಿ ವಿವಿಧತೆ ಇದ್ದರೂ ಏಕತೆ ಇದೆ.

❖ ವಿಧವಿಧವಾದ ಆರಾಧನೆಗಳಿದ್ದರೂ ಎಲ್ಲರಿಗೂ ದೇವರು ಒಬ್ಬನೇ.

**ವ್ಯತ್ಯಾಸಗಳು**

❖ ನಾವೆಲ್ಲರೂ ಒಂದೇ ಪದ್ಯದಲ್ಲಿ ಏಕತೆಯನ್ನು ಆಕಾಶ ಮರಗಳಿಗೆ ಹೋಲಿಸಿದರೆ ಏಕತೆಯ ನಾಡು ಪದ್ಯದಲ್ಲಿ ಸಂಗೀತದ ಸ್ವರಗಳಿಗೆ ಹೋಲಿಸಲಾಗಿದೆ.

❖ ನಾವೆಲ್ಲರೂ ಒಂದೇ ಪದ್ಯದಲ್ಲಿ ಸಮುದ್ರವನ್ನು ಏಕತೆಯ ಸಂಕೇತವಾಗಿ ಸೂಚಿಸಿದರೆ ಏಕತೆಯ ನಾಡು ಪದ್ಯದಲ್ಲಿ ನದಿಗಳನ್ನು ಏಕತೆಯ ಸಂಕೇತವಾಗಿ ಸೂಚಿಸಲಾಗಿದೆ.

❖ ನಾವೆಲ್ಲರೂ ಒಂದೇ ಪದ್ಯದಲ್ಲಿ ಆರಾಧನೆಯಲ್ಲಿ ಎಲ್ಲರಿಗೂ ದೇವರೊಬ್ಬನೇ ಎಂದು ಸೂಚಿಸಿದ್ದಾರೆ. ಏಕತೆಯ ನಾಡು ಪದ್ಯದಲ್ಲಿ ಧರ್ಮ ಯಾವುದಾದರೂ ದೇವರು ಒಬ್ಬನೇ, ಧ್ಯಾನ ಹೇಗಿದ್ದರೂ ದೇವರೊಬ್ಬನೇ ಎಂದು ಸೂಚಿಸಿದ್ದಾರೆ.

# ಕಿತ್ತೂರಿನ ರಾಣಿ

## ❑ ಪಾಠದೆಡೆಗೆ

ಭಾರತದ ಕೆಲವು ಸ್ವಾತಂತ್ರ್ಯ ಹೋರಾಟಗಾರರ ಚಿತ್ರವನ್ನು ತೋರಿಸುವುದು.

ಇವರು ಯಾರು? ಇವರ ಸಾಧನೆ ಏನು? ಸ್ವಾತಂತ್ರ್ಯ ಹೋರಾಟದಲ್ಲಿ ಇವರ ಪಾತ್ರವೇನು ಇತ್ಯಾದಿ ಪ್ರಶ್ನೆಗಳ ಮೂಲಕ ಸ್ವಾತಂತ್ರ್ಯ ಹೋರಾಟಗಾರರ ಪರಿಚಯ ಮಾಡುವುದು. ಸ್ವಾತಂತ್ರ್ಯ ಹೋರಾಟದ ಹಿನ್ನೆಲೆಯನ್ನು ತಿಳಿಯುವುದು.

ಕಿತ್ತೂರಿನ ರಾಣಿಯು ಬ್ರಿಟಿಷರೊಂದಿಗೆ ಹೋರಾಟ ನಡೆಸುವ ದೃಶ್ಯದ ತುಣುಕನ್ನು ಪ್ರದರ್ಶಿಸುವುದು. ICT ಯ ಉಪಯೋಗ.

- ನೀವು ನೋಡಿದ ವೀಡಿಯೋ ದೃಶ್ಯದಲ್ಲಿ ಬ್ರಿಟಿಷ್ ಸೈನಿಕರೊಂದಿಗೆ ಹೋರಾಡಿದ ಮಹಿಳೆ ಯಾರು ಎಂದು ಗೊತ್ತಿದೆಯೇ? ಅವರ ಕುರಿತು ಹೆಚ್ಚು ತಿಳಿಯಬೇಕಲ್ಲವೇ? ಎಂದು ಪ್ರಶ್ನಿಸಿ ಪಾಠಭಾಗವನ್ನು ವೈಯಕ್ತಿಕವಾಗಿ ಓದಲು ಹೇಳುವುದು.
- ಓದುವಿಕೆಯ ವಿವಿಧ ರೀತಿಗಳನ್ನು ಉಪಯೋಗಿಸಿಕೊಂಡು ಚಟುವಟಿಕೆಯನ್ನು ನಡೆಸುವುದು.

## ❑ ಇಷ್ಟವಾದ ಭಾಗ

- ಮಕ್ಕಳಿಗೆ ಪಾಠಭಾಗದ ಆಶಯವನ್ನು ತಿಳಿಯುವ ಸಾಮರ್ಥ್ಯವನ್ನು ಬೆಳೆಸಲು ಈ ಚಟುವಟಿಕೆಯನ್ನು ನೀಡಲಾಗಿದೆ. ಮಕ್ಕಳಲ್ಲಿ ಪಾಠಭಾಗದ ಬಗ್ಗೆ ಚರ್ಚಿಸಿ ಪೂರ್ಣ ಆಶಯವನ್ನು ತಿಳಿಯುವಂತೆ ಮಾಡುವುದು. ಪಾಠಭಾಗದಲ್ಲಿ ಮಕ್ಕಳಿಗೆ ಇಷ್ಟವಾದ ಭಾಗ ಯಾವುದು? ಯಾಕೆ? ಎಂದು ವೈಯಕ್ತಿಕವಾಗಿ ಬರೆಯಲು ಹೇಳುವುದು. ಬರೆದುದನ್ನು ಕೆಲವು ಮಕ್ಕಳು ಮಂಡಿಸಲಿ. ಗುಂಪಿನಲ್ಲಿ ಪರಸ್ಪರ ಮೌಲ್ಯನಿರ್ಣಯ ನಡೆಸಿ ಉತ್ತಮವಾದ ಬರವಣಿಗೆಯನ್ನು ಮಕ್ಕಳೇ ಗುರುತಿಸಿ ಮಂಡಿಸಲಿ. ಅಧ್ಯಾಪಕರು ಪಾಠಭಾಗದಲ್ಲಿ ತಮಗೆ ಇಷ್ಟವಾದ ಭಾಗ ಯಾವುದು? ಯಾಕೆ? ಎಂದು ಬರೆದು ತರಗತಿಯಲ್ಲಿ ಪ್ರದರ್ಶಿಸುವುದು. ಮಕ್ಕಳಿಗೆ ತಮ್ಮ ಬರವಣಿಗೆಯನ್ನು ಉತ್ತಮಪಡಿಸಲು ಅವಕಾಶವನ್ನು ನೀಡುವುದು. ಅಧ್ಯಾಪಕರು ಮೌಲ್ಯನಿರ್ಣಯ ಮಾಡುವುದು.

## ❑ ಅನುಕ್ರಮವಾಗಿ ಬರೆಯುವ

- ಪಾಠಭಾಗದ ಪ್ರಧಾನ ಘಟನೆಗಳ ಬಗ್ಗೆ ಚರ್ಚೆ ನಡೆಸುವುದು. ಮೊದಲ ಘಟನೆ ಯಾವುದು? ಅನಂತರದ ಘಟನೆ ಯಾವುದು? ಎಂದು ತಿಳಿಯುವುದು. ಘಟನೆಗಳನ್ನು ಅನುಕ್ರಮವಾಗಿ ಬರೆಯಲಿ. ಕೆಲವರು ಮಂಡಿಸಲಿ. ತಪ್ಪುಗಳಿದ್ದರೆ ಯಾವುದು ತಪ್ಪು? ಯಾಕೆ? ಎಂದು ಚರ್ಚಿಸಿ ಮಕ್ಕಳಿಗೆ ಉತ್ತಮಪಡಿಸಲು ಅವಕಾಶವನ್ನು ನೀಡುವುದು. ಅಧ್ಯಾಪಕರು ಮೌಲ್ಯನಿರ್ಣಯ ನಡೆಸುವುದು.

## ❑ ಪ್ರಶ್ನೆ ತಯಾರಿಸುವ

- ತರಗತಿಯಲ್ಲಿ ಚರ್ಚಿಸಿ, ಪಾಠಭಾಗದಿಂದ ಸಾಧ್ಯವಾದಷ್ಟು ಪ್ರಶ್ನೆಗಳನ್ನು ತಯಾರಿಸಲಿ. ತಯಾರಿಸಿದ ಪ್ರಶ್ನೆಗಳಿಗೆ ಉತ್ತರವನ್ನು ಬರೆಯಲಿ. ಗುಂಪಿನಲ್ಲಿ ಪರಸ್ಪರ ಹಂಚಿ ಉತ್ತಮಪಡಿಸಲಿ. ಗುಂಪುಗಳೊಳಗೆ ಪ್ರಶ್ನೋತ್ತರ ಸ್ಪರ್ಧೆ ನಡೆಸುವುದು. ಅಧ್ಯಾಪಕರು ಚಟುವಟಿಕೆಯ ಸಂದರ್ಭದಲ್ಲಿ ಯೋಗ್ಯವಾದ ಸಲಹೆ ಸೂಚನೆಗಳನ್ನು ನೀಡುವುದು. ಅಧ್ಯಾಪಕರು ಮೌಲ್ಯನಿರ್ಣಯ ಮಾಡುವುದು.

## ❑ ಗುರುತಿಸಿ ಬರೆಯುವ

- ನಮ್ಮ ದೇಶದ ಸ್ವಾತಂತ್ರ್ಯ ಹೋರಾಟಗಾರರ ಹೆಸರುಗಳನ್ನು ಮಕ್ಕಳು ಪಟ್ಟಿ ಮಾಡಲಿ. ಅಧ್ಯಾಪಕರು ಅದನ್ನು ಕರಿಹಲಗೆಯಲ್ಲಿ ಕ್ರೋಡೀಕರಿಸುವುದು. ಪಾಠಭಾಗದಲ್ಲಿ ಕೊಡಲಾದ ಸ್ವಾತಂತ್ರ್ಯ ಹೋರಾಟಗಾರರ ಹೆಸರಿನ ಅಕ್ಷರಗಳನ್ನು ಕ್ರಮೀಕರಿಸಿ ಹೆಸರುಗಳನ್ನು ವೈಯಕ್ತಿಕವಾಗಿ ಮಕ್ಕಳು ಬರೆಯಲಿ. ತರಗತಿಯಲ್ಲಿ ಕೆಲವರು ಮಂಡಿಸಲಿ. ಅಧ್ಯಾಪಕರು ಕರಿಹಲಗೆಯಲ್ಲಿ ಬರೆಯಲಿ. ಮಕ್ಕಳಿಗೆ ಉತ್ತಮಪಡಿಸಲು ಅವಕಾಶವನ್ನು ನೀಡುವುದು. ಅಧ್ಯಾಪಕರು ಮೌಲ್ಯನಿರ್ಣಯ ಮಾಡುವುದು.

  ❖ ಭಗತ್‌ಸಿಂಗ್

  ❖ ವಿನೋಬಾ ಭಾವೆ

  ❖ ಮಹಾತ್ಮಾಗಾಂಧಿ

  ❖ ಸುಭಾಷ್‌ಚಂದ್ರ ಬೋಸ್

  ❖ ಬಾಲಗಂಗಾಧರ ತಿಲಕ್

## ❑ ಆಲ್ಬಂ ತಯಾರಿಸುವ

- ಸ್ವಾತಂತ್ರ್ಯ ಹೋರಾಟಗಾರರ ಚಿತ್ರಗಳನ್ನು ಸಂಗ್ರಹಿಸಲು, ಆಲ್ಬಂ ತಯಾರಿಸಲು ಅಗತ್ಯವಾದ ಸೂಚನೆಗಳನ್ನು ನೀಡುವುದು.

  ❖ ಸಂಗ್ರಹಿಸಬೇಕಾದ ಚಿತ್ರಗಳು

  ❖ ಸಂಗ್ರಹ ವಿಧಾನ

  ❖ ಆಲ್ಬಂ ತಯಾರಿಗೆ ಅಗತ್ಯವಾದ ವಿಷಯಗಳನ್ನು ತಿಳಿಸುವುದು.

- ತರಗತಿಯಲ್ಲಿ ಆಲ್ಬಂ ತಯಾರಿಸಿ ಪ್ರದರ್ಶನ ನಡೆಸುವುದು.

## ❑ ಬದಲಾಯಿಸಿ ಬರೆಯುವ

- ಮಾದರಿಯನ್ನು ನೋಡಿ ವಾಕ್ಯದಲ್ಲಿ ಉಂಟಾದ ಬದಲಾವಣೆಯನ್ನು ತಿಳಿಯಲಿ. ಪಾಠಪುಸ್ತಕದಲ್ಲಿ ಕೊಟ್ಟ ವಾಕ್ಯಗಳನ್ನು ಮಾದರಿಯಂತೆ ಬದಲಾಯಿಸಿ ವೈಯಕ್ತಿಕವಾಗಿ ಬರೆಯಲಿ. ತರಗತಿಯಲ್ಲಿ ಮಂಡಿಸಲಿ. ಅಧ್ಯಾಪಕರು ಕರಿಹಲಗೆಯಲ್ಲಿ ಬರೆಯುವುದು. ಮಕ್ಕಳಿಗೆ ಉತ್ತಮಪಡಿಸಲು ಅವಕಾಶವನ್ನು ನೀಡುವುದು. ಅಧ್ಯಾಪಕರು ಮೌಲ್ಯನಿರ್ಣಯ ಮಾಡುವುದು.

  ❖ ಡೇವಿಡ್ ಬೇಗನೆ ಏಳುವನು

  ❖ ಕೋಗಿಲೆ ಇಂಪಾಗಿ ಹಾಡುವುದು

  ❖ ಮಕ್ಕಳು ಚೆನ್ನಾಗಿ ಆಡುವರು

  ❖ ಜಾತ್ರೆಗೆ ಜನರು ಸೇರುವರು

  ❖ ಬೆಕ್ಕು ಹಾಲು ಕುಡಿಯುವುದು.

❑ **ವಾಕ್ಯಗಳಾಗಿ ಬರೆಯುವ**

- ಮಾದರಿಯನ್ನು ನೋಡಿ ವಾಕ್ಯದಲ್ಲಿ ಉಂಟಾದ ಬದಲಾವಣೆಯನ್ನು ತಿಳಿಯುವುದು. ಪಾಠಪುಸ್ತಕದಲ್ಲಿ ಕೊಟ್ಟ ವಾಕ್ಯಗಳನ್ನು ಮಾದರಿಯಂತೆ ಬದಲಾಯಿಸಿ ವೈಯಕ್ತಿಕವಾಗಿ ಬರೆಯಲಿ. ತರಗತಿಯಲ್ಲಿ ಮಂಡಿಸಲಿ. ಅಧ್ಯಾಪಕರು ಕರಿಹಲಗೆಯಲ್ಲಿ ಬರೆಯುವುದು. ಮಕ್ಕಳಿಗೆ ಸರಿಪಡಿಸಲು ಅವಕಾಶವನ್ನು ನೀಡುವುದು. ಅಧ್ಯಾಪಕರು ಮೌಲ್ಯನಿರ್ಣಯ ಮಾಡುವುದು.

ಚಟುವಟಿಕೆಯ ಸಂದರ್ಭದಲ್ಲಿ ಅಧ್ಯಾಪಕರು ಅಗತ್ಯ ಸಲಹೆ ಸೂಚನೆಗಳನ್ನು ನೀಡುವುದು.

❖ ಮಕ್ಕಳು ದ್ರಾಕ್ಷಿಯ ಗೊಂಚಲು ನೋಡಿದರು. ಅವರ ಬಾಯಲ್ಲಿ ನೀರೂರಿತು.

❖ ರವಿಯು ತುಂಬಾ ಬುದ್ಧಿವಂತನಾಗಿದ್ದನು. ಅವನು ಎಲ್ಲಾ ಉಪಾಧ್ಯಾಯರಿಗೂ ಅಚ್ಚುಮೆಚ್ಚಿನವನಾಗಿದ್ದನು.

## ಕನ್ನಡ ಹಾ ಸವಿಗನ್ನಡ

ICT ಉಪಯೋಗಿಸಿ, ಕನ್ನಡ ಭಾಷೆಗೆ ಸಂಬಂಧಿಸಿದ ಹಾಡು ಕೇಳಿಸುವುದು. ಇದೇ ರೀತಿಯ ಕನ್ನಡ ಭಾಷೆಗೆ ಸಂಬಂಧಿಸಿದ ಪದ್ಯವನ್ನು ಪಠ್ಯದಲ್ಲಿ ನೀಡಲಾಗಿದೆ ಎಂದು ಪದ್ಯವನ್ನು ಓದಲು ಹೇಳುವುದು.

❑ **ಪದ್ಯ ಹಾಡುವ**

ಪದ್ಯವನ್ನು ವೈಯಕ್ತಿಕವಾಗಿಯೂ ಗುಂಪಿನಲ್ಲಿಯೂ ಹಾಡಿಸುವುದು. ಹಾಡಿನ ಧ್ವನಿಮುದ್ರಿಕೆಯನ್ನು ಕೇಳಲು ಅವಕಾಶವನ್ನು ನೀಡುವುದು. ಅಧ್ಯಾಪಕರೂ ಮಕ್ಕಳೊಂದಿಗೆ ಹಾಡುವುದು.

**ವಿ.ಸೂ :** ಈ ಪದ್ಯವನ್ನು ಹಾಡುವಾಗ ಬಾಳುವುದೇತಕೆ ನುಡಿ, ಎಲೆ, ಜೀವ!' ಸಾಲಿನ ಬಳಿಕ "ಸಿರಿಗನ್ನಡದಲಿ ಕವಿತೆಯ ಹಾಡೆ" ಎಂಬ ಗೆರೆಯನ್ನು ಸೇರಿಸಿ ಓದುವುದು.

❑ **ಸಾಲು ಬರೆಯುವ**

- ಪದ್ಯದ ಆಶಯದ ಕುರಿತು ಮಕ್ಕಳಲ್ಲಿ ಚರ್ಚಿಸುವುದು. ಕೊಟ್ಟ ವಾಕ್ಯಗಳಿಗೆ ಸಮಾನವಾದ ಅರ್ಥಬರುವ ಸಾಲುಗಳನ್ನು ಕವನದಿಂದ ಆರಿಸಿ ಬರೆಯಲಿ. ತರಗತಿಯಲ್ಲಿ ಮಂಡಿಸಲಿ. ಅಧ್ಯಾಪಕರು ಕರಿಹಲಗೆಯಲ್ಲಿ ಬರೆಯುವುದು. ಮಕ್ಕಳಿಗೆ ಉತ್ತಮಪಡಿಸಲು ಅವಕಾಶವನ್ನು ನೀಡುವುದು. ಅಧ್ಯಾಪಕರು ಮೌಲ್ಯನಿರ್ಣಯ ಮಾಡುವುದು.

❖ ಹರಿ ವರಗಳ ಮಳೆಗರೆಯುವನು.

❖ ತೆಕ್ಕನೆ ಮನ ಮೈ ಮರೆಯುವುದು.

❖ ಬಾಳುವುದೇತಕೆ ನುಡಿ ಎಲೆ ಜೀವ

❖ ಕಾಮನ ಬಿಲ್ಲನು ಕಾಣುವ ಕವಿಯೊಲು

## ❑ ಹುಡುಕಿ ಬರೆಯುವ

- ಕನ್ನಡ, ಮಲೆಯಾಳ, ಹಿಂದಿ, ತಮಿಳು ಇತ್ಯಾದಿ ಭಾಷೆಗಳ ಕೆಲವು ಲಭ್ಯವಾದ ಪತ್ರಿಕೆ/ ಪುಸ್ತಕಗಳನ್ನು ತರಗತಿಯಲ್ಲಿ ಮಕ್ಕಳಿಗೆ ನೀಡುವುದು. ಇದು ಯಾವ ಭಾಷೆಯ ಪತ್ರಿಕೆ/ ಪುಸ್ತಕ ಎಂದು ಪ್ರಶ್ನಿಸುವುದು. ಅದು ಯಾವ ಭಾಷೆಯ ಪುಸ್ತಕ ಎಂದು ಮಕ್ಕಳು ಹೇಳಲಿ. ಆ ಹೆಸರುಗಳನ್ನು ಅಧ್ಯಾಪಕರು ಕರಿಹಲಗೆಯಲ್ಲಿ ಬರೆಯುವುದು. ಇದೇ ರೀತಿ ನಮ್ಮ ದೇಶದಲ್ಲಿ ಜನರು ಯಾವೆಲ್ಲ ಭಾಷೆಗಳನ್ನು ಮಾತನಾಡುತ್ತಿದ್ದಾರೆ ಎಂದು ಕೇಳಿ ಉತ್ತರ ಪಡೆಯುವುದು. ಪಾಠಪುಸ್ತಕದ ಚಟುವಟಿಕೆಯನ್ನು ನೀಡಿ ಭಾಷೆಗಳ ಹೆಸರುಗಳನ್ನು ಕೋಣೆಯಿಂದ ಹುಡುಕಿ ವೈಯಕ್ತಿಕವಾಗಿ ಬರೆಯಲಿ. ಅಧ್ಯಾಪಕರು ಕರಿಹಲಗೆಯಲ್ಲಿ ಬರೆಯುವುದು. ಮಕ್ಕಳಿಗೆ ಪಟ್ಟಿಯನ್ನು ಬೆಳೆಸಲು ಅವಕಾಶವನ್ನು ನೀಡುವುದು. ಅಧ್ಯಾಪಕರು ಮೌಲ್ಯನಿರ್ಣಯವನ್ನು ನಡೆಸುವುದು.

## ❑ ಭಾಷೆಗಳು

| | | |
|---|---|---|
| ಕನ್ನಡ | ಮರಾಠಿ | ತಮಿಳು |
| ಮಲೆಯಾಳ | ಹಿಂದಿ | ತೆಲುಗು |
| ಬಂಗಾಳಿ | ಉರ್ದು | ತುಳು |

## ❑ ಪದ ಬರೆಯುವ

ಪದಗಳನ್ನು ವಿಂಗಡಿಸಿ ಬರೆಯುವ ವಿಧಾನವು ಮಕ್ಕಳಿಗೆ ಈಗಾಗಲೇ ತಿಳಿದಿದೆ. ಕೂಡುಪದ ಬರೆಯುವ ರೀತಿಯನ್ನು ತಿಳಿಸಲು ಈ ಚಟುವಟಿಕೆಯನ್ನು ನೀಡಲಾಗಿದೆ. ಮಕ್ಕಳು ಮಾದರಿಯಂತೆ ಬದಲಾಯಿಸಿ ಅಭ್ಯಾಸ ಪುಸ್ತಕದಲ್ಲಿ ಬರೆಯಲಿ. ಕರಿಹಲಗೆಯಲ್ಲಿ ಬರೆಯುವುದು. ಮಕ್ಕಳಿಗೆ ಉತ್ತಮಪಡಿಸಲು ಅವಕಾಶವನ್ನು ನೀಡುವುದು. ಅಧ್ಯಾಪಕರು ಮೌಲ್ಯನಿರ್ಣಯ ಮಾಡುವುದು.

- ❖ ಬಾಳುವುದೇತಕೆ
- ❖ ಸಿರಿಗನ್ನಡದೇಳಿಗೆಯನು
- ❖ ಮಳೆಗರೆಯುವನು

## ❑ ಪದಗಳನ್ನು ತುಂಬಿಸುವ

ಆವರಣದಲ್ಲಿ ಕೊಟ್ಟ ಪದಗಳ ಸರಿಯಾದ ರೂಪಗಳನ್ನು ಬಿಟ್ಟ ಸ್ಥಳದಲ್ಲಿ ತುಂಬಿಸಬೇಕು. ಕೊಟ್ಟ ಶಬ್ದದ ಯಾವ ರೂಪ ಯೋಗ್ಯವಾದದ್ದು ಎಂದು ಮಕ್ಕಳಲ್ಲಿ ಉದಾಹರಣೆಗಳೊಂದಿಗೆ ಚರ್ಚಿಸುವುದು. ಒಂದು ಶಬ್ದವನ್ನು ಬೇರೆ ಬೇರೆ ಸಂದರ್ಭಗಳಲ್ಲಿ ಬೇರೆ ಬೇರೆ ರೀತಿಯಲ್ಲಿ ಉಪಯೋಗಿಸುತ್ತಾರೆ ಎಂದು ತಿಳಿಸುವುದು. ಮಕ್ಕಳು ಚಟುವಟಿಕೆಯನ್ನು ವೈಯಕ್ತಿಕವಾಗಿ ಮಾಡಲಿ. ಅಧ್ಯಾಪಕರು ಬರೆದ ಮಾದರಿಯನ್ನು ಪ್ರದರ್ಶಿಸುವುದು. ಮಕ್ಕಳಿಗೆ ಉತ್ತಮಪಡಿಸಲು ಅವಕಾಶವನ್ನು ನೀಡುವುದು. ಅಧ್ಯಾಪಕರು ಮೌಲ್ಯನಿರ್ಣಯ ಮಾಡುವುದು.

### ಮದರ್ ತೆರೇಸಾ

ಮದರ್ ತೆರೇಸಾರವರು 1910 ನೇ ಇಸವಿ ಆಗೋಸ್ತ್ 26 ರಂದು ಸ್ಕೋಪ್ ಜೇ ಎಂಬಲ್ಲಿ ಜನಿಸಿದರು. ಅವರು 8 ನೇ ವಯಸ್ಸಿನಲ್ಲಿ ತಮ್ಮ ತಂದೆಯನ್ನು ಕಳೆದುಕೊಂಡರು. ಅದೇ ವರ್ಷದಲ್ಲಿ ಸನ್ಯಾಸ ಸ್ವೀಕರಿಸಿದರು. 1931 ರಲ್ಲಿ ಅವರು ಕೊಲ್ಕತ್ತಾಕ್ಕೆ ಬಂದು ಅಧ್ಯಾಪಕ ವೃತ್ತಿಯಲ್ಲಿ ತೊಡಗಿದರು. ಅದರ ಜೊತೆಯಲ್ಲೇ ಬಡಜನರ

ಹಾಗೂ ಕುಷ್ಠರೋಗಿಗಳ ಸೇವೆಯನ್ನು ಕೈಗೊಂಡರು. ಸಮಾಜ ಸೇವೆಗಾಗಿ ಅವರಿಗೆ ಅನೇಕ ರಾಷ್ಟ್ರೀಯ ಹಾಗೂ ಅಂತಾರಾಷ್ಟ್ರೀಯ ಪ್ರಶಸ್ತಿಗಳು ದೊರಕಿವೆ. 1979 ರಲ್ಲಿ ಶಾಂತಿಗಾಗಿ ನೀಡುವ ನೋಬೆಲ್ ಪಾರಿತೋಷಕವನ್ನು ಮದರ್ ತೆರೇಸಾರಿಗೆ ನೀಡಿ ಗೌರವಿಸಲಾಗಿದೆ. ಅವರು 1997 ಸೆಪ್ಟೆಂಬರ್ 5 ರಂದು ಮರಣ ಹೊಂದಿದರು.

## ❑ ಅನುಭವ ಬರೆಯಿರಿ

ಇತರರಿಗೆ ಸಹಾಯ ಮಾಡಲು ಸಾಧ್ಯವಿರುವ ಸಂದರ್ಭಗಳ ಕುರಿತು ಚರ್ಚಿಸುವುದು. ಶಾಲೆ ಅಥವಾ ಇತರ ಪರಿಸರಗಳನ್ನು ಶುಚಿ ಮಾಡಿದ ಸಂದರ್ಭಗಳ ಕುರಿತು ಚರ್ಚಿಸುವುದು. ಕಷ್ಟದಲ್ಲಿರುವವರಿಗೆ ಸಹಾಯಮಾಡಿದ ಸಂದರ್ಭ ಅಥವಾ ಪರಿಸರ ಶುಚಿ ಮಾಡಿದ ಸಂದರ್ಭದ ಕುರಿತು ವೈಯಕ್ತಿಕವಾಗಿ ಬರೆಯಲಿ. ಅಧ್ಯಾಪಕರು ಅಗತ್ಯವಾದ ಸಲಹೆ ಸೂಚನೆಗಳನ್ನು ನೀಡುವುದು. ತರಗತಿಯ ಎಲ್ಲಾ ಮಕ್ಕಳಿಗೂ ಮಂಡನೆಗೆ ಅವಕಾಶ ನೀಡುವುದು. ಕಷ್ಟದಲ್ಲಿರುವವರಿಗೆ ಅಧ್ಯಾಪಕರು ಸಹಾಯಮಾಡಿದ ಸಂದರ್ಭ/ ಶುಚೀಕರಣದ ಸಂದರ್ಭದ ಕುರಿತು ಬರೆದು ಪ್ರದರ್ಶಿಸುವುದು. ಬರವಣಿಗೆಯ ಕುರಿತು ಚರ್ಚಿಸುವುದು. ಮಕ್ಕಳಿಗೆ ಉತ್ತಮಪಡಿಸಲು ಅವಕಾಶ ನೀಡುವುದು. ಅಧ್ಯಾಪಕರು ಮೌಲ್ಯನಿರ್ಣಯ ಮಾಡುವುದು. ಉತ್ತಮವಾದುದನ್ನು ಹಸ್ತಪತ್ರಿಕೆಯಲ್ಲಿ ಪ್ರಕಟಿಸುವುದು.

## ❑ ಪದ್ಯ ರಚಿಸಿ ಪ್ರಕಟಿಸುವ

ಸೂಕ್ತವಾದ ಪದ ವಿನ್ಯಾಸದ ಮೂಲಕ ಪದ್ಯ ರಚನಾ ಸಾಮರ್ಥ್ಯವನ್ನು ಬೆಳೆಸಲು ಈ ಚಟುವಟಿಕೆಯನ್ನು ನೀಡಲಾಗಿದೆ. ಕೊಟ್ಟ ಪದಗಳನ್ನು ಯಾವ ಯಾವ ರೀತಿಗಳಲ್ಲಿ ಹೊಂದಿಸಬಹುದು ಎಂದು ತರಗತಿಯಲ್ಲಿ ಮಕ್ಕಳು ಚರ್ಚಿಸಲಿ. ವಿಭಿನ್ನವಾದ ಆಶಯಗಳು ಮೂಡಿ ಬರುವಂತೆ ಚರ್ಚೆ ನಡೆಸಬೇಕು. ಮಕ್ಕಳಿಗೆ ಇಷ್ಟವಾದ ಯಾವುದಾದರೂ ಒಂದು ಆಶಯದ ಕುರಿತು ಪದ್ಯ ಬರೆಯಲಿ. ತರಗತಿಯಲ್ಲಿ ಮಂಡಿಸಲಿ. ಮಕ್ಕಳು ಪದ್ಯವನ್ನು ಗುಂಪಿನಲ್ಲಿ ಉತ್ತಮಪಡಿಸಿ ಮಂಡಿಸಲಿ. ಗುಂಪು ಚಟುವಟಿಕೆಯ ಸಂದರ್ಭದಲ್ಲಿ ಅಧ್ಯಾಪಕರು ಅಗತ್ಯವಾದ ಸಹಾಯವನ್ನು ಮಾಡುವುದು. ಆಶಯ ಮತ್ತು ಭಾಷಾಪರವಾಗಿ ಉತ್ತಮಪಡಿಸುವುದು. ಅಧ್ಯಾಪಕರು ರಚಿಸಿದ ಕವಿತೆಯನ್ನು ಪ್ರದರ್ಶಿಸುವುದು. ಮಕ್ಕಳಿಗೆ ತಮ್ಮ ಪದ್ಯ/ಕವಿತೆಗಳನ್ನು ಉತ್ತಮಪಡಿಸಲು ಅವಕಾಶವನ್ನು ನೀಡುವುದು. ಅಧ್ಯಾಪಕರು ಮೌಲ್ಯನಿರ್ಣಯ ಮಾಡುವುದು. ಎಲ್ಲಾ ಪದ್ಯಗಳನ್ನು ಒಟ್ಟುಗೂಡಿಸಿ ಹಸ್ತಪತ್ರಿಕೆಯನ್ನು ತಯಾರಿಸಲಿ. ಅದನ್ನು ಪ್ರಕಟಿಸಲಿ.

### ಕಾಗೆ – ನರಿ

ಕಾಗೆಯೊಂದು ಹಾರಿ ಬಂದು
ಮರದ ಮೇಲೆ ಕುಳಿತಿತು
ಮರದ ಮೇಲೆ ಕುಳಿತ ಕಾಗೆ
ಹಣ್ಣು ಕುಕ್ಕಿ ತಿಂದಿತು
ಕಾಡಿನಿಂದ ಊರ ಕಡೆಗೆ
ಹೊರಟು ನರಿಯು ಬಂದಿತು
ಮರದ ಕೆಳಗೆ ನಿಂತುಕೊಂಡು
ಕಾಗೆಯನ್ನು ನೋಡಿತು

❑ **ಪೂರಕ ಓದಿಗೆ**

# ಮಹಾತ್ಮಗಾಂಧಿ

ಮೋಹನ್‌ದಾಸ್ ಕರಮ್ ಚಂದ್ ಗಾಂಧಿಯವರು ಭಾರತೀಯ ಸ್ವಾತಂತ್ರ್ಯ ಆಂದೋಲನದ ಕಾಲದಲ್ಲಿ ಭಾರತದ ಸರ್ವೋತ್ಕೃಷ್ಟ ರಾಜಕೀಯ ನಾಯಕರಾಗಿದ್ದರು. ಅವರು ಅಹಿಂಸೆಯ ಮೇಲೆ ದೃಢವಾಗಿ ನಂಬಿಕೆ ಇಟ್ಟವರು. ಸತ್ಯಾಗ್ರಹದ ಪರಿಕಲ್ಪನೆಗೆ ಅವರು ಪಥ ನಿರ್ಮಾಪಕರಾಗಿದ್ದು ಅದು ಭಾರತವನ್ನು ಸ್ವಾತಂತ್ರ್ಯದತ್ತ ಒಯ್ದಿತು ಹಾಗೂ ವಿಶ್ವದಾದ್ಯಂತ ನಾಗರಿಕ ಹಕ್ಕುಗಳ ಮತ್ತು ಸ್ವಾತಂತ್ರ್ಯ ಆಂದೋಲನಗಳಿಗೆ ಸ್ಫೂರ್ತಿ ನೀಡಿತು. ಗಾಂಧಿಯವರು ವಿಶ್ವದಾದ್ಯಂತ ಮಹಾತ್ಮಗಾಂಧಿ ಎಂದೇ ಚಿರಪರಿಚಿತರು (ಸಂಸ್ಕೃತ : ಮಹಾತ್ಮ ಅಥವಾ ಮಹಾನ್ ಆತ್ಮ ಎಂಬ ಗೌರವ ಸೂಚಕ ಪದವನ್ನು ಅವರಿಗೆ ಮೊದಲು ನೀಡಿದ್ದು ರವೀಂದ್ರನಾಥ ಠಾಗೋರರು) ಮತ್ತು ಭಾರತದಲ್ಲಿ ಅವರು ಬಾಪು ಎಂದೇ ಚಿರಪರಿಚಿತರು (ಗುಜರಾತಿ : ಬಾಪು ಅಥವಾ ತಂದೆ) ಭಾರತದಲ್ಲಿ ಅವರನ್ನು ರಾಷ್ಟ್ರಪಿತ ಎಂದು ಅಧಿಕೃತವಾಗಿ ಗೌರವಿಸಲಾಗಿದ್ದು ಅವರ ಜನ್ಮದಿನವಾದ ಅಕ್ಟೋಬರ್ 2ನ್ನು ಗಾಂಧಿಜಯಂತಿ ಎಂಬ ಸ್ಮರಣೀಯ ದಿನವನ್ನಾಗಿಸಿ ರಾಷ್ಟ್ರೀಯ ರಜಾದಿನವನ್ನಾಗಿಸಲಾಗಿದೆ ಮತ್ತು ವಿಶ್ವದಾದ್ಯಂತ ಈ ದಿನವನ್ನು ಅಂತಾರಾಷ್ಟ್ರೀಯ ಅಹಿಂಸಾ ದಿನವನ್ನಾಗಿ ಆಚರಿಸಲಾಗುತ್ತಿದೆ. ಗಾಂಧಿಯವರು ದಕ್ಷಿಣ ಆಫ್ರಿಕಾದಲ್ಲಿ ವಲಸಿಗ ವಕೀಲರಾಗಿದ್ದಾಗ ಅಲ್ಲಿ ವಾಸವಾಗಿದ್ದ ಭಾರತೀಯ ಸಮುದಾಯವು ನಾಗರಿಕ ಹಕ್ಕುಗಳಿಗಾಗಿ ಹೋರಾಟ ನಡೆಸುತ್ತಿತ್ತು. ಆ ಅವಧಿಯಲ್ಲಿ ಅಹಿಂಸಾತ್ಮಕ ಆಂದೋಲನವನ್ನು ಗಾಂಧೀಜಿ ಮೊದಲ ಬಾರಿಗೆ ಪ್ರಯೋಗಿಸಿದರು. 1915 ರಲ್ಲಿ ಭಾರತಕ್ಕೆ ವಾಪಸಾದ ಬಳಿಕ, ಅತಿಯಾದ ಜಮೀನು ತೆರಿಗೆ ಮತ್ತು ತಾರತಮ್ಯಗಳಿಗೆ ಸಂಬಂಧಿಸಿದಂತೆ ರೈತರ, ಬೇಸಾಯಗಾರರ ಮತ್ತು ನಗರ ಪ್ರದೇಶದ ಕಾರ್ಮಿಕರ ಪ್ರತಿಭಟನೆಗಳನ್ನು ಅವರು ಸಂಘಟಿಸಿದರು. 1921 ರಲ್ಲಿ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನ ನಾಯಕತ್ವವಹಿಸಿದ ಬಳಿಕ, ಬಡತನದ ನಿವಾರಣೆ, ಮಹಿಳಾ ಹಕ್ಕುಗಳ ವಿಸ್ತರಣೆ, ಧಾರ್ಮಿಕ ಮತ್ತು ಜಾನಾಂಗೀಯ ಸೌಹಾರ್ದ, ಅಸ್ಪೃಶ್ಯತೆಯ ಅಂತ್ಯ ಮತ್ತು ಆರ್ಥಿಕ ಸ್ವಾವಲಂಬನೆಯನ್ನು ಹೆಚ್ಚಿಸಲು ಹಮ್ಮಿಕೊಳ್ಳಲಾದ ರಾಷ್ಟ್ರವ್ಯಾಪಿ ಚಳುವಳಿಗಳ ನೇತೃತ್ವವನ್ನು ಗಾಂಧಿಯವರು ವಹಿಸಿಕೊಂಡರು. ಇವೆಲ್ಲಕ್ಕಿಂತಲೂ ಹೆಚ್ಚಾಗಿ, ಸ್ವರಾಜ್ ಅಥವಾ ವಿದೇಶೀ ಹಿಡಿತದಿಂದ ಭಾರತದ ಸ್ವಾತಂತ್ರ್ಯವನ್ನು ಸಾಧಿಸುವತ್ತ ಅವರು ಗುರಿಯಿಟ್ಟರು. 1931 ರಲ್ಲಿ ಅವರು ಉಪ್ಪು ಸತ್ಯಾಗ್ರಹವನ್ನು 1942 ರಲ್ಲಿ ಕ್ವಿಟ್ ಇಂಡಿಯಾ ಚಳವಳಿಯನ್ನು ನಡೆಸಿದರು. 1948 ಜನವರಿ 30 ರಂದು ದೆಹಲಿಯಲ್ಲಿ ಗುಂಡೇಟಿಗೆ ಬಲಿಯಾದರು.

* * *

# ಗೋಪಾಲಕೃಷ್ಣ ಗೋಖಲೆ

ಗೋಪಾಲಕೃಷ್ಣ ಗೋಖಲೆ ಭಾರತೀಯ ಸ್ವಾತಂತ್ರ್ಯ ಚಳುವಳಿಯಲ್ಲಿ ಮಹತ್ವದ ಪಾತ್ರವಹಿಸುವುದರ ಜೊತೆಗೆ ಬ್ರಿಟಿಷರ ಆಡಳಿತ ಕಾಲದಲ್ಲಿ ಭಾರತದಲ್ಲಿ ಮಹತ್ವದ ಸುಧಾರಣೆಗಳನ್ನು ತಂದವರಾಗಿದ್ದಾರೆ.

ಸ್ವಾತಂತ್ರ್ಯಪೂರ್ವ ಭಾರತದ ಮಹಾನ್ ರಾಜಕೀಯ ನಾಯಕರೂ ಸಮಾಜ ಸುಧಾರಕರಾಗಿ ಭಾರತೀಯರಿಗೆ ಗೌರವಯುತವಾದ ಉತ್ತಮ ಬದುಕನ್ನು ತಂದುಕೊಡಲು ಶ್ರಮಿಸಿದವರೂ ಆದ ಗೋಪಾಲಕೃಷ್ಣ ಗೋಖಲೆಯವರು ಮೇ 9, 1866 ರಂದು ಕೊಲ್ಹಾಪುರದಲ್ಲಿ ಜನಿಸಿದರು.

ಗೋಖಲೆಯವರು ಸಾಮಾನ್ಯ ಕುಟುಂಬಕ್ಕೆ ಸೇರಿದವರಾಗಿದ್ದರೂ ಅವರ ಹಿರಿಯರು ಅವರಿಗೆ ಇಂಗ್ಲಿಷ್ ಶಿಕ್ಷಣ ದೊರಕುವಂತೆ ಮಾಡಿದರು. ಪದವಿ ಶಿಕ್ಷಣ ಪಡೆದ ಪ್ರಥಮ ಭಾರತೀಯ ತಲೆಮಾರಿಗೆ ಸೇರಿದ ಗೋಖಲೆಯವರು ಪಾಶ್ಚಾತ್ಯ ರಾಜಕೀಯ ಚಿಂತನೆಗಳಿಂದ ಪ್ರಭಾವಿತರಾಗಿದ್ದರು. ಬ್ರಿಟಿಷರ ವಸಾಹತುಶಾಹಿ ಆಡಳಿತ ವ್ಯವಸ್ಥೆಗಳನ್ನು ಅವರು ವಿರೋಧಿಸುತ್ತಿದ್ದಾಗ್ಯೂ ಇಂಗ್ಲಿಷರ ರಾಜಕೀಯ ಸಿದ್ಧಾಂತಗಳ ಕುರಿತಾಗಿ ಗೌರವವುಳ್ಳ ನಿಲುವು ತಾಳಿದ್ದರು.

ಗೋಪಾಲಕೃಷ್ಣ ಗೋಖಲೆಯವರು ಮಹಾತ್ಮ ಗಾಂಧಿಯವರಿಗೆ ಭಾರತೀಯ ರಾಜಕೀಯ ಜೀವನದ ಪ್ರಾರಂಭಿಕ ವರ್ಷಗಳಲ್ಲಿ ಮಾರ್ಗದರ್ಶಕರಾಗಿದ್ದರು. 1912 ರ ವರ್ಷದಲ್ಲಿ ಗೋಖಲೆಯವರು ಗಾಂಧಿಯವರ ಆಹ್ವಾನದ ಮೇರೆಗೆ ದಕ್ಷಿಣ ಆಫ್ರಿಕಾಕ್ಕೆ ಭೇಟಿ ನೀಡಿದರು. ಯುವ ಬ್ಯಾರಿಸ್ಟರ್ ಆಗಿ ದಕ್ಷಿಣ ಆಫ್ರಿಕಾದ ಹೋರಾಟಗಳ ನಂತರ ಭಾರತಕ್ಕೆ ಬಂದ ಗಾಂಧೀಜಿಯವರಿಗೆ ಸ್ವಯಂ ಗೋಖಲೆಯವರೇ ಜೊತೆ ನಿಂತು ಕೈಹಿಡಿದು ಮಾರ್ಗದರ್ಶನ ಮಾಡಿದರು. ಈ ನಿಟ್ಟಿನಲ್ಲಿ ಅವರು ಮಾಡಿದ ಪ್ರಮುಖ ಕಾರ್ಯವೆಂದರೆ ಗಾಂಧಿಯವರಿಗೆ ಭಾರತದ ಕುರಿತಾಗಿ ನೀಡಿದ ಸಂಪೂರ್ಣ ಚಿತ್ರಣ ಮತ್ತು ಭಾರತವನ್ನು ಕಾಡುತ್ತಿರುವ ಸಮಸ್ಯೆಗಳ ಕುರಿತಾಗಿ ನೀಡಿದ ಸಮಗ್ರ ತಿಳುವಳಿಕೆ. 1920 ರ ವೇಳೆಗೆ ಗಾಂಧೀಜಿ ಭಾರತೀಯ ಸ್ವಾತಂತ್ರ್ಯ ಹೋರಾಟದ ನಾಯಕರಾಗಿದ್ದರು. ತಮ್ಮ ಆತ್ಮ ಚರಿತ್ರೆಯಲ್ಲಿ ಗಾಂಧೀಜಿಯವರು ಗೋಪಾಲಕೃಷ್ಣ ಗೋಖಲೆಯವರನ್ನು ತಮ್ಮ ಗುರು ಮತ್ತು ಮಾರ್ಗದರ್ಶಕ ಎಂದು ಬಣ್ಣಿಸಿದ್ದಾರೆ. ಗೋಖಲೆಯವರ ಕುರಿತಾಗಿ ಗಾಂಧೀಜಿ ''ಅವರೊಬ್ಬ ಶ್ರೇಷ್ಠ ನಾಯಕ, ರಾಜಕೀಯ ಮುತ್ಸದ್ದಿ, ಸ್ಪಟಿಕದಂತೆ ಸ್ವಚ್ಛ, ಕುರಿಯಂತೆ ಮೆದು, ಸಿಂಹದಂತೆ ಧೈರ್ಯಸ್ಥ, ತಪ್ಪು ಮಾಡಿದಾಗ ಸಹನಶೀಲ ಮತ್ತು ರಾಜಕೀಯ ಕ್ಷೇತ್ರದ ಸತ್ಪಾತ್ರರು' ಎಂದು ಕೊಂಡಾಡಿದ್ದಾರೆ. ಹಾಗಿದ್ದಾಗ್ಯೂ ಗಾಂಧೀಜಿಯವರು ಗೋಖಲೆಯವರಿಗಿದ್ದ ಪಾಶ್ಚಾತ್ಯ ಸಂಸ್ಥೆಗಳ ಕುರಿತಾಗಿದ್ದ ನಂಬುಗೆಗಳು ತಮಗೆ ಒಪ್ಪಿಗೆಯಾಗಿಲ್ಲ ಎಂದು ತಿಳಿಸುತ್ತಾರೆ.

ತಮ್ಮ ಜೀವಿತಾವಧಿಯ ಕೊನೆಯ ವರೆಗೆ ನಿರಂತರ ಕಾರ್ಯಶೀಲರಾಗಿದ್ದ ಗೋಪಾಲಕೃಷ್ಣ ಗೋಖಲೆಯವರು ಫೆಬ್ರುವರಿ 19, 1915 ರ ವರ್ಷದಲ್ಲಿ ಕೇವಲ ತಮ್ಮ 49 ನೇ ವಯಸ್ಸಿನಲ್ಲಿ ನಿಧನರಾದರು.

* * *

# ಲಾಲಾ ಲಜಪತ ರಾಯ್

ಲಾಲಾ ಲಜಪತ ರಾಯ್ ಭಾರತಕ್ಕಾಗಿ ತಮ್ಮ ಪ್ರಾಣವನ್ನು ಸಮರ್ಪಿಸಿದ ಸ್ವಾತಂತ್ರ ಹೋರಾಟಗಾರ ರಾಗಿಯೂ, ಶ್ರೇಷ್ಠ ಬರಹಗಾರರಾಗಿಯೂ ಭಾರತೀಯ ಇತಿಹಾಸದಲ್ಲಿ ಪ್ರಸಿದ್ಧರಾಗಿದ್ದಾರೆ. ಲಾಲಾ ಲಜಪತ ರಾಯ್ ಅವರು ದೇಶದ ಪ್ರಖ್ಯಾತ ತ್ರಿಮೂರ್ತಿಗಳಾದ 'ಲಾಲ್–ಬಾಲ್–ಪಾಲ್' ಇವರಲ್ಲಿ ಒಬ್ಬರು. ಮತ್ತಿಬ್ಬರು ಬಾಲ ಗಂಗಾಧರ ತಿಲಕ್ ಮತ್ತು ಬಿಪಿನ್‌ಚಂದ್ರ ಪಾಲರು.

ಲಾಲಾ ಲಜಪತ ರಾಯ್ ಅವರು ಪಂಜಾಬಿನ ಮೋಗಾ ಜಿಲ್ಲೆಗೆ ಸೇರಿದ ಧುಡಿಕೆ ಎಂಬ ಗ್ರಾಮದಲ್ಲಿ ಜನವರಿ 28, 1865 ರಲ್ಲಿ ಜನಿಸಿದರು. 'ಲಾಲಾ' ಎಂಬುದು ಭಾರತೀಯ ಸಂಸ್ಕೃತಿಯಲ್ಲಿ ಹಿರಿಯ ಮನೆತನದಿಂದ ಬಂದವರಿಗೆ ಸಲ್ಲುತ್ತಿದ್ದ ಗೌರವಯುತ ಸಂಭೋದನೆ. ರಾಯ್ ಅವರ ಪ್ರಾರಂಭಿಕ ಶಿಕ್ಷಣ ಈಗಿನ ಹರ್ಯಾಣದಲ್ಲಿರುವ ರೆವಾರಿ ಎಂಬ ಊರಿನಲ್ಲಾಯಿತು. ಲಜಪತ ರಾಯ್ ಅವರ ತಂದೆ ರಾಧಾಕೃಷ್ಣನ್ ಅವರು ಅಂದಿನ ದಿನಗಳಲ್ಲಿ ಉರ್ದು ಶಿಕ್ಷಕರಾಗಿದ್ದರು.

1928 ರ ವರ್ಷದಲ್ಲಿ ಭಾರತದಲ್ಲಿನ ಪರಿಸ್ಥಿತಿಯನ್ನು ವರದಿ ಮಾಡಲು ನಿಯಮಿತಗೊಂಡಿದ್ದ ಸರ್ ಜಾನ್ ಸೈಮನ್ ನೇತೃತ್ವದ ಆಯೋಗದಲ್ಲಿ ಒಬ್ಬರೇ ಒಬ್ಬರೂ ಭಾರತೀಯ ಪ್ರತಿನಿಧಿಗಳು ಇರಲಿಲ್ಲ ಎಂಬ ನಿಟ್ಟಿನಲ್ಲಿ ಭಾರತೀಯ ಸಂಘಟನೆಗಳು ಅದನ್ನು ಬಹಿಷ್ಕರಿಸಲು ತೀರ್ಮಾನ ಕೈಗೊಂಡು ದೇಶದಾದ್ಯಂತ ಚಳುವಳಿಯನ್ನು ನಡೆಸಿದವು. ಅಕ್ಟೋಬರ್ 30, 1928ರಂದು ಸೈಮನ್ ಆಯೋಗವು ಲಾಹೋರಿಗೆ ಭೇಟಿಕೊಟ್ಟ ಸಂದರ್ಭದಲ್ಲಿ ಲಾಲಾ ಲಜಪತ ರಾಯ್ ಅವರು ಶಾಂತಿಯುತ ಮೆರವಣಿಗೆಯ ನೇತೃತ್ವ ವಹಿಸಿದರು. ಆ ಸಂದರ್ಭದಲ್ಲಿ ಪೋಲಿಸ್ ಸುಪರಿಂಟೆಂಡೆಂಟ್ ಜೇಮ್ಸ್ ಎ. ಸ್ಕಾಟ್ ಎಂಬ ದುರಹಂಕಾರಿಯು ಮೆರವಣಿಗೆಯಲ್ಲಿ ಹೋಗುತ್ತಿದ್ದವರ ಮೇಲೆ ಲಾಠಿಚಾರ್ಜ್ ಮಾಡುವ ಆದೇಶವಿತ್ತದ್ದೇ ಅಲ್ಲದೆ ಲಾಲಾ ಲಜಪತ ರಾಯ್ ಅವರ ಮೇಲೆ ಸ್ವಯಂ ಆಕ್ರಮಣ ನಡೆಸಿ ಅವರು ತೀವ್ರವಾಗಿ ಗಾಯಗೊಳ್ಳುವುದಕ್ಕೆ ಕಾರಣನಾದನು. ಈ ತೀವ್ರ ಪೆಟ್ಟುಗಳಿಂದ ಹೊರಬರಲಾಗದ ಲಾಲಾ ಲಜಪತರಾಯ್ ಅವರು ನವೆಂಬರ್ 17, 1928ರಂದು ಹೃದಯಾಘಾತದಿಂದ ನಿಧನರಾದರು. ಸ್ಕಾಟನ ಆ ದುಷ್ಕೃತ್ಯ ಮಹಾನ್ ದೇಶಭಕ್ತ ವಿದ್ವಾಂಸ, ಅಹಿಂಸಾಪ್ರವೃತ್ತಿಯ ಶಾಂತಿದೂತರೆನಿಸಿದ್ದ ಲಾಲಾ ಲಜಪತ ರಾಯ್ ಅವರ ಮರಣಕ್ಕೆ ಕಾರಣವಾಯಿತು. ಇದರಿಂದ ತೀವ್ರವಾಗಿ ನೊಂದ ಭಗತ್‌ಸಿಂಗ್, ರಾಜ ಗುರು, ಸುಖದೇವ್ ಥಾಪರ್, ಚಂದ್ರಶೇಖರ್ ಅಜಾದ್ ಅಂತಹ ವೀರರು ತೀವ್ರ ಹೋರಾಟಕ್ಕಿಳಿದು ದೇಶಕ್ಕೆ ಪ್ರಾಣಾರ್ಪಣೆ ಮಾಡಿದರು.

* * *

# ಸರೋಜಿನಿ ನಾಯ್ಡು

ಸರೋಜಿನಿ ನಾಯ್ಡು 'ಭಾರತದ ಕೋಗಿಲೆ' ಎನ್ನುವ ಹೆಸರಿನಿಂದಲೇ ಪ್ರಸಿದ್ಧರಾಗಿದ್ದಾರೆ. ಚಿಕ್ಕಂದಿನಿಂದಲೇ ಪ್ರಸಿದ್ಧಿ ಹೊಂದಿದ್ದ ಇವರು ಭಾರತದ ಸ್ವಾತಂತ್ರ್ಯ ಹೋರಾಟಗಾರರು, ಕವಿಗಳು. ಇವರು ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನ ಮೊದಲನೆಯ ಮಹಿಳಾ ಅಧ್ಯಕ್ಷರಾಗಿದ್ದರು. ಉತ್ತರ ಪ್ರದೇಶದ ಮೊದಲನೆಯ ಮಹಿಳಾ ರಾಜ್ಯಪಾಲರೂ ಆಗಿದ್ದರು.

ಇವರು 12ನೇ ಫೆಬ್ರುವರಿ 1879 ರಂದು ಜನಿಸಿದರು. ಇವರ ತಂದೆ ವಿಜ್ಞಾನಿ ಮತ್ತು ತತ್ವಜ್ಞಾನಿಗಳಾಗಿದ್ದ ಅಗೋರೆನಾಥ್ ಚಟ್ಟೋಪಾಧ್ಯಾಯ ಮತ್ತು ತಾಯಿ ಬಂಗಾಳಿ ಕವಿಯಿತ್ರಿಯಾದ ಸುಂದರಿ ದೇವಿ. ಸರೋಜಿನಿ ನಾಯ್ಡುರವರು ತಮ್ಮ ತಂದೆ-ತಾಯಿಯರ ಎಂಟು ಮಕ್ಕಳಲ್ಲಿ ಮೊದಲನೆಯವರಾಗಿದ್ದರು. ಇವರ ಒಬ್ಬ ಸಹೋದರನಾದ ಬೀರೇಂದ್ರನಾಥ್ ಚಳುವಳಿಗಾರ ರಾಗಿದ್ದವರು. ಮತ್ತೊಬ್ಬ ಸಹೋದರ ಹರಿನಾಥ್ ಕವಿ, ನಾಟಕಗಾರ ಮತ್ತು ನಟರಾಗಿದ್ದರು.

ಸರೋಜಿನಿ ನಾಯ್ಡುರವರು ಬುದ್ಧಿವಂತ ವಿದ್ಯಾರ್ಥಿನಿಯಾಗಿದ್ದರು. ಉರ್ದು, ತೆಲುಗು, ಇಂಗ್ಲೀಷ್, ಬಂಗಾಳಿ ಮತ್ತು ಪರ್ಷಿಯನ್ ಭಾಷೆಗಳನ್ನು ನಿರರ್ಗಳವಾಗಿ ಮಾತಾಡುತ್ತಿದ್ದರು. ಇವರು ಹನ್ನೆರಡನೇ ವಯಸ್ಸಿನಲ್ಲಿಯೇ ಮದ್ರಾಸ್ ವಿಶ್ವವಿದ್ಯಾನಿಲಯದ ಮೆಟ್ರಿಕ್ಯುಲೇಷನ್ ಪರೀಕ್ಷೆಯಲ್ಲಿ ಮೇಲ್ದರ್ಜೆಯಲ್ಲಿ ಪಾಸಾಗಿ ರಾಷ್ಟ್ರಮಟ್ಟದಲ್ಲಿ ಕೀರ್ತಿಯನ್ನು ಪಡೆದರು. ಇವರ ತಂದೆ ಇವರು ಗಣಿತತಜ್ಞೆ (ಮ್ಯಾಥಮ್ಯಾಟೀಷಿಯನ್) ಅಥವಾ ವಿಜ್ಞಾನಿಯಾಗಲಿ ಎಂದು ಬಯಸಿದ್ದರು. ಆದರೆ ಸರೋಜಿನಿಯವರು ಕವಿಯಿತ್ರಿಯಾಗಲು ಇಷ್ಟಪಟ್ಟಿದ್ದರು. ಇವರು ಆಂಗ್ಲಭಾಷೆಯಲ್ಲಿ ಕವಿತೆಗಳನ್ನು ಬರೆಯಲು ಪ್ರಾರಂಭಿಸಿದರು. ಹೈದರಾಬಾದಿನ ನಿಜಾಮರು ಇವರ ಕವಿತೆಗಳಿಂದ ಸ್ಫೂರ್ತಿಗೊಂಡು ವಿದೇಶದಲ್ಲಿ ಕಲಿಯಲು ವಿದ್ಯಾರ್ಥಿ ವೇತನವನ್ನು ಕೊಟ್ಟರು. 16ನೇ ವಯಸ್ಸಿನಲ್ಲಿ ಇವರು ಮೊದಲು ಇಂಗ್ಲೇಂಡಿನ ಕಿಂಗ್ಸ್ ಕಾಲೇಜಿನಲ್ಲಿ ಮತ್ತು ಆಮೇಲೆ ಕ್ಯಾಂಬ್ರಿಡ್ಜಿನ ಗಿರ್ಟನ್ ಕಾಲೇಜಿನಲ್ಲಿ ವಿದ್ಯಾಭ್ಯಾಸವನ್ನು ಮಾಡಿದರು. ಅಲ್ಲಿ ಇವರು ಆ ಕಾಲದಲ್ಲಿ ಪ್ರಸಿದ್ಧರಾಗಿದ್ದ ಆರ್ಥರ್ ಸೈಮೊನ್ಸ್ ಮತ್ತು ಎಡ್ಮಂಡ್ ಗೋಸೆಯವರನ್ನು ಭೇಟಿ ಮಾಡಿದರು. ಗೋಸೆಯವರು ಸರೋಜಿನಿಯವರನ್ನು ಭಾರತದಲ್ಲಿರುವ ಬೆಟ್ಟ-ಗುಡ್ಡಗಳು, ನದಿಗಳು, ದೇವಸ್ಥಾನಗಳು, ಜನರ ಜೀವನಕ್ರಮ ಮುಂತಾದ ವಿಷಯಗಳ ಮನದಲ್ಲಿಟ್ಟುಕೊಂಡು ತಮ್ಮ ಕವಿತೆಗಳನ್ನು ರಚಿಸಿದರೆ ಚೆನ್ನಾಗಿರುತ್ತದೆ ಎಂದು ಮನದಟ್ಟು ಮಾಡಿಕೊಟ್ಟರು. ಅದರಂತೆ ಸರೋಜಿನಿಯವರು ಸಮಕಾಲೀನ ಇಂಡಿಯಾ ದೇಶದ ಜನರ ಜೀವನಕ್ರಮಗಳನ್ನು ತಮ್ಮ ಕವಿತೆಗಳಲ್ಲಿ ವರ್ಣಿಸಿದರು. The Golden Threshold (1905), The Bird of Time (1912) ಮತ್ತು The Broken Wing (1912) ಎನ್ನುವ ಕವನ ಸಂಗ್ರಹಗಳು ಭಾರತದ ಸಾಕಷ್ಟು ಓದುಗಾರರನ್ನು ಮತ್ತು ಆಂಗ್ಲಭಾಷೆಯ ಓದುಗಾರರನ್ನು ಆಕರ್ಷಿಸಿದುವು.

1925 ರಲ್ಲಿ ಸರೋಜಿನಿಯವರು ಕಾನ್ಪುರದಲ್ಲಿ ನಡೆದ ಭಾರತದ ರಾಷ್ಟ್ರೀಯ ಕಾಂಗ್ರೆಸಿನ ವಾರ್ಷಿಕ ಅಧಿವೇಶನದ ಅಧ್ಯಕ್ಷರಾಗಿದ್ದರು. ಸಿವಿಲ್ ಅವಿಧೇಯತೆಯ ಚಳುವಳಿಯಲ್ಲಿ ಭಾಗವಹಿಸಿ ಗಾಂಧೀಜಿ ಮುಂತಾದ ಚಳುವಳಿಗಾರರೊಂದಿಗೆ ಜೈಲಿಗೆ ಹೋದರು. 1942 ರಲ್ಲಿ

ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ಭಾಗವಹಿಸಿ 21 ತಿಂಗಳ ಕಾಲ ಗಾಂಧೀಜಿ ಮುಂತಾದ ನಾಯಕರೊಂದಿಗೆ ಜೈಲಿನಲ್ಲಿ ಕಳೆದರು.

ಸ್ವಾತಂತ್ರ್ಯ ಬಂದ ನಂತರ ಸರೋಜನಿಯವರು ಉತ್ತರ ಪ್ರದೇಶದ ರಾಜ್ಯಪಾಲರಾದರು. ಇವರು ಮೊದಲನೆಯ ಮಹಿಳಾ ರಾಜ್ಯಪಾಲರು. ಸರೋಜನಿಯವರು ತಮ್ಮ ಕಛೇರಿಯಲ್ಲಿಯೇ 2ನೇ ಮಾರ್ಚ್ 1949 ರಂದು ನಿಧನರಾದರು.

* * *

## ಲೋಕಮಾನ್ಯ ಬಾಲಗಂಗಾಧರ ತಿಲಕ

ಲೋಕಮಾನ್ಯ ಬಾಲಗಂಗಾಧರ ತಿಲಕ ಭಾರತೀಯ ರಾಷ್ಟ್ರೀಯವಾದಿ, ಸಮಾಜ ಸುಧಾರಕ ಹಾಗೂ ಸ್ವಾತಂತ್ರ್ಯ ಹೋರಾಟಗಾರರು. ತಿಲಕರು ಬಹುಶಃ ಬಾರತದ ಸ್ವಾತಂತ್ರ್ಯ ಹೋರಾಟದ ಚಳುವಳಿಯ ಮೊದಲನೇ ಜನಪ್ರಿಯ ನಾಯಕ. ಭಾರತೀಯರ ಪ್ರಜ್ಞೆಯಲ್ಲಿ ಸಂಪೂರ್ಣ ಸ್ವರಾಜ್ಯದ ಕಿಚ್ಚು ಹಚ್ಚಿದ ತಿಲಕರು ಹಿಂದೂ ರಾಷ್ಟ್ರೀಯತಾವಾದದ ಪಿತಾಮಹ ಎಂದೂ ಹೆಸರಾಗಿದ್ದಾರೆ. ಸ್ವರಾಜ್ಯ ನಮ್ಮ ಜನ್ಮಸಿದ್ಧ ಹಕ್ಕು, ಅದನ್ನು ನಾನು ಪಡೆದೇ ತೀರುತ್ತೇನೆ ಎಂಬ ಇವರ ಘರ್ಜನೆ ಅಂದು ಜನಪ್ರಿಯವಾದದ್ದಷ್ಟೇ ಅಲ್ಲ, ಇಂದಿಗೂ ಜನಸಾಮಾನ್ಯರ ನೆನಪಿನಲ್ಲಿ ಹಸುರಾಗಿದೆ. 'ಲೋಕಮಾನ್ಯ' (ಜನಗಳ ಪ್ರೀತಿ ಪಾತ್ರರು / ಗೌರವಕ್ಕೆ ಪಾತ್ರರಾದರು) ಎಂಬ ಹೆಸರಿನಿಂದ ಕರೆಯಲ್ಪಡುತ್ತಿದ್ದ ತಿಲಕರು ಭಾರತದ ಇತಿಹಾಸ, ಸಂಸ್ಕೃತ, ಹಿಂದೂ ಧರ್ಮ, ಗಣಿತ ಹಾಗೂ ಖಗೋಳಶಾಸ್ತ್ರಗಳ ಆಳವಾದ ಅಭ್ಯಾಸ ಮಾಡಿದ್ದರು.

ತಿಲಕರು ಹುಟ್ಟಿದ್ದು 1856 ರ ಜುಲೈ 23 ರಂದು ಮಹಾರಾಷ್ಟ್ರದ ರತ್ನಗಿರಿಯ ಮಧ್ಯಮ ವರ್ಗದ ಕುಟುಂಬವೊಂದರಲ್ಲಿ ಚತುರ ವಿದ್ಯಾರ್ಥಿಯಾಗಿದ್ದ ತಿಲಕನಿಗೆ ಗಣಿತದಲ್ಲಿ ವಿಶೇಷ ಪ್ರತಿಭೆಯಿತ್ತು. ಆಧುನಿಕ ಕಾಲೇಜು ಶಿಕ್ಷಣ ಪಡೆದುಕೊಂಡ ನವ ಪೀಳಿಗೆಯ ಯುವಕರಲ್ಲಿ ತಿಲಕರೂ ಒಬ್ಬರಾಗಿದ್ದರು. ಪದವಿ ಪಡೆದ ಬಳಿಕ ಪುಣೆಯ ಖಾಸಗೀ ಶಾಲೆಯೊಂದರಲ್ಲಿ ಗಣಿತ ಶಿಕ್ಷಕರಾಗಿ ಸೇರಿದ ತಿಲಕರು, ಅನಂತರ ಅದನ್ನು ಬಿಟ್ಟು ಪತ್ರಕರ್ತರಾದರು. ಪಾಶ್ಚಿಮಾತ್ಯ ಶಿಕ್ಷಣ ಪದ್ಧತಿಯು ಭಾರತೀಯ ಪರಂಪರೆಯನ್ನು ಅವಹೇಳಿಸುವಂಥಾದ್ದು ಹಾಗೂ ಭಾರತದ ವಿದ್ಯಾರ್ಥಿಗಳನ್ನು ಕೀಳುಗಳೆಯುವಂಥಾದ್ದು ಎಂಬ ನಿರ್ಧಾರಕ್ಕೆ ಬಂದ ಅವರು, ಈ ಪದ್ಧತಿಯ ತೀವ್ರ ಟೀಕಾಕಾರರಾದರು. ವಿದ್ಯಾರ್ಥಿಗಳಿಗೆ ಒಳ್ಳೆಯ ಗುಣಮಟ್ಟದ ಶಿಕ್ಷಣ ದೊರೆಯಬೇಕು ಎಂಬ ಉದ್ದೇಶದಿಂದ ಪುಣೆಯಲ್ಲಿ ಡೆಕ್ಕನ್ ಎಜ್ಯುಕೇಶನ್ ಸೊಸೈಟಿಯನ್ನು ಸ್ಥಾಪಿಸಿದರು.

* * *

# ಸ್ವಾತಂತ್ರ್ಯ ಹೋರಾಟಗಾರರು

ಜವಾಹರಲಾಲ್ ನೆಹರು / ಮಹಾತ್ಮ ಗಾಂಧಿ / ಖಾನ್ ಅಬ್ದುಲ್ ಖಫೂರ್ ಖಾನ್/ ಮೌಲಾನಾ ಅಬ್ದುಲ್ ಕಲಾಂ ಅಸಾದ್/ ಸರ್ದಾರ್ ವಲ್ಲಭಭಾಯಿ ಪಟೇಲ್ / ಲೋಕಮಾನ್ಯ ಬಾಲ ಗಂಗಾಧರ ತಿಲಕ / ಸುಭಾಷ್‌ಚಂದ್ರ ಬೋಸ್ / ಲಾಲ್ ಬಹಾದ್ದುರ್ ಶಾಸ್ತ್ರಿ / ಮದನಮೋಹನ ಮಾಳವೀಯ / ಭಗತ್‌ಸಿಂಗ್ / ಸಿ. ರಾಜಗೋಪಾಲಚಾರಿ / ಚಂದ್ರಶೇಖರ್ ಅಝಾದ್ / ರಾಮ್ ಪ್ರಸಾದ್ ಬಿಸ್ಮಿಲ್ / ಸುಬ್ರಹ್ಮಣ್ಯ ಭಾರತಿ / ಖುದೀರಾಂ ಬೋಸ್ / ತಾಂತ್ಯಟೋಪಿ / ಝಾನ್ಸೀರಾಣಿ ಲಕ್ಷ್ಮೀ ಭಾಯಿ / ಸರೋಜಿನಿ ನಾಯ್ಡು / ಜಯಪ್ರಕಾಶ ನಾರಾಯಣ / ಸುಖದೇವ / ದೇಶಬಂಧು ಚಿತ್ತರಂಜನ್ ದಾಸ್ / ಲಾಲಾ ಲಜಪತ ರಾಯ್ / ಮಂಗಳಪಾಂಡೆ / ಪಂಡಿತ ಮೋತಿಲಾಲ ನೆಹರೂ / ರವೀಂದ್ರನಾಥ ಟಾಗೋರ್ / ದಾದಾ ಭಾಯಿ ನವರೋಜಿ / ಬಿಪಿನ್‌ಚಂದ್ರಪಾಲ್ / ವಿನೋಬಾ ಭಾವೆ / ಬಿ.ಆರ್. ಅಂಬೇಡ್ಕರ್ / ನಾನಾ ಸಾಹಿಬ್ / ಕಸ್ತೂರ್ ಬಾ ಗಾಂಧಿ / ಗೋಪಾಲಕೃಷ್ಣ ಗೋಖಲೆ / ಲಕ್ಷ್ಮಿ ಸೆಹಗಲ್/ ಕೆ.ಪಿ. ಕೇಶವ ಮೆನೋನ್/ ಕೆ.ಕೇಳಪ್ಪನ್/ ಎ.ವಿ. ಕುಟ್ಟಿಮಾಳು ಅಮ್ಮ/ ಅಕ್ಕಮ್ಮ ಚೆರಿಯನ್/ ದೇಶಾಭಿಮಾನಿ ರಾಮಕೃಷ್ಣ ಪಿಳ್ಳೆ.

## ಮೌಲ್ಯನಿರ್ಣಯ ಚಟುವಟಿಕೆಗಳು

1. ಉತ್ತರಿಸಿರಿ.
   1) "ನಾವೆಲ್ಲರೂ ಒಂದೇ" ಪದ್ಯವನ್ನು ಬರೆದ ಕವಿ ಯಾರು?
   2) ಬ್ರಿಟಿಷರು ನಮ್ಮ ದೇಶಕ್ಕೆ ಬಂದದ್ದು ಯಾಕೆ?
   3) ಕಿತ್ತೂರಿನ ರಾಣಿ ಯಾರು?

2. ಉತ್ತರಿಸಿರಿ.
   1) 'ನಡೆ ನುಡಿ ಭೇದಗಳೆಷ್ಟೇ ಇದ್ದರು ಬದುಕುವ ಜನ ಒಂದೇ" ಕವಿಯು ಈ ಮಾತನ್ನು ಹೇಳಲು ಕಾರಣವೇನು?
   2) ಕಿತ್ತೂರು ದುಃಖದ ಕಡಲಲ್ಲಿ ಮುಳುಗಲು ಕಾರಣವೇನು?
   3) "ಕನ್ನಡ" ಎಂಬ ಪದವನ್ನು ಕೇಳಿದಾಗ ಏನಾಗುತ್ತದೆ ಎಂಬುದನ್ನು ಕವಿ ಹೇಳಿದ್ದಾರೆ?

3. ಕೆಳಗೆ ನೀಡಲಾದ ಪದಗಳ ಅರ್ಥವನ್ನು ಬರೆಯಿರಿ.
   1) ಚಾಚು
   2) ಇರುಳು
   3) ಧುಮುಕು
   4) ಮುನಿಯು
   5) ಪೊರೆಯು

4. ಸರಿಯೋ/ತಪ್ಪೋ ಬರೆಯಿರಿ.

1) ಚೆನ್ನಮ್ಮ ಕಿತ್ತೂರಿನಲ್ಲಿ ಜನಿಸಿದಳು.

2) ಬ್ರಿಟಿಷರು ನಮ್ಮ ದೇಶಕ್ಕೆ ಪ್ರವಾಸಕ್ಕಾಗಿ ಬಂದರು.

3) ದನಗಳ ಬಣ್ಣ ಒಂದೇ ಆದರೂ ಹಾಲಿನ ಬಣ್ಣ ಮಾತ್ರ ಬೇರೆ ಬೇರೆ.

4) 'ಕನ್ನಡ' ಎಂಬ ಪದವನ್ನು ಕೇಳಿದಾಗ ಕಿವಿ ನಿಮಿರುತ್ತದೆ.

5. ನಿಮ್ಮ ಶಾಲೆಯಲ್ಲಿ ನಡೆದ ದಿನಾಚರಣೆಯೊಂದರ ಕುರಿತು ವಿವರಣೆ ಬರೆಯಿರಿ.

* * *

# 3. ಹರುಷದ ವರುಷ

ನಾವು ಹಲವಾರು ಹಬ್ಬಗಳನ್ನು ಆಚರಿಸುತ್ತೇವೆ. ಹಬ್ಬಗಳು ನಮ್ಮ ಸಂಸ್ಕೃತಿಯ ಅವಿಭಾಜ್ಯ ಅಂಗಗಳಾಗಿವೆ. ವ್ಯಕ್ತಿ ವ್ಯಕ್ತಿಗಳ ಸಂಬಂಧವನ್ನು ಬೆಸೆದು ಬೆಳೆಸುವಲ್ಲಿ ಹಬ್ಬಗಳು ಪ್ರಧಾನ ಪಾತ್ರ ವಹಿಸುತ್ತಿವೆ. ಪ್ರತಿಯೊಂದು ಹಬ್ಬಕ್ಕೂ ಅದರದ್ದೇ ಆದ ಮಹತ್ವವಿದೆ. ನಮ್ಮ ನಾಡಿನ ಪ್ರಧಾನ ಹಬ್ಬಗಳ ಕುರಿತು ತಿಳಿಯುವುದು, ಅವುಗಳ ಪ್ರಾಧಾನ್ಯ, ಆಚರಣೆಗಳ ಕುರಿತು ತಿಳುವಳಿಕೆ ಮೂಡಿಸುವುದು ಈ ಘಟಕದ ಪ್ರಧಾನ ಉದ್ದೇಶವಾಗಿದೆ.

ಒಂದನೇ ಪಾಠದಲ್ಲಿ ಓಣಂ ಹಬ್ಬದ ಆಚರಣೆ ಮತ್ತು ಹಿನ್ನೆಲೆಯ ಕುರಿತು ವಿವರಗಳನ್ನು ನೀಡಲಾಗಿದೆ. ಕೇರಳದ ರಾಷ್ಟ್ರೀಯ ಹಬ್ಬವಾದ ಓಣಂನಲ್ಲಿ ಎಲ್ಲರೂ ಜಾತಿ, ಮತ, ಭೇದ ಮರೆತು ಒಂದುಗೂಡುತ್ತಾರೆ. ಈ ಹಬ್ಬದ ವಿಶೇಷತೆಗಳನ್ನು ಮಕ್ಕಳಿಗೆ ತಿಳಿಯಪಡಿಸುವುದು ಪಾಠಭಾಗದ ಪ್ರಧಾನ ಉದ್ದೇಶ.

ಎರಡನೇ ಪಾಠದಲ್ಲಿ ಕ್ರೈಸ್ತ ಧರ್ಮೀಯರ ಪ್ರಧಾನ ಹಬ್ಬವಾದ ಕ್ರಿಸ್‌ಮಸ್ ಬಗ್ಗೆ ತಿಳಿಸಲಾಗಿದೆ. ಈ ಹಬ್ಬವನ್ನು ದಶಂಬರ ತಿಂಗಳ 25ನೇ ದಿನಾಂಕದಂದು ಆಚರಿಸುತ್ತಾರೆ. ದಯೆ, ಕರುಣೆ, ಪ್ರೀತಿ ಸೌಹಾರ್ದಗಳನ್ನು ಕ್ರಿಸ್‌ಮಸ್ ಹಬ್ಬವು ಸಾರುತ್ತದೆ.

ಮೂರನೇ ಪಾಠದಲ್ಲಿ ದೀಪಾವಳಿ ಹಬ್ಬಕ್ಕೆ ಸಂಬಂಧಿಸಿದ ಕವಿತೆಯೊಂದನ್ನು ನೀಡಲಾಗಿದೆ. ದೀಪಗಳ ಹಬ್ಬ ದೀಪಾವಳಿ. ಮನುಷ್ಯನು ಅಜ್ಞಾನವೆಂಬ ಕತ್ತಲನ್ನು ಕಳೆದು ಜ್ಞಾನವೆಂಬ ಬೆಳಕಿನೆಡೆಗೆ ಸಾಗುವಂತೆ ಮಾಡುವುದೇ ದೀಪಾವಳಿ ಹಬ್ಬದ ಉದ್ದೇಶ.

ಈ ಘಟಕದ ಕೊನೆಯ ಪಾಠದಲ್ಲಿ ಈದುಲ್‌ಫಿತರ್ ಹಬ್ಬದ ಕುರಿತು ತಿಳಿಸಲಾಗಿದೆ. ಎಲ್ಲರನ್ನೂ ಸಮಾನವಾಗಿ ಕಾಣಬೇಕು. ಇದ್ದವನು ಇಲ್ಲದವನಿಗೆ ಕೊಟ್ಟು ಸಹಾಯ ಮಾಡಬೇಕು ಎಂದು ಇಸ್ಲಾಂ ಧರ್ಮವು ಈ ಹಬ್ಬದ ಮೂಲಕ ಸಾರುತ್ತದೆ.

ಪಾಠದ ಸಂದರ್ಭದಲ್ಲಿ I.C.T. ಯನ್ನು ತರಗತಿಕೋಣೆಯಲ್ಲಿ ಯೋಗ್ಯವಾದ ರೀತಿಯಲ್ಲಿ ಬಳಸಬೇಕು.

**ಕಲಿಕಾ ಸಾಧನೆಗಳು**

- ದೃಶ್ಯಗಳು, ಘಟನೆಗಳು ಮೊದಲಾದವುಗಳನ್ನು ವಿಶ್ಲೇಷಿಸಿ ಸೂಕ್ತವಾದ ಭಾಷೆ, ಉಚ್ಚಾರ ಸ್ಪಷ್ಟತೆಯೊಂದಿಗೆ ಬಾಯ್ದೆರೆಯಾಗಿ ವಿವರಿಸುವುದು.
- ಪದ ಪ್ರಯೋಗಗಳು, ಶೈಲಿಗಳು, ಆಲಿಸಿದ ನೂತನ ಪದಗಳು ಮೊದಲಾದವುಗಳನ್ನು ಸಂದರ್ಭಕ್ಕನು ಗುಣವಾಗಿ ಮಾತುಗಾರಿಕೆಯಲ್ಲಿ ಬಳಸುವುದು.
- ಕಥೆ, ಕವಿತೆ, ಲಘು ಟಿಪ್ಪಣಿಗಳನ್ನು ಆಲಿಸಿ/ಓದಿ ತನ್ನದೇ ಭಾಷೆಯಲ್ಲಿ ಹೇಳುವುದು ಹಾಗೂ ಬರೆಯುವುದು.
- ಚಿತ್ರಗಳು ಹಾಗೂ ದೃಶ್ಯಗಳನ್ನು ನೋಡಿ ಅವುಗಳಿಗೆ ಸೂಕ್ತವಾದ ಶೀರ್ಷಿಕೆ ನೀಡಿ ಯುಕ್ತಿಯುಕ್ತವಾಗಿ ವಿವರಿಸುವುದು, ಅಡಿ ಟಿಪ್ಪಣಿಯನ್ನು ಸೂಚಿಸುವುದು.
- ಕವಿತೆಗಳನ್ನು ಆಲಿಸಿ, ಆಸ್ವಾದಿಸಿ, ಅವುಗಳ ಆಶಯವನ್ನು ಅರ್ಥೈಸಿಕೊಂಡು ರಾಗ, ತಾಳ, ಭಾವಗಳಿಂದ ಹಾಡುವುದು.
- ಸಮಾನ ಪದಗಳು ಮತ್ತು ಸರ್ವನಾಮಗಳನ್ನು ಉಪಯೋಗಿಸಿಕೊಂಡು ಸೃಜನಾತ್ಮಕ ರಚನೆಗಳಾದ, ಲಘುಟಿಪ್ಪಣಿಗಳು, ಸರಳ ಕಥೆಗಳು ಮೊದಲಾದವುಗಳನ್ನು ರಚಿಸುವುದು.
- ನಿರ್ದಿಷ್ಟ ಭಾಷಾವ್ಯವಹಾರ ರೂಪಗಳನ್ನು ಶ್ರೋತೃಗಳಿಗೆ ಆಶಯಸ್ಪಷ್ಟವಾಗುವ ರೀತಿಯಲ್ಲಿ ಉಚ್ಚಾರ ಸ್ಪಷ್ಟತೆಯಿಂದ ಸರಾಗವಾಗಿ ಓದುವುದು.
- ಸರಳ ಕವಿತೆಗಳನ್ನು ರಾಗ, ತಾಳ, ಭಾವದೊಂದಿಗೆ ಹಾಡುವುದು ಹಾಗೂ ಸಮಾನ ರಾಗದಲ್ಲಿ ಹಾಡಬಹುದಾದ ಸಾಲುಗಳನ್ನು ಬರೆಯುವುದು.

# ಯೂನಿಟ್ ಗ್ರಿಡ್ : 3. ಹರುಷದ ವರುಷ

| ಆಶಯಗಳು | ಪ್ರಕ್ರಿಯೆಗಳು | ಕಲಿಕಾ ಸಾಧನೆಗಳು |
|---|---|---|
| **1. ಓಣಂ** | | **ಸಮಯ : 10 ಗಂಟೆಗಳು** |
| • ಓಣಂ ಹಬ್ಬದ ಕುರಿತು, ಆಚರಣೆಯ ರೀತಿ, ವಿಧಾನಗಳ ಕುರಿತು ತಿಳಿಯುವುದು.<br>• ಹಬ್ಬಗಳ ಮಹತ್ವ, ಪ್ರಾಧಾನ್ಯದ ಕುರಿತು ತಿಳಿದುಕೊಳ್ಳುವುದು.<br>• ಟಿಪ್ಪಣಿಯ ಮೂಲಕ ತನ್ನ ಆಶಯಗಳನ್ನು ಇತರರಿಗೆ ಅರ್ಥವಾಗುವ ರೀತಿಯಲ್ಲಿ ಪ್ರಕಟಿಸುವುದು.<br>• ಚಿತ್ರಗಳ ಆಶಯವನ್ನು ಅರ್ಥೈಸಿಕೊಂಡು ಅದಕ್ಕೆ ಯೋಗ್ಯವಾದ ಅಡಿಟಿಪ್ಪಣಿಯನ್ನು ಬರೆಯುವುದು. | • ಓಣಂ ಹಬ್ಬದ ಕುರಿತು ಪದಸೂರ್ಯವನ್ನು ರಚಿಸಿ ಟಿಪ್ಪಣಿ ತಯಾರಿಸುವುದು.<br>• ಚಿತ್ರವನ್ನು ನೋಡಿ ಚಿತ್ರಕ್ಕೆ ಯೋಗ್ಯವಾದ ಅಡಿಟಿಪ್ಪಣಿ ಬರೆದು ಮಂಡಿಸುವುದು.<br>• ಓಣಂ ಹಬ್ಬದ ಸಮಯದಲ್ಲಿ ನಮ್ಮ ಸುತ್ತುಮುತ್ತಲು ಸಾಮಾನ್ಯವಾಗಿ ಕಂಡುಬರುವ ಹೂಗಳನ್ನೂ ಅವುಗಳ ಬಣ್ಣಗಳನ್ನೂ ಬರೆದು ಪಟ್ಟಿ ತಯಾರಿಸುವುದು.<br>• ಪಾಠಭಾಗವನ್ನು ಓದಿ ಕೊಟ್ಟಿರುವ ವಾಕ್ಯಗಳು ಸರಿಯೋ ತಪ್ಪೋ ಎಂದು ಬರೆಯುವುದು.<br>• ಹಬ್ಬಗಳ ಆಚರಣೆಯ ರೀತಿಯ ಕುರಿತು ತಿಳಿದು ಯಾವುದಾದರೂ ಹಬ್ಬದ ಆಚರಣೆಯ ಕುರಿತು ಟಿಪ್ಪಣಿ ತಯಾರಿಸಿ ಮಂಡಿಸುವುದು. | • ನಿರ್ದಿಷ್ಟ ಭಾಷಾ ವ್ಯವಹಾರ ರೂಪಗಳನ್ನು ಶ್ರೋತೃಗಳಿಗೆ ಆಶಯ ಸ್ಪಷ್ಟವಾಗುವ ರೀತಿಯಲ್ಲಿ ಉಚ್ಚಾರ ಸ್ಪಷ್ಟತೆಯಿಂದ ಸರಾಗವಾಗಿ ಓದುವುದು.<br>• ನವೀನ ಪದಗಳು ಮತ್ತು ಸರ್ವನಾಮಗಳನ್ನು ಉಪಯೋಗಿಸಿಕೊಂಡು ಸೃಜನಾತ್ಮಕ ರಚನೆಗಳಾದ ಲಘುಟಿಪ್ಪಣಿಗಳು, ಸರಳಕಥೆಗಳು ಮೊದಲಾದವುಗಳನ್ನು ರಚಿಸುವುದು.<br>• ಚಿತ್ರಗಳು ಹಾಗೂ ದೃಶ್ಯಗಳನ್ನು ನೋಡಿ ಅವುಗಳಿಗೆ ಸೂಕ್ತವಾದ ಶೀರ್ಷಿಕೆ ನೀಡಿ ಯುಕ್ತಿಯುಕ್ತವಾಗಿ ವಿವರಿಸುವುದು ಅಡಿ ಟಿಪ್ಪಣಿಯನ್ನು ಸೂಚಿಸುವುದು. |

| ಆಶಯಗಳು | ಪ್ರಕ್ರಿಯೆಗಳು | ಕಲಿಕಾ ಸಾಧನೆಗಳು |
|---|---|---|
| **2. ಕ್ರಿಸ್‌ಮಸ್** | | **ಸಮಯ : 4 ಗಂಟೆಗಳು** |
| • ಕ್ರಿಸ್‌ಮಸ್ ಹಬ್ಬ, ಹಬ್ಬದ ಆಚರಣೆಯ ಕುರಿತು ತಿಳಿಯುವುದು.<br>• ಕ್ರೈಸ್ತರು ಆಚರಿಸುವ ವಿವಿಧ ಹಬ್ಬಗಳು, ಅವುಗಳ ಹಿನ್ನೆಲೆಗಳ ಕುರಿತು ತಿಳಿಯುವುದು. | • ಪಾಠಭಾಗವನ್ನು ಓದಿ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಗಳನ್ನು ಬರೆದು ಮಂಡಿಸುವುದು.<br>• ಗೋದಲಿಯ ಚಿತ್ರಗಳನ್ನು ವೀಕ್ಷಿಸಿ ಪ್ರತ್ಯೇಕತೆ ತಿಳಿದು ಗೋದಲಿ ನಿರ್ಮಿಸುವುದು ಯಾಕೆ ಎಂದು ಚರ್ಚಿಸಿ ತಿಳಿದು ಅಭಿಪ್ರಾಯಗಳನ್ನು ಬರೆದು ಮಂಡಿಸುವುದು.<br>• ವಿವಿಧ ಹಬ್ಬಗಳ ಚಿತ್ರಗಳನ್ನು ಸಂಗ್ರಹಿಸಿ ಆಲ್ಬಂ ತಯಾರಿಸಿ ಪ್ರದರ್ಶಿಸುವುದು.<br>• ಕ್ರೈಸ್ತ ಧರ್ಮಾವಲಂಬಿಗಳು ಆಚರಿಸುವ ವಿವಿಧ ಹಬ್ಬಗಳ ಪಟ್ಟಿಯನ್ನು ತಯಾರಿಸಿ ಮಂಡಿಸುವುದು. | • ನಿರ್ದಿಷ್ಟ ಭಾಷಾ ವ್ಯವಹಾರ ರೂಪಗಳನ್ನು ಶ್ರೋತೃಗಳಿಗೆ ಆಶಯ ಸ್ಪಷ್ಟವಾಗುವ ರೀತಿಯಲ್ಲಿ ಉಚ್ಚಾರ ಸ್ಪಷ್ಟತೆಯಿಂದ ಸರಾಗವಾಗಿ ಓದುವುದು.<br>• ಪದ ಪ್ರಯೋಗಗಳು ಶೈಲಿಗಳು ಆಲಿಸಿದ ನೂತನ ಪದಗಳು ಮೊದಲಾದವುಗಳನ್ನು ಸಂದರ್ಭಕ್ಕನುಗುಣವಾಗಿ ಮಾತುಗಾರಿಕೆಯಲ್ಲಿ ಬಳಸುವುದು.<br>• ದೃಶ್ಯ ಘಟನೆಗಳು ಮೊದಲಾದವುಗಳನ್ನು ವಿಶ್ಲೇಷಿಸಿ ಸೂಕ್ತವಾದ ಭಾಷೆಯಲ್ಲಿ ಉಚ್ಚಾರ ಸ್ಪಷ್ಟತೆಯೊಂದಿಗೆ ಬಾಯ್ದೆರೆಯಾಗಿ ವಿವರಿಸುವುದು. |
| • ಆಶಯಕ್ಕೆ ಹೊಂದಿಕೊಂಡು ರಾಗ, ತಾಳ ಭಾವಕ್ಕೆ ಯೋಗ್ಯವಾದ ಕವಿತೆಯ ಸಾಲುಗಳನ್ನು ಬರೆಯುವುದು.<br>• ಪತ್ರ ರಚನಾಶೈಲಿಯನ್ನು ತಿಳಿದುಕೊಂಡು ಪತ್ರ ರಚನಾ ಸಾಮರ್ಥ್ಯವನ್ನು ಗಳಿಸುವುದು. | • ಕೊಟ್ಟಿರುವ ಚಿತ್ರವನ್ನು ನಿರೀಕ್ಷಿಸಿ ಪ್ರತ್ಯೇಕತೆಯ ಕುರಿತು ತಿಳಿದು ಪದ್ಯವನ್ನು ಬರೆದು ಮಂಡಿಸುವುದು.<br>• ಅಡಿಗೆರೆ ಎಳೆದ ಪದಗಳ ಬದಲಾಗಿ ಪರ್ಯಾಯ ಪದಗಳನ್ನು ಆವರಣದಿಂದ ಆರಿಸಿ ಬರೆದು ಮಂಡಿಸುವುದು.<br>• ಪತ್ರವನ್ನು ಓದಿ ಅರ್ಥೈಸಿ ಉತ್ತರವಾಗಿ ಪತ್ರವನ್ನು ಬರೆಯುವುದು. | • ಸರಳ ಕವಿತೆಗಳನ್ನು ರಾಗ, ತಾಳ, ಭಾವಗಳೊಂದಿಗೆ ಹಾಡುವುದು ಹಾಗೂ ಸಮಾನರಾಗದಲ್ಲಿ ಹಾಡಬಹುದಾದ ಸಾಲುಗಳನ್ನು ಬರೆಯುವುದು.<br>• ನಿರ್ದಿಷ್ಟ ಭಾಷಾ ವ್ಯವಹಾರ ರೂಪಗಳನ್ನು ಶ್ರೋತೃಗಳಿಗೆ ಆಶಯ ಸ್ಪಷ್ಟವಾಗುವ ರೀತಿಯಲ್ಲಿ ಉಚ್ಚಾರ ಸ್ಪಷ್ಟತೆಯಿಂದ ಸರಾಗವಾಗಿ ಓದುವುದು. |

| ಆಶಯಗಳು | ಪ್ರಕ್ರಿಯೆಗಳು | ಕಲಿಕಾ ಸಾಧನೆಗಳು |
|---|---|---|
| **3. ದೀಪಾವಳಿ** | | **ಸಮಯ : 6 ಗಂಟೆಗಳು** |
| • ಕವಿತೆಯ ರಾಗ, ತಾಳ ಭಾವಗಳನ್ನು ತಿಳಿದುಕೊಂಡು ಉಚ್ಚಾರ ಸ್ಪಷ್ಟತೆಯೊಂದಿಗೆ ಹಾಡುವುದು.<br>• ದೀಪಾವಳಿ ಹಬ್ಬ, ಆಚರಣೆ, ಹಿನ್ನಲೆಯ ಕುರಿತು ತಿಳಿಯುವುದು. | • ಪದ್ಯವನ್ನು ರಾಗ, ತಾಳ, ಭಾವಗಳೊಂದಿಗೆ ಹಾಡುವುದು.<br>• ಹಾಡಿನ ಧ್ವನಿ ಮುದ್ರಿಕೆಯನ್ನು ಆಲಿಸುವುದು.<br>• ಶಬ್ದಕೋಶದ ಸಹಾಯದಿಂದ ನವೀನ ಪದಗಳ ಅರ್ಥಗಳನ್ನು ಕಂಡುಹಿಡಿಯುವುದು.<br>• ಕೊಟ್ಟಿರುವ ಪ್ರಶ್ನೆಗಳಿಗೆ ಪದ್ಯವನ್ನು ಓದಿ ಉತ್ತರಗಳನ್ನು ಬರೆಯುವುದು ಮತ್ತು ಮಂಡಿಸುವುದು.<br>• ಮಾದರಿಯಂತೆ ಪದಗಳನ್ನು ವಿಂಗಡಿಸಿ ಬರೆದು ಮಂಡಿಸುವುದು.<br>• ಪದ್ಯದಲ್ಲಿ ಇಷ್ಟವಾದ ಸಾಲು ಯಾವುದು, ಯಾಕೆ ಎಂದು ಬರೆದು ಮಂಡಿಸುವುದು.<br>• ಪ್ರಾಸ ಪದಗಳ ಪಟ್ಟಿ ತಯಾರಿಸಿ ಮಂಡಿಸುವುದು. | • ಕವಿತೆಗಳನ್ನು ಆಲಿಸಿ ಆಸ್ವಾದಿಸಿ ಅವುಗಳ ಆಶಯವನ್ನು ಅರ್ಥೈಸಿಕೊಂಡು ರಾಗ, ತಾಳ ಭಾವಗಳೊಂದಿಗೆ ಹಾಡುವುದು. |
| • ದೃಶ್ಯಗಳು, ಸನ್ನಿವೇಶಗಳನ್ನು ಅರ್ಥೈಸುವುದು.<br>• ಯೋಗ್ಯವಾದ ಪದಗಳು, ಪದ ಪ್ರಯೋಗಗಳು ಮತ್ತು ಶೈಲಿಗಳನ್ನು ಉಪಯೋಗಿಸಿಕೊಂಡು ಮಾತನಾಡುವುದು. | • ಹಬ್ಬಗಳ ಸಂದರ್ಭದಲ್ಲಿ ಪಟಾಕಿ ಸಿಡಿಸುವಾಗ ವಹಿಸಬೇಕಾದ ಮುಂಜಾಗ್ರತಾ ಕ್ರಮಗಳ ಕುರಿತು ಚರ್ಚಿಸಿ ಅಭಿಪ್ರಾಯ ಮಂಡಿಸುವುದು.<br>• ಪದಗಳನ್ನು ಅರ್ಥ ಪೂರ್ಣವಾಗಿ ಜೋಡಿಸಿ ಪದ್ಯದ ಸಾಲುಗಳನ್ನು ಬರೆಯುವುದು ಮತ್ತು ಮಂಡಿಸುವುದು.<br>• ಕೊಟ್ಟಿರುವ  ವಾಕ್ಯಗಳಿಂದ ಹಬ್ಬಕ್ಕೆ ಸಂಬಂಧಿಸಿದ ವಾಕ್ಯಗಳನ್ನು  ಬರೆದು ಮಂಡಿಸುವುದು. | • ದೃಶ್ಯಗಳು, ಘಟನೆಗಳು ಮೊದಲಾದವುಗಳನ್ನು ವಿಶ್ಲೇಷಿಸಿ ಸೂಕ್ತವಾದ ಭಾಷೆ, ಉಚ್ಚಾರ ಸ್ಪಷ್ಟತೆಯೊಂದಿಗೆ ಬಾಯ್ದೆರೆಯಾಗಿ ವಿವರಿಸುವುದು.<br>• ಪದ ಪ್ರಯೋಗಗಳು, ಶೈಲಿಗಳು ಆಲಿಸಿದ ನೂತನ ಪದಗಳು ಮೊದಲಾದವುಗಳನ್ನು ಸಂದರ್ಭಕ್ಕನುಗುಣವಾಗಿ ಮಾತುಗಾರಿಕೆಯಲ್ಲಿ ಬಳಸುವುದು.<br>• ಕಥೆ, ಕವಿತೆ, ಲಘುಟಿಪ್ಪಣಿಗಳನ್ನು ಆಲಿಸಿ ಓದಿ ತನ್ನದೇ ಭಾಷೆಯಲ್ಲಿ ಹೇಳುವುದು ಹಾಗೂ ಬರೆಯುವುದು. |

| ಆಶಯಗಳು | ಪ್ರಕ್ರಿಯೆಗಳು | ಕಲಿಕಾ ಸಾಧನೆಗಳು |
|---|---|---|
| **4. ಈದುಲ್ ಫಿತರ್** | | **ಸಮಯ : 6 ಗಂಟೆಗಳು** |
| • ಉಚ್ಚಾರ ಸ್ಪಷ್ಟತೆಯೊಂದಿಗೆ ಓದಿ ಆಶಯವನ್ನು ಅರ್ಥೈಸುವುದು.<br>• ಈದುಲ್ ಫಿತರ್ ಹಬ್ಬದ ಆಚರಣೆ, ಪ್ರಾಧಾನ್ಯವನ್ನು ತಿಳಿಯುವುದು.<br>• ಇಸ್ಲಾಂ ಧರ್ಮಾವಲಂಬಿಗಳ ವಿವಿಧ ಹಬ್ಬಗಳ ಕುರಿತು ತಿಳಿಯುವುದು.<br>• ಯೋಗ್ಯವಾದ ಪದಗಳು, ಪದಪ್ರಯೋಗಗಳು ಮತ್ತು ಶೈಲಿಗಳನ್ನು ಉಪಯೋಗಿಸಿಕೊಂಡು ಮಾತನಾಡುವುದು ಹಾಗೂ ಬರೆಯುವುದು. | • ಪಾಠಭಾಗವನ್ನು ಓದಿ ಅರ್ಥೈಸುವುದು ಮತ್ತು ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆದು ಮಂಡಿಸುವುದು.<br>• ಇಸ್ಲಾಂ ಧರ್ಮಾವಲಂಬಿಗಳು ಆಚರಿಸುವ ವಿವಿಧ ಹಬ್ಬಗಳ ಪಟ್ಟಿಯನ್ನು ತಯಾರಿಸಿ ತರಗತಿಯಲ್ಲಿ ಮಂಡಿಸುವುದು.<br>• ಹಬ್ಬಗಳ ಆಚರಣೆಯ ಮಹತ್ವದ ಕುರಿತು ಚರ್ಚಿಸಿ ಟಿಪ್ಪಣಿ ತಯಾರಿಸಿ ಮಂಡಿಸುವುದು.<br>• ಕೊಟ್ಟಿರುವ ಸೂಚನೆಗಳಿಗೆ ಸಂಬಂಧಿಸಿದ ಪದಗಳನ್ನು ಪಾಠಭಾಗದಿಂದ ಆರಿಸಿ ಬರೆದು ಮಂಡಿಸುವುದು.<br>• ಕೋಣೆಗಳಲ್ಲಿರುವ ಹಬ್ಬಗಳ ಹೆಸರುಗಳನ್ನು ಬರೆದು ಮಂಡಿಸುವುದು. | • ನಿರ್ದಿಷ್ಟ ಭಾಷಾ ವ್ಯವಹಾರ ರೂಪಗಳನ್ನು ಶ್ರೋತೃಗಳಿಗೆ ಆಶಯ ಸ್ಪಷ್ಟವಾಗುವ ರೀತಿಯಲ್ಲಿ ಉಚ್ಚಾರ ಸ್ಪಷ್ಟತೆಯಿಂದ ಸರಾಗವಾಗಿ ಓದುವುದು.<br>• ಕಥೆ, ಕವಿತೆ, ಲಘುಟಿಪ್ಪಣಿಗಳನ್ನು ಆರಿಸಿ/ ಓದಿ ತನ್ನದೇ ಭಾಷೆಯಲ್ಲಿ ಹೇಳುವುದು ಹಾಗೂ ಬರೆಯುವುದು. |
| • ಚಿತ್ರದ ಆಶಯವನ್ನು ತಿಳಿದು ಕಥೆಯನ್ನು ಬರೆಯುವುದು.<br>• ಚಿತ್ರವನ್ನು ನಿರೀಕ್ಷಣೆ ಮಾಡಿ ಘಟನೆಗಳನ್ನು ವಿಶ್ಲೇಷಿಸಿ ಸೂಕ್ತವಾದ ಭಾಷೆಯನ್ನು ಉಪಯೋಗಿಸಿ ಬರೆದು ಮಂಡಿಸುವುದು. | • ಕೊಟ್ಟಿರುವ ಚಿತ್ರವನ್ನು ವಿಶ್ಲೇಷಿಸಿ ಘಟನೆಗಳಿಗೆ ಅನುಸಾರವಾಗಿ ಕಥೆಯನ್ನು ಬರೆದು ಮಂಡಿಸುವುದು. | • ಭಾಷಾ ವ್ಯವಹಾರರೂಪಗಳನ್ನು ಬೇರೆ ಬೇರೆ ರೀತಿಯಲ್ಲಿ ರೂಪಾಂತರಿಸುವುದು.<br>• ತನ್ನ ಆಶಯಗಳನ್ನು ತಪ್ಪಿಲ್ಲದೆ ಸೂಕ್ತ ವ್ಯವಹಾರ ರೂಪದಲ್ಲಿ ಬರೆಯುವುದು. |

# ಓಣಂ

❑ **ಪಾಠಭಾಗದೆಡೆಗೆ**

ನಾವು ಆಚರಿಸುವ ಪ್ರಧಾನ ಹಬ್ಬಗಳು ಯಾವುವು?

ಓಣಂ ಹಬ್ಬಕ್ಕೆ ಸಂಬಂಧಿಸಿದ ಚಿತ್ರ / ವೀಡಿಯೋವನ್ನು ಮಕ್ಕಳು ವೀಕ್ಷಿಸಲಿ. ಅನಂತರ ಇದರ ಬಗ್ಗೆ ತರಗತಿಯಲ್ಲಿ ಚರ್ಚೆ ನಡೆಸಲಿ. ಚರ್ಚೆಯಲ್ಲಿ ಈ ಕೆಳಗಿನ ಪ್ರಶ್ನೆಗಳನ್ನು ಕೇಳಬಹುದು.

- ವೀಡಿಯೋದಲ್ಲಿ ಯಾವ ಹಬ್ಬದ ಕುರಿತು ಹೇಳಲಾಗಿದೆ. ನೀವು ಓಣಂ ಹಬ್ಬವನ್ನು ಆಚರಿಸಿದ್ದೀರಾ? ಹೇಗೆ ಆಚರಿಸಿದ್ದೀರಿ?
- ಓಣಂ ಹಬ್ಬದ ಸಂದರ್ಭದಲ್ಲಿ ಆಡುವ ಆಟಗಳು ಯಾವುವು?
- ಓಣಂ ಹಬ್ಬದ ಕುರಿತು ನಿಮಗೆ ತಿಳಿಯಬೇಕಲ್ಲವೇ? ನಾವು ಅದರ ಕುರಿತು ತಿಳಿಯುವ.

❑ **ಓದುವ**

ಪಾಠಭಾಗವನ್ನು ಮಕ್ಕಳು ವೈಯಕ್ತಿಕವಾಗಿ ಓದಲಿ. ಅನಂತರ ಆಶಯ ರೂಪೀಕರಣಕ್ಕಾಗಿ ಕೆಲವು ಪ್ರಶ್ನೆಗಳನ್ನು ಕೇಳುವುದು.

- ಓಣಂ ಹಬ್ಬವನ್ನು ಯಾವಾಗ ಆಚರಿಸುತ್ತಾರೆ?
- ಓಣಂನ ವಿಶೇಷ ಆಕರ್ಷಣೆ ಏನು?

ಅನಂತರ ಅಧ್ಯಾಪಕರು ಪಾಠಭಾಗವನ್ನು ಓದುವುದು. ಬಳಿಕ ವೀಡಿಯೋ ಹಾಗೂ ಓದಿದ ಪಾಠಭಾಗಕ್ಕೆ ಸಂಬಂಧಿಸಿ ಚರ್ಚಿಸಿ ಆಶಯಗಳನ್ನು ಕ್ರೋಡೀಕರಿಸುವುದು. ಬಳಿಕ ಮಕ್ಕಳು ನವೀನ ಪದಗಳ ಅರ್ಥಗಳನ್ನು ತಿಳಿದು ಸರಾಗವಾಗಿ ಓದಲಿ. ಕಥೆಯನ್ನು ತಮ್ಮದೇ ರೀತಿಯಲ್ಲಿ ಹೇಳಲಿ.

## ಚಟುವಟಿಕೆಗಳು

❑ **ಉತ್ತರಿಸಿರಿ**

ಪಾಠಪುಸ್ತಕದಲ್ಲಿ ನೀಡಲಾದ ಪ್ರಶ್ನೆಗಳಿಗೆ ಮಕ್ಕಳು ವೈಯಕ್ತಿಕವಾಗಿ ಉತ್ತರಗಳನ್ನು ಬರೆಯಲಿ. ಕೆಲವರು ಮಂಡಿಸಲಿ. ಬಳಿಕ ಗುಂಪಿನಲ್ಲಿ ಉತ್ತರಗಳನ್ನು ಸರಿಪಡಿಸಿ ಮಂಡಿಸಲಿ. ಅಧ್ಯಾಪಕರು ಸರಿಯಾದ ಉತ್ತರಗಳನ್ನು ಕರಿಹಲಗೆಯಲ್ಲಿ ಬರೆಯುವುದು. ಇದರ ಆಧಾರದಲ್ಲಿ ಮಕ್ಕಳು ತಾವು ಬರೆದ ಉತ್ತರಗಳನ್ನು ಉತ್ತಮಪಡಿಸಲಿ. ಅಧ್ಯಾಪಕರು ಮೌಲ್ಯ ನಿರ್ಣಯ ಮಾಡುವುದು.

❑ **ಪದಸೂರ್ಯ ಬರೆಯುವ**

ಒಂದು ಆಶಯಕ್ಕೆ ಸಂಬಂಧಿಸಿದಂತೆ ಹಲವಾರು ಉಪ ಆಶಯಗಳಿರುತ್ತವೆ. ಕೇಂದ್ರ ಆಶಯವನ್ನು ನೀಡಿದಾಗ ಉಪಆಶಯಗಳನ್ನು ಕಂಡುಕೊಂಡರೆ ಆಶಯ ಹೆಚ್ಚು ಸ್ಪಷ್ಟವಾಗುತ್ತದೆ. ಇದಕ್ಕೆ ಸಹಾಯಕವಾಗುವಂತೆ ಪದಸೂರ್ಯ ಬರೆಯುವ ಚಟುವಟಿಕೆ ನೀಡಲಾಗಿದೆ. ಮಕ್ಕಳು ವೈಯಕ್ತಿಕವಾಗಿ ಪದಸೂರ್ಯವನ್ನು ಪೂರ್ತಿಗೊಳಿಸಲಿ. ಕೆಲವರು ಮಂಡಿಸಲಿ. ಬಳಿಕ ಅಧ್ಯಾಪಕರ ಸಹಾಯದಿಂದ ಪದಸೂರ್ಯವನ್ನು ಬೆಳೆಸುವುದು.

❑ **ವಿವರಣೆ ಬರೆಯುವ**

ಪದಸೂರ್ಯದ ಆಧಾರದಲ್ಲಿ ಮಕ್ಕಳು

ವೈಯಕ್ತಿಕವಾಗಿ ಓಣಂ ಹಬ್ಬದ ಕುರಿತು ವಿವರಣೆಯನ್ನು ತಯಾರಿಸಲಿ. ಕೆಲವರು ಮಂಡಿಸಲಿ. ಅನಂತರ ಗುಂಪಿನಲ್ಲಿ ಉತ್ತಮಪಡಿಸಲಿ. ಬಳಿಕ ಗುಂಪಿನ ಮಂಡನೆ ನಡೆಯಲಿ. ಮೌಲ್ಯ ನಿರ್ಣಯ ಸೂಚಕಗಳನ್ನು ಕಂಡುಕೊಳ್ಳಲಿ

- ಯಾರು ಬರೆದ ವಿವರಣೆ ಉತ್ತಮ?
- ಯಾಕೆ?
- ಚರ್ಚೆಯ ಮೂಲಕ ಮೌಲ್ಯ ನಿರ್ಣಯ ಸೂಚಕಗಳನ್ನು ಕಂಡುಕೊಳ್ಳುವುದು. ಅದರ ಆಧಾರದಲ್ಲಿ ಮಕ್ಕಳು ತಮ್ಮ ರಚನೆಯನ್ನು ಉತ್ತಮ ಪಡಿಸಲಿ.

## ❑ ಅಡಿ ಟಿಪ್ಪಣಿ ಬರೆಯಿರಿ.

**ಅಡಿಟಿಪ್ಪಣಿಯ ವಿಶೇಷತೆಗಳು**

ಚಿಂತನೆಯ ಮೂಲಕ ಚಿತ್ರವನ್ನು ವೀಕ್ಷಿಸಿ ವಿಶಾಲವಾದ ಆಶಯವನ್ನು ಚುಟುಕಾಗಿ ಹಾಗೂ ಸೃಜನಾತ್ಮಕವಾಗಿ

ಬರೆಯುವ ಸಾಮರ್ಥ್ಯವನ್ನು ಮಕ್ಕಳಲ್ಲಿ ಬೆಳೆಸುವ ಉದ್ದೇಶದಿಂದ ಈ ಚಟುವಟಿಕೆಯನ್ನು ನೀಡಲಾಗಿದೆ.

- ಮಕ್ಕಳು ಚಿತ್ರವನ್ನು ಸೂಕ್ಷ್ಮವಾಗಿ ಗಮನಿಸಲಿ. ಬಳಿಕ ಚಿತ್ರಕ್ಕೆ ಸಂಬಂಧಿಸಿದಂತೆ ಅಧ್ಯಾಪಕರು ಕೆಲವು ಪ್ರಶ್ನೆಗಳನ್ನು ಕೇಳುವುದು.
- ಚಿತ್ರದಲ್ಲಿ ಏನಿದೆ?
- ಕೊಡೆ ಹಿಡಿದು ಬರುತ್ತಿರುವವರು ಯಾರು?
- ಮನೆಯ ಮುಂದೆ ಏನಿದೆ?
- ಈ ರೀತಿಯ ಪ್ರಶ್ನೆಗಳ ಮೂಲಕ ಚಿತ್ರದ ಆಶಯವನ್ನು ಸ್ಪಷ್ಟಪಡಿಸುವುದು.
- ಅಡಿಟಿಪ್ಪಣಿಗೆ ಸಂಬಂಧಿಸಿದ ಮಾಹಿತಿಗಳನ್ನು ಅಧ್ಯಾಪಕರು ನೀಡುವುದು.
- ಆಶಯ, ಭಾವನೆಗಳನ್ನೊಳಗೊಂಡ ಪದ, ವಾಕ್ಯಗಳು,
- ಸಂಕ್ಷಿಪ್ತತೆ

**ಅಡಿಟಿಪ್ಪಣಿಗಳು**

- ಹಬ್ಬದ ಸಡಗರ ಎಲ್ಲೆಲ್ಲೂ ಸಂತಸ ತುಂಬಿದೆ ಮನದಲ್ಲಿ.
- ಮಹಾಬಲಿಯನು ಸ್ವಾಗತಗೈಯಲು ಅಂದದ ಪೂವಲಿ ಕಾದಿಹುದು.

## ❑ ಹೆಸರು ಬರೆಯುವ

ಓಣಂ ಹಬ್ಬದ ಸಂದರ್ಭದಲ್ಲಿ ನಮ್ಮ ಸುತ್ತಮುತ್ತಲು ಕಂಡುಬರುವ ಹೂಗಳ ಹೆಸರುಗಳನ್ನೂ ಅವುಗಳ ಬಣ್ಣವನ್ನೂ ಮಕ್ಕಳು ಬರೆಯಲಿ. ಅನಂತರ ಪ್ರತಿಯೊಬ್ಬರೂ ಮಂಡಿಸಲಿ. ಅದನ್ನು ಅಧ್ಯಾಪಕರು ಕರಿಹಲಗೆಯಲ್ಲಿ ಬರೆಯುವುದು. ಅದರ ಆಧಾರದಲ್ಲಿ ಮಕ್ಕಳು ಪಟ್ಟಿಯನ್ನು ಇನ್ನಷ್ಟು ಬೆಳೆಸಲಿ.

| | | |
|---|---|---|
| ತುಂಬೆ | – | ಬಿಳಿ |
| ಕೇಪುಳ | – | ಕೆಂಪು |
| ಮಂದಾರ | – | ಬಿಳಿ |
| ಸೇವಂತಿಗೆ | – | ಹಳದಿ |

ಮಕ್ಕಳು ತಮ್ಮ ಮನೆಯ ಪರಿಸರದಲ್ಲಿ ಇರುವ ಹೂಗಳನ್ನು ಸಂಗ್ರಹಿಸಿ ತರಲಿ. ಬಳಿಕ ಸಂಗ್ರಹಿಸಿ ತಂದ ಹೂಗಳಿಂದ ಅಂದವಾದ ಪೂವಲಿ ರಚಿಸಲಿ.

## ❑ ಪಟ್ಟಿ ತಯಾರಿಸಿರಿ

ನಾವು ಹಲವಾರು ಹಬ್ಬಗಳನ್ನು ಆಚರಿಸುತ್ತೇವೆ. ಮಕ್ಕಳು ತಮ್ಮ ಊರಿನಲ್ಲಿ ಆಚರಿಸುವ ಹಬ್ಬಗಳ ಪಟ್ಟಿಯನ್ನು ವೈಯಕ್ತಿಕವಾಗಿ ತಯಾರಿಸಲಿ. ಆ ಪಟ್ಟಿಯನ್ನು ಮಂಡಿಸಲಿ. ಮಂಡಿಸಿದುದನ್ನು ಅಧ್ಯಾಪಕರು ಕರಿ ಹಲಗೆಯಲ್ಲಿ ಬರೆಯುವುದು. ಮಕ್ಕಳು ತಮ್ಮ ಪಟ್ಟಿಯನ್ನು ವಿಸ್ತಾರಗೊಳಿಸಲಿ.

## ❑ ಸರಿಯೋ ತಪ್ಪೋ ಬರೆಯುವ

ಪಠ್ಯ ಪುಸ್ತಕದಲ್ಲಿ ನೀಡಲಾದ ವಾಕ್ಯಗಳನ್ನು ಮಕ್ಕಳು ವೈಯಕ್ತಿಕವಾಗಿ ಓದಲಿ. ತಪ್ಪಾದ ಆಶಯಗಳಿರುವ ವಾಕ್ಯಗಳನ್ನು ಕಂಡುಕೊಳ್ಳಲಿ. ಆ ವಾಕ್ಯಗಳನ್ನು ಸರಿಪಡಿಸಿ ಬರೆಯಲಿ. ಗುಂಪಿನಲ್ಲಿ ಚರ್ಚಿಸಿ ಸರಿಪಡಿಸಿ ಬರೆಯಲಿ. ಗುಂಪಿನ ಮಂಡನೆ ನಡೆಯಲಿ. ಅನಂತರ ಅಧ್ಯಾಪಕರು ಸರಿಯಾದ ವಾಕ್ಯಗಳನ್ನು ಬರೆಯುವುದು.

## ❑ ವಿವರಣೆ ತಯಾರಿ

ನಾವು ನಮ್ಮ ಮನೆಗಳಲ್ಲಿ ಸಾಮಾನ್ಯವಾಗಿ ಆಚರಿಸುವ ಹಬ್ಬಗಳು ಯಾವುವು?

ಮಕ್ಕಳಲ್ಲಿ ಪ್ರಶ್ನೆಗಳನ್ನು ಕೇಳಿ ಅವರು ಹೇಳಿದ ಉತ್ತರಗಳನ್ನು ಕರಿಹಲಗೆಯಲ್ಲಿ ಬರೆಯುವುದು.

ಮಕ್ಕಳು ತಾವು ಹೇಳಿದ ಹಬ್ಬಗಳ ಆಚರಣೆಯ ರೀತಿಯನ್ನು ಹೇಳಲಿ. ಇದಕ್ಕೆ ಪೂರಕ ಪ್ರಶ್ನೆಗಳನ್ನು ಅಧ್ಯಾಪಕರು ಕೇಳುವುದು.

ವಿದ್ಯಾರ್ಥಿಗಳನ್ನು ಗುಂಪುಗಳಾಗಿ ಮಾಡುವುದು.

ಪ್ರತಿಗುಂಪಿಗೂ ಒಂದೊಂದು ಹಬ್ಬದ ಕುರಿತು ಬರೆಯಲು ಹೇಳುವುದು.

ವಿದ್ಯಾರ್ಥಿಗಳು ಗುಂಪಿನಲ್ಲಿ ಚರ್ಚಿಸಿ ವೈಯಕ್ತಿಕವಾಗಿ ಬರೆಯಲಿ. ಬರೆದುದನ್ನು ಗುಂಪಿನಲ್ಲಿ ಮಂಡಿಸಲಿ. ಗುಂಪಿನಲ್ಲಿ ಉತ್ತಮವಾದುದನ್ನು ಆಯ್ಕೆ ಮಾಡಿ ಮಂಡಿಸಲಿ. ಯಾವ ಗುಂಪು ಮಂಡಿಸಿದ್ದು ಉತ್ತಮವಾಗಿದೆ? ಯಾಕೆ? ಅಧ್ಯಾಪಕರ ಸಹಾಯದಿಂದ ಮೌಲ್ಯ ನಿರ್ಣಯ ಸೂಚಕಗಳನ್ನು ಕಂಡುಕೊಂಡು ಮೌಲ್ಯ ನಿರ್ಣಯ ಮಾಡಲಿ. ಅದರ ಆಧಾರದಲ್ಲಿ ತಮ್ಮ ಬರವಣಿಗೆಯನ್ನು ಉತ್ತಮ ಪಡಿಸಲಿ. ಅಧ್ಯಾಪಕರು ಬರೆದ ವಿವರಣೆಯನ್ನು ಪ್ರದರ್ಶಿಸುವುದು. ವಿದ್ಯಾರ್ಥಿಗಳು ತಾವು ಬರೆದ ವಿವರಣೆಯನ್ನು ಉತ್ತಮಪಡಿಸಿ, ಹಸ್ತಪತ್ರಿಕೆಯಲ್ಲಿ ಪ್ರಕಟಿಸಲಿ.

## ಕ್ರಿಸ್‌ಮಸ್

ವಿವಿಧ ಧರ್ಮಾವಲಂಬಿಗಳು ಆಚರಿಸುವ ಹಬ್ಬಗಳ ಚಿತ್ರಗಳನ್ನು ನೋಡುವುದು. ಅನಂತರ ವೀಕ್ಷಿಸಿದ ಚಿತ್ರದ ಬಗ್ಗೆ ಅನೌಪಚಾರಿಕ ಚರ್ಚೆ ನಡೆಸಲಿ. ಅದರ ಆಧಾರದಲ್ಲಿ ಕೆಲವು ಪ್ರಶ್ನೆಗಳನ್ನು ಕೇಳುವುದು.

- ಇದರಲ್ಲಿ ಯಾವ ಯಾವ ಹಬ್ಬಗಳಿವೆ?
- ನಿಮ್ಮ ಮನೆಗಳಲ್ಲಿ ಈ ಹಬ್ಬವನ್ನು ಆಚರಿಸುತ್ತಾರೆಯೇ?
- ಪ್ರಶ್ನೆಗಳ ಮೂಲಕ ಪ್ರತಿಯೊಂದು ಧರ್ಮದವರಿಗೂ ಅವರದ್ದೇ ಆದ ಹಬ್ಬಗಳ ಆಚರಣೆಗಳಿವೆ ಎಂಬುದನ್ನು ತಿಳಿಯಪಡಿಸುವುದು. ಪಠ್ಯಭಾಗವನ್ನು

ವಿದ್ಯಾರ್ಥಿಗಳು ವೈಯಕ್ತಿಕವಾಗಿ ಓದಲಿ. ಓದಿನಲ್ಲಿ ಹಿಂದುಳಿದ ಮಕ್ಕಳಿಗೆ ಅಗತ್ಯವಾದ ಸಹಾಯ ನೀಡುವುದು. ಅಧ್ಯಾಪಕರು ಪಾಠಭಾಗವನ್ನು ಸ್ವರಭಾರದೊಂದಿಗೆ ಓದುವುದು.

❑ **ಭಾಷಾಆಟ**

ಪಾಠಭಾಗವನ್ನು ಓದಲು ಮಕ್ಕಳಿಗೆ ಹೆಚ್ಚಿನ ಆಸಕ್ತಿಯನ್ನುಂಟು ಮಾಡುವ ಉದ್ದೇಶದಿಂದ ಈ ಚಟುವಟಿಕೆಯನ್ನು ನೀಡಲಾಗಿದೆ. ಆರಂಭದಲ್ಲಿ ಮಕ್ಕಳನ್ನು ಗುಂಪುಗಳಾಗಿ ಮಾಡುವುದು. ಒಂದು ಗುಂಪಿನವರು ಪಾಠಭಾಗದಲ್ಲಿ ಬರುವ ಯಾವುದಾದರೂ ಒಂದು ಪದವನ್ನು ಓದಿ ಹೇಳುವುದು. ಇನ್ನೊಂದು ಗುಂಪಿನವರು ಆ ಪದ ಇರುವ ವಾಕ್ಯವನ್ನು ನಿರ್ದಿಷ್ಟ ಸಮಯದ ಒಳಗೆ ಕಂಡುಹಿಡಿದು ಓದುವುದು. ಹೀಗೆ ಚಟುವಟಿಕೆ ಮುಂದುವರಿಯಲಿ. ಹೆಚ್ಚು ಅಂಕಗಳನ್ನು ಪಡೆದ ಗುಂಪನ್ನು ಅಭಿನಂದಿಸುವುದು.

❑ **ಉತ್ತರಿಸಿರಿ**

ಪಠ್ಯಭಾಗದಲ್ಲಿ ನೀಡಲಾದ ಪ್ರಶ್ನೆಗಳಿಗೆ ಸರಿಯಾದ ಉತ್ತರಗಳನ್ನು ಕಂಡು ಹಿಡಿದು ಬರೆಯಲಿ. ಅಧ್ಯಾಪಕರು ಮೌಲ್ಯ ನಿರ್ಣಯ ಮಾಡಿ ಅಗತ್ಯ ಸಲಹೆ ನೀಡುವುದು.

❑ **ಚರ್ಚಿಸುವ**

ಪ್ರತಿಯೊಂದು ಹಬ್ಬಕ್ಕೂ ಅದರದೇ ಆದ ಕೆಲವು ವಿಶಿಷ್ಟ ಆಚರಣೆಗಳಿವೆ. ಅವುಗಳು ಹಬ್ಬಗಳ ಪ್ರಧಾನ ಭಾಗಗಳಾಗಿವೆ. ಅದಕ್ಕೆ ಅದರದ್ದೇ ಆದ ಪೌರಾಣಿಕ ಹಿನ್ನೆಲೆ ಇರುತ್ತದೆ.

ಉದಾ:

ದೀಪಾವಳಿ – ಬಲೀಂದ್ರ ಹಾಕುವುದು, ಕ್ರಿಸ್‌ಮಸ್ – ಗೋದಲಿ ನಿರ್ಮಿಸುವುದು

ಪ್ರತಿಯೊಂದು ಹಬ್ಬಕ್ಕೂ ಅದರದ್ದೇ ಆದ ಆಚರಣೆಗಳಿವೆ ಎಂಬುದನ್ನು ಮನವರಿಕೆ ಮಾಡುವಂತೆ ತರಗತಿಯಲ್ಲಿ ಚರ್ಚೆ ನಡೆಸಬೇಕು. ಬಲೀಂದ್ರ ಹಾಕುವ ಆಚರಣೆಯ ಕುರಿತು ಚರ್ಚಿಸುವುದು. ಗೋದಲಿಯನ್ನು ನಿರ್ಮಿಸುವ ಬಗ್ಗೆ ಚರ್ಚಿಸುವುದು. ಅಧ್ಯಾಪಕರು ಅಗತ್ಯವಿರುವ ಮಾಹಿತಿಗಳನ್ನು ನೀಡುವುದು.

❑ **ಆಲ್ಬಂ ತಯಾರಿ**

ವಿವಿಧ ಧರ್ಮಗಳಿಗೆ ಸಂಬಂಧಿಸಿದ ಹಬ್ಬಗಳ ಮತ್ತು ಆಚರಣೆಗಳ ಚಿತ್ರಗಳನ್ನು ಪತ್ರಿಕೆ ಮತ್ತು ಇತರ ಪುಸ್ತಕಗಳಿಂದ ಸಂಗ್ರಹಿಸಲಿ. ಸಂಗ್ರಹಿಸಿದ ಚಿತ್ರಗಳನ್ನು ವಿಷಯಾಧಾರಿತವಾಗಿ ಅಂಟಿಸಿ ಆಲ್ಬಂ ತಯಾರಿಸಲಿ. ಅಧ್ಯಾಪಕರು ಸೂಕ್ತವಾದ ಮಾರ್ಗದರ್ಶನ ನೀಡುವುದು.

❑ **ಪಟ್ಟಿ ತಯಾರಿ**

ವಿದ್ಯಾರ್ಥಿಗಳು ಕ್ರೈಸ್ತ ಧರ್ಮಕ್ಕೆ ಸಂಬಂಧಿಸಿದ ಹಬ್ಬಗಳ ಹೆಸರನ್ನು ಹೇಳಲಿ. ಅಧ್ಯಾಪಕರು ಅದನ್ನು ಕರಿಹಲಗೆಯಲ್ಲಿ ಬರೆಯುವುದು. ಇತರ ಮೂಲಗಳಿಂದ ಮಾಹಿತಿಗಳನ್ನು ಸಂಗ್ರಹಿಸಿ ಪಟ್ಟಿಯನ್ನು ಬೆಳೆಸುವುದು. ಮಕ್ಕಳು ತಮ್ಮ ಅಭ್ಯಾಸ ಪುಸ್ತಕದಲ್ಲಿ ಬರೆಯಲಿ.

❑ **ಪದ್ಯ ರಚಿಸುವ ಶೀರ್ಷಿಕೆ ನೀಡುವ**

ಮಕ್ಕಳು ಕೊಟ್ಟಿರುವ ಚಿತ್ರವನ್ನು ನೋಡಲಿ. ಈ ಚಿತ್ರ ಯಾವ ಹಬ್ಬಕ್ಕೆ ಸಂಬಂಧಿಸಿದ್ದು ಎಂದು ಹೇಳಲಿ. ಇದು ಅಷ್ಟಮಿ ಹಬ್ಬದಂದು ನಡೆಸುವ ಮೊಸರುಕುಡಿಕೆಯ ಚಿತ್ರವಾಗಿದೆ. ಅಷ್ಟಮಿಗೆ ಸಂಬಂಧಿಸಿದಂತೆ ಪದ್ಯವನ್ನು ರಚಿಸಿ

ಸೂಕ್ತ ಶೀರ್ಷಿಕೆಯನ್ನು ನೀಡಲಿ. ಪದ್ಯ ರಚನೆಗೆ ಅಗತ್ಯವಾದ ಚರ್ಚೆಯನ್ನು ತರಗತಿಯಲ್ಲಿ ನಡೆಸುವುದು. ಸೂಕ್ತ ನಿರ್ದೇಶನಗಳನ್ನು ಚಟುವಟಿಕೆಯ ಸಂದರ್ಭದಲ್ಲಿ ಅಧ್ಯಾಪಕರು ನೀಡುವುದು.

## ಶ್ರಮಕ್ಕೆ ಸಿಕ್ಕ ಫಲ

ಮೊಸರು ಕುಡಿಕೆ ಕಂಬ ಒಂದು
ಬಯಲಲಿರುವುದನ್ನು ಕಂಡು
ಗೋಪಿ ನಾಣಿ ಗೆಳೆಯರೊಡನೆ ಅಲ್ಲಿ ಬಂದರು.
ಅಲ್ಲಿ ನೋಡಲೇನು ಚಂದ
ಜಾರುತಿರುವ ಜಿಡ್ಡು ಕಂಬ
ಅದರ ತುದಿಯಲೊಂದು ಮೊಸರು ಕುಡಿಕೆಯಿದ್ದಿತು
ಸುತ್ತ ನೆರೆದ ಜನರ ಕೇಕೆ
ಏರುವವಗೆ ಬೇರೆ ಬೇರೆ
ಹುರುಪುಗೊಂಡು ಮೇಲೆ ಮೇಲೆ ಏರುತಿದ್ದರು
ಏರಿದವನು ಜಾರಬೇಕು
ಜಾರಿದವನು ಏರಬೇಕು
ಎಂಬ ಲೋಕ ನೀತಿಯನ್ನು ಸಾರುತಿದ್ದರು
ಅವರಲೊಬ್ಬ ಕಂಬವೇರಿ
ಹರುಷದಿಂದ ನಗೆಯಬೀರಿ
ಮೊಸರು ಕುಡಿಕೆಯನ್ನು ಎತ್ತಿ ಒಡೆದೆ ಬಿಟ್ಟನು
ನೆರೆದ ಜನರು ಕೈಯ ತಟ್ಟಿ
ಕೇಕೆ ಹಾಕುತಿರಲು ಗಟ್ಟಿ
ಕೈಯ ಬೀಸುತವನು ಕೆಳಗೆ ಇಳಿದು ಬಿಟ್ಟನು
ಮುಂದೆ ನಡೆದು ಛಲವ ಬಿಡದೆ
ಕೆಲಸ ಮಾಡದೆಮಗೆ ಸಿಗದು
ದೇವ ಕೊಡುವ ಫಲವು ಇದನು ತಿಳಿಯಿರೆಂದನು

## ❑ ವಾಕ್ಯ ಬರೆಯುವ

ಪಾಠಭಾಗದಲ್ಲಿ ನೀಡಲಾದ ವಾಕ್ಯವನ್ನು ಮಕ್ಕಳು ವೈಯಕ್ತಿಕವಾಗಿ ಓದಲಿ. ವಾಕ್ಯಗಳನ್ನು ಓದುವ ಮೂಲಕ ಪದಗಳ ಅರ್ಥವನ್ನು ತಿಳಿದುಕೊಳ್ಳಲಿ. ಅಗತ್ಯವಿದ್ದರೆ ಅರ್ಥಕೋಶವನ್ನು ಬಳಸಿಕೊಳ್ಳಲಿ. ಅಡಿಗೆರೆ ಎಳೆದ ಪದಗಳ ಅರ್ಥಗಳನ್ನು ಆವರಣದಲ್ಲಿ ನೀಡಿದ ಅರ್ಥಗಳೊಂದಿಗೆ ಹೋಲಿಸಲಿ. ಈ ಪದಗಳನ್ನುಪಯೋಗಿಸಿ ವಿವಿಧ ವಾಕ್ಯಗಳನ್ನು ಬಾಯ್ದೆರೆಯಾಗಿ ಮಕ್ಕಳು ಹೇಳಲಿ. ಮಕ್ಕಳು ವೈಯಕ್ತಿಕವಾಗಿ ಗದ್ಯವನ್ನು ಪೂರ್ತಿಗೊಳಿಸಲಿ. ಆಯ್ದ ಕೆಲವರಿಂದ ಮಂಡನೆ. ಗುಂಪಿನಲ್ಲಿ ಪರಸ್ಪರ ಮಂಡಿಸಿ ವಾಕ್ಯಗಳು ತಪ್ಪಿದ್ದರೆ ಸರಿಪಡಿಸಿ ಬರೆಯಲಿ. ಗುಂಪಿನ ಮಂಡನೆ. ಅಗತ್ಯವಿದ್ದರೆ ಅಧ್ಯಾಪಕರು ತಿದ್ದುಪಡಿ ಮಾಡಿ ಸರಿಪಡಿಸುವುದು.

## ❑ ಪತ್ರ ಬರೆಯುವ

ಸವಿತ ರಾಹುಲ್‌ಗೆ ಬರೆದ ಪತ್ರವನ್ನು ಮಕ್ಕಳು ಓದಲಿ. ಅದರಲ್ಲಿ ಹೇಳಿದ ವಿಷಯಗಳೇನೆಂದು ಮಕ್ಕಳಲ್ಲಿ ಚರ್ಚಿಸುವುದು.

ಪತ್ರ ರಚನೆಯ ಸಂದರ್ಭದಲ್ಲಿ ಗಮನಿಸಬೇಕಾದ ವಿಚಾರಗಳೇನು?

ಸ್ಥಳ

ದಿನಾಂಕ

ಸಂಬೋಧನೆ

ವಿಷಯ

ಮುಕ್ತಾಯ

ಹಸ್ತಾಕ್ಷರ–ಸಹಿ

ಸವಿತ ಬರೆದ ಪತ್ರವನ್ನು ಓದಿದ ರಾಹುಲ್ ಅವಳಿಗೆ ಪತ್ರವನ್ನು ಬರೆದನು. ಅದು ಹೇಗಿರಬಹುದು? ಚರ್ಚಿಸಿ ಮಕ್ಕಳು ಪತ್ರ ಬರೆಯಲಿ. ತರಗತಿಯಲ್ಲಿ ಮಂಡಿಸಲಿ. ಗುಂಪಿನಲ್ಲಿ ಸರಿಪಡಿಸಿ ಉತ್ತಮವಾದುದನ್ನು ಮಂಡಿಸಲಿ. ಉತ್ತಮವಾದ ಪತ್ರ ಯಾವುದು? ಯಾಕೆ? ಮಕ್ಕಳು ಸೂಚಕಗಳ ಆಧಾರದಲ್ಲಿ ತಮ್ಮ ಪತ್ರವನ್ನು ಉತ್ತಮಪಡಿಸಲಿ.

**ಮೌಲ್ಯನಿರ್ಣಯ ಸೂಚಕಗಳು**

- ವಿಷಯದ ಪೂರ್ಣತೆ
- ಪತ್ರದ ಚೌಕಟ್ಟು
- ಯೋಗ್ಯವಾದ ಭಾಷೆ (ಸರಳ ವಾಕ್ಯಗಳಿರಬೇಕು)

**ಗೆಳತಿಗೆ ಪತ್ರ**

ಮೈಸೂರು
5.7.2014

ಪ್ರೀತಿಯ ಗೆಳತಿ ಸವಿತ,

ನಾನು ಕ್ಷೇಮ, ನೀನು ಕೂಡ ಕ್ಷೇಮದಿಂದಿರುವಿಯೆಂದು ನಿನ್ನ ಪತ್ರದಿಂದ ತಿಳಿಯಿತು. ಓಣಂ ಹಬ್ಬ ನಿಮ್ಮೂರಿನ ವಿಶೇಷ ಹಬ್ಬವಾಗಿದೆ ಎಂದು ತಿಳಿದಿದ್ದೇನೆ. ಆದರೆ ಅದರ ವಿಶೇಷತೆಗಳೇನೂ ತಿಳಿಯದು. ಅದಕ್ಕಾಗಿ ಈ ವರ್ಷ ನಿಮ್ಮೂರಿಗೆ ಬಂದು ನಿಮ್ಮೊಡನೆ ಓಣಂ ಹಬ್ಬವನ್ನು ಆಚರಿಸಬೇಕೆಂದು ತೀರ್ಮಾನಿಸಿದ್ದೇನೆ. ನಾನು ನನ್ನ ಹೆತ್ತವರೊಂದಿಗೆ ಓಣಂ ಹಬ್ಬದ ಸಂದರ್ಭದಲ್ಲಿ ಖಂಡಿತವಾಗಿಯೂ ನಿಮ್ಮೂರಿಗೆ ಬರುತ್ತೇನೆ.

ನಿನ್ನ ಗೆಳೆಯ

**ರಾಹುಲ್**

## ದೀಪಾವಳಿ

ದೀಪಾವಳಿ ಹಬ್ಬದ ಕುರಿತಾದ ದೃಶ್ಯ/ಚಿತ್ರ ಪ್ರದರ್ಶನ. ದೃಶ್ಯ/ಚಿತ್ರ ವೀಕ್ಷಿಸಿದ ಬಳಿಕ ಅದರ ಬಗ್ಗೆ ಕಿರುಚರ್ಚೆ. ಈ ದೃಶ್ಯದಲ್ಲಿ / ಚಿತ್ರದಲ್ಲಿ ಯಾವ ಹಬ್ಬದ ಕುರಿತಾಗಿ ಹೇಳಲಾಗಿದೆ? ನೀವು ಈ ಹಬ್ಬವನ್ನು ಆಚರಿಸುತ್ತೀರಾ? ಹೇಗೆ ಆಚರಿಸುತ್ತೀರಿ ಎಂದು ಸರಳ ಚರ್ಚೆ ನಡೆಸುವುದು. ಈ ಹಬ್ಬಕ್ಕೆ ಸಂಬಂಧಿಸಿದ ಒಂದು ಪದ್ಯ ಪಾಠಭಾಗದಲ್ಲಿದೆ ಎಂದು ಪಾಠಭಾಗವನ್ನು ಓದಲು ಹೇಳುವುದು. ದೀಪಾವಳಿ ಪದ್ಯವನ್ನು ವೈಯಕ್ತಿಕವಾಗಿ ಮಕ್ಕಳು ಓದಲಿ.

- ◆ ಮಕ್ಕಳನ್ನು ಗುಂಪುಗಳಾಗಿ ಮಾಡುವುದು
- ◆ ಗುಂಪಿನಲ್ಲಿ ರಾಗ ಹಾಕಿ ಹಾಡಲಿ
- ◆ ಮೌಲ್ಯ ನಿರ್ಣಯ
- ಉತ್ತಮವಾಗಿ ಹಾಡಿದ ಗುಂಪು ಯಾವುದು? ಯಾಕೆ?
- ಸೂಚಕಗಳನ್ನು ಕಂಡುಕೊಳ್ಳುವುದು.
- ◆ ಅಧ್ಯಾಪಕರು ಹಾಡುವುದು
- ◆ ಬಳಿಕ ಅಧ್ಯಾಪಕರೊಂದಿಗೆ ಮಕ್ಕಳು ಹಾಡುವುದು.

ಹಾಡಿನ ಧ್ವನಿಮುದ್ರಿಕೆಯನ್ನು ಆಲಿಸಲು ಮಕ್ಕಳಿಗೆ ಅವಕಾಶ ನೀಡುವುದು.

## ❑ ಪದಗಳ ಅರ್ಥ ಕಂಡುಹಿಡಿಯುವ

ಪಾಠ ಪುಸ್ತಕದಲ್ಲಿ ನೀಡಲಾದ ಕೋಣೆಗಳಲ್ಲಿ ಮಕ್ಕಳು ನವೀನ ಪದಗಳನ್ನು ಪದ್ಯದಿಂದ ಹುಡುಕಿ ಬರೆಯಲಿ. ಅದರ ಅರ್ಥವನ್ನು ಅರ್ಥಕೋಶದ ಸಹಾಯದಿಂದ ಕಂಡುಹಿಡಿದು ಬರೆಯಲಿ. ಅಧ್ಯಾಪಕರು ಅದಕ್ಕೆ ಸಹಾಯ ನೀಡುವುದು.

**ನವಧಾನ್ಯಗಳು :** ಭತ್ತ (ಅಕ್ಕಿ), ಗೋಧಿ, ಉದ್ದು, ಹೆಸರು, ಕಡಲೆ, ಹುರುಳಿ, ತೊಗರಿ, ಅವರೆ, ಎಳ್ಳು.

ಹೊನಲು – ಪ್ರವಾಹ, ಸೂಸು – ಚೆಲ್ಲು, ಜ್ವಾಲೆ – ಬೆಂಕಿ, ಬೊಬ್ಬೆ – ಗದ್ದಲ, ಅಬ್ಬೆ – ತಾಯಿ, ಹರ್ಷ– ಸಂತಸ, ಸಹಕಾರ – ಪರಸ್ಪರ ಸಹಾಯ.

## ❑ ಉತ್ತರಿಸಿರಿ

ಪಾಠಭಾಗದಲ್ಲಿ ನೀಡಲಾದ ಪ್ರಶ್ನೆಗಳಿಗೆ ಮಕ್ಕಳು ವೈಯಕ್ತಿಕವಾಗಿ ಉತ್ತರಿಸಲಿ. ಕೆಲವರಿಂದ ಮಂಡನೆ. ಅಧ್ಯಾಪಕರು ಉತ್ತರವನ್ನು ಕರಿಹಲಗೆಯಲ್ಲಿ ಬರೆಯುವುದು. ಮಕ್ಕಳು ತಮ್ಮ ಉತ್ತರಗಳಲ್ಲಿ ತಪ್ಪುಗಳಿದ್ದರೆ ಸರಿಪಡಿಸಲಿ. ಅಧ್ಯಾಪಕರು ಅಗತ್ಯವಿದ್ದಲ್ಲಿ ಸಲಹೆ ನೀಡುವುದು.

## ❑ ಪದಗಳನ್ನು ವಿಂಗಡಿಸುವ

ಪಠ್ಯಪುಸ್ತಕದಲ್ಲಿ ನೀಡಲಾದ ಸಂಧಿ ಪದಗಳನ್ನು ಮಕ್ಕಳು ಓದಲಿ. ಆ ಪದಗಳನ್ನು ಮಾದರಿಯಂತೆ ವಿಂಗಡಿಸಿ ಬರೆಯಲಿ. ಬರೆದ ಪದಗಳನ್ನು ಮಂಡಿಸಲಿ. ಅಧ್ಯಾಪಕರು ಕರಿಹಲಗೆಯಲ್ಲಿ ಬರೆಯುವುದು.

ನಸುಕಿನೊಳೆದ್ದು – ನಸುಕಿನೊಳು + ಎದ್ದು

ಎನ್ನುವಳಬ್ಬೆ – ಎನ್ನುವಳು + ಅಬ್ಬೆ

ಕತ್ತಲೆಯಾಗಲು – ಕತ್ತಲೆ + ಆಗಲು

ಕುಣಿಯುವುದೆಲ್ಲಿ – ಕುಣಿಯುವುದು + ಎಲ್ಲಿ

ಪರಸ್ಪರ ಚರ್ಚಿಸಿ ಪದವಿಂಗಡಣೆಯನ್ನು ಸರಿಪಡಿಸಿಕೊಳ್ಳಲಿ. ಇದೇ ರೀತಿಯ ಇತರ ಪದಗಳನ್ನು ಹುಡುಕಿ ವಿಂಗಡಿಸಿ ಬರೆಯಲಿ.

## ❑ ಇಷ್ಟವಾದ ಸಾಲು

ಪದ್ಯದಲ್ಲಿ ಮಕ್ಕಳಿಗೆ ಇಷ್ಟವಾದ ಸಾಲು ಯಾವುದೆಂದು ಬರೆಯಲಿ. ಇಷ್ಟವಾಗಲು ಇರುವ ಕಾರಣಗಳನ್ನು ವೈಯಕ್ತಿಕವಾಗಿ ಬರೆಯಲಿ. ಮಂಡಿಸಲಿ. ಗುಂಪಿನಲ್ಲಿ ಮಂಡಿಸಲಿ. ಗುಂಪಿನಿಂದ ಉತ್ತಮವಾದುದನ್ನು ಆರಿಸಿ ಮಂಡನೆ, ಅಧ್ಯಾಪಕರು ಕ್ರೋಡೀಕರಣ ಮಾಡುವುದು.

## ❑ ಚರ್ಚಿಸುವ

ಸಿಡಿಮದ್ದುಗಳನ್ನು ಸಿಡಿಸುವಾಗ ಉಂಟಾಗುವ ಅಪಾಯಗಳನ್ನು ತಿಳಿಸುವ ಪತ್ರಿಕಾ ತುಣುಕುಗಳನ್ನು ಅಧ್ಯಾಪಕರು ಪ್ರದರ್ಶಿಸುವುದು. ಇದರ ಆಧಾರದಲ್ಲಿ ಚರ್ಚೆಯನ್ನು ನಡೆಸುವುದು. ಚರ್ಚಿಸಬೇಕಾದ ವಿಚಾರಗಳು. ಸಿಡಿಮದ್ದುಗಳನ್ನು ಸಿಡಿಸುವಾಗ ಉಂಟಾಗುವ ಅಪಾಯಗಳು. ವಹಿಸಬೇಕಾದ ಮುಂಜಾಗ್ರತಾ ಕ್ರಮಗಳ ಬಗ್ಗೆ ಚರ್ಚೆಯನ್ನು ನಡೆಸಬೇಕು. ಅಧ್ಯಾಪಕರು ಚರ್ಚೆಯನ್ನು ನಿಯಂತ್ರಿಸಿ ಕೊನೆಯಲ್ಲಿ ಚರ್ಚೆಯ ಕ್ರೋಡೀಕರಣ ಮಾಡುವುದು.

- ❑ **ಪಟ್ಟಿ ಮಾಡುವ**

ಕವಿತೆ ರಚಿಸುವಾಗ ಸಾಲುಗಳ ಕೊನೆಯಲ್ಲಿ ಒಂದೇ ಅಕ್ಷರದಿಂದ ಕೊನೆಗೊಳ್ಳುವ ಪದಗಳು ಬಂದರೆ ಕವಿತೆಯ ಸೌಂದರ್ಯ ಹೆಚ್ಚುತ್ತದೆ. ಈ ರೀತಿಯ ಪದಗಳನ್ನು ಪ್ರಾಸಪದಗಳು ಎನ್ನುತ್ತಾರೆ. ಮಕ್ಕಳು ಪದ್ಯವನ್ನು ಓದಲಿ. ಪದ್ಯದಲ್ಲಿ ಬಂದಿರುವ ಪ್ರಾಸಪದಗಳನ್ನು ಮಕ್ಕಳು ವೈಯಕ್ತಿಕವಾಗಿ ಪಟ್ಟಿ ಮಾಡಲಿ. ತರಗತಿಯಲ್ಲಿ ಮಂಡಿಸಲಿ.

ಮಾಲೆ – ಜ್ವಾಲೆ

ಬೊಬ್ಬೆ – ಅಬ್ಬೆ

ಬಟ್ಟೆ – ಹೊಟ್ಟೆ

ಇಲ್ಲ – ಎಲ್ಲ

**ವಾಕ್ಯ ರಚಿಸುವ**

ಪದ್ಯಭಾಗದ ಕೆಲವು ಪದಗಳನ್ನು ಕ್ರಮ ತಪ್ಪಿಸಿ ಕೊಡಲಾಗಿದೆ. ಮಕ್ಕಳು ಅವುಗಳನ್ನು ಪದ್ಯದಲ್ಲಿ ಇರುವ ಕ್ರಮದಲ್ಲಿ ಅರ್ಥಪೂರ್ಣವಾಗಿ ಜೋಡಿಸಿ ವೈಯಕ್ತಿಕವಾಗಿ ಬರೆಯಲಿ. ಬರೆದ ವಾಕ್ಯಗಳು ಸರಿಯಾಗಿವೆಯೇ ಎಂದು ಪದ್ಯದ ಸಾಲುಗಳನ್ನು ನೋಡಿ ಕಂಡುಕೊಳ್ಳಲಿ. ತರಗತಿಯಲ್ಲಿ ಮಂಡಿಸಲಿ. ಅಧ್ಯಾಪಕರು ಕರಿಹಲಗೆಯಲ್ಲಿ ಬರೆಯುವುದು.

- ಹಬ್ಬದ ಊಟದಿ ತುಂಬಿದ ಹೊಟ್ಟೆ
- ಅಯ್ಯೋ ಎನ್ನುವ ಮಕ್ಕಳ ಬೊಬ್ಬೆ
- ವಿಧ ವಿಧ ಬಣ್ಣದ ಹೊಸ ಹೊಸ ಬಟ್ಟೆ
- ಬೆಳಗಲು ಹರಿವುದು ಹರ್ಷದ ಹೊನಲು
- ಮಕ್ಕಳು ಮುದುಕರು ಭೇದವೆ ಇಲ್ಲ

- ❑ **ವಾಕ್ಯಗಳನ್ನು ಆರಿಸಿ ಬರೆಯುವ**

ಪಠ್ಯಪುಸ್ತಕದಲ್ಲಿ ನೀಡಲಾದ ವಾಕ್ಯಗಳನ್ನು ಮಕ್ಕಳು ವೈಯಕ್ತಿಕವಾಗಿ ಓದಲಿ. ಆ ವಾಕ್ಯಗಳಿಂದ ಹಬ್ಬಕ್ಕೆ ಸಂಬಂಧಿಸಿದ ವಾಕ್ಯಗಳನ್ನು ಆರಿಸಿ ಬರೆಯಲಿ. ಒಂದೊಂದು ವಾಕ್ಯವನ್ನು ಒಬ್ಬೊಬ್ಬರಂತೆ ಮಂಡಿಸಲಿ. ಸೇರಿಸಬೇಕಾದ ಮತ್ತು ಬಿಡಬೇಕಾದ ವಾಕ್ಯಗಳಿದ್ದರೆ ಅಧ್ಯಾಪಕರು ಅವುಗಳನ್ನು ಮಕ್ಕಳ ಗಮನಕ್ಕೆ ತರುವುದು. ತಾವು ಬರೆದುದನ್ನು ಮಕ್ಕಳು ಸರಿಪಡಿಸಿ ಬರೆಯಲಿ.

- ◆ ಹೂಗಳಿಂದ ಅಲಂಕಾರ ಮಾಡುವುದು.
- ◆ ಸುಡುಮದ್ದುಗಳನ್ನು ಸಿಡಿಸುವುದು.
- ◆ ವಿಶೇಷ ಅಡುಗೆ ಮಾಡುವುದು
- ◆ ಹೊಸ ಬಟ್ಟೆ ಧರಿಸುವುದು.

* * *

## ಈದುಲ್ ಫಿತರ್

- ❑ **ಪಾಠಭಾಗದೆಡೆಗೆ**

ಮುಸ್ಲಿಮರು ಆಚರಿಸುವ ಪ್ರಧಾನ ಹಬ್ಬ ಯಾವುದು? ಈದುಲ್ ಫಿತರ್‌ನ ಕುರಿತು ಏನೇನು ತಿಳಿದಿದೆ? ಎಂದು ಮಕ್ಕಳಲ್ಲಿ ಸರಳ ಚರ್ಚೆ ನಡೆಸುವುದು. ಅನಂತರ ಪಾಠಭಾಗವನ್ನು ಮಕ್ಕಳಲ್ಲಿ ಓದಲು ಹೇಳುವುದು. ಪಾಠಭಾಗದ ಆಶಯಗಳು ಬರುವಂತೆ ಮಕ್ಕಳ ಉತ್ತರಗಳನ್ನು ಕ್ರೋಡೀಕರಿಸುವುದು. ವಿದ್ಯಾರ್ಥಿಗಳು ಪಾಠಭಾಗವನ್ನು ವೈಯಕ್ತಿಕವಾಗಿ ಓದಲಿ. ಪಾಠಭಾಗದ ಆಶಯವನ್ನು

ಪ್ರಶ್ನೆಗಳ ಮೂಲಕ ತಿಳಿದುಕೊಳ್ಳಲಿ. ಓದಿನ ವಿವಿಧ ರೀತಿಗಳನ್ನು ಬಳಸಿಕೊಳ್ಳುವುದು.

- ❑ **ಉತ್ತರಿಸಿರಿ**

- ಪಠ್ಯದಲ್ಲಿ ಕೊಟ್ಟಿರುವ ಪ್ರಶ್ನೆಗಳಿಗೆ ಮಕ್ಕಳು ವೈಯಕ್ತಿಕವಾಗಿ ಉತ್ತರಿಸಲಿ
- ಉತ್ತರವನ್ನು ಬರೆದು ಮಂಡಿಸಲಿ.
- ಅಧ್ಯಾಪಕರು ಮೌಲ್ಯ ನಿರ್ಣಯ ಮಾಡುವುದು

- ❑ **ಪಟ್ಟಿ ತಯಾರಿಸುವ**

- ಇಸ್ಲಾಂ ಧರ್ಮಾವಲಂಬಿಗಳು ಆಚರಿಸುವ ಹಬ್ಬಗಳು ಯಾವುವು ಎಂದು ಮಕ್ಕಳಲ್ಲಿ ಕೇಳುವುದು.
- ಮಕ್ಕಳು ಹೇಳಿದ್ದನ್ನು ಕರಿಹಲಗೆಯಲ್ಲಿ ಬರೆಯುವುದು
- ಅಧ್ಯಾಪಕರ ಸಹಾಯದಿಂದ ಪಟ್ಟಿಯನ್ನು ವಿಸ್ತರಿಸುವುದು
    - ರಂಜಾನ್
    - ಈದುಲ್ ಫಿತರ್
    - ಮೊಹರಂ
    - ಬಕ್ರೀದ್

- ❑ **ಟಿಪ್ಪಣಿ ಬರೆಯುವ**

- ನಾವು ಸಾಮಾನ್ಯವಾಗಿ ಆಚರಿಸುವ ಹಬ್ಬಗಳು ಯಾವುವು?
- ಹಬ್ಬದ ದಿನ ಯಾವ ಯಾವ ಕಾರ್ಯಕ್ರಮಗಳಿರುತ್ತವೆ?
- ಮನೆಯಲ್ಲಿ ಯಾವ ಯಾವ ಸಿಹಿತಿಂಡಿಗಳನ್ನು ಮಾಡುತ್ತೇವೆ?
- ಈ ಪ್ರಶ್ನೆಗಳ ಮೂಲಕ ಬೇರೆ ಬೇರೆ ಹಬ್ಬಗಳ ಆಚರಣೆಯ ವಿಧಾನಗಳ ಮಾಹಿತಿಯನ್ನು ಪಡೆಯುವುದು
- ಅವುಗಳನ್ನು ಕ್ರೋಡೀಕರಿಸುವುದು
- ಪದಸೂರ್ಯ ತಯಾರಿ




ಅಧ್ಯಾಪಕರು ಮತ್ತು ಮಕ್ಕಳು ಸೇರಿ ಹಬ್ಬಗಳ ಪದಸೂರ್ಯವನ್ನು ತಯಾರಿಸುವುದು. ಅದರ ಆಧಾರದಲ್ಲಿ ಹಬ್ಬಗಳ ಆಚರಣೆಯ ಮಹತ್ವದ ಕುರಿತು ಟಿಪ್ಪಣಿ ಬರೆಯುವುದು.

- ಪದಸೂರ್ಯದ ಆಧಾರದಲ್ಲಿ ಮಕ್ಕಳು ಯಾವುದಾದರೂ ಒಂದು ಹಬ್ಬದ ಕುರಿತು ವೈಯಕ್ತಿಕವಾಗಿ ಟಿಪ್ಪಣಿ ತಯಾರಿಸಲಿ.
- ಆಯ್ದ ಕೆಲವರಿಂದ ಮಂಡನೆ
- ಗುಂಪಿನಲ್ಲಿ ಉತ್ತಮವಾದುದನ್ನು ಆಯ್ಕೆ ಮಾಡಲಿ

- ಅದನ್ನು ಉತ್ತಮಪಡಿಸಿ ಮಂಡಿಸಲಿ
- ತಪ್ಪುಗಳನ್ನು ತಿದ್ದಿ ಸರಿಪಡಿಸಲಿ

### ❑ ಆರಿಸಿ ಬರೆಯುವ

ಸೂಚಕಗಳನ್ನು ಓದಿ ಅದಕ್ಕೆ ಸಂಬಂಧಿಸಿದ ಸೂಕ್ತವಾದ ಪದಗಳನ್ನು ಪಾಠಭಾಗದಿಂದ ಆರಿಸಿ ಬರೆದು ಮಂಡಿಸಲಿ. ಅಧ್ಯಾಪಕರು ಅಗತ್ಯ ಸಹಾಯ ಮಾಡುವುದು.

- ಫಿತರ್ ಸಕಾತ್– ರಂಝಾನ್ ಆಚರಣೆಯ ಸಂದರ್ಭದಲ್ಲಿ ಶ್ರೀಮಂತರು ಬಡವರಿಗೆ ಮಾಡುವ ದಾನ
- ಈದುಲ್ ಫಿತರ್–ರಂಝಾನ್ ತಿಂಗಳ ಕೊನೆಯಲ್ಲಿ ಆಚರಿಸುವ ಹಬ್ಬ
- ಖುರಾನ್–ಮುಸ್ಲಿಮರ ಪವಿತ್ರ ಧಾರ್ಮಿಕ ಗ್ರಂಥ

### ❑ ಹುಡುಕಿ ಬರೆಯುವ

ಪದ್ಯಭಾಗದಲ್ಲಿ ಕೆಲವು ಹಬ್ಬಗಳ ಹೆಸರುಗಳನ್ನು ಕೋಣೆಗಳಲ್ಲಿ ನೀಡಲಾಗಿದೆ. ಮಕ್ಕಳು ವೈಯಕ್ತಿಕವಾಗಿ ಹಬ್ಬಗಳ ಹೆಸರುಗಳನ್ನು ಕಂಡು ಹುಡುಕಿ ಬರೆಯಲಿ. ತರಗತಿಯಲ್ಲಿ ಮಂಡಿಸಲಿ. ಅಧ್ಯಾಪಕರು ಮಕ್ಕಳು ಹೇಳಿದ್ದನ್ನು ಕರಿಹಲಗೆಯಲ್ಲಿ ಬರೆಯುವುದು. ತಪ್ಪುಗಳಿದ್ದರೆ ಮಕ್ಕಳು ಸರಿಪಡಿಸಿ ಬರೆಯಲಿ.

### ❑ ಚಿತ್ರ ನೋಡಿ ಕಥೆ ಬರೆಯುವ

ಮಕ್ಕಳು ಚಿತ್ರಗಳನ್ನು ಸೂಕ್ಷ್ಮವಾಗಿ ವೀಕ್ಷಿಸಲಿ. ಕಥೆಯ ಆಶಯವನ್ನು ಬಾಯ್ದೆರೆಯಾಗಿ ಹೇಳಲಿ. ಹೇಳಿದ ಕಥೆಯನ್ನು ವೈಯಕ್ತಿಕವಾಗಿ ಬರೆಯಲಿ. ಗುಂಪಿನಲ್ಲಿ ಚರ್ಚಿಸಿ ಉತ್ತಮಪಡಿಸಲಿ. ಗುಂಪಿನ ಮಂಡನೆ. ಮೌಲ್ಯ ನಿರ್ಣಯ – ಯಾವ ಗುಂಪಿನ ಕಥೆ ಉತ್ತಮ? ಯಾಕೆ? ಮೌಲ್ಯನಿರ್ಣಯ ಸೂಚಕಗಳನ್ನು ಚರ್ಚಿಸಿ ಕಂಡುಕೊಳ್ಳುವುದು. ಅಧ್ಯಾಪಕರು ಕಥೆಯನ್ನು ಚಾರ್ಟ್‌ನಲ್ಲಿ ಬರೆದು ಪ್ರದರ್ಶಿಸುವುದು. ಮಕ್ಕಳಿಗೆ ಕಥೆಯನ್ನು ಉತ್ತಮಪಡಿಸಲು ಅವಕಾಶವನ್ನು ನೀಡುವುದು.

### ಮೌಲ್ಯನಿರ್ಣಯ ಸೂಚಕಗಳು

- ಶೀರ್ಷಿಕೆ ಕಥೆಯ ವಿಷಯವನ್ನು ಪ್ರತಿಬಿಂಬಿಸುವಂತಿರಬೇಕು
- ಆರಂಭ, ಬೆಳವಣಿಗೆ, ಅಂತ್ಯ ಸಮರ್ಪಕವಾಗಿರಬೇಕು.
- ಪದ, ಪ್ರಯೋಗ, ಶೈಲಿ ಭಾವನಾತ್ಮಕವಾಗಿರಬೇಕು.

* * *

## ಒಗ್ಗಟ್ಟಿನಲ್ಲಿ ಬಲವಿದೆ

ಶಾಂತಪುರ ಎಂಬ ಊರಲ್ಲಿ ನಾಲ್ಕು ದನಗಳಿದ್ದುವು. ಅವುಗಳು ಪ್ರತಿದಿನವೂ ಜೊತೆ ಜೊತೆಯಾಗಿ ಮೇಯಲು ಹೋಗುತ್ತಿದ್ದುವು. ಜೊತೆಯಾಗಿಯೇ ಮರದಡಿಯಲ್ಲಿ ಕುಳಿತು ವಿಶ್ರಾಂತಿ ಪಡೆಯುತ್ತಿದ್ದವು. ಅವುಗಳ ಅನ್ಯೋನ್ಯತೆಗೆ ಸಾಟಿಯಿರಲಿಲ್ಲ.

ಒಂದು ದಿನ ನಾಲ್ಕು ದನಗಳೂ ಕಾಡಿನ ಬದಿಯ ಬಯಲಿನಲ್ಲಿ ಎಂದಿನಂತೆ ಹಾಯಾಗಿ ಹುಲ್ಲು ಮೇಯುತ್ತಿದ್ದವು. ಅದೇ ಸಂದರ್ಭದಲ್ಲಿ, ಆ ದಾರಿಯಾಗಿ ಸಿಂಹವೊಂದು ಆಹಾರವನ್ನು ಅರಸುತ್ತಾ ಬಂದಿತು. ಮೆಲ್ಲ ಮೆಲ್ಲನೆ ಕಳ್ಳ ಹೆಜ್ಜೆಯನ್ನಿಡುತ್ತಾ, ಹೊಂಚು ಹಾಕಿತು. 'ಆಹಾ!' ದಷ್ಟಪುಷ್ಟವಾಗಿ ಬೆಳೆದ ದನಗಳು! ನನಗಿಂದು ಸವಿಯಾದ ಭೋಜನ! ಇನ್ನು ಒಂದು ವಾರದ ಮಟ್ಟಿಗೆ ಆಹಾರಕ್ಕಾಗಿ ಅಲೆದಾಡಬೇಕಾಗಿಲ್ಲ' ಎನ್ನುತ್ತಾ ಮೆಲ್ಲನೆ ಮುಂದೆ ಸಾಗಿತು.

ಸಂದರ್ಭವನ್ನು ನೋಡಿಕೊಂಡು ಒಂದು ದನದ ಮೇಲೆ ಆಕ್ರಮಣ ಮಾಡಿತು.

'ಅಂಬಾ!!!' ಆ ದನವು ಗಾಬರಿಗೊಂಡು ಜೋರಾಗಿ ಕೂಗಿತು. ತಕ್ಷಣ ಉಳಿದ ದನಗಳು, ಸಿಂಹದಿಂದ ಆಕ್ರಮಣಗೊಂಡ ದನವನ್ನು ನೋಡಿದವು. ಅವುಗಳಿಗೆ ಅಪಾಯದ ಅರಿವಾಯಿತು. ಅವುಗಳು ತಮ್ಮ ಜೊತೆಗಾತಿಯ ರಕ್ಷಣೆಗಾಗಿ ಧಾವಿಸಿದವು. ಆ ಕ್ರೂರಿ ಸಿಂಹದ ಮೇಲೆಯೇ ಆಕ್ರಮಣ ಮಾಡಿದವು. ತನ್ನ ಆಕ್ರಮಣದಿಂದ ಉಳಿದ ದನಗಳು ಹೆದರಿ ಓಡಿ ಹೋಗಬಹುದೆಂದು ಯೋಚಿಸಿದ್ದ ಸಿಂಹಕ್ಕೆ ಅವುಗಳ ಧೈರ್ಯ, ಒಗ್ಗಟ್ಟನ್ನು ಕಂಡು ದಿಗಿಲಾಯಿತು. ನಾಲ್ಕು ಕಡೆಗಳಿಂದಲೂ ತನ್ನ ಮೇಲೆ ಆಕ್ರಮಣ ಮಾಡುತ್ತಿರುವ ದನಗಳೆಡೆಯಿಂದ ಹೇಗೋ ತಪ್ಪಿಸಿಕೊಂಡು ಓಡಿ ಹೋಯಿತು. ದನಗಳು, ತಮಗೆ ದೊರಕಿದ ಗೆಲುವಿಗೆ ಖುಷಿಪಟ್ಟವು.

ದಿನಗಳು ಉರುಳಿದವು. ಆ ಸಿಂಹವು ತನಗಾದ ಸೋಲಿನ ಸೇಡು ತೀರಿಸಿಕೊಳ್ಳಲು ಕಾಯುತ್ತಾ ಇತ್ತು. ಇತ್ತ ಅನ್ಯೋನ್ಯವಾಗಿದ್ದ ದನಗಳು ಕ್ಷುಲ್ಲಕ ಕಾರಣಕ್ಕೆ ಪರಸ್ಪರ ಜಗಳವಾಡಿಕೊಂಡು ಬೇರೆ ಬೇರೆಯಾದವು. ಅಂದಿನಿಂದ ಅವುಗಳು ಬೇರೆ ಬೇರೆ ಸ್ಥಳದಲ್ಲಿ ಮೇಯಲು ತೊಡಗಿದವು.

ಹೊಂಚುಹಾಕುತ್ತಾ ಕುಳಿತ್ತಿದ್ದ ಸಿಂಹಕ್ಕೆ ಬಹಳ ಸಂತೋಷವಾಯಿತು. ಏಕಾಂಗಿಯಾಗಿ ಮೇಯುತ್ತಿದ್ದ ಒಂದು ದನದ ಮೇಲೆ ಹಾರಿತು. ದನವು ಎಷ್ಟೇ ಕೂಗಿದರೂ ಸಹಾಯಕ್ಕೆ ಯಾರೂ ಬರಲಿಲ್ಲ. ಸಿಂಹವು ದನವನ್ನು ಕೊಂದು ಹೊಟ್ಟೆ ತುಂಬಾ ತಿಂದಿತು. ಅದು ಅಲ್ಲಿಂದ ಕಾಡಿಗೆ ಮರಳಿತು. ವಾರ ಕಳೆದು ಇನ್ನೊಂದನ್ನು ತಿಂದಿತು. ಇದೇ ರೀತಿಯಲ್ಲಿ ನಾಲ್ಕು ದನಗಳನ್ನೂ ಸಿಂಹವು ತಿಂದು ಮುಗಿಸಿತು.

ಈ ಕಥೆಯಿಂದ ತಿಳಿಯುವ ನೀತಿ "ಒಗ್ಗಟ್ಟಿನಲ್ಲಿ ಬಲವಿದೆ" ಪಠ್ಯಪುಸ್ತಕದಲ್ಲಿರುವ ಚಿತ್ರಕ್ಕೆ ಸೂಕ್ತವಾದ ಬೇರೆ ಕಥೆಗಳನ್ನು ನೀಡಬಹುದು.

## ಮೌಲ್ಯನಿರ್ಣಯ ಚಟುವಟಿಕೆಗಳು

1. ಉತ್ತರಿಸಿರಿ.
   1) ಕೇರಳೀಯರ ಪ್ರಧಾನ ಹಬ್ಬ ಯಾವುದು?
   2) ಯಾರು ಜನಿಸಿದ ದಿನವನ್ನು ಕ್ರಿಸ್‌ಮಸ್ ಹಬ್ಬವಾಗಿ ಆಚರಿಸುತ್ತಾರೆ?
   3) ಮುಸಲ್ಮಾನರ ಧರ್ಮಗ್ರಂಥ ಯಾವುದು?

2. 1) ನಾವು ಆಚರಿಸುವ ರಾಷ್ಟ್ರೀಯ ಹಬ್ಬಗಳು ಯಾವುವು?
   2) ಓಣಂ ಹಬ್ಬದ ಕುರಿತಾಗಿ ಕೇರಳೀಯರಲ್ಲಿರುವ ನಂಬಿಕೆ ಯಾವುದು?
   3) ರಂಝಾನ್ ಉಪವಾಸ ವ್ರತಾಚರಣೆಯ ರೀತಿ ಹೇಗೆ?

3. ಜೊತೆಗೊಳಿಸಿರಿ.

| | |
|---|---|
| ಓಣಂ | ಧ್ವಜಾರೋಹಣ |
| ಕ್ರಿಸ್‌ಮಸ್ | ಫಿತರ್ ಸಕಾತ್ |
| ಸ್ವಾತಂತ್ರ್ಯ ದಿನಾಚರಣೆ | ಪಟಾಕಿ ಸಿಡಿಸುವುದು |
| ಈದುಲ್ ಫಿತರ್ | ದೋಣಿ ಸ್ಪರ್ಧೆ |
| ದೀಪಾವಳಿ | ಸಾಂತಾಕ್ಲಾಸ್ |
| ಮೊಸರು ಕುಡಿಕೆ | |

4. ಓಣಂ ಆಚರಣೆಯ ಕುರಿತು ವಿವರಣೆ ಬರೆಯಿರಿ.

5. ನಿಮ್ಮ ಹುಟ್ಟುಹಬ್ಬಕ್ಕೆ ಗೆಳೆಯನನ್ನು ಆಮಂತ್ರಿಸಿ ಪತ್ರ ಬರೆಯಿರಿ.

* * *

# 4. ದುಡಿಮೆಯ ಹಿರಿಮೆ

ಮನುಷ್ಯನ ಜೀವನದಲ್ಲಿ ದುಡಿಮೆಗೆ ಉನ್ನತ ಸ್ಥಾನವಿದೆ. 'ದುಡಿಮೆಯೇ ದೇವರು', 'ಕಾಯಕವೇ ಕೈಲಾಸ' ಎಂಬೀ ನುಡಿಗಳು ದುಡಿಮೆಯ ಮಹತ್ವವನ್ನು ನಮಗೆ ತಿಳಿಸುತ್ತವೆ. ದುಡಿಮೆಯಿಂದ ಸಂತೋಷವೂ ಆದಾಯವೂ ಲಭಿಸುತ್ತವೆ. ಕೆಲಸವನ್ನು ಪ್ರಾಮಾಣಿಕತೆಯಿಂದಲೂ ನಿಷ್ಠೆಯಿಂದಲೂ ಮಾಡಬೇಕು. ನಮ್ಮ ಸುತ್ತುಮುತ್ತಲು ಇರುವ ಕಸುಬುಗಳನ್ನೂ, ಕಸುಬುದಾರರನ್ನೂ, ಅವರ ಹಾಡುಗಳನ್ನೂ ಪ್ರೀತಿಸುವ, ಗೌರವಿಸುವ ಮನೋಭಾವ ನಮ್ಮಲ್ಲಿರಬೇಕು. ಪಾಠಭಾಗದ ಚಟುವಟಿಕೆಗಳನ್ನು ಮಾಡುವುದರೊಂದಿಗೆ ಕಸುಬಿನ ಮಹತ್ವವನ್ನು ತಿಳಿದುಕೊಳ್ಳುವ, ಕಸುಬುದಾರರನ್ನು ಗೌರವಿಸುವ ಮನೋಭಾವವನ್ನು ಬೆಳೆಸುವುದು ಈ ಘಟಕದ ಪಾಠಗಳ ಉದ್ದೇಶವಾಗಿದೆ.

'ಮೊದಲು ನನ್ನ ಕೆಲಸ ಮಾಡುವೆ' ಎಂಬ ಪದ್ಯದಲ್ಲಿ ತಮ್ಮ ತಮ್ಮ ಕೆಲಸಗಳನ್ನು ಪ್ರಾಮಾಣಿಕತೆಯಿಂದ ಮಾಡುವ ಜೀವಿಗಳ ಬಗ್ಗೆ ಹೇಳಲಾಗಿದೆ. 'ಹಬ್ಬದ ಉಡುಗೊರೆ' ಎಂಬ ಕಥೆಯಲ್ಲಿ ಸಂಪತ್ತು ಬಂದಾಗ ಅಹಂಕಾರ ಪಡದೆ ಅದನ್ನು ಹಂಚಿ ಹಬ್ಬವನ್ನು ಆಚರಿಸಿ ಸಂತೋಷಪಡಬೇಕು ಎಂಬ ಸಂದೇಶವಿದೆ. ವಿವಿಧ ಕಸುಬುಗಳ ಬಗ್ಗೆ 'ಹಳ್ಳಿಯ ಕುಶಲ ಕೆಲಸಗಾರರು' ಎಂಬ ಕವಿತೆಯಲ್ಲಿ ಹೇಳಲಾಗಿದೆ. ಎಲ್ಲ ವ್ಯಕ್ತಿಗಳನ್ನು ಶ್ರೇಷ್ಠ ಅಥವಾ ಕನಿಷ್ಠ ಎಂಬ ಭೇದ ಭಾವವಿಲ್ಲದೆ ಸವಮಾನವಾಗಿ ಕಾಣಬೇಕೆಂಬ ಮನೋಭಾವವನ್ನು ಬೆಳೆಸಬೇಕು.

ಪಾಠದ ಸಂದರ್ಭದಲ್ಲಿ I.C.T. ಯನ್ನು ತರಗತಿಕೋಣೆಯಲ್ಲಿ ಯೋಗ್ಯವಾದ ರೀತಿಯಲ್ಲಿ ಬಳಸಬೇಕು.

**ಕಲಿಕಾ ಸಾಧನೆಗಳು**

- ಒಗಟುಗಳು ಹಾಗೂ ಒಗಟು ಪದ್ಯಗಳಿಗೆ ಉತ್ತರವನ್ನು ಕಂಡುಹಿಡಿಯುವುದು ಮತ್ತು ಸರಳ ಒಗಟುಗಳು ಹಾಗೂ ಒಗಟು ಪದ್ಯಗಳನ್ನು ರಚಿಸುವುದು.
- ಪದ ಪ್ರಯೋಗಗಳು, ಶೈಲಿಗಳು, ಆಲಿಸಿದ ನೂತನ ಪದಗಳು ಮೊದಲಾದವುಗಳನ್ನು ಸಂದರ್ಭಕ್ಕನು ಗುಣವಾಗಿ ಮಾತುಗಾರಿಕೆಯಲ್ಲಿ ಬಳಸುವುದು.
- ಕಥೆ, ಕವಿತೆ, ಲಘು ಟಿಪ್ಪಣಿಗಳನ್ನು ಆಲಿಸಿ/ಓದಿ ತನ್ನದೇ ಭಾಷೆಯಲ್ಲಿ ಹೇಳುವುದು ಹಾಗೂ ಬರೆಯುವುದು.
- ನಿರ್ದಿಷ್ಟ ಭಾಷಾ ವ್ಯವಹಾರ ರೂಪಗಳನ್ನು ಶ್ರೋತೃಗಳಿಗೆ ಆಶಯಸ್ಪಷ್ಟವಾಗುವ ರೀತಿಯಲ್ಲಿ ಉಚ್ಚಾರ ಸ್ಪಷ್ಟತೆಯಿಂದ ಸರಾಗವಾಗಿ ಓದುವುದು.
- ಸಮಾನ ಪದಗಳು ಮತ್ತು ಸರ್ವನಾಮಗಳನ್ನು ಉಪಯೋಗಿಸಿಕೊಂಡು ಸೃಜನಾತ್ಮಕ ರಚನೆಗಳಾದ ಲಘು ಟಿಪ್ಪಣಿಗಳು, ಸರಳ ಕಥೆಗಳು ಮೊದಲಾದವುಗಳನ್ನು ರಚಿಸುವುದು.
- ಓದಿ ಆಸ್ವಾದಿಸಿದ ಕತೆಗಳು, ಕವಿತೆಗಳಲ್ಲಿ ಬರುವ ಪಾತ್ರಗಳ ಅಭಿನಯ, ಮೂಕಾಭಿನಯ ಮಾಡುವುದು.
- ತನ್ನ ಇಷ್ಟ, ಆಸಕ್ತಿ ಹಾಗೂ ಆದ್ಯತೆಯನ್ನು ಪರಿಗಣಿಸಿಕೊಂಡು ಪುಸ್ತಕಗಳು ಮತ್ತು ಇತರ ಓದುವ ಸಾಮಗ್ರಿಗಳನ್ನು ಓದಿ, ಆಶಯವನ್ನು ವಿಭಿನ್ನ ರೀತಿಯಲ್ಲಿ ಇತರರೊಂದಿಗೆ ಹಂಚಿಕೊಳ್ಳುವುದು.

## ಯೂನಿಟ್ ಗ್ರಿಡ್ : 4. ದುಡಿಮೆಯ ಹಿರಿಮೆ

| ಆಶಯಗಳು | ಪ್ರಕ್ರಿಯೆಗಳು | ಕಲಿಕಾ ಸಾಧನೆಗಳು |
|---|---|---|
| **1. ಮೊದಲು ನನ್ನ ಕೆಲಸ ಮಾಡುವೆ** | | **ಸಮಯ : 8 ಗಂಟೆಗಳು** |
| • ಕೆಲಸದ ಪ್ರಾಧಾನ್ಯತೆ ತಿಳಿಯುವುದು.ಸಮಯದ ಮಹತ್ವವನ್ನು ತಿಳಿಯುವುದು.<br>• ರಾಗ, ತಾಳ, ಆಶಯಗಳನ್ನು ಒಳಗೊಂಡು ಭಾವನಾತ್ಮಕವಾಗಿ ಮಂಡಿಸುವಾಗ ಕವಿತೆಯ ರಸಾಸ್ವಾದನೆ ಆಗುವುದು ಎಂದು ತಿಳಿಯುವುದು. | • ಕವಿತೆಯನ್ನು ಹಾಡಿ ಆಸ್ವಾದಿಸುವುದು. ಪಾತ್ರಗಳನ್ನು ಹಂಚಿಕೊಂಡು ಗುಂಪಾಗಿ ಅಭಿನಯ ಮಾಡುವುದು. | • ಓದಿ ಆಸ್ವಾದಿಸಿದ ಕತೆಗಳು, ಕವಿತೆಗಳಲ್ಲಿ ಬರುವ ಪಾತ್ರಗಳ ಅಭಿನಯ, ಮೂಕಾಭಿನಯ ಮಾಡುವುದು. |
| • ಆಶಯ ಹಾಗೂ ಕಥಾಪಾತ್ರಗಳ ಮಾತುಗಳ ಆಧಾರದಲ್ಲಿ ಸಂದರ್ಭವನ್ನು ತಿಳಿಯುವುದು. | • ಕವಿತೆಯ ಆಶಯದ ಆಧಾರದಲ್ಲಿ ಸಂದರ್ಭಗಳನ್ನು ಕಂಡುಕೊಳ್ಳುವುದು. ಬರೆದು ಮಂಡಿಸುವುದು. | • ಕತೆ, ಕವಿತೆ, ಲಘು, ಟಿಪ್ಪಣಿಗಳನ್ನು ಆಲಿಸಿ/ ಓದಿ ತನ್ನದೇ ಭಾಷೆಯಲ್ಲಿ ಹೇಳುವುದು ಹಾಗೂ ಬರೆಯುವುದು. |
| • ಕಥಾವಸ್ತು, ಸೂಕ್ತ ಕಥಾಪಾತ್ರಗಳು, ನೈಜವಾದ ಭಾಷೆ ಎಂಬಿವುಗಳನ್ನೊಳಗೊಂಡು ಬರೆದಾಗ ಸಂಭಾಷಣೆಯು ಉತ್ತಮವಾಗುತ್ತದೆ ಎಂದು ತಿಳಿಯುವುದು. | • ಕವಿತೆಯನ್ನು ಸಂಭಾಷಣೆಯಾಗಿ ಬದಲಾಯಿಸಿ ಬರೆಯುವುದು. | • ಪದ ಪ್ರಯೋಗಗಳು, ಶೈಲಿಗಳು, ಆಲಿಸಿದ ನೂತನ ಪದಗಳು ಮೊದಲಾದವುಗಳನ್ನು ಸಂದರ್ಭಕ್ಕನುಗುಣವಾಗಿ ಮಾತುಗಾರಿಕೆಯಲ್ಲಿ ಬಳಸುವುದು. |
| • ಅಕ್ಷರ, ಪದ, ಕಾಗುಣಿತ, ವಾಕ್ಯಗಳನ್ನುಪಯೋಗಿಸಿ ಭಾಷಾ ಆಟಗಳನ್ನು ಆಡಬಹುದು ಎಂದು ತಿಳಿಯುವುದು. | • ಅಕ್ಷರ, ಪದ, ಕಾಗುಣಿತ, ವಾಕ್ಯಗಳನ್ನು ಸೂಕ್ತವಾಗಿ ಉಪಯೋಗಿಸಿಕೊಂಡು ವಿವಿಧ ಭಾಷಾ ಆಟಗಳಲ್ಲಿ ಭಾಗವಹಿಸುವುದು. | • ತನ್ನ ಸಹಪಾಠಿಗಳ ರಚನೆಗಳನ್ನು ಮೌಲ್ಯನಿರ್ಣಯ ಮಾಡಿ ಇತರರ ರಚನೆಗಳಲ್ಲಿನ ಪ್ರಯೋಗಗಳು, ಶೈಲಿಗಳನ್ನು ವಿಶ್ಲೇಷಿಸಿ ತನ್ನ ರಚನೆಗಳನ್ನು ಉತ್ತಮ ಪಡಿಸುವುದು. |

| ಆಶಯಗಳು | ಪ್ರಕ್ರಿಯೆಗಳು | ಕಲಿಕಾ ಸಾಧನೆಗಳು |
|---|---|---|
| **2. ಹಬ್ಬದ ಉಡುಗೊರೆ** | | **ಸಮಯ : 6 ಗಂಟೆಗಳು** |
| • ಅತಿ ಆಸೆ ಪಡದೆ ಇದ್ದುದರಲ್ಲಿ ತೃಪ್ತಿ ಪಡೆಯಬೇಕು ಎಂದು ತಿಳಿಯುವುದು.<br>• ಕಥಾವಸ್ತು, ಸೂಕ್ಷ್ಮವಾದ ಕಥಾಪಾತ್ರಗಳು. ಯೋಗ್ಯವಾದ ಭಾಷೆ, ಎಂಬಿವುಗಳನ್ನೊಳಗೊಂಡ ಕಥೆಯು ಉತ್ತಮವೆನಿಸುತ್ತದೆ. | • ಕಥೆಯನ್ನು ಓದಿ ಆಶಯವನ್ನು ತಿಳಿಯುವುದು. ಇಷ್ಟವಾದ ಪಾತ್ರವನ್ನು ಕಂಡುಕೊಂಡು ಕಾರಣವನ್ನು ಬರೆದು ಸಮರ್ಥಿಸುವುದು.<br>• ಪ್ರಶ್ನೆಗಳಿಗೆ ಉತ್ತರವನ್ನು ಕಂಡುಕೊಂಡು ಬರೆಯುವುದು. | • ಕತೆ, ಕವಿತೆ, ಲಘು ಟಿಪ್ಪಣಿಗಳನ್ನು ಆಲಿಸಿ/ಓದಿ ತನ್ನದೇ ಭಾಷೆಯಲ್ಲಿ ಹೇಳುವುದು ಹಾಗೂ ಬರೆಯುವುದು. |
| • ಅಕ್ಷರ, ಪದ, ಕಾಗುಣಿತ, ವಾಕ್ಯಗಳನ್ನುಪಯೋಗಿಸಿ ಭಾಷಾ ಆಟಗಳಲ್ಲಿ ಭಾಗವಹಿಸುವುದು. | • ಯೋಗ್ಯವಾದ ಪದಗಳನ್ನು ಉಪಯೋಗಿಸಿ ವಾಕ್ಯಗಳನ್ನು ಬರೆಯುವುದು.<br>• ಪದಗಳನ್ನು ಸೇರಿಸಿ ಬರೆದು ವಾಕ್ಯಗಳನ್ನು ಬದಲಾಯಿಸಿ ಬರೆಯುವುದು. | • ತನ್ನ ಸಹಪಾಠಿಗಳ ರಚನೆಗಳನ್ನು ಮೌಲ್ಯನಿರ್ಣಯ ಮಾಡಿ ಇತರರ ರಚನೆಗಳಲ್ಲಿನ ಪ್ರಯೋಗಗಳು, ಶೈಲಿಗಳನ್ನು ವಿಶ್ಲೇಷಿಸಿ ತನ್ನ ರಚನೆಗಳನ್ನು ಉತ್ತಮ ಪಡಿಸುವುದು. |
| **3. ಹಳ್ಳಿಯ ಕುಶಲ ಕೆಲಸಗಾರರು** | | **ಸಮಯ : 6 ಗಂಟೆಗಳು** |
| • ವಿವಿಧ ರೀತಿಯ ಕಸುಬುಗಳಲ್ಲಿ ಹಲವಾರು ಜನರು ನಿರತರಾಗಿರುತ್ತಾರೆ ಎಂದು ತಿಳಿಯುವುದು.<br>• ಆಶಯವನ್ನು ರಾಗ, ತಾಳಗಳೊಂದಿಗೆ ಭಾವನಾತ್ಮಕವಾಗಿ ಮಂಡಿಸುವಾಗ ಕವಿತೆ ಆಸ್ವಾದ್ಯಕರವಾಗುವುದು. | • ಕವಿತೆಯನ್ನು ವೈಯುಕ್ತಿಕವಾಗಿಯೂ, ಗುಂಪಾಗಿಯೂ ಹಾಡಿ ಆಸ್ವಾದಿಸುವುದು.<br>• ಕವಿತೆಯ ಆಶಯಗಳನ್ನು ತಿಳಿದು ಪ್ರಶ್ನೆಗಳಿಗೆ ಸರಿಯಾದ ಉತ್ತರವನ್ನು ಬರೆದು ಮಂಡಿಸುವುದು. | • ನಿರ್ದಿಷ್ಟವಾದ ಭಾಷಾ ವ್ಯವಹಾರ ರೂಪಗಳನ್ನು ಶ್ರೋತೃಗಳಿಗೆ ಆಶಯಸ್ಪಷ್ಟವಾಗುವ ರೀತಿಯಲ್ಲಿ ಉಚ್ಚಾರ ಸ್ಪಷ್ಟತೆಯಿಂದ ಸರಾಗವಾಗಿ ಓದುವುದು. |

| ಆಶಯಗಳು | ಪ್ರಕ್ರಿಯೆಗಳು | ಕಲಿಕಾ ಸಾಧನೆಗಳು |
|---|---|---|
| • ಅಕ್ಷರ, ಪದ, ಕಾಗುಣಿತ, ವಾಕ್ಯಗಳನ್ನುಪಯೋಗಿಸಿ ಭಾಷಾ ಆಟಗಳಲ್ಲಿ ಭಾಗವಹಿಸುವುದು. | • ಪದ್ಯದಲ್ಲಿರುವ ಪ್ರಾಸ ಪದಗಳನ್ನು ಕಂಡುಕೊಂಡು ಬರೆದು ಮಂಡಿಸುವುದು.<br>• ವಿವಿಧ ಕಸುಬುಗಳ ಹೆಸರುಗಳನ್ನು ಪಟ್ಟಿ ಮಾಡುವುದು.<br>• ಸರಿಯಾದ ವಾಕ್ಯಗಳನ್ನು ಬರೆಯುವುದು.<br>• ಅಕ್ಷರಗಳನ್ನು ಕ್ರಮೀಕರಿಸಿ ಸರಿಯಾದ ಪದಗಳನ್ನು ಬರೆಯುವುದು. | • ತನ್ನ ಸಹಪಾಠಿಗಳ ರಚನೆಗಳನ್ನು ಮೌಲ್ಯನಿರ್ಣಯ ಮಾಡಿ ಇತರರ ರಚನೆಗಳಲ್ಲಿನ ಪ್ರಯೋಗಗಳು ಶೈಲಿಗಳನ್ನು ವಿಶ್ಲೇಷಿಸಿ, ತನ್ನ ರಚನೆಗಳನ್ನು ಉತ್ತಮ ಪಡಿಸುವುದು. |
| • ಟಿಪ್ಪಣಿಯು ಆಶಯಕ್ಕೆ ಸಂಬಂಧಿಸಿದ ಸೂಕ್ತ ವಿಚಾರಗಳ ಕ್ರಮೀಕೃತ ರಚನೆಯಾಗಿದೆ ಎಂದು ತಿಳಿಯುವುದು. | • ಚಿತ್ರ ಹಾಗೂ ದೃಶ್ಯಗಳನ್ನು ವೀಕ್ಷಿಸಿ ಕಸುಬುಗಳ ಕುರಿತಾದ ಟಿಪ್ಪಣಿ ಬರೆಯುವುದು. | • ಸಮಾನ ಪದಗಳು ಮತ್ತು ಸರ್ವನಾಮಗಳನ್ನು ಉಪಯೋಗಿಸಿಕೊಂಡು ಸೃಜನಾತ್ಮಕ ರಚನೆಗಳಿಂದ ಲಘು ಟಿಪ್ಪಣಿಗಳು, ಸಣ್ಣ ಕಥೆಗಳು ಮೊದಲಾದವುಗಳನ್ನು ರಚಿಸುವುದು. |
| • ಒಗಟುಗಳು ಸಾಮಾನ್ಯ ಹೇಳಿಕೆಯ ರೂಪದಲ್ಲಿಯೂ, ಕವನಗಳ ರೂಪದಲ್ಲಿಯೂ ಇರುತ್ತವೆ. ಅದು ಹೀಗೆಯೇ ಇರಬೇಕೆಂಬ ನಿಯಮವೇನೂ ಇರುವುದಿಲ್ಲ. ಅಂತಹ ಒಗಟುಗಳನ್ನು ಬಿಡಿಸುವುದು. | • ಒಗಟುಗಳಿಗೆ ಉತ್ತರವನ್ನು ಕಂಡುಕೊಳ್ಳುವುದು ಮತ್ತು ಹೊಸ ಒಗಟುಗಳನ್ನು ರಚಿಸುವುದು. | • ಒಗಟುಗಳು ಹಾಗೂ ಒಗಟು ಪದ್ಯಗಳಿಗೆ ಉತ್ತರವನ್ನು ಕಂಡು ಹಿಡಿಯುವುದು ಮತ್ತು ಸರಳ ಒಗಟುಗಳು ಹಾಗೂ ಒಗಟು ಪದ್ಯಗಳನ್ನು ರಚಿಸುವುದು. |

# ಮೊದಲು ನನ್ನ ಕೆಲಸ ಮಾಡುವೆ

## ಪಾಠಭಾಗದೆಡೆಗೆ

ಈ ಘಟಕದ ಆರಂಭದಲ್ಲಿ ನೀಡಲಾದ ಕಸುಬುಗಳಿಗೆ ಸಂಬಂಧಿಸಿದ ಚಿತ್ರಗಳ ಕುರಿತು ತರಗತಿಯಲ್ಲಿ ಸರಳ ಚರ್ಚೆಯನ್ನು ನಡೆಸುವುದು. ಕಲಿಕೆಯಲ್ಲಿ ಹಿಂದುಳಿದ ಮಕ್ಕಳಿಗೆ ಹೇಳಲು ಮೊದಲು ಅವಕಾಶವನ್ನು ನೀಡುವುದು.

## ಚಟುವಟಿಕೆಗಳು

'ಮೊದಲು ನನ್ನ ಕೆಲಸ ಮಾಡುವೆ' ಪದ್ಯವನ್ನು ಮಕ್ಕಳು ವೈಯಕ್ತಿಕವಾಗಿ ಓದಲಿ. ಅದರ ಆಶಯವನ್ನು ಕಂಡುಕೊಂಡು ಮಂಡಿಸಲಿ. ಗುಂಪಿನಲ್ಲಿ ಪದ್ಯಕ್ಕೆ ರಾಗ ಹಾಕಿ ಹಾಡಲಿ. ಮೌಲ್ಯ ನಿರ್ಣಯ ಸೂಚಕಗಳ ಆಧಾರದಲ್ಲಿ ಉತ್ತಮವಾಗಿ ಹಾಡಿದ ಗುಂಪನ್ನು ಮಕ್ಕಳೇ ಆಯ್ಕೆ ಮಾಡಲಿ.

## ಮೌಲ್ಯನಿರ್ಣಯ ಸೂಚಕಗಳು

- ಆಶಯಕ್ಕನುಸರಿಸಿ ರಾಗ, ತಾಳ, ಭಾವ ಇದೆ.
- ಭಾವಪೂರ್ಣವಾದ ಮಂಡನೆ
- ಆಶಯ ಸ್ಪಷ್ಟತೆ

ಅಧ್ಯಾಪಕರು ಗಟ್ಟಿಯಾಗಿ ಓದುವುದು. ಪದ್ಯದ ಆಶಯವನ್ನು ಸೂಕ್ತ ರೀತಿಯಲ್ಲಿ ಕ್ರೋಡೀಕರಿಸುವುದು. ಈ ಹಾಡಿನ ಧ್ವನಿ ಮುದ್ರಿಕೆಯನ್ನು ಆಲಿಸಲು ಅವಕಾಶ ನೀಡುವುದು.

- ಒಂದೇ ರಾಗದಲ್ಲಿ ತರಗತಿಯ ಎಲ್ಲರೂ ಒಟ್ಟಾಗಿ ಹಾಡುವುದು.

## ಪದಗಳ ಅರ್ಥ ಕಂಡುಹಿಡಿಯುವ

ಪದ್ಯದಲ್ಲಿ ಬಂದಿರುವ ನವೀನ ಪದಗಳನ್ನು ಮಕ್ಕಳು ವೈಯಕ್ತಿಕವಾಗಿ ಪಟ್ಟಿ ಮಾಡಲಿ. ಆ ಪದಗಳ ಅರ್ಥಗಳನ್ನು ಪದ್ಯದ ಸಾಲುಗಳನ್ನೋದಿ ಅರ್ಥೈಸಿಕೊಂಡು ಊಹಿಸಿ ಬರೆಯಲಿ. ಪದಗಳನ್ನು ಮತ್ತು ಊಹಿಸಿ ಬರೆದ ಅರ್ಥಗಳನ್ನು ಮಂಡಿಸಲಿ. ಗುಂಪಿನಲ್ಲಿ ಪದಗಳ ಅರ್ಥಗಳನ್ನು ಅರ್ಥಕೋಶದ ಸಹಾಯದಿಂದ ಕಂಡುಹಿಡಿದು ಬರೆಯಲಿ. ಊಹಿಸಿ ಬರೆದ ಅರ್ಥಗಳನ್ನು ಗುಂಪಿನಲ್ಲಿ ಕಂಡುಹಿಡಿದು ಬರೆದ ಅರ್ಥಗಳೊಂದಿಗೆ ಹೋಲಿಸಿ ತಮ್ಮದು ಸರಿಯಾಗಿವೆಯೋ ಎಂದು ನೋಡಲಿ. ಅಧ್ಯಾಪಕರು ಮೌಲ್ಯನಿರ್ಣಯ ಮಾಡುವುದು, ತಪ್ಪಿದ್ದರೆ ಸರಿಪಡಿಸುವುದು. ಈ ಪದಗಳನ್ನುಪಯೋಗಿಸಿ ಪಾಠ ಪುಸ್ತಕದ ಪಟ್ಟಿಯನ್ನು ಪೂರ್ತಿಗೊಳಿಸುವುದು.

## ಹಾಡುವ ಅಭಿನಯಿಸುವ

ಪದ್ಯದ ಆಶಯವನ್ನು ತಿಳಿದ ಬಳಿಕ ಈ ಚಟುವಟಿಕೆಯನ್ನು ನಡೆಸುವುದು. ಅಭಿನಯ ಸಾಧ್ಯತೆಯಿರುವ ಇಂತಹ ಪದ್ಯಗಳನ್ನು ಅಭಿನಯಿಸಿ ಹಾಡಲು ಅವಕಾಶ ನೀಡುವುದು. ಮಕ್ಕಳಲ್ಲಿರುವ ಅಭಿನಯ ಸಾಮರ್ಥ್ಯವನ್ನು ಹೆಚ್ಚಿಸಲು ಇಂತಹ ಚಟುವಟಿಕೆಗಳನ್ನು ನಡೆಸಬೇಕು. ಕಲಿಕೆಯಲ್ಲಿ ಹಿಂದುಳಿದ ಮಕ್ಕಳು ಚಟುವಟಿಕೆಯಲ್ಲಿ ಭಾಗವಹಿಸುವುದನ್ನು ಅಧ್ಯಾಪಕರು ಖಚಿತಪಡಿಸಿಕೊಳ್ಳುವುದು.

### ಚರ್ಚೆಗಾಗಿ ಕೆಲವು ಪ್ರಶ್ನೆಗಳು

- ಈ ಹಾಡಿನಲ್ಲಿ ಎಷ್ಟು ಪಾತ್ರಗಳಿವೆ ?
- ಇದರಲ್ಲಿ ಬರುವ ಪಾತ್ರಗಳು ಯಾವುವು?
- ನಿಮಗೆ ಇಷ್ಟವಾದ ಪಾತ್ರ ಯಾವುದು? ಯಾಕೆ?

ಈ ಹಾಡಿನಲ್ಲಿ ಐದು ಪಾತ್ರಗಳಿವೆ.

1. ಮಗು
2. ಇರುವೆ
3. ಜೇನುನೊಣ
4. ಕೋಗಿಲೆ
5. ನಾಯಿ

- ಮಕ್ಕಳನ್ನು ಐದೈದು ಮಂದಿಯ ಗುಂಪುಗಳನ್ನಾಗಿ ಮಾಡುವುದು
- ಗುಂಪಿನ ಕೆಲಸಕ್ಕಾಗಿ ಅಧ್ಯಾಪಕರು ಸೂಚನೆಗಳನ್ನು ನೀಡುವುದು
- ಪಾತ್ರಗಳನ್ನು ಮಕ್ಕಳೇ ಹಂಚಿಕೊಳ್ಳಲಿ.
- ಪದ್ಯವನ್ನು ಓದಿ ಕಥಾಪಾತ್ರಗಳ ಸಂಭಾಷಣೆಯನ್ನು ತಿಳಿದುಕೊಳ್ಳಲಿ
- ಪಾತ್ರಗಳಿಗೆ ಹೊಂದಿಕೊಂಡು ಮುಖವಾಡ ತಯಾರಿಸಲಿ.
- ಪ್ರತಿಯೊಂದು ಗುಂಪಿನವರು ಪದ್ಯವನ್ನು ಹಾಡುತ್ತಾ ಅಭಿನಯಿಸಲಿ.
- ಪ್ರತಿ ಗುಂಪಿನ ಮಂಡನೆಯ ಬಳಿಕ ಮಕ್ಕಳು ಅಭಿಪ್ರಾಯ ಹೇಳಲಿ.
- ಮೌಲ್ಯನಿರ್ಣಯ ಸೂಚಕಗಳನ್ನು ಚರ್ಚಿಸಿ ಮಕ್ಕಳಿಂದ ರೂಪಿಸುವುದು.

### ಮೌಲ್ಯನಿರ್ಣಯ ಸೂಚಕಗಳು (ಅಭಿನಯ)

- ಭಾಷೆ, ಉಚ್ಚಾರ, ಸ್ವರಭಾರಗಳ ಸ್ಪಷ್ಟತೆ
- ಭಾವಾಭಿನಯ
- ಆಶಯ ವಿನಿಮಯ ಸಾಧ್ಯತೆ

○ ಉತ್ತಮಗೊಳಿಸಬೇಕಾದ ಅಂಶಗಳನ್ನು ಮಕ್ಕಳೊಂದಿಗೆ ಚರ್ಚಿಸಿ ಕ್ರೋಡೀಕರಿಸುವುದು.

○ ಬಾಲಸಭೆಯಲ್ಲಿ ಅಭಿನಯಿಸಲು ಅವಕಾಶ ನೀಡುವುದು.

### ಯಾರು ಹೇಳಿದರು?

ಕತೆಯ ಹಿನ್ನೆಲೆ, ಪಾತ್ರಗಳ ವೈಶಿಷ್ಟ್ಯ, ನಡೆದ ಘಟನೆಗಳು, ಪದ್ಯದಲ್ಲಿರುವ ಪಾತ್ರಗಳ ಮನೋಭಾವ ಎಂಬಿವುಗಳನ್ನು ಮಕ್ಕಳು ಸ್ಪಷ್ಟವಾಗಿ ತಿಳಿದುಕೊಳ್ಳಬೇಕು. ಇದಕ್ಕೆ ಯೋಗ್ಯವಾದ ಚರ್ಚೆಯನ್ನು ನಡೆಸುವುದು. ನೀಡಲಾದ ಸಾಲುಗಳನ್ನು ಮಕ್ಕಳು ವೈಯಕ್ತಿಕವಾಗಿ ಓದಲಿ. ಅದಕ್ಕೆ ಸಮಾನವಾದ ಸಾಲುಗಳನ್ನು ಪದ್ಯದಿಂದ ಆರಿಸಲಿ. ನೀಡಲಾದ ಸಾಲುಗಳನ್ನು ಪದ್ಯದಲ್ಲಿ ಹೇಳಿದ್ದು ಯಾರು? ಎಂದು ಅಭ್ಯಾಸ ಪುಸ್ತಕದಲ್ಲಿ ಬರೆದು ಮಂಡಿಸಲಿ. ಅಧ್ಯಾಪಕರು ಮೌಲ್ಯನಿರ್ಣಯ ಮಾಡುವುದು. ಕಲಿಕೆಯಲ್ಲಿ ಹಿಂದುಳಿದ ಮಗುವಿಗೆ ಬರೆಯಲು ಸಾಧ್ಯವಾಗದಿದ್ದಲ್ಲಿ ಬಾಯ್ದೆರೆಯಾಗಿ ಹೇಳಲು ಅವಕಾಶ ನೀಡುವುದು. ಮಕ್ಕಳಿಗೆ ಬರೆಯಲು ಅಧ್ಯಾಪಕರು ಅಗತ್ಯವಾದ ಸಹಾಯಗಳನ್ನು ಮಾಡುವುದು.

## ಸಂಭಾಷಣೆ ಬರೆಯುವ

ಮಗು ಮತ್ತು ಜೇನುನೊಣ ಹಲವು ತಿಂಗಳುಗಳ ಬಳಿಕ ಪುನಃ ಕಂಡಾಗ ಏನು ಮಾತನಾಡಿರಬಹುದು ಎಂದು ತರಗತಿಯಲ್ಲಿ ಚರ್ಚಿಸುವುದು. ಅನಂತರ ಪಾಠಭಾಗದಲ್ಲಿ ನೀಡಲಾದ "ಸಂಭಾಷಣೆ ಬರೆಯುವ" ಚಟುವಟಿಕೆಯನ್ನು ಮಕ್ಕಳು ವೈಯಕ್ತಿಕವಾಗಿ ಬರೆಯಲಿ. ಕೆಲವರಿಂದ ಮಂಡನೆ ಗುಂಪಿನಲ್ಲಿ ಉತ್ತಮಪಡಿಸಲಿ. ಗುಂಪಿನ ಮಂಡನೆ ನಡೆಯಲಿ. ಉತ್ತಮವಾದ ಸಂಭಾಷಣೆ ಯಾವ ಗುಂಪಿನದ್ದು? ಸೂಚಕಗಳನ್ನುಪಯೋಗಿಸಿ ಕಂಡುಕೊಳ್ಳಲಿ. ತಪ್ಪುಗಳನ್ನು ತಿದ್ದಿ ಸರಿಪಡಿಸುವುದು. ಅಧ್ಯಾಪಕರು ತಯಾರಿಸಿದ ಸಂಭಾಷಣೆಯನ್ನು ಪ್ರದರ್ಶಿಸುವುದು. ಇದರೊಂದಿಗೆ ಹೋಲಿಸಿ ಮಕ್ಕಳು ತಮ್ಮ ಸಂಭಾಷಣೆಯನ್ನು ಉತ್ತಮಪಡಿಸಲಿ.

ಜೇನುನೊಣ : ನನ್ನೊಂದಿಗೆ ಆಟವಾಡಲು ಬರುವೆಯಾ?

ಹುಡುಗ : ಇಲ್ಲ. ನನಗೆ ಸಮಯವಿಲ್ಲ.

ಜೇನುನೊಣ : ಯಾಕೆ?

ಹುಡುಗ : ನನಗೆ ಶಾಲೆಗೆ ಹೋಗಬೇಕು.

ಜೇನುನೊಣ : ಶಾಲೆಯಲ್ಲಿ ಏನಿದೆ?

ಹುಡುಗ : ಅಲ್ಲಿ ಒಳ್ಳೆಯ ವಿದ್ಯೆ, ಬುದ್ಧಿಗಳನ್ನು ಕಲಿಸುತ್ತಾರೆ. ಜೊತೆಗೆ ಮಧ್ಯಾಹ್ನ ಬಿಸಿಯೂಟವೂ ಲಭಿಸುತ್ತದೆ.

ಜೇನುನೊಣ : ಸರಿ. ಮೊದಲು ನಿನ್ನ ಕೆಲಸವನ್ನು ಮಾಡು. ರಜೆ ಸಿಕ್ಕಿದಾಗ ನಾವು ಆಟ ಆಡೋಣ.

ಹುಡುಗ : ಸರಿ. ಹಾಗೆಯೇ ಆಗಲಿ.

**ಮೌಲ್ಯನಿರ್ಣಯ ಸೂಚಕಗಳು (ಸಂಭಾಷಣೆ)**

- ಸಂಭಾಷಣೆಯ ನೈಜತೆ
- ವಿಷಯದ ಪೂರ್ಣತೆ
- ಮಾತು ಮಾತುಗಳೊಳಗಿನ ಹೊಂದಿಕೆ.

### ತಿದ್ದುಪಡಿ ಪ್ರಕ್ರಿಯೆ

#### ಆಶಯಪರ

- ಆಶಯ ಪೂರ್ಣತೆ
- ಆಶಯ ಸ್ಪಷ್ಟತೆ
- ಸೇರಿಸಬೇಕಾದ ಆಶಯ

#### ಭಾಷಾಪರ

- ಪದಗಳ ಜೋಡಣಾ ಕ್ರಮವನ್ನು ಪಾಲಿಸಲಾಗಿದೆಯೋ?
- ಅಗತ್ಯವಿಲ್ಲದ ಪದಗಳಿವೆಯೋ?
- ಅಗತ್ಯವಿರುವವುಗಳು ಬಿಟ್ಟು ಹೋಗಿವೆಯೋ (ಪದ, ವಾಕ್ಯ)
- ಪದಗಳು ಆವರ್ತನೆಯಾಗಿವೆಯೋ?
- ಅಕ್ಷರ ತಪ್ಪುಗಳಿವೆಯೋ?

## ಹುಡುಕಿ ಬರೆಯುವ

ಮನುಷ್ಯನಂತೆ ಇತರ ಜೀವಿಗಳು ವಿವಿಧ ಕೆಲಸಗಳನ್ನು ಮಾಡುತ್ತವೆ. ಈ ಕವಿತೆಯು ಇದನ್ನು ವ್ಯಕ್ತಪಡಿಸುತ್ತದೆ. ಈ ಆಶಯದ ಆಧಾರದಲ್ಲಿ ಮಕ್ಕಳು ಪಾಠಭಾಗವನ್ನು ಓದಿ ಸೂಕ್ತವಾದ ಜೀವಿಗಳ ಹೆಸರನ್ನು ಕಂಡುಕೊಂಡು ಬರೆಯಬೇಕು.

- ಈ ಚಟುವಟಿಕೆಯನ್ನು ಮಕ್ಕಳು ವೈಯಕ್ತಿಕವಾಗಿ ಮಾಡಲಿ.
- ವೈಯಕ್ತಿಕವಾಗಿ ಮಂಡಿಸಲಿ.
- ಅಧ್ಯಾಪಕರು ಅಗತ್ಯವಿದ್ದರೆ ತಿದ್ದುಪಡಿ ಮಾಡುವುದು.

ಉತ್ತರಗಳು : ನಾಯಿ, ಜೇನುನೊಣ, ಇರುವೆ

**ಚರ್ಚಿಸಿರಿ**

ಪ್ರತಿಯೊಬ್ಬರು ತಂತಮ್ಮ ಕೆಲಸಗಳನ್ನು ಪ್ರಾಮಾಣಿಕತೆಯಿಂದ ಮಾಡಬೇಕು. ಸೋಮಾರಿಯಾಗಿ ಅಲೆದಾಡುವುದು ಸರಿಯಲ್ಲ. ವಿದ್ಯಾರ್ಥಿಗಳು ತಮ್ಮ ಕಲಿಕೆಯ ಕಡೆಗೆ ಹೆಚ್ಚು ಗಮನವನ್ನು ನೀಡಬೇಕೆಂಬ ಮನೋಭಾವವು ಮಕ್ಕಳಲ್ಲಿ ಮೂಡುವಂತೆ ಚರ್ಚೆಯನ್ನು ನಡೆಸಬೇಕು. ಕಲಿಕೆಯಲ್ಲಿ ಹಿಂದುಳಿದ ಮಕ್ಕಳಿಗೆ ಮಾತನಾಡಲು ಮೊದಲು ಅವಕಾಶವನ್ನು ನೀಡುವುದು. ಚರ್ಚೆಯ ಸಂದರ್ಭದಲ್ಲಿ ಅಗತ್ಯವಿದ್ದರೆ ಪ್ರಾಣಿಗಳು, ಪಕ್ಷಿಗಳು ಆಹಾರ ಸಂಗ್ರಹಿಸುವ ದೃಶ್ಯ/ಚಿತ್ರಗಳನ್ನು ತೋರಿಸುವುದು.

# ಹಬ್ಬದ ಉಡುಗೊರೆ

**ಚಿತ್ರ ನಿರೀಕ್ಷಣೆ**

ಪಾಠಭಾಗದಲ್ಲಿರುವ ಚಿತ್ರವನ್ನು ಮಕ್ಕಳು ನಿರೀಕ್ಷಣೆ ಮಾಡಲಿ. ಆಶಯ ರೂಪೀಕರಣಕ್ಕಾಗಿ ಕೆಳಗಿನ ಪ್ರಶ್ನೆಗಳನ್ನು ಕೇಳಬಹುದು.

- ಇವನು ಯಾರಾಗಿರಬಹುದು?
- ಇವನು ಎಲ್ಲಿಗೆ ಹೋಗುತ್ತಿರಬಹುದು?
- ಮಕ್ಕಳು ಸ್ವತಂತ್ರವಾಗಿ ಉತ್ತರಿಸಲಿ.

**ಓದುವಿಕೆ**

ಮಕ್ಕಳು ಕಥೆಯನ್ನು ಮೌನವಾಗಿ ಓದಲಿ. ನಂತರ ಗುಂಪಿನಲ್ಲಿ ಗಟ್ಟಿಯಾಗಿ ಓದಲಿ. ಈ ಸಂದರ್ಭದಲ್ಲಿ ಸರಾಗವಾಗಿ ಓದಲು ತಿಳಿಯದ ಮಕ್ಕಳಿಗೆ ಸಹಾಯ ಮಾಡುವುದು. ಅಧ್ಯಾಪಕರು ಸಲಹೆಯನ್ನು ಅಗತ್ಯವಿದ್ದಲ್ಲಿ ನೀಡುವುದು. ಆಶಯ ರೂಪೀಕರಣಕ್ಕಾಗಿ ಕೆಲವು ಪ್ರಶ್ನೆಗಳನ್ನು ಕೇಳಬಹುದು.

- ನೇಕಾರನ ಮುಖ ಗೆಲುವಾಗಲು ಕಾರಣವೇನು?
- ವರ್ತಕನ ಮಗ ನೇಕಾರನಲ್ಲಿ ಏನೆಂದು ಹೇಳಿದನು?
- ಸನ್ಯಾಸಿಯು ನೇಕಾರನಿಗೆ ತಿನ್ನಲು ಏನನ್ನು ನೀಡಿದನು?

ಮಕ್ಕಳು ಸ್ವತಂತ್ರವಾಗಿ ಉತ್ತರಿಸಲಿ. ಕಥೆಯ ಆಶಯವನ್ನು ಕ್ರೋಡೀಕರಿಸಿ ಅಧ್ಯಾಪಕರು ಬರೆಯುವುದು.

**ಚಟುವಟಿಕೆಗಳು**

**ಉತ್ತರಿಸಿರಿ**

ಪಾಠಭಾಗದಲ್ಲಿರುವ ಕಥೆಯನ್ನು ಓದಿ ಆಶಯವನ್ನು ಕಂಡುಕೊಂಡ ಬಳಿಕ ಈ ಚಟುವಟಿಕೆಯನ್ನು ನಡೆಸುವುದು.

ಮಕ್ಕಳು ವೈಯಕ್ತಿಕವಾಗಿ ಉತ್ತರವನ್ನು ಬರೆದು ಮಂಡಿಸಲಿ. ಅಧ್ಯಾಪಕರು ಸರಿಯಾದ ಉತ್ತರಗಳನ್ನು ಬರೆಯುವುದು. ತಾವು ಬರೆದುದರಲ್ಲಿ ತಪ್ಪುಗಳಿದ್ದಲ್ಲಿ ಮಕ್ಕಳು ಸರಿಪಡಿಸಲಿ.

### ಇಷ್ಟವಾದ ಕಥಾಪಾತ್ರ

ಕಥೆಯಲ್ಲಿ ತಮಗೆ ಇಷ್ಟವಾದ ಪಾತ್ರವನ್ನು ಪ್ರತಿಯೊಬ್ಬರೂ ಬರೆಯಲಿ. ಇಷ್ಟವಾಗಲು ಕಾರಣವೇನೆಂಬುದನ್ನು ಬರೆಯಲಿ.

ಪ್ರತಿಯೊಬ್ಬರೂ ಮಂಡಿಸಲಿ.

ಉದಾ: ನೇಕಾರ

ತನ್ನ ಮುಂದಿರುವ ಸಿಹಿತಿಂಡಿ, ಹಣ್ಣು ಹಂಪಲು ಹಾಗೂ ಇತರ ವಸ್ತುಗಳಿದ್ದರೂ ತನಗೆ ಅಗತ್ಯವಿದ್ದವುಗಳನ್ನು ಮಾತ್ರ ತೆಗೆದುಕೊಂಡನು. ಅತಿ ಆಸೆ ಮಾಡಲಿಲ್ಲ.

### ವಾಕ್ಯಗಳನ್ನು ಬರೆಯುವ

ಪಾಠ ಪುಸ್ತಕದಲ್ಲಿ ನೀಡಲಾದ ಮಾದರಿಯನ್ನು ಮಕ್ಕಳು ಓದಲಿ. ಇದೇ ರೀತಿಯ ಕೆಲವು ಪದಗಳನ್ನು ನೀಡಿ ಬಾಯ್ದೆರೆಯಾಗಿ ಮಂಡಿಸಲು ಅವಕಾಶ ನೀಡುವುದು. ಉದಾ: ಇಲಿ ಓಡಿತು. ಇಲಿ ವೇಗವಾಗಿ ಓಡಿತು. ಇಲಿ ಬೆಕ್ಕನ್ನು ನೋಡಿ ವೇಗವಾಗಿ ಓಡಿತು. ಇಲಿ ಬೆಕ್ಕನ್ನು ನೋಡಿ ಹೆದರಿ ವೇಗವಾಗಿ ಓಡಿತು.

ಒಬ್ಬನು ಒಂದು ಪದವನ್ನು ಸೇರಿಸಿ ವಾಕ್ಯವನ್ನು ಹೇಳಿದರೆ ಮುಂದಿನ ವಾಕ್ಯವನ್ನು ಹೇಳಲು ಮತ್ತೊಬ್ಬನಿಗೆ ಅವಕಾಶ ನೀಡುವುದು. ಪಾಠಪುಸ್ತಕದಲ್ಲಿ ನೀಡಲಾದ ಪದಗಳಿಗೆ ಹೊಂದಿಕೊಂಡು ಮಕ್ಕಳು ವೈಯಕ್ತಿಕವಾಗಿ ವಾಕ್ಯಗಳನ್ನು ಬರೆಯಲಿ. ಕೆಲವರಿಂದ ಮಂಡನೆ. ಗುಂಪಿನಲ್ಲಿ ಉತ್ತಮಪಡಿಸಿ ಮಂಡಿಸಲಿ. ಆಶಯಪರವಾಗಿಯೂ ಭಾಷಾಪರವಾಗಿಯೂ, ಮಕ್ಕಳೊಂದಿಗೆ ಚರ್ಚಿಸಿ ಅಧ್ಯಾಪಕರು ತಿದ್ದುಪಡಿಯನ್ನು ಮಾಡುವುದು. ಅಧ್ಯಾಪಕರು ಮಾದರಿಯನ್ನು ಬರೆದು ಪ್ರದರ್ಶಿಸುವುದು.

ಉದಾ : ಕುಂಬಾರ

- ಕುಂಬಾರನು ಹದಗೊಳಿಸಿದನು.
- ಕುಂಬಾರನು ಮಣ್ಣನ್ನು ಹದಗೊಳಿಸಿದನು.
- ಕುಂಬಾರನು ತುಳಿದು ಮಣ್ಣನ್ನು ಹದಗೊಳಿಸಿದನು.
- ಕುಂಬಾರನು ಚೆನ್ನಾಗಿ ತುಳಿದು ಮಣ್ಣನ್ನು ಹದಗೊಳಿಸಿದನು.

### ಬದಲಾಯಿಸಿ ಬರೆಯುವ

ಪಾಠಭಾಗದಲ್ಲಿ ನೀಡಲಾದ ವಾಕ್ಯವನ್ನು ಮಕ್ಕಳು ಗಮನವಿಟ್ಟು ಓದಲಿ. ಬದಲಾದ ಪದಗಳನ್ನು ಪಟ್ಟಿ ಮಾಡಲಿ. ಬಾಯ್ದೆರೆಯಾಗಿ ಹೇಳಲು ಸೂಚಿಸುವುದು.

ಉದಾ:

| | | |
|---|---|---|
| ರೈತನು | – | ರೈತರು |
| ಅವನು | – | ಅವರು |
| ಗಿಡ | – | ಗಿಡಗಳು |

- ಮಕ್ಕಳು ವಾಕ್ಯದಲ್ಲಿರುವ ವ್ಯತ್ಯಾಸವನ್ನು ಕಂಡುಕೊಂಡು ಹೇಳಲಿ. ಅಧ್ಯಾಪಕರು ಕ್ರೋಡೀಕರಿಸಿ ಹೇಳುವುದು.

ಮುಂದಿನ ಗದ್ಯಭಾಗವನ್ನೋದಿ ವೈಯಕ್ತಿಕವಾಗಿ ಬದಲಾಯಿಸಿ ಬರೆಯಲಿ. ಪರಸ್ಪರ ಬದಲಾಯಿಸಿಕೊಂಡು ಮೌಲ್ಯನಿರ್ಣಯ ಮಾಡಲಿ. ಒಂದೊಂದು ವಾಕ್ಯವನ್ನು

ಒಬ್ಬೊಬ್ಬರು ಮಂಡಿಸಲಿ. ಗುಂಪಿನಲ್ಲಿ ಸರಿಪಡಿಸಲಿ. ಗುಂಪಿನ ಮಂಡನೆ. ಗುಂಪಿನ ಉತ್ಪನ್ನಗಳನ್ನು ಅಧ್ಯಾಪಕರು ಮಕ್ಕಳೊಂದಿಗೆ ಚರ್ಚಿಸಿ ತಿದ್ದುಪಡಿ ಮಾಡುವುದು. ಮಕ್ಕಳಿಗೆ ಉತ್ತಮಪಡಿಸಲು ಅವಕಾಶ ನೀಡುವುದು.

# ಹಳ್ಳಿಯ ಕುಶಲ ಕೆಲಸಗಾರರು

**ಚಿತ್ರ ಓದು**

ಪದ್ಯದಲ್ಲಿ ನೀಡಲಾದ ಚಿತ್ರಗಳನ್ನು ನೋಡಿ ಮಕ್ಕಳು ಕಸುಬುಗಳ ಹೆಸರನ್ನು ಹೇಳಲಿ. ಕಸುಬಿನ ವಿಧಾನವನ್ನು ಸರಳವಾಗಿ ಹೇಳಲಿ. ಪದ್ಯವನ್ನು ಮಕ್ಕಳು ವೈಯಕ್ತಿಕವಾಗಿ ಹಾಡಲಿ. ಆಶಯಗಳನ್ನು ಕಂಡುಕೊಳ್ಳಲಿ. ಗುಂಪಿನಲ್ಲಿ ರಾಗ ಹಾಕಿ ಹಾಡಲಿ. ಯಾವ ಗುಂಪಿನ ಮಂಡನೆ ಉತ್ತಮ? ಯಾಕೆ? ಸೂಚಕಗಳನ್ನು ಕಂಡುಕೊಳ್ಳುವುದು. ಅಧ್ಯಾಪಕರು, ಭಾವಪೂರ್ಣವಾಗಿ, ಆಶಯ ಸ್ಪಷ್ಟವಾಗುವಂತೆ ಹಾಡುವುದು. ಆಶಯಗಳ ಕ್ರೋಢೀಕರಣ. ಅಧ್ಯಾಪಕರೊಂದಿಗೆ ಮಕ್ಕಳು ಹಾಡುವುದು.

**ಚಟುವಟಿಕೆಗಳು**

**ಉತ್ತರಿಸಿರಿ**

ಮಕ್ಕಳು ವೈಯಕ್ತಿಕವಾಗಿ ಉತ್ತರವನ್ನು ಕಂಡುಕೊಳ್ಳಲಿ. ಕಲಿಕೆಯಲ್ಲಿ ಹಿಂದುಳಿದ ಮಗುವಿಗೆ ಅಧ್ಯಾಪಕರು ಸಹಾಯ ಮಾಡುವುದು. ಕೆಲವರಿಂದ ಮಂಡನೆ ಗುಂಪಿನಲ್ಲಿ ಉತ್ತಮಪಡಿಸುವುದು. ಗುಂಪಿನ ಮಂಡನೆ. ಪ್ರತಿಯೊಂದು ಗುಂಪಿನ ಉತ್ತರಗಳನ್ನು ತಪ್ಪಿದ್ದಲ್ಲಿ ತಿದ್ದುಪಡಿ ಮಾಡುವುದು. ಅಧ್ಯಾಪಕರು ಸರಿಯಾದ ಉತ್ತರವನ್ನು ಕರಿಹಲಗೆಯಲ್ಲಿ ಬರೆಯುವುದು. ವೈಯಕ್ತಿಕವಾಗಿ ಬರೆದ ಉತ್ತರಗಳಲ್ಲಿ ತಪ್ಪಿದ್ದರೆ ತಿದ್ದಿ ಸರಿಪಡಿಸಲು ಮಕ್ಕಳಿಗೆ ಅವಕಾಶ ನೀಡುವುದು.

**ಪ್ರಾಸಪದ ಬರೆಯುವ**

ಕವಿತೆಯ ಸಾಲುಗಳಲ್ಲಿ ಪ್ರಾಸಪದಗಳನ್ನು ಬಳಸುವುದರಿಂದ ಕವಿತೆಯ ಸೌಂದರ್ಯ ಹಾಗೂ ಆಸ್ವಾದನೆಯು ಹೆಚ್ಚುವುದೆಂದು ಮಗು ತಿಳಿದುಕೊಳ್ಳಬೇಕು. ಇದಕ್ಕಾಗಿ ಇಂತಹ ಚಟುವಟಿಕೆಗಳ ಅಗತ್ಯವಿದೆ. ಮಕ್ಕಳಿಗೆ ಸ್ವತಃ ಕವಿತೆ ಬರೆಯುವ ಸಂದರ್ಭದಲ್ಲಿ ಇದು ಸಹಾಯಕವಾಗುವುದು. ಕೆಲವರಿಂದ ಪ್ರಾಸಪದಗಳ ಮಂಡನೆ. ಅಧ್ಯಾಪಕರು ಅದನ್ನು ಬರೆಯುವುದು. ಕವಿತೆಯಲ್ಲಿ ಬರುವ ಪ್ರಾಸಪದಗಳನ್ನು ಮಕ್ಕಳು ವೈಯಕ್ತಿಕವಾಗಿ ಕಂಡುಹಿಡಿದು ಬರೆಯಲಿ. ಬಿಟ್ಟುಹೋದ ಪದಗಳನ್ನು ಅಧ್ಯಾಪಕರು ಬರೆದು ಸೇರಿಸುವುದು. ಮಕ್ಕಳು ಅಭ್ಯಾಸಪುಸ್ತಕದಲ್ಲಿ ಬರೆಯಲಿ.

**ಹೆಸರು ಬರೆಯಿರಿ**

ಪದ್ಯದಲ್ಲಿ ಬಂದಿರುವ ಕಸುಬುಗಳನ್ನು ವೈಯಕ್ತಿಕವಾಗಿ ಮಕ್ಕಳು ಪಟ್ಟಿ ಮಾಡಲಿ. ಇತರ ಕಸುಬುಗಳ ಹೆಸರುಗಳನ್ನು ಬರೆಯಲಿ. ಪ್ರತಿಯೊಬ್ಬರೂ ಒಂದೊಂದರಂತೆ ಮಂಡಿಸಲಿ. ಅಧ್ಯಾಪಕರು ಕರಿಹಲಗೆಯಲ್ಲಿ ಬರೆದು ಪಟ್ಟಿ ಮಾಡುವುದು.

**ಟಿಪ್ಪಣಿ ತಯಾರಿಸಿರಿ**

ವಿವಿಧ ಕಸುಬುಗಳ ವೀಡಿಯೋ ಪ್ರದರ್ಶನ.

ನೋಡಿದ ದೃಶ್ಯದ ಕುರಿತು ಚರ್ಚೆ ನಡೆಸುವುದು. ಇಷ್ಟವಾದ ಕಸುಬಿನ ಕುರಿತು ಮಕ್ಕಳು ವೈಯಕ್ತಿಕವಾಗಿ ಟಿಪ್ಪಣಿ ಬರೆಯಲಿ. ಕೆಲವರಿಂದ ಮಂಡನೆ. ಗುಂಪಿನಲ್ಲಿ ವೈಯಕ್ತಿಕ ಮಂಡನೆ. ಗುಂಪಿನಲ್ಲಿ ಚರ್ಚಿಸಿ ಉತ್ತಮವಾದ ಟಿಪ್ಪಣಿಯನ್ನು ಅಯ್ಕೆ ಮಾಡಲಿ. ಅದನ್ನು ಉತ್ತಮಪಡಿಸಿ ಬರೆಯಲಿ. ಗುಂಪಿನ ಮಂಡನೆ. ಸೂಚಕಗಳ ಆಧಾರದಲ್ಲಿ ಮೌಲ್ಯ ನಿರ್ಣಯ ಮಾಡುವುದು. ತಪ್ಪುಗಳನ್ನು ತಿದ್ದಿ ಸರಿಪಡಿಸುವುದು. ಅಧ್ಯಾಪಕರು ತಾವು ಬರೆದ ಟಿಪ್ಪಣಿಯನ್ನು ಪ್ರದರ್ಶಿಸುವುದು.

**ಮೌಲ್ಯನಿರ್ಣಯ ಸೂಚಕಗಳು**

- ಆಶಯದ ಸಮಗ್ರತೆ
- ಸಂಕ್ಷಿಪ್ತತೆ
- ಯೋಗ್ಯವಾದ ಭಾಷೆ

**ಚಿತ್ರ ನೋಡಿ ಬರೆಯುವ**

- ಪಾಠ ಪುಸ್ತಕದಲ್ಲಿ ನೀಡಲಾದ ಚಿತ್ರಗಳನ್ನು ನೋಡಿ ಕಸುಬುಗಾರರ ಹೆಸರನ್ನು ಮಕ್ಕಳು ವೈಯಕ್ತಿಕವಾಗಿ ಬರೆದು ಮಂಡಿಸಲಿ
- ಅಧ್ಯಾಪಕರು ಸಹಾಯ ಅಗತ್ಯವಿದ್ದಲ್ಲಿ ನೀಡುವುದು.

**ಒಗಟು ಬಿಡಿಸಿರಿ**

ಮಕ್ಕಳು ವೈಯಕ್ತಿಕವಾಗಿ ಒಗಟುಗಳಿಗೆ ಉತ್ತರ ಬರೆಯಲಿ. ಒಗಟು ಹಾಗೂ ಅದರ ಉತ್ತರಗಳನ್ನು ಒಬ್ಬೊಬ್ಬರಂತೆ ಮಂಡಿಸಲಿ. ವಿಭಿನ್ನ ಉತ್ತರಗಳು ಬಂದಿದ್ದರೆ ಚರ್ಚಿಸಿ ಸರಿಯಾದ ಉತ್ತರಗಳನ್ನು ಮಕ್ಕಳೇ ಹೇಳಲಿ. ಉತ್ತರಗಳನ್ನು ಅಧ್ಯಾಪಕರು ಬರೆಯುವುದು. ಇದೇ ರೀತಿಯ ಒಗಟುಗಳನ್ನು ಮಕ್ಕಳು ಸ್ವತಃ ರಚಿಸಲಿ. ಭಿತ್ತಿಪತ್ರಿಕೆಯಲ್ಲಿ ಪ್ರದರ್ಶಿಸಲಿ. ಒಗಟು ಸಂಚಿಕೆ ತಯಾರಿಸಲಿ. ಮನೆ ಕೆಲಸವಾಗಿ ವಿವಿಧ ಮೂಲಗಳಿಂದ ಒಗಟುಗಳನ್ನು ಸಂಗ್ರಹಿಸಿ ಸಂಗ್ರಹ ಪುಸ್ತಕದಲ್ಲಿ ಬರೆಯಲಿ.

**ಪದ ರಚಿಸುವ**

ಪಾಠಭಾಗದಲ್ಲಿ ಬಂದಿರುವ ಕೆಲವು ಪದಗಳನ್ನು ಮಾದರಿಯಾಗಿ ನೀಡುವುದು. ಸರಿಯಾದ ಪದಗಳನ್ನು ಮಕ್ಕಳು ಗುರುತಿಸಿ ಬರೆಯಲಿ.

ಉದಾ: ರ ಯಿ ವಾ ಭಾ ತು

| | | | | |
|---|---|---|---|---|
| | | | | |

ಭಾರವಾಯಿತು

ಹ ಲು ಪ ಹಂ ಣ್ಣು

| | | | | |
|---|---|---|---|---|
| | | | | |

ಹಣ್ಣು ಹಂಪಲು

ಇದೇ ರೀತಿಯ ಇತರ ಪದಗಳನ್ನು ಮಕ್ಕಳಲ್ಲಿ ವೈಯಕ್ತಿಕವಾಗಿ ಅಕ್ಷರಗಳ ಕ್ರಮ ತಪ್ಪಿಸಿ ಬರೆಯಲು ಹೇಳುವುದು. ಉಳಿದ ಮಕ್ಕಳು ನಿರ್ದಿಷ್ಟ ಸಮಯದೊಳಗೆ ಸರಿಯಾದ ಪದಗಳನ್ನು ಹೇಳಲಿ. ಪಾಠಭಾಗದ ಪದಗಳಲ್ಲದೆ ಇತರ ಪದಗಳನ್ನು ಬರೆಯಲು ಹೇಳುವಿರಿ ತಾನೆ?

ಬಳಿಕ ವೈಯಕ್ತಿಕವಾಗಿ ಪಾಠಭಾಗದ ಚಟುವಟಿಕೆಯನ್ನು ಪೂರ್ತಿಗೊಳಿಸಿ ಮಂಡಿಸಲಿ.

ಉರುಟು ಹಾಕಿದ ಕೋಣೆಯ ಅಕ್ಷರಗಳಿಂದ ಸ್ಥಳನಾಮ ಸೂಚಿಸುವ ಪದವನ್ನು ಮಕ್ಕಳು ಗುಂಪಿನಲ್ಲಿ ಕಂಡುಕೊಳ್ಳಲಿ.

ಅಕ್ಷರಗಳು

| | | | | |
|---|---|---|---|---|
| ರ | ಗೋ | ಕಾ | ಸ | ಡು |

ಸ್ಥಳನಾಮ : ಕಾಸರಗೋಡು

**ಬದಲಾಯಿಸಿ ಬರೆಯುವ**

ಮಕ್ಕಳು ವಾಕ್ಯಗಳನ್ನು ವೈಯಕ್ತಿಕವಾಗಿ ಓದಲಿ. ಮಾದರಿಯಲ್ಲಿ ನೀಡಿದ ಬದಲಾದ ಪದಗಳನ್ನು ಮಕ್ಕಳು ಗುರುತಿಸಲಿ. ವ್ಯತ್ಯಾಸವನ್ನು ಕಂಡುಕೊಳ್ಳಲಿ.

ರಾಜ – ರಾಣಿ

- ಅಡಿಗೆರೆ ಎಳೆದ ಪದಗಳನ್ನು ಬದಲಾಯಿಸಿ ಬರೆಯಲಿ

ಬಾಲಕ – ಬಾಲಕಿ   ಗೆಳೆಯ –ಗೆಳತಿ

ಮಗ–ಮಗಳು   ಗಾಯಕ – ಗಾಯಕಿ

ಜಾಣ   ಜಾಣೆ

**ಬದಲಾಯಿಸಿ ಬರೆದ ಪದಗಳನ್ನುಪಯೋಗಿಸಿ ಸ್ವಂತ ವಾಕ್ಯಗಳನ್ನು ಬರೆಯಲಿ.**

ವಾಕ್ಯಗಳನ್ನು ಬರೆಯುವ ಸಂದರ್ಭದಲ್ಲಿ ಅಡಿಗೆರೆ ಎಳೆದ ಪದವು ಬದಲಾದಾಗ ವಾಕ್ಯವೂ ಬದಲಾಗುತ್ತದೆ ಎಂಬುದನ್ನು ಪರಿಗಣಿಸಬೇಕೆಂದು ಅಧ್ಯಾಪಕರು ಸೂಚನೆಯನ್ನು ನೀಡುವುದು. ಗುಂಪಿನಲ್ಲಿ ಸರಿಯಾದ ವಾಕ್ಯಗಳನ್ನು ಆಯ್ಕೆ ಮಾಡಲಿ. ಗುಂಪಿನ ಮಂಡನೆ. ಅಧ್ಯಾಪಕರು ಕರಿಹಲಗೆಯಲ್ಲಿ ಬರೆಯುವುದು. ಮಕ್ಕಳು ತಾವು ಬರೆದ ವಾಕ್ಯಗಳಲ್ಲಿ ತಪ್ಪಿದ್ದರೆ ಅದನ್ನು ಸರಿಪಡಿಸಿ ಬರೆಯಲಿ.

**ಪೂರಕ ಓದಿಗೆ**

## ಅಗಸ ಮತ್ತು ಕುಂಬಾರ

ಒಂದೂರಿನಲ್ಲಿ ಒಬ್ಬ ಅಗಸನಿದ್ದ. ಅವನು ಪ್ರಾಮಾಣಿಕನೂ ಕಷ್ಟಪಟ್ಟು ದುಡಿಯುವವನೂ ಆಗಿದ್ದ. ಅವನು ಒಗೆದ ಬಟ್ಟೆಗಳು ಬೆಳ್ಳಗಾಗುತ್ತವೆಂದು ಊರಿನ ಜನ ನಂಬಿದ್ದರು. ಇದರಿಂದ ದಿನೇ ದಿನೇ ಅವನ ವ್ಯಾಪಾರ ವೃದ್ಧಿಯಾಗತೊಡಗಿತು.

ಅದೇ ಊರಿನಲ್ಲಿ ಒಬ್ಬ ಕುಂಬಾರನಿದ್ದ. ಅವನು ಸೋಮಾರಿ. ಅಗಸನ ಏಳಿಗೆ ಕಂಡು ಅವನಿಗೆ ಅಸೂಯೆ ಆಯಿತು. ಹೇಗಾದರೂ ಮಾಡಿ ಅಗಸನನ್ನು ಬಡವನನ್ನಾಗಿ ಮಾಡಬೇಕು ಎಂದು ಅವನು ಯೋಚಿಸಿದ.

ಆ ಊರಿನ ರಾಜನ ಬಳಿ ಕಂದುಬಣ್ಣದ ಆನೆಯೊಂದಿತ್ತು. ಆದರೆ ರಾಜನಿಗೆ ಬಿಳಿಯ ಆನೆಯ ಮೇಲೆ ತುಂಬಾ ವ್ಯಾಮೋಹ. 'ನನ್ನ ಹತ್ತಿರ ಒಂದು ಬಿಳಿಯ ಆನೆಯಿದ್ದರೆ ಎಷ್ಟು ಚೆನ್ನಾಗಿರುತ್ತಿತ್ತು' ಎಂದು ಅವನು ಪದೇ ಪದೇ ಕಂಡವರಲ್ಲೆಲ್ಲಾ ಹೇಳಿಕೊಳ್ಳುತ್ತಿದ್ದ. ಈ ಮಾತು ಕುಂಬಾರನ ಕಿವಿಗೂ ಬಿತ್ತು. ಅಗಸನಿಗೆ ಬುದ್ಧಿ ಕಲಿಸಲು ಒಳ್ಳೆಯ ಸಮಯ ಸಿಕ್ಕಿತು ಎಂದುಕೊಳ್ಳುತ್ತಾ ಕುಂಬಾರ ರಾಜನ ಅರಮನೆಗೆ ಹೋದ. 'ಮಹಾಪ್ರಭೂ, ಬಿಳಿಯ ಆನೆ ಕಂಡರೆ ನಿಮಗೆ ತುಂಬಾ ಇಷ್ಟವೆಂದು ಕೇಳಿದೆ. ನಮ್ಮೂರಿನ ಅಗಸ ಎಲ್ಲರ ಬಟ್ಟೆಗಳನ್ನೂ ಬೆಳ್ಳಗೆ ಮಾಡಿಕೊಡುತ್ತಾನೆ. ನಿಮ್ಮ ಆನೆಯನ್ನು ಬೆಳ್ಳಗೆ ಮಾಡಿಕೊಡಲು ಅವನಿಗೇನೂ

ಕಷ್ಟವಾಗದು' ಎಂದ ಕುಂಬಾರ. ರಾಜನಿಗೆ ಸಂತೋಷ ಆಯಿತು. 'ಹೌದಲ್ಲವೇ? ಈ ವಿಷಯ ನಂಗೆ ಹೊಳೆಯಲೇ ಇಲ್ಲ' ಎನ್ನುತ್ತಾ ಅಗಸನಿಗೆ ಹೇಳಿ ಕಳುಹಿಸಿ, ತನ್ನ ಆನೆಯನ್ನು ಬೆಳ್ಳಗೆ ಮಾಡಿಕೊಡಬೇಕೆಂದು ಆಜ್ಞೆ ಮಾಡಿದ.

ಅಗಸನಿಗೆ ದಿಗ್ಭ್ರಮೆಯಾಯಿತು. ಇಲ್ಲ ಎಂದರೆ ರಾಜನ ಕೋಪಕ್ಕೆ ಬಲಿಯಾಗಬೇಕಾಗುತ್ತದೆ ಎಂದು ಯೋಚಿಸುತ್ತಾ ಒಂದು ಉಪಾಯ ಹೂಡಿದ.

'ಆನೆಯನ್ನು ತೊಳೆಯುವಷ್ಟು ದೊಡ್ಡ ಪಾತ್ರೆ ನನ್ನ ಹತ್ತಿರ ಇಲ್ಲ ಮಹಾಪ್ರಭು. ಅಂಥ ಒಂದು ಪಾತ್ರೆ ಮಾಡಿ ಕೊಡಿ' ಎಂದ ಆಗಸ.

ರಾಜ ಕುಂಬಾರನಿಗೆ ಹೇಳಿ ಕಳುಹಿಸಿ ಅಂಥ ದೊಡ್ಡ ಪಾತ್ರೆ ಸಿದ್ಧಪಡಿಸುವಂತೆ ಅಪ್ಪಣೆ ಕೊಟ್ಟ. ಕುಂಬಾರ ತನ್ನ ಹೆಂಡತಿ ಮಕ್ಕಳು, ಬಂಧುಬಳಗ ಎಲ್ಲರನ್ನೂ ಸೇರಿಸಿಕೊಂಡು ಒಂದು ವಾರ ಕೆಲಸ ಮಾಡಿ ಅಂಥ ಪಾತ್ರೆಯನ್ನು ತಯಾರಿಸಿಕೊಟ್ಟ. ಅಗಸ ಪಾತ್ರೆಯ ತುಂಬ ನೀರು ತುಂಬಿ, ಆನೆಯನ್ನು ಅದರೊಳಗೆ ನಿಲ್ಲಿಸುವಂತೆ ಮಾವುತನಿಗೆ ಹೇಳಿದ. ಆನೆ ಪಾತ್ರೆಯಲ್ಲಿ ಕಾಲಿಟ್ಟೊಡನೆ ಅದರ ಭಾರಕ್ಕೆ ಪಾತ್ರೆ ಒಡೆದು ಹೋಯಿತು.

'ಪಾತ್ರೆ ಆನೆಯ ಭಾರ ತಡೆಯುವಷ್ಟು ದಪ್ಪಗಿರಬೇಕು ಮಹಾಪ್ರಭೂ' ಎಂದ ಅಗಸ. ಕುಂಬಾರನಿಗೆ ಮತ್ತೆ ಆಜ್ಞೆ ಮತ್ತೆ ಕುಂಬಾರ ಕಷ್ಟಪಟ್ಟು ಬಹಳ ದಪ್ಪಗಿನ ಪಾತ್ರೆ ತಯಾರಿಸಿ ಕೊಟ್ಟ. ಅದಕ್ಕೆ ನೀರು ತುಂಬಿದ ಬಳಿಕ ಮಾವುತ ಆನೆಯನ್ನು ಅದರಲ್ಲಿ ನಿಲ್ಲಿಸಿದ. ಅದನ್ನು ಉಬ್ಬೆಗೆ ಹಾಕಲು ಅಗಸ ಪಾತ್ರೆಯ ಕೆಳಗೆ ಬೆಂಕಿ ಹಾಕಿದ. ಆದರೆ ಪಾತ್ರೆ ತುಂಬ ದಪ್ಪಗಿದ್ದುದರಿಂದ ಇಡೀ ದಿನ ಬೆಂಕಿ ಹಾಕಿದರೂ ನೀರು ಬೆಚ್ಚಗಾಗಲಿಲ್ಲ. ಅಗಸ ಹೇಳಿದ.

'ಮಹಾಪ್ರಭೂ, ಪಾತ್ರೆ ಗಟ್ಟಿಯಾಗಿಯೂ ಇರಬೇಕು, ತೆಳ್ಳಗೂ ಇರಬೇಕು. ಅಂಥ ಪಾತ್ರೆಯಿದ್ದರೆ ಮಾತ್ರ ಆನೆಯನ್ನು ಬೆಳ್ಳಗೆ ಮಾಡಲು ಸಾಧ್ಯ.'

ರಾಜನ ಆಜ್ಞೆಯಂತೆ ಕುಂಬಾರ ಪಾತ್ರೆಗಳನ್ನು ಮಾಡಿ ಮಾಡಿ ಸೋತ. ಆದರೆ ಆನೆಯನ್ನು ಬೆಳ್ಳಗೆ ಮಾಡಲು ಸಾಧ್ಯವಾಗುವಂತಹ ಪಾತ್ರೆಯನ್ನು ಸಾಧ್ಯವಾಗಲೇ ಇಲ್ಲ. ರಾಜ ಸಿಟ್ಟುಗೊಂಡು ಕುಂಬಾರನನ್ನು ಊರಿನಿಂದ ಹೊರಗೆ ಹಾಕಿದ.

ಇನ್ನೊಬ್ಬರ ಏಳಿಗೆಯನ್ನು ಕಂಡು ಅಸೂಯೆ ಪಡಬಾರದು ಎಂಬ ಪಾಠವನ್ನು ಕುಂಬಾರ ಕಲಿತ.

* * *

## ನಮ್ಮ ಕೆಲಸ ನಮಗೇ ಚೆನ್ನ

"ದುಂಬಿಯೆ ದುಂಬಿಯೆ
ಹಾರುವೆಯೆಲ್ಲಿಗೆ, ಗುಂಯ್‌ಗುಡುತ?"
"ಬಲ್ಲೆನು ಬಲ್ಲೆನು
ಮಧುವ ಹೀರಲು ಸೊಂಯ್‌ಗುಡುತ"

"ಇರುವೆಯೆ ಇರುವೆಯೆ
ಸಾಲಲಿ ಎಲ್ಲಿಗೆ ಸಾಗಿರುವೆ?"
"ಬಿಡು ಬಿಡು ನಡೆನಡೆ
ಸಿಹಿಯನು ಹೊತ್ತು ಬಾಗಿರುವೆ"

"ಗಿಣಿಯೇ ಗಿಣಿಯೇ
ಮರದಲೆ ಏಕೆ ಕುಳಿತಿರುವೆ?"
"ಅಂದದ ಚಂದದ
ಹಣ್ಣನು ಕುಕ್ಕಿ ಕುಡಿತಿರುವೆ"

"ಕಾಗೆಯೆ ಕಾಗೆಯೆ
ಕುಳಿತಿಹೆ ಒಂಟಿಯೆ ಏಕಲ್ಲಿ?"
"ಆಕಡೆ ಈ ಕಡೆ
ನೋಡುತ ರೊಟ್ಟಿಯ ಕಾದಿರುವೆ"

"ಅವರ ಕೆಲಸವ
ಅವರೇ ಮಾಡಲು ಎಷ್ಟು ಚೆನ್ನ?"
"ನನ್ನ ಕೆಲಸವ
ನಾನೇ ಮಾಡಲು ನಾನೇ ಧನ್ಯ"

**(ಸಂಗ್ರಹ)**

## ಮೌಲ್ಯನಿರ್ಣಯ ಚಟುವಟಿಕೆಗಳು

1. ಉತ್ತರಿಸಿರಿ

1) ಇರುವೆಗೆ ತಿನ್ನಲು ಏನನ್ನು ತರುತ್ತೇನೆಂದು ಮಗು ಹೇಳಿತು?

2) ಶ್ರೀಮಂತ ವರ್ತಕನು ನೇಕಾರನಲ್ಲಿ ಏನೆಂದು ಹೇಳಿದನು?

3) ಪೀಠೋಪಕರಣಗಳನ್ನು ತಯಾರಿಸುವವರು ಯಾರು?

2. ಹುಡುಗನು ಓದು ಬರಹ ಮುಗಿಸಿಕೊಂಡು ಉಳಿದ ಸಮಯದಲ್ಲಿ ಆಟ ಆಡುತ್ತೇನೆಂದು ತೀರ್ಮಾನಿಸಲು ಕಾರಣವೇನು?

1) ಸನ್ಯಾಸಿಯು ನೇಕಾರನಲ್ಲಿ ಏನೆಂದು ಹೇಳಿದನು?

2) ಬಡಗಿಯು ತನ್ನ ಕೆಲಸದಲ್ಲಿ ಕುಶಲತೆಯನ್ನು ಹೇಗೆ ತೋರುತ್ತಾನೆ?

3. ಪದಗಳ ಅರ್ಥ ಬರೆಯಿರಿ.

   1) ಕುಶಲ
   2) ವೇಳೆ
   3) ವರ್ತಕ
   4) ಪಟ್ಟಣ

5. ಮಗು ಮತ್ತು ಕೋಗಿಲೆಯ ಸಂಭಾಷಣೆಯನ್ನು ಗದ್ಯರೂಪದಲ್ಲಿ ಬರೆಯಿರಿ.

6. ಕೆಳಗಿನ ಒಗಟುಗಳಿಗೆ ಉತ್ತರ ಬರೆಯಿರಿ.

   1. ಹಸಿರು ಗಿಡದಲ್ಲಿ ಮೊಸರು ಚೆಲ್ಲಿದೆ
   2. ಉದ್ದ ಮರದಲ್ಲಿ ಕೆಂಪು ಸನ್ಯಾಸಿ
   3. ಚಿಕ್ಕ ಮನೆಗೆ ಚಿನ್ನದ ಬೀಗ

* * *

# 5. ಸಮರಸವೇ ಜೀವನ

ಕುಟುಂಬ ಎನ್ನುವುದು ಮಗುವಿನ ದೈಹಿಕ ಹಾಗೂ ಮಾನಸಿಕ ಬೆಳವಣಿಗೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಮಕ್ಕಳು ತಮ್ಮ ಕುಟುಂಬವನ್ನು ನೋಡಿಕೊಂಡು ತಮಗರಿವಿಲ್ಲದಂತೆಯೇ ಕೆಲವು ಮೌಲ್ಯಗಳನ್ನು ಮೈಗೂಡಿಸಿಕೊಳ್ಳುತ್ತಾರೆ. ಪ್ರೀತಿ, ಸ್ನೇಹ, ಹೊಂದಾಣಿಕೆ, ದಯೆ, ಅನುಕಂಪ ಮೊದಲಾದ ಮನೋಭಾವಗಳ ಬೆಳವಣಿಗೆಗೆ ಕುಟುಂಬ ಜೀವನವು ಅಗತ್ಯವಾಗಿದೆ.

ಮಕ್ಕಳು ಎಳವೆಯಲ್ಲಿ ಇಂತಹ ಮೌಲ್ಯಗಳನ್ನು ಮೈಗೂಡಿಸಿಕೊಂಡು ಇತರರೊಂದಿಗೆ ಪ್ರೀತಿ, ಸ್ನೇಹ, ಸಹಕಾರದಿಂದ ಬದುಕುವ ಮನೋಭಾವವನ್ನು ಬೆಳೆಸಬೇಕೆಂಬುದು ಈ ಘಟಕದ ಉದ್ದೇಶವಾಗಿದೆ. ಈ ಘಟಕದಲ್ಲಿ ಪಿಕ್‌ನಿಕ್, ತಾಯಿತಂದೆ, ನನಗಿದೆಲ್ಲ ತಿಳಿದೇ ಇರಲಿಲ್ಲ ಎನ್ನುವ ಪಾಠಭಾಗಗಳನ್ನು ನೀಡಲಾಗಿದೆ.

ಪಿಕ್‌ನಿಕ್ ಎನ್ನುವುದು ಶ್ರೀಲತಾ ರಾಜರತ್ನಂ ಬರೆದ ಒಂದು ಅನುಭವ ಟಿಪ್ಪಣಿ ಆಗಿದೆ. ರಜಾದಿನಗಳಲ್ಲಿ ಕುಟುಂಬದ ಸದಸ್ಯರೆಲ್ಲರೂ ಪರಿಸರದ ಮಡಿಲಲ್ಲಿ ಸಂಭ್ರಮ ಪಡುವ ಒಂದು ಚಿಕ್ಕ ಭಾಗವನ್ನು ಇಲ್ಲಿ ನೀಡಲಾಗಿದೆ. ಪ್ರವಾಸದ ಅನುಭವಗಳನ್ನು ಸಂಕ್ಷಿಪ್ತವಾಗಿ ಬರೆಯುವ ಅಭ್ಯಾಸವನ್ನು ಮಕ್ಕಳಲ್ಲಿ ಬೆಳೆಸುವುದು ಈ ಪಾಠದ ಉದ್ದೇಶವಾಗಿದೆ.

'ತಾಯಿತಂದೆ' ಎಂಬುದು ಒಂದು ಪದ್ಯವಾಗಿದೆ. ಮಕ್ಕಳ ಸರ್ವತೋಮುಖ ಬೆಳವಣಿಗೆಯಲ್ಲಿ ತಾಯಿ-ತಂದೆ ಎಂತಹ ಪಾತ್ರವಹಿಸುತ್ತಾರೆ? ಯಾವ ರೀತಿ ಮಕ್ಕಳನ್ನು ಒಬ್ಬ ಉತ್ತಮ ಪ್ರಜೆಯಾಗಲು ಪ್ರೇರೇಪಿಸುತ್ತಾರೆ ಎಂಬುದನ್ನು ಈ ಪದ್ಯದಲ್ಲಿ ನೀಡಲಾಗಿದೆ. ಪದ್ಯವನ್ನು ರಾಗವಾಗಿ ಹಾಡುವುದು, ತಂದೆತಾಯಿಯರ ತ್ಯಾಗದ ಬಗ್ಗೆ ತಿಳಿಸುವುದು ಹಾಗೂ ಹೊಸ ಹಾಡುಗಳನ್ನು ಬರೆಯಲು ಪ್ರೇರೇಪಿಸುವುದು ಈ ಪಾಠದ ಪ್ರಧಾನ ಉದ್ದೇಶವಾಗಿದೆ.

'ನನಗಿದೆಲ್ಲ ತಿಳಿದೇ ಇರಲಿಲ್ಲ' ಎಂಬುದು ಒಂದು ನಾಟಕವಾಗಿದೆ. ಮಕ್ಕಳು ದುಶ್ಚಟಗಳಿಗೆ ಯಾವ ರೀತಿ ಬಲಿಯಾಗುತ್ತಾರೆ? ಅವರ ಪ್ರತಿಯೊಂದು ನಡೆನುಡಿಯ ಕಡೆಗೂ ಹೆತ್ತವರು ಗಮನ ಹರಿಸದಿದ್ದರೆ ಆಗುವ ಪರಿಣಾಮಗಳೇನು? ಮಕ್ಕಳು ಕೆಟ್ಟವರ ಸ್ನೇಹ ಮಾಡಿದರೆ ಏನಾಗುತ್ತದೆ ಮೊದಲಾದ ವಿಚಾರಗಳನ್ನು ಈ ನಾಟಕದಿಂದ ತಿಳಿಯಬಹುದು. ಮಾದಕ ವಸ್ತುಗಳ ಸೇವನೆಯ ವಿರುದ್ಧ ಜಾಗೃತಿ ಮೂಡಿಸುವುದು ಮತ್ತು ನಾಟಕ ಎಂಬ ವ್ಯವಹಾರ ರೂಪವನ್ನು ಪರಿಚಯಿಸುವುದು ಈ ಪಾಠಭಾಗದ ಉದ್ದೇಶ.

ಪಾಠದ ಸಂದರ್ಭದಲ್ಲಿ I.C.T. ಯನ್ನು ತರಗತಿಕೋಣೆಯಲ್ಲಿ ಯೋಗ್ಯವಾದ ರೀತಿಯಲ್ಲಿ ಬಳಸಬೇಕು.

## ಕಲಿಕಾ ಸಾಧನೆಗಳು

- ಪದ ಪ್ರಯೋಗಗಳು, ಶೈಲಿಗಳು, ಆಲಿಸಿದ ನೂತನ ಪದಗಳು ಮೊದಲಾದವುಗಳನ್ನು ಸಂದರ್ಭಕ್ಕನು ಗುಣವಾಗಿ ಮಾತುಗಾರಿಕೆಯಲ್ಲಿ ಬಳಸುವುದು.
- ಕವಿತೆಗಳನ್ನು ಆಲಿಸಿ, ಆಸ್ವಾದಿಸಿ ಅವುಗಳ ಆಶಯವನ್ನು ಅರ್ಥೈಸಿಕೊಂಡು ರಾಗ, ತಾಳ, ಭಾವಗಳಿಂದ ಹಾಡುವುದು.
- ನಿರ್ದಿಷ್ಟ ಭಾಷಾ ವ್ಯವಹಾರ ರೂಪಗಳನ್ನು ಶ್ರೋತೃಗಳಿಗೆ ಆಶಯಸ್ಪಷ್ಟವಾಗುವ ರೀತಿಯಲ್ಲಿ ಉಚ್ಚಾರ ಸ್ಪಷ್ಟತೆಯಿಂದ ಸರಾಗವಾಗಿ ಓದುವುದು.
- ಸೃಜನಾತ್ಮಕ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡು ತನ್ನ ರಚನೆಗಳನ್ನು ತರಗತಿಯ ಸಂಚಿಕೆಗಳು ಹಾಗೂ ಹಸ್ತಪತ್ರಿಕೆಗಳಿಗೆ ನೀಡುವುದು.
- ತನ್ನ ಅನುಭವಗಳನ್ನು ದಿನಚರಿ (ಡಯರಿ) ರೂಪದಲ್ಲಿ ಬರೆಯುವುದು.
- ಕಥೆ, ಕವಿತೆಗಳನ್ನು ಆಲಿಸಿ ಅವುಗಳಿಗೆ ಸೂಕ್ತವಾದ ಶೀರ್ಷಿಕೆಗಳನ್ನು ಸೂಚಿಸಿ ಔಚಿತ್ಯವನ್ನು ತಿಳಿಸುವುದು.
- ಸರಳ ಕವಿತೆಗಳನ್ನು ರಾಗ, ತಾಳ, ಭಾವದೊಂದಿಗೆ ಹಾಡುವುದು ಹಾಗೂ ಸಮಾನ ರಾಗದಲ್ಲಿ ಹಾಡಬಹುದಾದ ಸಾಲುಗಳನ್ನು ಬರೆಯುವುದು.
- ಓದಿ ಅಸ್ವಾದಿಸಿದ ಕತೆಗಳು, ಕವಿತೆಗಳ ಪಾತ್ರಗಳ ಅಭಿನಯ, ಮೂಕಾಭಿನಯ ಮಾಡುವುದು.

# ಯೂನಿಟ್ ಗ್ರಿಡ್ : 5. ಸಮರಸವೇ ಜೀವನ

| ಆಶಯಗಳು | ಪ್ರಕ್ರಿಯೆಗಳು | ಕಲಿಕಾ ಸಾಧನೆಗಳು |
|---|---|---|
| **1. ಪಿಕ್‌ನಿಕ್** | | **ಸಮಯ : 6 ಗಂಟೆಗಳು** |
| • ಓದಿದ ಆಶಯಗಳು ಸ್ಪಷ್ಟವಾಗುವಂತೆ ಪ್ರಶ್ನೆಗಳನ್ನು ತಯಾರಿಸುವುದು. ಪ್ರವಾಸ ಅನುಭವ ಬರೆಯುವ ರೀತಿಯನ್ನು ತಿಳಿಯುವುದು. | • ಪಾಠಭಾಗವನ್ನು ಓದಿ ಆಶಯವನ್ನು ಗ್ರಹಿಸಿಕೊಂಡು ನೀಡಿದ ಪ್ರಶ್ನೆಗಳಿಗೆ ಉತ್ತರಿಸುವುದು. | • ನಿರ್ದಿಷ್ಟ ಭಾಷಾ ವ್ಯವಹಾರ ರೂಪಗಳನ್ನು ಉಚ್ಚಾರ ಸ್ಪಷ್ಟತೆಯಿಂದ ಶ್ರೋತೃಗಳಿಗೆ ಆಶಯ ಸ್ಪಷ್ಟವಾಗುವ ರೀತಿಯಲ್ಲಿ ಓದುವುದು.<br>• ರಚನೆಗಳಲ್ಲಿ ಬಳಸುವ ಲೇಖನ ಚಿಹ್ನೆಗಳನ್ನು |
| • ಯಾವುದೇ ಒಂದು ವಾಕ್ಯವು ಸಮರ್ಪಕವಾದ ಅರ್ಥವನ್ನು ನೀಡಬೇಕಾದರೆ ಸೂಕ್ತವಾದ ಲೇಖನ ಚಿಹ್ನೆಗಳನ್ನು ಬಳಸಬೇಕು. | • ಪಾಠಭಾಗವನ್ನು ಓದಿ ಅದರಲ್ಲಿ ಬಂದಿರುವ ಇಂಗ್ಲಿಷ್ ಪದಗಳನ್ನು ಪಟ್ಟಿಮಾಡುವುದು. | (ಪೂರ್ಣವಿರಾಮ, ಅರ್ಧವಿರಾಮ, ಅಲ್ಪ ವಿರಾಮ, ಪ್ರಶ್ನಾರ್ಥಕ, ಭಾವಸೂಚಕ, ಉದ್ಧರಣ) ತಿಳಿದುಕೊಂಡು ತನ್ನ ರಚನೆಗಳನ್ನು ಬಳಸಿಕೊಳ್ಳುವುದು. |
| • ಅಕ್ಷರ, ಪದ, ಕಾಗುಣಿತ, ವಾಕ್ಯಗಳನ್ನುಪಯೋಗಿಸಿ ಭಾಷಾ ಆಟಗಳಲ್ಲಿ ಭಾಗವಹಿಸುವುದು. | • ಗದ್ಯಭಾಗವನ್ನು ಓದಿ ಅಡಿಗೆರೆ ಎಳೆದ ಪದಗಳಿಗೆ ಸಮಾನ ಅರ್ಥಕೊಡುವ ಪದಗಳನ್ನು ಕಂಡುಕೊಂಡು ಹೊಸ ವಾಕ್ಯಗಳನ್ನು ರಚಿಸುವುದು. | • ಸೃಜನಾತ್ಮಕ ಚಟುವಟಿಕೆಗಳನ್ನು ತೊಡಗಿಸಿಕೊಂಡು ತನ್ನ ರಚನೆಗಳನ್ನು ತರಗತಿಯ ಸಂಚಿಕೆಗಳು ಹಾಗೂ ಹಸ್ತ ಪತ್ರಿಕೆಗಳಿಗೆ ನೀಡುವುದು. |
| • ಜನತೆ, ಜೀವನ ರೀತಿ, ಸ್ಥಳ, ಪ್ರಕೃತಿ ಸೌಂದರ್ಯ ಇವುಗಳೆಲ್ಲಾ ಒಟ್ಟು ಸೇರಿರುವುದೇ ಪ್ರವಾಸ ಕಥನವಾಗಿದೆ. | • ನೀಡಿರುವ ಗದ್ಯಭಾಗವನ್ನು ಓದಿ ಬೇರೊಂದು ಗದ್ಯಭಾಗದೊಂದಿಗೆ ಹೋಲಿಸಿ ಲೇಖನ ಚಿಹ್ನೆಗಳನ್ನು ಸೂಕ್ತವಾಗಿ ಉಪಯೋಗಿಸಿ ಬರೆಯುವುದು. | |
| • ಪ್ರವಾಸದ ಅನುಭವಗಳನ್ನು ಬರೆದಿಡುವುದು ಒಂದು ಉತ್ತಮ ಹವ್ಯಾಸವಾಗಿದೆ. | • ತಾವು ಹೋದ ಪ್ರವಾಸದ ಅನುಭವಗಳನ್ನು ಬರೆಯುವುದು. | |

| ಆಶಯಗಳು | ಪ್ರಕ್ರಿಯೆಗಳು | ಕಲಿಕಾ ಸಾಧನೆಗಳು |
|---|---|---|
| **2. ತಾಯಿತಂದೆ** | | **ಸಮಯ : 6 ಗಂಟೆಗಳು** |
| • ಮಕ್ಕಳ ಸರ್ವತೋಮುಖ ಬೆಳವಣಿಗೆಯಲ್ಲಿ ತಾಯಿತಂದೆ ಯರು ಪ್ರಧಾನ ಪಾತ್ರ ವಹಿಸುತ್ತಾರೆ. ನಮ್ಮ ಜೀವನದಲ್ಲಿ ತಾಯಿ ತಂದೆಯರ ಪ್ರಾಧಾನ್ಯತೆಯನ್ನು ತಿಳಿಯುವುದು. | • ಪದ್ಯವನ್ನು ರಾಗ, ತಾಳ, ಭಾವನೆಗಳೊಂದಿಗೆ ವೈಯುಕ್ತಿಕವಾಗಿಯೂ, ಗುಂಪಾಗಿಯೂ ಹಾಡುವುದು. | • ಕವಿತೆಗಳನ್ನು ಆಲಿಸಿ ಆಸ್ವಾದಿಸಿ ಅವುಗಳ ಆಶಯವನ್ನು ಅರ್ಥೈಸಿಕೊಂಡು ರಾಗ, ತಾಳ, ಭಾವಗಳಿಂದ ಹಾಡುವುದು. |
| • ರಾಗತಾಳಗಳೊಂದಿಗೆ ಭಾವಪೂರ್ಣವಾಗಿ ಮಂಡಿಸುವಾಗ ಕವಿತೆಯು ಆಸ್ವಾದಕರವೆನಿಸುವುದು. | • ಪದ್ಯವನ್ನು ಓದಿ ಆಶಯವನ್ನು ಗ್ರಹಿಸಿಕೊಂಡು ನೀಡಿದ ಪ್ರಶ್ನೆಗಳಿಗೆ ಉತ್ತರಿಸುವುದು. | |
| • ಚರ್ಚೆಗಳಲ್ಲಿ ಪಾಲ್ಗೊಳ್ಳುವುದರ ಮೂಲಕ ತಮ್ಮ ಅಭಿಪ್ರಾಯಗಳನ್ನು ಸ್ವತಂತ್ರವಾಗಿ ವ್ಯಕ್ತಪಡಿಸುವುದು. | • ಪದ್ಯದಲ್ಲಿ ಇಷ್ಟವಾದ ಸಾಲುಗಳುಯಾವುವು? ಯಾಕೆ? ಎಂದು ಬರೆದು ತಮ್ಮ ಅಭಿಪ್ರಾಯಗಳನ್ನು ಸಮರ್ಥಿಸಿಕೊಳ್ಳುವುದು.<br>• ಮಕ್ಕಳ ಹಿತ ಚಿಂತನೆಯನ್ನು ತಂದೆ ತಾಯಿಗಳು ಯಾವ ರೀತಿ ಮಾಡುವರು ಎಂದು ಚರ್ಚಿಸುವುದು. | • ಪದ ಪ್ರಯೋಗಗಳು, ಶೈಲಿಗಳು, ಆಲಿಸಿದ ನೂತನ ಪದಗಳು ಮೊದಲಾದವುಗಳನ್ನು ಸಂದರ್ಭಕ್ಕನುಗುಣವಾಗಿ ಮಾತುಗಾರಿಕೆಯಲ್ಲಿ ಬಳಸುವುದು. |
| • ಆಶಯಗಳನ್ನು ಪ್ರತಿಬಿಂಬಿಸುವ ಸಾಲುಗಳು, ಸಾಲುಗಳಲ್ಲಿ ಸೂಕ್ತವಾದ ಪದಗಳು, ಸಾಲುಗಳ ಕ್ರಮೀಕರಣ, ತಾಳ ಎಂಬಿವುಗಳು ಕವಿತೆಗೆ ಸೌಂದರ್ಯವನ್ನು ನೀಡುವುದು. | • ತಂದೆ, ತಾಯಿಯರ ಕುರಿತು ಮಕ್ಕಳು ಸ್ವತಂತ್ರವಾಗಿ ಕವಿತೆಯನ್ನು ರಚಿಸುವುದು. | • ಸೃಜನಾತ್ಮಕ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡು ತನ್ನ ರಚನೆಗಳನ್ನು ತರಗತಿಯ ಸಂಚಿಕೆಗಳು ಹಾಗೂ ಹಸ್ತ ಪ್ರತಿಗಳಿಗೆ ನೀಡುವುದು. |

| ಆಶಯಗಳು | ಪ್ರಕ್ರಿಯೆಗಳು | ಕಲಿಕಾ ಸಾಧನೆಗಳು |
|---|---|---|
| **3. ನನಗಿದು ತಿಳಿದೇ ಇರಲಿಲ್ಲ** | | **ಸಮಯ : 6 ಗಂಟೆಗಳು** |
| • ಮಾದಕ ವಸ್ತುಗಳ ಸೇವನೆಯು ಆರೋಗ್ಯಕ್ಕೆ ಹಾನಿಕರ ಎಂದು ತಿಳಿಯುವುದು. ಮಾದಕ ವಸ್ತು ಬಳಕೆಯ ವಿರುದ್ಧ ಜನಜಾಗೃತಿ ಮೂಡಿಸುವುದು. | • ನನಗಿದೆಲ್ಲ ತಿಳಿದೇ ಇರಲಿಲ್ಲ ನಾಟಕವನ್ನು ಆಶಯಗ್ರಹಣದೊಂದಿಗೆ ಓದುವುದು. | • ನಿರ್ದಿಷ್ಟವಾದ ಭಾಷಾ ವ್ಯವಹಾರ ರೂಪಗಳನ್ನು ಶ್ರೋತೃಗಳಿಗೆ ಆಶಯಸ್ಪಷ್ಟವಾಗುವ ರೀತಿಯಲ್ಲಿ ಉಚ್ಚಾರ ಸ್ಪಷ್ಟತೆಯಿಂದ ಸರಾಗವಾಗಿ ಓದುವುದು. |
| • ಕಥಾ ವಸ್ತು, ಪಾತ್ರಗಳ ಸ್ವಭಾವ, ಘಟನೆಗಳು, ದೃಶ್ಯಗಳ ಕ್ರಮೀಕರಣ, ಪಾತ್ರಗಳಿಗನುಸರಿಸಿದ ಸಂಭಾಷಣೆ ಎಂಬಿವುಗಳು ನಾಟಕದ ವಿಶೇಷತೆಗಳಾಗಿವೆ.<br>• ಆಶಯ ಹಾಗೂ ಕಥಾಪಾತ್ರಗಳ ಮಾತುಗಳ ಆಧಾರದಲ್ಲಿ ಸಂದರ್ಭಗಳನ್ನು ತಿಳಿಯುವುದು. | • ತರಗತಿಯ ಮಕ್ಕಳಿಗೆ ಅನುಗುಣವಾಗಿ ಗುಂಪುಗಳನ್ನು ಮಾಡಿಕೊಂಡು ಕಥಾಪಾತ್ರಗಳನ್ನು ಹಂಚಿಕೊಂಡು ಅಭಿನಯಿಸುವುದು.<br>• ನಾಟಕವನ್ನು ಕಥೆಯಾಗಿ ಬದಲಾಯಿಸಬಹುದು.<br>• ನಾಟಕದಲ್ಲಿ ಬರುವ ಪಾತ್ರಗಳಲ್ಲಿ ಮಕ್ಕಳಿಗೆ ಇಷ್ಟವಾಗುವ ಪಾತ್ರಗಳನ್ನು ಬರೆಯುವುದು ಹಾಗೂ ಯಾಕೆ ಇಷ್ಟ ಎಂದು ಸಮರ್ಥಿಸುವುದು. | • ಓದಿ ಆಸ್ವಾದಿಸಿದ ಕತೆಗಳು, ಕವಿತೆಗಳ, ಪಾತ್ರಗಳ ಅಭಿನಯ,ಮೂಕಾಭಿನಯ ಮಾಡುವುದು.<br>• ಭಾಷಾ ವ್ಯವಹಾರ ರೂಪಗಳನ್ನು ಬೇರೆ ಬೇರೆ ರೀತಿಯಲ್ಲಿ ರೂಪಾಂತರಿಸಲಾಗುವುದು. |
| • ನಾಟಕದ ಆಶಯದ ಆಧಾರದಲ್ಲಿ ಸಂದರ್ಭಗಳನ್ನು ಕಂಡುಕೊಳ್ಳುವುದು. ಬರೆದು ಮಂಡಿಸುವುದು. | • ನನಗಿದೆಲ್ಲ ತಿಳಿದೇ ಇರಲಿಲ್ಲ ನಾಟಕವನ್ನು ಕಥೆಯಾಗಿ ಬರೆಯುವುದು ಹಾಗೂ ಯೋಗ್ಯ ಶೀರ್ಷಿಕೆಯನ್ನು ನೀಡುವುದು. | • ಕಥೆ, ಕವಿತೆಗಳನ್ನು ಆಲಿಸಿ ಅವುಗಳಿಗೆ ಸೂಕ್ತವಾದ ಶೀರ್ಷಿಕೆಗಳನ್ನು ಸೂಚಿಸಿ ಔಚಿತ್ಯವನ್ನು ತಿಳಿಸುವುದು. |
| • ಅಕ್ಷರ, ಪದ, ಕಾಗುಣಿತ ವಾಕ್ಯಗಳನ್ನುಪಯೋಗಿಸಿ ವಿವಿಧ ಭಾಷಾ ಆಟಗಳನ್ನು ಆಡುವುದು. | • ಪಾಠಪುಸ್ತಕದಲ್ಲಿರುವ ವಿವಿಧ ಭಾಷಾ ಚಟುವಟಿಕೆಗಳನ್ನು ಬರೆದು ತರಗತಿಯಲ್ಲಿ ಮಂಡಿಸುವುದು. | • ತನ್ನ ಸಹಪಾಠಿಗಳ ರಚನೆಗಳನ್ನು ಮೌಲ್ಯನಿರ್ಣಯ ಮಾಡಿ ಇತರರ ರಚನೆ ಗಳಲ್ಲಿನ ಪ್ರಯೋಗಗಳು, ಶೈಲಿಗಳನ್ನು ವಿಶ್ಲೇಷಿಸಿ ತನ್ನ ರಚನೆಯನ್ನು ಉತ್ತಮಪಡಿಸುವುದು. |
| • ಪ್ರತಿದಿನ ಘಟನೆಗಳನ್ನು ವಿಭಿನ್ನ ರೀತಿಗಳಲ್ಲಿ ಬರೆಯುವುದು ದಿನಚರಿ ಬರವಣಿಗೆಯ ಕ್ರಮವಾಗಿದೆ. | • ಸೂಕ್ತವಾದ ಕಾಗುಣಿತಗಳನ್ನು ಸೇರಿಸಿ ವಾಕ್ಯಗಳನ್ನು ಸರಿಪಡಿಸುವುದು. | • ತನ್ನ ಅನುಭವಗಳನ್ನು ದಿನಚರಿ ರೂಪದಲ್ಲಿ ಬರೆಯುವುದು. |

# ಪಿಕ್‌ನಿಕ್

## ❑ ಪಾಠಭಾಗದೆಡೆಗೆ

ಪಿಕ್‌ನಿಕ್‌ನ ಕುರಿತಾದ ಪೂರ್ವಜ್ಞಾನದ ಪ್ರಶ್ನೆಗಳನ್ನು ಕೇಳುವುದು.

- ನೀವು ಎಂದಾದರೂ ಪ್ರವಾಸ ಹೋಗಿದ್ದೀರಾ?
- ಎಲ್ಲಿಗೆ ಪ್ರವಾಸ ಹೋಗಿದ್ದೀರಿ?
- ಯಾರ ಜತೆಗೆ ಹೋಗಿದ್ದೀರಿ? ಅಲ್ಲಿ ಏನೇನು ನೋಡಿದ್ದೀರಿ?

ಈ ಮೂಲಕ ಪಾಠಪ್ರವೇಶ ಮಾಡುವುದು.

## ❑ ಚಿತ್ರ ಓದು

ಮಕ್ಕಳು ಪಾಠಭಾಗದಲ್ಲಿ ನೀಡಲಾದ ಚಿತ್ರವನ್ನು ನಿರೀಕ್ಷಿಸಲಿ. ಅನಂತರ ಚಿತ್ರದಲ್ಲಿ ಏನೇನು ಕಾಣಿಸುತ್ತವೆ? ಎಂದು ತಮ್ಮ ಅಭಿಪ್ರಾಯಗಳನ್ನು ವೈಯಕ್ತಿಕವಾಗಿ ಹೇಳಲಿ. ಅಧ್ಯಾಪಕರು ಅದನ್ನು ಕ್ರೋಡೀಕರಿಸುವುದು.

ಅನಂತರ ಮಕ್ಕಳು ಪಾಠಭಾಗವನ್ನು ವೈಯಕ್ತಿಕವಾಗಿ ಓದಲಿ. ನೀಡಲಾದ ನವೀನ ಪದಗಳ ಅರ್ಥಗಳನ್ನು ಕಂಡುಕೊಂಡು ಓದಲಿ. ಓದಿ ತಿಳಿದ ಆಶಯವನ್ನು ಮಂಡಿಸಲಿ ಬಳಿಕ ಅಧ್ಯಾಪಕರು ಪಾಠಭಾಗವನ್ನು ಗಟ್ಟಿಯಾಗಿ ಸೂಕ್ತ ಸ್ವರಭಾರದೊಂದಿಗೆ ಓದಿ ಮಂಡಿಸುವುದು. ಬಿಟ್ಟು ಹೋದ ಆಶಯುವನ್ನು ಮಕ್ಕಳೊಂದಿಗೆ ಚರ್ಚಿಸಿ ಕ್ರೋಡೀಕರಿಸುವುದು.

## ❑ ಉತ್ತರಿಸಿರಿ

- ಪಾಠಭಾಗದಲ್ಲಿ ನೀಡಿರುವ ಪ್ರಶ್ನೆಗಳಿಗೆ ಮಕ್ಕಳು ವೈಯಕ್ತಿಕವಾಗಿ ಉತ್ತರಿಸಲಿ. ಬರೆದ ಉತ್ತರಗಳನ್ನು ಮಂಡಿಸಲಿ. ಅಧ್ಯಾಪಕರು ಅಗತ್ಯವಿದ್ದಲ್ಲಿ ಸಹಾಯ ನೀಡುವುದು.

## ❑ ಪಟ್ಟಿ ಮಾಡುವ

ನಾವು ದಿನನಿತ್ಯ ವ್ಯವಹರಿಸುವಾಗ ಕನ್ನಡ ಪದಗಳಿಗೆ ಬದಲಾಗಿ ಹಲವಾರು ಅನ್ಯಭಾಷೆಯ ಪದಗಳನ್ನು ಬಳಕೆ ಮಾಡುತ್ತೇವೆ. ಇಂತಹ ಪದಗಳ ಬಳಕೆ ನಮ್ಮ ಜೀವನದಲ್ಲಿ ಹಾಸುಹೊಕ್ಕಾಗಿದೆ. ನಾವು ಸಾಮಾನ್ಯವಾಗಿ ಬಳಸುವ ಕೆಲವು ಅನ್ಯಭಾಷೆಯ ಪದಗಳನ್ನು ಇಲ್ಲಿ ನೀಡಲಾಗಿದೆ.

ಉದಾಹರಣೆಗೆ :

| | | |
|---|---|---|
| ದೂರದರ್ಶನ | – | ಟಿ.ವಿ. |
| ಗಂಟೆ | – | ಬೆಲ್ |
| ಲೇಖನಿ | – | ಪೆನ್ |
| ಮಂಜುಗಡ್ಡೆ | – | ಐಸ್ |

ಇಂತಹ ಕೆಲವು ಪದಗಳು ಈ ಪಾಠಭಾಗದಲ್ಲಿ ಬಂದಿವೆ. ಅವುಗಳನ್ನು ಮಕ್ಕಳು ವೈಯಕ್ತಿಕವಾಗಿ ಪಟ್ಟಿ ಮಾಡಲಿ. ಅನಂತರ ದಿನಬಳಕೆಯಲ್ಲಿ ಉಪಯೋಗಿಸುವ ಅನ್ಯ ಭಾಷೆಯ ಪದಗಳನ್ನು ಗುಂಪಿನಲ್ಲಿ ಪಟ್ಟಿ ಮಾಡಲಿ. ಆ ಪದಗಳಿಗೆ ಸರಿಯಾದ ಕನ್ನಡ ಪದಗಳನ್ನು ಬರೆದು ಮಂಡಿಸಲಿ. ಯಾವ ಗುಂಪು ಅತಿ ಹೆಚ್ಚು ಪದಗಳನ್ನುಬರೆಯುವುದೋ ಆ ಗುಂಪನ್ನು ಅಭಿನಂದಿಸುವುದು.

ಇಂಗ್ಲಿಷ್ ಪದಗಳು :

ಪಿಕ್‌ನಿಕ್

ಸ್ಪ್ರೆಡ್ ಈಗಲ್ ಫಾಲ್ಸ್

- **ಸಮಾನ ಪದಗಳನ್ನು ಆರಿಸಿ ಬರೆಯುವ**

ನೀಡಿರುವ ಗದ್ಯಭಾಗವನ್ನು ಮಕ್ಕಳು ಓದಿ ಆಶಯವನ್ನು ಗ್ರಹಿಸಲಿ. ಅಡಿಗೆರೆ ಎಳೆದ ಪದಗಳನ್ನು ಗಮನಿಸಲಿ. ಅಡಿಗೆರೆ ಎಳೆದ ಪದಗಳಿಗೆ ಅದೇ ಅರ್ಥ ಬರುವ ಪದಗಳನ್ನು ಪಾಠಭಾಗದಿಂದ ಕಂಡುಕೊಳ್ಳಲಿ. ಆ ಪದಗಳನ್ನು ಮಂಡಿಸಲಿ. ಕಂಡುಕೊಂಡ ಪದಗಳಿಂದ ಹೊಸ ವಾಕ್ಯಗಳನ್ನು ರಚಿಸಿ ಮಂಡಿಸಲಿ. ಅಧ್ಯಾಪಕರು ವಾಕ್ಯಗಳನ್ನು ಕರಿಹಲಗೆಯಲ್ಲಿ ಬರೆಯುವುದು. ಸಮರ್ಪಕವಾದ ವಾಕ್ಯಗಳನ್ನು ಕಂಡುಕೊಳ್ಳುವುದು.

- **ಮಾದರಿ ವಾಕ್ಯಗಳು**

ಉದಾ:

| | | |
|---|---|---|
| ಭಾನುವಾರ | – | ಆದಿತ್ಯವಾರ |
| ಬಳಿಗೆ | – | ಸಮೀಪಕ್ಕೆ |
| ಜಲ | – | ನೀರು |
| ನಿವಾಸ | – | ಮನೆ |

ಆದಿತ್ಯವಾರದಂದು ಸಂಜೆ ನಾವು ಕಡಲ ಕಿನಾರೆಗೆ ಹೋಗಿದ್ದೆವು.

ದನದ ಸಮೀಪಕ್ಕೆ ಕರು ಓಡೋಡಿ ಬರುತ್ತದೆ.

ನಮಗೆ ಕುಡಿಯಲು ನೀರು ಬೇಕೇಬೇಕು.

ಮನೆಯನ್ನು ಶುಚಿಯಾಗಿಟ್ಟುಕೊಳ್ಳುವುದು ಎಲ್ಲರ ಕರ್ತವ್ಯ.

- **ಪ್ರವಾಸಾನುಭವ ಬರೆಯಿರಿ**

ಪ್ರಕೃತಿಯೊಂದಿಗೆ ಬೆರೆಯಲು ಮತ್ತು ಪ್ರಕೃತಿಯನ್ನು ತಿಳಿಯಲು ನಾವು ಪ್ರವಾಸ ಹೋಗುತ್ತೇವೆ. ಪ್ರವಾಸದ ಕೆಲವು ಅವಿಸ್ಮರಣೀಯ ಅನುಭವಗಳು ನಮ್ಮ ನೆನಪಿನಲ್ಲಿ ಅಚ್ಚಳಿಯದೆ ಉಳಿಯುತ್ತವೆ. ಪ್ರವಾಸ ಹೋಗಿ ಬಂದ ಅನಂತರ ಅವುಗಳನ್ನು ಬರೆದಿಡುವುದು ಒಂದು ಉತ್ತಮ ಹವ್ಯಾಸ. ಆ ಹವ್ಯಾಸವನ್ನು ಬೆಳೆಸುವ ಉದ್ದೇಶದಿಂದ ಈ ಚಟುವಟಿಕೆಯನ್ನು ನೀಡಲಾಗಿದೆ.

ಶ್ರೀಲತಾ ರಾಜರತ್ನಂ ಅವರು ಬರೆದ ಪ್ರವಾಸದ ಅನುಭವಗಳನ್ನು ತಿಳಿದಿರಲ್ಲವೇ?ನೀವೂ ಕೂಡಾ ಇದೇ ರೀತಿ ಬೇರೆ ಬೇರೆ ಕಡೆಗೆ ಪ್ರವಾಸ ಹೋಗಿರುವಿರಲ್ಲವೇ. ಅಲ್ಲಿ ನಿಮಗಾದ ಅನುಭವಗಳೇನು? ಮಕ್ಕಳೊಂದಿಗೆ ಚರ್ಚಿಸುವುದು.

**1CT ಸಾಧ್ಯತೆ :**

ವಿವಿಧ ಪ್ರವಾಸೀ ತಾಣಗಳ ದೃಶ್ಯ/ಚಿತ್ರಗಳನ್ನು ತೋರಿಸುವುದು. ಪಾಠಭಾಗದ ಆಶಯ, 1CT ದೃಶ್ಯಗಳು ಮತ್ತು ಚರ್ಚಿಸಿದ ಆಶಯದ ಆಧಾರದಲ್ಲಿ ಮಕ್ಕಳು ವೈಯಕ್ತಿಕವಾಗಿ ಪ್ರವಾಸಾನುಭವವನ್ನು ಬರೆಯಲಿ. ಬಳಿಕ ಪರಸ್ಪರ ಬದಲಾಯಿಸಿ ಓದಲಿ. ಕೆಲವರು ಮಂಡಿಸಲಿ. ಗುಂಪಿನಲ್ಲಿ ಮಂಡಿಸಿ ಉತ್ತಮವಾದುದನ್ನು ಆಯ್ಕೆ ಮಾಡಿ ಅದನ್ನು ಸರಿಪಡಿಸಲಿ. ಯಾವ ಗುಂಪಿನದ್ದು ಉತ್ತಮ? ಯಾಕೆ? ಮೌಲ್ಯನಿರ್ಣಯದ ಮಾನದಂಡಗಳನ್ನು ರೂಪಿಸುವುದು. ಅಧ್ಯಾಪಕರ ಸಹಾಯದಿಂದ ಪರಿಷ್ಕರಿಸಲಿ. ಅಧ್ಯಾಪಕರು ಬರೆದ ಪ್ರವಾಸ ಟಿಪ್ಪಣಿಯನ್ನು ಪ್ರದರ್ಶಿಸುವುದು. ಮಕ್ಕಳಿಗೆ ತಮ್ಮ ಪ್ರವಾಸ ಟಿಪ್ಪಣಿಯನ್ನು ಉತ್ತಮಪಡಿಸಲು ಅವಕಾಶವನ್ನು ನೀಡುವುದು.

## ಪ್ರವಾಸಾನುಭವ

ಅಂದು ಶುಕ್ರವಾರ. ಮೈಸೂರು ಪ್ರವಾಸ ಹೋಗುವ ಹುಮ್ಮಸಿನಲ್ಲಿ ಮುಂಜಾನೆಯ ನಸುಬೆಳಕಿನಲ್ಲಿ

ಲಗುಬಗೆಯಿಂದ ನಡೆಯುತ್ತಾ ಶಾಲೆಗೆ ತಲುಪಿದೆನು. ಬಸ್ಸು ಬಂದು ಶಾಲಾ ಮೈದಾನದಲ್ಲಿ ನಿಂತಿತು. ಎಲ್ಲರೂ ಸಾಲಾಗಿ ಬಸ್ಸನ್ನೇರಿದೆವು. ನಾನಂತು ಬಸ್ಸು ಹತ್ತಿದ ಕೂಡಲೇ ನೇರ ಹೋಗಿ ಕಿಟಿಕಿ ಬಳಿ ಕುಳಿತೆನು. ಅಲ್ಲಿ ಕುಳಿತು ನನಗೆ ಹೊರಗಿನ ದೃಶ್ಯಗಳನ್ನು ವೀಕ್ಷಿಸುವುದೇ ಖುಷಿ. ಆದರೆ ಮಂದ ಬೆಳಕಿನಲ್ಲಿ ಅದು ಸಾಧ್ಯವಾಗಲಿಲ್ಲ. ಸೂರ್ಯೋದಯಕ್ಕಾಗಿ ನಾನು ಕಾತರದಿಂದ ಇದ್ದೆ. ಸೂರ್ಯನು ಉದಯಿಸಿ ಮೇಲೇರಿ ಬಂದ. ಮಂಜು ಕರಗಿತು. ಕೊಳದಲ್ಲಿದ್ದ ತಾವರೆ ಅರಳಿತು. ಹಕ್ಕಿಗಳ ಇಂಪಾದ ನಾದವು ಕೇಳಿ ಬಂತು. ಭೂಮಾತೆಯ ಹಸಿರು ಎದ್ದು ಕಾಣತೊಡಗಿತು. ಕೃಷಿಕರೆಲ್ಲಾ ಬಯಲ ಕಡೆಗೆ ಹೋಗುವ ದೃಶ್ಯವನ್ನು ನೋಡಿದೆನು. ನಮ್ಮ ಈ ಪ್ರಯಾಣವು ಮಡಿಕೇರಿಗೆ ತಲುಪಿತು. ಮಡಿಕೇರಿಯ ಚಳಿಯನ್ನು ತಡೆಯಲಾರದೆ ಎಲ್ಲರೂ ಸ್ವೆಟರನ್ನು ಧರಿಸಲು ಪ್ರಾರಂಭಿಸಿದರು. ಹೋಟೆಲಿಗೆ ಹೋಗಿ ಇಡ್ಲಿ ತಿಂದು ಯಾತ್ರೆ ಮುಂದುವರಿಸಿದೆವು. ಮೈಸೂರಿಗೆ ತಲುಪಿದಾಗ ತುಂಬಾ ಸಂತೋಷವಾಯಿತು. ಮೈಸೂರು ಅರಮನೆಗೆ ಹೋದೆವು. ಅರಮನೆಯನ್ನಂತು ವರ್ಣಿಸಲು ಸಾಧ್ಯವೇ ಇಲ್ಲ. ಸುಂದರ ಗೋಡೆಗಳಲ್ಲಿ ರಚಿಸಿದ ಚಿತ್ರಗಳನ್ನು ನೋಡುವಾಗ ಅವುಗಳಿಗೆ ಜೀವವಿರುವಂತೆ ಭಾಸವಾಯಿತು. ಎತ್ತಕಡೆ ಕಣ್ಣು ಹಾಯಿಸಿದರೂ ವರ್ಣರಂಜಿತ ಚಿತ್ರಗಳೇ ಇದ್ದವು. ಅಲ್ಲಿಂದ ನಾವು ವೃಂದಾವನಕ್ಕೆ ತೆರಳಿದೆವು. ಅಲ್ಲಿದ್ದ ಹೂಗಳನ್ನು ನೋಡಿದಾಗ ಬಹಳ ಸಂತೋಷವೂ, ಆಶ್ಚರ್ಯವೂ ಆದುವು. ಬಳಿಕ ನಾವು ಪುರಾತನ ಕಾಲದ ವಸ್ತುಗಳನ್ನು ಸಂಗ್ರಹಿಸಿ ಇರಿಸಿದ್ದ ಆರ್ಟ್ ಗ್ಯಾಲರಿಗೆ ಹೋದೆವು. ಅಲ್ಲಿದ್ದ ದೊಡ್ಡ ಗಡಿಯಾರ, ಕಲ್ಲಿನ ಅರಮನೆ ನನಗೆ ಆಶ್ಚರ್ಯಕರವಾಗಿದ್ದುವು. ಹೀಗೆ ನಮ್ಮ ಪ್ರವಾಸವು ಕೊನೆಗೊಂಡಿತು. ಆ ದಿನವು ಮರೆಯಲಾಗದ ದಿನವಾಗಿದೆ. ಪ್ರವಾಸವು ಮೈ ಮನಗಳಿಗೆ ಮುದ ನೀಡಿ ಮರೆಯಲಾಗದ ಅನುಭವಗಳನ್ನು ನೀಡುತ್ತದೆ ಎಂದು ತಿಳಿಯಿತು.

## ❑ ಲೇಖನ ಚಿಹ್ನೆಗಳನ್ನು ಉಪಯೋಗಿಸುವ

ಯಾವುದೇ ಒಂದು ವಾಕ್ಯವು ಸಮರ್ಪಕವಾದ ಅರ್ಥವನ್ನು ನೀಡಬೇಕಾದರೆ ಸೂಕ್ತವಾದ ಲೇಖನ ಚಿಹ್ನೆಗಳನ್ನು ಬಳಸಲೇಬೇಕು. ಲೇಖನ ಚಿಹ್ನೆಗಳ ಬಳಕೆಯ ಕುರಿತು ತಿಳಿಯುವುದಕ್ಕಾಗಿ ಮತ್ತು ಅದನ್ನು ಬಳಸುವುದಕ್ಕಾಗಿ ಈ ಚಟುವಟಿಕೆಯನ್ನು ನೀಡಲಾಗಿದೆ. ಈ ಕೆಳಗಿನ ಗದ್ಯಭಾಗವನ್ನು ಅಧ್ಯಾಪಕರು ಕರಿಹಲಗೆಯಲ್ಲಿ ಬರೆದು ಪ್ರದರ್ಶಿಸುವುದು.

ಕುಸುಮ ಬೆಳಗ್ಗೆ ಎದ್ದು ತನ್ನ ಹೂದೋಟದ ಕಡೆಗೆ ನಡೆದಳು. ತೋಟದಲ್ಲಿ ಬಣ್ಣ ಬಣ್ಣದ ಹೂಗಳು ಅರಳಿದ್ದುವು. 'ಆಹಾ! ಎಷ್ಟು ಚಂದದ ಹೂಗಳು!' ಕುಸುಮ ತನ್ನಲ್ಲಿ ಹೇಳಿಕೊಂಡು, ಹೂಗಳನ್ನು ಕೊಯ್ಯತೊಡಗಿದಳು. 'ಅಯ್ಯೋ, ನನ್ನನ್ನು ಕೊಲ್ಲಬೇಡ' ಎಂದು ಯಾರೋ ಹೇಳಿದಂತಾಯಿತು. 'ಯಾರದು?' ಕುಸುಮ ಕೇಳಿದಳು.

ಮಕ್ಕಳು ಗದ್ಯಭಾಗವನ್ನು ವೈಯಕ್ತಿಕವಾಗಿ ಓದಲಿ. ಲೇಖನ ಚಿಹ್ನೆಗಳನ್ನು ಗುರುತಿಸಲಿ. ಅಧ್ಯಾಪಕರು ಗದ್ಯಭಾಗವನ್ನು ಗಟ್ಟಿಯಾಗಿ ಓದುವುದು. ವಿದ್ಯಾರ್ಥಿಗಳನ್ನು ಗುಂಪುಗಳಾಗಿ ಮಾಡುವುದು. ಗುಂಪಿನಲ್ಲಿ ಲೇಖನ ಚಿಹ್ನೆಗಳನ್ನು ಕಂಡುಕೊಳ್ಳಲಿ. ಮಂಡಿಸಲಿ. ಗುಂಪಿನ ಮಂಡನೆಯ ಬಳಿಕ ಲೇಖನ ಚಿಹ್ನೆಗಳ ಕುರಿತು ಸಂಪೂರ್ಣ ಮಾಹಿತಿಯನ್ನು ಅಧ್ಯಾಪಕರು ನೀಡುವುದು. ಲೇಖನ ಚಿಹ್ನೆಗಳನ್ನು ಸೂಕ್ತವಾಗಿ ಬಳಸುವ ರೀತಿಯನ್ನು ಅಧ್ಯಾಪಕರು ತಿಳಿಸುವುದು. ಇದರ ಆಧಾರದಲ್ಲಿ ಪಾಠ ಪುಸ್ತಕದಲ್ಲಿ ನೀಡಲಾದ ಲೇಖನ ಚಿಹ್ನೆಗಳನ್ನು ಬಳಸುವ ಚಟುವಟಿಕೆ ನಡೆಸುವುದು. ಮಕ್ಕಳು ಪಾಠಪುಸ್ತಕದಲ್ಲಿ ನೀಡಲಾದ

ಗದ್ಯಭಾಗವನ್ನು ವೈಯಕ್ತಿಕವಾಗಿ ಓದಲಿ. ಕರಿಹಲಗೆಯಲ್ಲಿ ಬರೆಯಲಾದ ಗದ್ಯಭಾಗದೊಂದಿಗೆ ಹೋಲಿಸಲಿ.

ಲೇಖನ ಚಿಹ್ನೆಗಳನ್ನು ಸೂಕ್ತವಾಗಿ ಉಪಯೋಗಿಸಿ ಬರೆಯಲಿ.

ಪರಸ್ಪರ ಕೈ ಬದಲಾಯಿಸಿ ಮೌಲ್ಯಮಾಪನ ನಡೆಸಿ ಉತ್ತಮಪಡಿಸಲಿ, ಗುಂಪಿನಲ್ಲಿ ಮಂಡಿಸಲಿ.

ಲೇಖನ ಚಿಹ್ನೆಗಳನ್ನು ಗುರುತಿಸಿಕೊಂಡು ಗುಂಪಿನವರು ಮಂಡಿಸಲಿ. ಗದ್ಯಭಾಗವನ್ನು ಪೂರ್ತಿಗೊಳಿಸಿ ಚಾರ್ಟ್‌ನಲ್ಲಿ ಬರೆಯಲಿ. ಅಧ್ಯಾಪಕರು ಮಾದರಿಯನ್ನು ನೀಡುವುದು. ಅದರ ಆಧಾರದಲ್ಲಿ ಬರೆದ ಗದ್ಯಭಾಗವನ್ನು ಸರಿಪಡಿಸಿ ಬರೆಯಲಿ.

### ❑ ಮಾದರಿ

ಅರಸನು ಸಿದ್ಧಾರ್ಥನನ್ನು ಕರೆಸಿದನು. ವಿಚಾರಣೆ ಆರಂಭವಾಯಿತು. 'ಕುಮಾರ! ದೇವದತ್ತನು ಬಾಣ ಹೊಡೆದ ಹಂಸವು ನಿನ್ನ ಬಳಿ ಇದೆಯಂತೆ, ಹೌದೇ?' ಎಂದು ಪ್ರಶ್ನಿಸಿದನು.

### ❑ ಪದಗಳನ್ನು ಹುಡುಕಿ ಬರೆಯಿರಿ

ಮಕ್ಕಳ ಮನಸ್ಸನ್ನು ಮುದಗೊಳಿಸುವಲ್ಲಿ ಭಾಷಾ ಆಟಗಳ ಪಾತ್ರ ಮಹತ್ತರವಾದುದು. ಇಂತಹ ಒಂದು ಭಾಷಾ ಆಟವನ್ನು ಪಾಠಭಾಗದಲ್ಲಿ ನೀಡಲಾಗಿದೆ. ಇಲ್ಲಿ ಅಕ್ಷರಗಳನ್ನು ಅದಲು ಬದಲಾಗಿ ಕೊಡಲಾಗಿದೆ. ಪಾಠಭಾಗದಲ್ಲಿ ಬಂದಿರುವ ಕೆಲವು ಪದಗಳು ಇದರಲ್ಲಿ ಅಡಗಿವೆ. ಮಕ್ಕಳು ವೈಯಕ್ತಿಕವಾಗಿ ಪದಗಳನ್ನು ಹುಡುಕಿ ಬರೆಯಲಿ. ಕಲಿಕೆಯಲ್ಲಿ ಹಿಂದುಳಿದ ಮಕ್ಕಳಿಗೆ ಅಧ್ಯಾಪಕರು ಕೆಲವು ಸೂಚನೆಗಳನ್ನು ನೀಡುವುದು ಈ ಮೂಲಕ ಪದಗಳನ್ನು ಬರೆಯಲು ಸಹಾಯ ಮಾಡಬಹುದು. ಒಬ್ಬೊಬ್ಬರು ಒಂದೊಂದು ಪದವನ್ನು ಹೇಳಲಿ. ಅಧ್ಯಾಪಕರು ಅದನ್ನು ಕರಿಹಲಗೆಯಲ್ಲಿ ಬರೆಯುವುದು. ಬಿಟ್ಟು ಹೋದ ಪದಗಳನ್ನು ಅಧ್ಯಾಪಕರು ಸೇರಿಸುವುದು.

ತಪ್ಪಿ, ಜೀಪು, ಜಮಖಾನೆ, ಆದಿತ್ಯವಾರ, ಬೆಟ್ಟ, ಜಲಪಾತ...

### ಮುಂದುವರಿದ ಚಟುವಟಿಕೆ

ಇದೇ ರೀತಿಯ ಅಕ್ಷರಗಳ ಪಟ್ಟಿಯನ್ನು ಮಕ್ಕಳೇ ಗುಂಪಿನಲ್ಲಿ ತಯಾರಿಸಲಿ. ಹೂ, ಹಣ್ಣು, ತರಕಾರಿಗಳು ಹೆಸರುಗಳ ಪಟ್ಟಿಯನ್ನು ತಯಾರಿಸಬಹುದು. ತಯಾರಿಸಿದ ಪಟ್ಟಿಯನ್ನು ಇನ್ನೊಂದು ಗುಂಪಿನವರಿಗೆ ನೀಡಲಿ. ಪಟ್ಟಿಯಲ್ಲಿರುವ ಅಕ್ಷರಗಳನ್ನು ಕ್ರಮಗೊಳಿಸಿ ಸರಿಯಾದ ಪದಗಳನ್ನು ಮಕ್ಕಳು ಹುಡುಕಿ ಬರೆಯಲಿ. ಮಂಡಿಸಲಿ. ನಿರ್ದಿಷ್ಟ ಸಮಯದೊಳಗೆ ಅತಿ ಹೆಚ್ಚು ಪದಗಳನ್ನು ಬರೆದ ಗುಂಪನ್ನು ಅಭಿನಂದಿಸುವುದು.

### ❑ ಹಾಡುವ

ತಾಯಿ ತಂದೆ ಕವನವನ್ನು ವಿದ್ಯಾರ್ಥಿಗಳು ವೈಯಕ್ತಿಕವಾಗಿ ಓದಲಿ. ಆಶಯವನ್ನು ಕಂಡುಕೊಳ್ಳಲಿ. ಆಶಯಕ್ಕೆ ಸಂಬಂಧಿಸಿದ ಕೆಲವು ಪ್ರಶ್ನೆಗಳನ್ನು ಅಧ್ಯಾಪಕರು ಕೇಳುವುದು

- ಈ ಪದ್ಯದಲ್ಲಿ ಯಾರ ಬಗ್ಗೆ ಹೇಳಲಾಗಿದೆ?
- ಉಣ್ಣಲು, ತಿನ್ನಲು ಕೊಡುವವರು ಯಾರು?
- ಮಗುವಿಗೆ ದಾರಿದೀಪವಾಗುವುದು ಯಾವುದು?
- 

ಮಕ್ಕಳು ಗುಂಪಿನಲ್ಲಿ ರಾಗ ಸಂಯೋಜಿಸಿ ಹಾಡುವುದು. ಗುಂಪಿನ ಮಂಡನೆಯನ್ನು ಸೂಚಕಗಳ

ಆಧಾರದಲ್ಲಿ ಮೌಲ್ಯನಿರ್ಣಯ ಮಾಡುವುದು. ಯಾವ ಗುಂಪಿನವರ ಹಾಡು ಉತ್ತಮವಾಗಿತ್ತು? ಯಾಕೆ? ಅಧ್ಯಾಪಕರು ಹಾಡುವುದು. ತರಗತಿಯಲ್ಲಿ ಎಲ್ಲರೂ ಒಟ್ಟು ಸೇರಿ ಅಧ್ಯಾಪಕರೊಂದಿಗೆ ಹಾಡಲಿ.

### ❑ ಉತ್ತರಿಸಿರಿ

ಮಕ್ಕಳು ಪಾಠಭಾಗದಲ್ಲಿ ನೀಡಿದ ಪ್ರಶ್ನೆಗಳಿಗೆ ವೈಯಕ್ತಿಕವಾಗಿ ಉತ್ತರಿಸಲಿ. ಬರೆದ ಉತ್ತರಗಳನ್ನು ಮಂಡಿಸಲಿ. ಅಧ್ಯಾಪಕರು ಸರಿಯಾದ ಉತ್ತರಗಳನ್ನು ಹೇಳುವುದು. ತಾವು ಬರೆದುದರಲ್ಲಿ ತಪ್ಪುಗಳಿದ್ದರೆ ಮಕ್ಕಳು ಸರಿಪಡಿಸಲಿ.

### ❑ ಇಷ್ಟವಾದ ಸಾಲುಗಳು

ಪದ್ಯದಲ್ಲಿ ಇಷ್ಟವಾದ ಸಾಲು ಯಾವುದು? ಯಾಕೆ? ಮಕ್ಕಳು ವೈಯಕ್ತಿಕವಾಗಿ ಬರೆಯಲಿ. ಇಷ್ಟವಾಗಲಿರುವ ಕಾರಣಗಳನ್ನು ಬರೆದು ಮಂಡಿಸಲಿ. ಎಲ್ಲಾ ವಿದ್ಯಾರ್ಥಿಗಳು ಮಂಡಿಸಿದ ನಂತರ ಕವನದ ಒಟ್ಟು ಆಶಯ ಬರುವಂತೆ ಅಧ್ಯಾಪಕರು ಸಾಲುಗಳನ್ನು ಕ್ರೋಡೀಕರಿಸುವುದು.

### ❑ ಚರ್ಚಿಸುವ

ತಂದೆ ತಾಯಿಗಳು ಮಕ್ಕಳನ್ನು ಬೆಳೆಸುವಾಗ ಯಾವ ಯಾವ ತ್ಯಾಗಗಳನ್ನು ಮಾಡುತ್ತಾರೆ? ಮಕ್ಕಳು ಯಾವ ಯಾವ ಕೆಲಸಗಳಿಗೆ ತಂದೆತಾಯಿಯರನ್ನು ಅವಲಂಬಿಸುತ್ತಾರೆ? ತಂದೆ ತಾಯಿಯರು ಮಕ್ಕಳಿಗೆ ಯಾಕೆ ಬುದ್ಧಿಮಾತುಗಳನ್ನು ಹೇಳುತ್ತಾರೆ? ಮಕ್ಕಳು ದೊಡ್ಡವರಾದಾಗ ತಂದೆತಾಯಿಯರನ್ನು ಯಾವ ರೀತಿ ನೋಡಿಕೊಳ್ಳಬೇಕು? ಈ ಎಲ್ಲಾ ವಿಚಾರಗಳ ಬಗ್ಗೆ ತರಗತಿಯಲ್ಲಿ ಚರ್ಚೆ ನಡೆಯಲಿ. ಪ್ರತಿಯೊಬ್ಬರೂ ತಂತಮ್ಮ ಅಭಿಪ್ರಾಯಗಳನ್ನು ಮಂಡಿಸಲಿ. ಅಧ್ಯಾಪಕರು ಮಕ್ಕಳ ಅಭಿಪ್ರಾಯಗಳನ್ನು ಸೇರಿಸಿ ಕ್ರೋಡೀಕರಿಸುವುದು.

### ಮುಂದುವರಿದ ಚಟುವಟಿಕೆ

'ಮಕ್ಕಳ ಬೆಳವಣಿಗೆಯಲ್ಲಿ ಹೆತ್ತವರ ಪಾತ್ರ' ಎಂಬ ವಿಷಯದ ಕುರಿತು ಬಾಲಸಭೆಯಲ್ಲಿ ಭಾಷಣ ಮಾಡಲು ಮಕ್ಕಳಿಗೆ ಅವಕಾಶ ನೀಡಬಹುದು. ವಿಷಯ ಸಂಗ್ರಹಣೆ, ಭಾಷಣ ಮಾಡುವ ರೀತಿಯ ಬಗ್ಗೆ ಅಧ್ಯಾಪಕರು ಮಕ್ಕಳಿಗೆ ಅಗತ್ಯವಾದ ಸಲಹೆ ಸೂಚನೆಗಳನ್ನು ನೀಡುವುದು.

### ❑ ಭಾಷಣ

ಸನ್ಮಾನ್ಯ ಅಧ್ಯಕ್ಷರೇ, ಪೂಜ್ಯ ಗುರುಗಳೇ ಹಾಗೂ ನನ್ನೊಲವಿನ ಸಹಪಾಠಿಗಳೇ ನಿಮಗೆಲ್ಲರಿಗೂ ನನ್ನ ವಂದನೆಗಳು. ನಾನು ಇಂದು 'ಮಕ್ಕಳ ಬೆಳವಣಿಗೆಯಲ್ಲಿ ಹೆತ್ತವರ ಪಾತ್ರ' ಎಂಬ ವಿಷಯದ ಬಗ್ಗೆ ಒಂದೆರಡು ಮಾತುಗಳನ್ನು ಹೇಳಲಿರುವೆನು.

'ಮನೆಯೇ ಮೊದಲ ಪಾಠಶಾಲೆ ಜನನಿ ತಾನೆ ಮೊದಲ ಗುರುವು' ಎಂಬ ನಾಣ್ಣುಡಿಯೊಂದಿದೆ. ಗರ್ಭಾವಸ್ಥೆಯಿಂದಲೇ ತಾಯಿಯು ತನ್ನ ಮಗುವಿನ ಪಾಲನೆಯಲ್ಲಿ ತೊಡಗುತ್ತಾಳೆ. ಅವಳು ತನ್ನ ಹಸಿವು ನಿದ್ದೆಗಳನ್ನು ಮಗುವಿನ ಪೋಷಣೆಗಾಗಿ ತ್ಯಾಗ ಮಾಡುತ್ತಾಳೆ. ಮಗು ನೊಂದಾಗ ತಾನೂ ನೋಯುತ್ತಾಳೆ. ಮಗುವಿನ ಸಂತಸದಲ್ಲಿ ಇಹವನ್ನೇ ಮರೆಯುತ್ತಾಳೆ.

ಮಗುವಿನ ಬಾಲ್ಯದ ತುಂಟಾಟಗಳನ್ನು ನೋಡಿ ತಮ್ಮ ನೋವನ್ನು ಮರೆತು ಆನಂದಿಸದ ತಂದೆ ತಾಯಿಯರಿಲ್ಲ. ಮಗುವಿನ ತುಂಟಾಟ ಮತ್ತು ತೊದಲು

ನುಡಿ ಹೆತ್ತವರಿಗೆ ಅಮಿತಾನಂದವನ್ನು ನೀಡುತ್ತವೆ. ಶಿಲೆಯನ್ನು ಕೆತ್ತಿ ಶಿಲ್ಪಿ ಹೇಗೆ ಆರಾಧನೆಗೆ ಯೋಗ್ಯವಾದ ಮೂರ್ತಿಯನ್ನಾಗಿ ಮಾಡುತ್ತಾನೆಯೋ ಅದೇ ರೀತಿ ಮಗುವನ್ನು ತಿದ್ದಿ ತೀಡಿ ಉತ್ತಮ ಮೌಲ್ಯಗಳನ್ನು ಬೋಧಿಸಿ ಸಮಾಜದಲ್ಲಿ ಸತ್ಪ್ರಜೆಯನ್ನಾಗಿ ರೂಪಿಸುವಲ್ಲಿ ಹೆತ್ತವರ ಪಾತ್ರ ಮಹತ್ತರವಾದುದು.

ಮಕ್ಕಳ ಬೇಕು ಬೇಡಗಳನ್ನು ಗಮನಿಸುವುದರೊಂದಿಗೆ ಮಗು ತಪ್ಪು ಮಾಡಿದಾಗ ನವಿರಾದ ಶಿಕ್ಷೆಯನ್ನು ನೀಡಿ ತಿದ್ದುವುದೂ ಹೆತ್ತವರ ಕರ್ತವ್ಯವಾಗಿದೆ. ತಮ್ಮ ಮಗು ವಿದ್ಯಾವಂತನಾಗಬೇಕು. ಸಮಾಜದಲ್ಲಿ ಆತನಿಗೆ ಗೌರವಾದರಗಳು ದೊರೆಯಬೇಕು ಎಂಬ ಮಹತ್ವಾಕಾಂಕ್ಷೆಯೊಂದಿಗೆ ಯೋಗ್ಯ ಶಿಕ್ಷಣವನ್ನು ನೀಡುತ್ತಾರೆ. ಶಿಕ್ಷಣದ ಜೊತೆ ಜೊತೆಗೇ ಮಕ್ಕಳಲ್ಲಿ ಪ್ರೀತಿ, ವಿಶ್ವಾಸ, ಸಹಕಾರ, ಅನುಕಂಪ ಮೊದಲಾದ ಮೌಲ್ಯಗಳು ಬೆಳೆಯವಂತೆ ಮಾಡುವುದೂ ಹೆತ್ತವರ ಕರ್ತವ್ಯವಾಗಿದೆ.

ಮಗುವಿನ ಬೆಳೆಯುವ ಪರಿಸರವು ಆತನ ಸರ್ವತೋಮುಖ ಅಭಿವೃದ್ಧಿಯಲ್ಲಿ ಪ್ರಧಾನ ಪಾತ್ರವಹಿಸುತ್ತದೆ. ಉತ್ತಮ ಕುಟುಂಬದಲ್ಲಿ ಜನಿಸಿ ಒಳ್ಳೆಯ ಒಡನಾಟವನ್ನು ಹೊಂದಿದ ಮಗುವು ಬೆಳೆದಂತೆಲ್ಲಾ ಉತ್ತಮ ಗುಣಗಳನ್ನು ಪಡೆಯುತ್ತಾನೆ. ಆತನ ಅಭ್ಯಾಸಗಳೂ ಒಳ್ಳೆಯದಾಗಿರುತ್ತವೆ. ಅದೇ ರೀತಿ ಕೆಟ್ಟ ಪರಿಸರದಲ್ಲಿ ಬೆಳೆಯುವ ಮಗುವು ಕೆಟ್ಟ ಸ್ವಭಾವವನ್ನು ಮೈಗೂಡಿಸಿಕೊಳ್ಳಬಹುದು. ಆದುದರಿಂದ ಹೆತ್ತವರು ಮಗುವಿನ ಪರಿಸರ, ಗೆಳೆತನ ಮೊದಲಾದುವುಗಳ ಕಡೆ ಗಮನಹರಿಸಬೇಕು. ಹೀಗೆ ಎಲ್ಲಾ ಹೆತ್ತವರೂ ಸರಿಯಾದ ರೀತಿಯಲ್ಲಿ ಕರ್ತವ್ಯ ನಿರ್ವಹಿಸಿದರೆ ಒಂದು ಉತ್ತಮ ಸಮಾಜ ರೂಪುಗೊಳ್ಳುವುದರಲ್ಲಿ ಯಾವುದೇ ಸಂಶಯವಿಲ್ಲ.

ಇಷ್ಟು ಹೇಳಿ ನನ್ನ ಮಾತನ್ನು ಕೊನೆಗೊಳಿಸುತ್ತೇನೆ.

'ಜೈ ಭಾರತ್'

## ❑ ಬರೆಯಿರಿ

ಪದ್ಯದಲ್ಲಿ ಬಂದಿರುವ ಆಶಯವನ್ನು ಬರೆದು ವ್ಯಕ್ತಪಡಿಸಲು ಈ ಚಟುವಟಿಕೆಯನ್ನು ನೀಡಲಾಗಿದೆ. ಪದ್ಯವನ್ನು ಮಕ್ಕಳು ವೈಯಕ್ತಿಕವಾಗಿ ಓದಲಿ. ತಂದೆತಾಯಿಯರ ಕುರಿತು ಪದ್ಯದಲ್ಲಿ ಹೇಳಲಾದ ವಿಚಾರಗಳೇನು? ಸರಳ ಚರ್ಚೆ. ಪದ್ಯದ ಆಶಯವನ್ನು ತಿಳಿದುಕೊಂಡು ವೈಯಕ್ತಿಕವಾಗಿ ಬರೆಯಲಿ. ಕೆಲವರು ಮಂಡಿಸಲಿ. ಗುಂಪಿನಲ್ಲಿ ಉತ್ತಮಪಡಿಸಿ ಮಂಡಿಸಲಿ ತಪ್ಪುಗಳನ್ನು ತಿದ್ದಿ ಸರಿಪಡಿಸುವುದು. ಆಶಯ ಪರವಾಗಿಯೂ, ಭಾಷಾಪರವಾಗಿಯೂ, ತಿದ್ದುಪಡಿ ನಡೆಸುವಿರಿ ತಾನೇ? ಸೇರಿಸಬೇಕಾದ ಆಶಯವನ್ನು ಸೇರಿಸಿ ಮಾದರಿ ವಿವರಣೆಯನ್ನು ನೀಡುವುದು. ತಾವು ಬರೆದುದರಲ್ಲಿ ಬಿಟ್ಟು ಹೋದ ಆಶಯಗಳನ್ನು ಸೇರಿಸಿ, ಸರಿಪಡಿಸಿ ಬರೆಯಲಿ.

## ❑ ಪದ್ಯ ಬರೆಯಿರಿ

ತಂದೆ ತಾಯಿಗಳು ಮಕ್ಕಳ ಒಳಿತಿಗಾಗಿ ಏನೆಲ್ಲ ಮಾಡುತ್ತಾರೆ? ಎಂಬುದನ್ನು ಅಧ್ಯಾಪಕರು ಮಕ್ಕಳೊಂದಿಗೆ ಚರ್ಚಿಸಿ ಆಶಯ ಭೂಪಟ ತಯಾರಿಸುವುದು. ಪದ್ಯಭಾಗದ ಆಶಯವನ್ನು ಇಲ್ಲಿ ನೆನಪಿಸಬೇಕು.

ಆಶಯ ಭೂಪಟ




ಆಶಯ ಭೂಪಟದ ಸಹಾಯದಿಂದ ಮಕ್ಕಳು ವೈಯಕ್ತಿಕವಾಗಿ ಪದ್ಯ ರಚಿಸಲಿ. ಯೋಗ್ಯವಾದ ಶೀರ್ಷಿಕೆಯನ್ನು ನೀಡಲಿ. ಕೆಲವರಿಂದ ಮಂಡನೆ. ಗುಂಪಿನಲ್ಲಿ ಉತ್ತಮವಾದುದನ್ನು ಆಯ್ಕೆ ಮಾಡಲಿ. ಶೀರ್ಷಿಕೆಗೂ ಗಮನ ನೀಡಲು ಹೇಳಬೇಕು. ಆಯ್ಕೆ ಮಾಡಿದ ಕವಿತೆಯನ್ನು ಗುಂಪಿನಲ್ಲಿ ಚರ್ಚಿಸಿ ಇನ್ನೂ ಉತ್ತಮಪಡಿಸಲಿ. ಮಂಡಿಸಲಿ ಮೌಲ್ಯನಿರ್ಣಯ ಸೂಚಕಗಳ ಆಧಾರದಲ್ಲಿ ಉತ್ತಮವಾದ ರಚನೆಯನ್ನು ಕಂಡುಕೊಳ್ಳುವುದು. ಹೆಚ್ಚು ತಪ್ಪುಗಳಿರುವ ಗುಂಪಿನ ರಚನೆಯನ್ನು ತಿದ್ದುಪಡಿಗೆ ಒಳಪಡಿಸುವುದು. ಉಳಿದ ಗುಂಪಿನವರು ಅದರ ಆಧಾರದಲ್ಲಿ ತಮ್ಮ ಉತ್ಪನ್ನಗಳನ್ನು ಸರಿಪಡಿಸಲಿ. ಅಧ್ಯಾಪಕರು ಬರೆದ ಪದ್ಯವನ್ನು ತರಗತಿಯಲ್ಲಿ ಪ್ರದರ್ಶಿಸುವುದು. ಪ್ರತಿಯೊಬ್ಬರೂ ತಮ್ಮ ವೈಯಕ್ತಿಕ ರಚನೆಯನ್ನು ಉತ್ತಪಡಿಸಿ, ಸಂಗ್ರಹಿಸಿ ಸಂಚಿಕೆ ತಯಾರಿಸಲಿ.

**ಮೌಲ್ಯನಿರ್ಣಯ ಸೂಚಕಗಳು (ಕವಿತೆ)**

- ಆಶಯ, ವಸ್ತುವಿಗೆ ಸಂಬಂಧಿಸಿದಂತೆ ಆಕರ್ಷಕವಾದ ಶೀರ್ಷಿಕೆ ಇದೆ.
- ಯೋಗ್ಯವೂ ಆಕರ್ಷಕವೂ ಆದ ಪದ ವಿನ್ಯಾಸ; ರಾಗ,ತಾಳ ಪ್ರಾಸ ಪದಗಳನ್ನು ಒಳಗೊಂಡಿದೆ.
- ಭಾವನಾ ಪೂರ್ಣವಾದ ರಚನೆ ಇದೆ.
- ಆಶಯಗಳ ಮುಂದುವರಿಕೆ ಇದೆ.

## ತಾಯಿ ತಂದೆ

ಮನೆಯೆ ಮೊದಲ ಪಾಠಶಾಲೆ
ಎನ್ನುತಿರುವರೆಲ್ಲ।
ಅಮ್ಮ ಆಟಪಾಠವನ್ನು
ಕಲಿಸುತಿರುವಳಲ್ಲ।।
ಹಾಲು ಹಣ್ಣು ಕೂಡುವಳೆನಗೆ
ಬೆಳೆಯಬೇಕು ದೇಹ।
ಕರಿದ ಹುರಿದ ತಿಂಡಿಗಳಲಿ
ಇಲ್ಲವೆನಗೆ ಮೋಹ।।

ಸಂಜೆ ವೇಳೆಯಲ್ಲಿ ನಿತ್ಯ
ಆಟ ಆಡಬೇಕು।
ತಿಂದು ಉಂಡು ಮಲಗುತಿರಲು
ರೋಗಕದುವೆ ಸಾಕು।।
ತಂದೆ ತಾಯಿಯಿಂದ ನೀತಿ
ಕಲಿಯಬೇಕು ನಾವು।
ಒಂದು ಗೂಡಿ ಬಾಳಿ ಬದುಕೆ
ಇಲ್ಲ ನಮಗೆ ನೋವು।।

## ಅಮ್ಮ

ನಮಿಪೆ ನಾನು ಅಮ್ಮ ನಿನಗೆ
ನೀನೆ ನನ್ನ ದೇವರು
ಬುದ್ಧಿ ಮಾತು ಹೇಳಿ ನನಗೆ
ನ್ಯಾಯ ನೀತಿ ಕಲಿಸಿದೆ
ಪ್ರೀತಿಯನ್ನು ನೀಡಿ ನನಗೆ
ತ್ಯಾಗವನ್ನು ತಿಳಿಸಿದೆ
ಎಣ್ಣೆ ಪೂಸಿ ಮೈಯ ತೊಳೆದು
ದೇಹ ಶುದ್ಧಿ ಮಾಡಿದೆ
ನೀತಿ ಕಥೆಯ ದಿನವು ಹೇಳಿ
ಮನವ ಶುಭ್ರಗೊಳಿಸಿದೆ
ತುತ್ತು ನಿತ್ಯ ನೀಡಿ ನನ್ನ
ಹಸಿವೆಯನ್ನು ತಣಿಸಿದೆ
ಕಷ್ಟದಲ್ಲಿ ಇರಲು ನನ್ನ
ರಕ್ಷಣೆಯನ್ನು ಮಾಡಿದೆ
ವಿದ್ಯೆಯನ್ನು ನೀಡಿ ನನಗೆ
ಸತ್ಯಪಥವ ತಿಳಿಸಿದೆ
ನಿನ್ನ ನಾನು ಮರೆಯಲಾರೆ
ಜೀವನದಿ ನಿತ್ಯವು॥

ತಂದೆ ತಾಯಿಯರ ಕುರಿತಾದ ಪದ್ಯಗಳಿರುವ ಧ್ವನಿ ಸುರುಳಿಗಳನ್ನು ಆಲಿಸಲು ಅವಕಾಶ ನೀಡುವುದು ಪದಗಳನ್ನು ಸಂಗ್ರಹಿಸಿ ಹಾಡಲು ಅವಕಾಶ ನೀಡಬಹುದು. ತಾಯಿ ತಂದೆಯರ ಹಿರಿಮೆಯನ್ನು ಸಾರುವ ಹಲವಾರು ಹಾಡುಗಳಿವೆ? ಅಂತಹ ಹಾಡುಗಳು ನಿಮಗೆ ತಿಳಿದಿವೆಯೇ? ಹಾಡು ಗೊತ್ತಿರುವ ಮಕ್ಕಳಿಗೆ ಹಾಡಲು ಅವಕಾಶ ನೀಡುವುದು. ಅಭಿನಂದಿಸುವುದು.

# ನನಗಿದು ತಿಳಿದೇ ಇರಲಿಲ್ಲ

(1CT : ಡ್ರಗ್, ಪಾನ್ ಪರಾಗ್, ಮದ್ಯಪಾನ, ಧೂಮಪಾನ ಮೊದಲಾದ ಚಟಗಳಿಗೆ ಅಂಟಿದ ವ್ಯಕ್ತಿಗಳು ಅನುಭವಿಸುತ್ತಿರುವ ತೊಂದರೆಗಳ ವೀಡಿಯೋ ಪ್ರದರ್ಶನ)
ವೀಡಿಯೋ ಪ್ರದರ್ಶನದ ನಂತರ ಈ ವಿಚಾರಗಳ ಬಗ್ಗೆ ಕಿರು ಚರ್ಚೆ ನಡೆಸುವುದು. ಈ ವೀಡಿಯೋದಲ್ಲಿ ಯಾವ ಯಾವ ವಿಚಾರಗಳ ಬಗ್ಗೆ ಹೇಳಲಾಗಿದೆ? ಯಾವ ಯಾವ ಕೆಟ್ಟ ಚಟಗಳ ಅಪಾಯಗಳನ್ನು ತೋರಿಸಲಾಗಿದೆ? ಅವರು ಅನುಭವಿಸುವ ತೊಂದರೆಗಳು ಯಾವುವು? ಈ ರೀತಿ ಕೆಟ್ಟ ಚಟಗಳಿಂದ ತೊಂದರೆಗೊಳಗಾದ ವ್ಯಕ್ತಿಗಳನ್ನು ನೀವು ಎಲ್ಲಿಯಾದರೂ ನೋಡಿದ್ದೀರಾ? ಮಕ್ಕಳ ಪ್ರತಿಕ್ರಿಯೆ – ಅಧ್ಯಾಪಕರ ಕ್ರೋಢೀಕರಣ.

- **ಓದುವಿಕೆ**

ಮಕ್ಕಳು ವೈಯಕ್ತಿಕವಾಗಿ ನಾಟಕವನ್ನು ಓದಲಿ. ಕಂಡುಕೊಂಡ ಆಶಯಗಳನ್ನು ತರಗತಿಯಲ್ಲಿ ಮಂಡಿಸಲಿ. ಅಧ್ಯಾಪಕರು ಓದುವುದು. ಮಕ್ಕಳ ಜೊತೆ ಚರ್ಚಿಸಿ ಆಶಯಗಳ ಕ್ರೋಢೀಕರಣ.

- **ಅಭಿನಯಿಸುವ**

ಮಕ್ಕಳನ್ನು ಐದೈದು ಮಂದಿಯ ಗುಂಪುಗಳಾಗಿ ಮಾಡುವುದು. ಬಳಿಕ ನಾಟಕ ಅಭಿನಯಕ್ಕೆ ಅಗತ್ಯವಾದ ಸೂಚನೆಗಳನ್ನು ನೀಡುವುದು. ಪಾತ್ರಗಳನ್ನು ಹಂಚುವುದು.

ಗುಂಪಿನಲ್ಲಿ ನಾಟಕವನ್ನು ಓದುವುದು. ಪಾತ್ರಗಳ ಸಂಭಾಷಣೆಯನ್ನು ತಿಳಿದುಕೊಳ್ಳುವುದು.ರಂಗ ಸಜ್ಜಿಕೆಗೆ ಅಗತ್ಯವಾದ ನಿರ್ದೇಶನಗಳನ್ನು ನೀಡುವುದು.

ಅಭಿನಯ.

ಮೌಲ್ಯನಿರ್ಣಯ ಸೂಚಕಗಳ ಆಧಾರದಲ್ಲಿ ಉತ್ತಮವಾಗಿ ಅಭಿನಯಿಸಿದ ಗುಂಪನ್ನು ಆರಿಸುವುದು. ಯಾವ ಗುಂಪಿನವರ ಅಭಿನಯ ಉತ್ತಮವಾಗಿತ್ತು? ಯಾಕೆ? ಎಂದು ಕಂಡುಕೊಳ್ಳುವುದು.

### ❑ ಇಷ್ಟವಾದ ಕಥಾಪಾತ್ರ

ಈ ನಾಟಕದಲ್ಲಿ ಬರುವ ಪಾತ್ರಗಳು ಯಾವುವು? ನಿಮಗಿಷ್ಟವಾದ ಪಾತ್ರ ಯಾವುದು? ಯಾಕೆ? ಎಂದು ಇದರ ಆಧಾರದಲ್ಲಿ ವೈಯಕ್ತಿಕವಾಗಿ ಬರೆದು ಮಂಡಿಸಲಿ.

### ❑ ಯಾರು ಯಾರಿಗೆ ಹೇಳಿದರು?

ಪಾಠಪುಸ್ತಕದಲ್ಲಿ ನೀಡಲಾದ ವಾಕ್ಯಗಳನ್ನು ಮಕ್ಕಳು ವೈಯಕ್ತಿಕವಾಗಿ ಓದಲಿ. ಆ ಮಾತುಗಳನ್ನು ಯಾರು ಯಾರಿಗೆ ಹೇಳಿದರು? ಎಂಬುದನ್ನು ವೈಯಕ್ತಿಕವಾಗಿ ಬರೆದು ಮಂಡಿಸಲಿ. ತಪ್ಪುಗಳಿದ್ದಲ್ಲಿ ಅಧ್ಯಾಪಕರು ತಿದ್ದಿ ಸರಿಪಡಿಸುವುದು.

### ❑ ಕಥೆ ಬರೆಯುವ

ಒಂದು ವ್ಯವಹಾರ ರೂಪವನ್ನು ಇನ್ನೊಂದು ರೂಪವಾಗಿ ಬದಲಾಯಿಸಲು ಸಾಧ್ಯವಿದೆ ಎಂಬುದು ಮಕ್ಕಳಿಗೆ ತಿಳಿಯಬೇಕು. ಇದು ನಾಟಕವನ್ನು ಕಥೆಯಾಗಿ ಬರೆಯುವ ಚಟುವಟಿಕೆಯಾಗಿದೆ. ಕೆಲವು ಪ್ರಶ್ನೆಗಳನ್ನು ಕೇಳುವುದರ ಮೂಲಕ ಮಕ್ಕಳಿಗೆ ಬರೆಯಲು ಸಹಾಯ ಮಾಡಬೇಕು.

- ಈ ನಾಟಕದಲ್ಲಿ ಬರುವ ಪಾತ್ರಗಳು ಯಾವುವು?
- ಕಥಾ ನಾಯಕ ಯಾರು?
- ಕಥೆಯಲ್ಲಿ ಯಾವೆಲ್ಲಾ ವಿಚಾರಗಳನ್ನು ಹೇಳಲಾಗಿದೆ?
- ನಾಟಕದಲ್ಲಿ ಅಂತ್ಯ ಹೇಗೆ?

ನಾಟಕದ ಆಶಯವನ್ನು ಮಕ್ಕಳು ಸಂಕ್ಷಿಪ್ತವಾಗಿ ಹೇಳಲಿ. ಕಥೆಯ ಹಂತಗಳ ಬಗ್ಗೆ ಚರ್ಚೆಯ ಮೂಲಕ ತಿಳಿಯಪಡಿಸಬೇಕು.

### ಕತೆ ಹೇಗಿರಬೇಕು?

- ಉತ್ತಮ ಆಶಯವನ್ನು ಬಳಸಿಕೊಂಡಿರುವುದು.
- ಸೂಕ್ತವಾದ ಆರಂಭ.
- ಕುತೂಹಲವಾದ ಮುಂದುವರಿಕೆ
- ಅರ್ಥಪೂರ್ಣ ಮುಕ್ತಾಯ
- ಯೋಗ್ಯವೂ ಆಕರ್ಷಕವೂ ಆದ ಶೀರ್ಷಿಕೆ

ಮಕ್ಕಳು ವೈಯಕ್ತಿಕವಾಗಿ ಕಥೆಯನ್ನು ಬರೆಯಲಿ. ಯೋಗ್ಯವಾದ ಶೀರ್ಷಿಕೆಯನ್ನು ನೀಡಲಿ. ಕಥೆಯನ್ನು ತರಗತಿಯಲ್ಲಿ ಮಂಡಿಸಲಿ. ಉತ್ತಮವಾದ ಕಥೆಯನ್ನು ಸೂಚಕಗಳ ಆಧಾರದಲ್ಲಿ ಕಂಡುಕೊಳ್ಳಲಿ. ಸೂಚಕಗಳಿಗನುಗುಣವಾಗಿ ತಮ್ಮ ಕಥೆಗಳನ್ನು ಉತ್ತಮಪಡಿಸುವುದು. ಉತ್ತಮಪಡಿಸಿದ ಕಥೆಗಳನ್ನು ಸಂಗ್ರಹಿಸಿ ಸಂಚಿಕೆ ತಯಾರಿ.

### ಮೌಲ್ಯನಿರ್ಣಯ ಸೂಚಕಗಳು

- ಕಥೆಯ ಮೊದಲ ಭಾಗಕ್ಕೆ ಹೊಂದಿಕೆಯಾಗುವಂತೆ ಮುಂದಿನ ಭಾಗ.
- ಕಥಾ ಸಂದರ್ಭ

- ಕಥೆಯಲ್ಲಿ ಯಾವುದಾದರೂ ಸಮಸ್ಯೆಗಳು ಅಡಗಿಕೊಂಡಿವೆಯೇ? ಸಮಸ್ಯೆಗೆ ಪರಿಹಾರವನ್ನು ಸೂಚಿಸಲಾಗಿದೆಯೇ?

### ❑ ಭಿತ್ತಿಪತ್ರ ತಯಾರಿಸುವ

ನಾಟಕದ ಆಶಯದ ಬಗ್ಗೆ ತರಗತಿಯಲ್ಲಿ ಸರಳ ಚರ್ಚೆ ನಡೆಸುವುದು. ಕೆಲವು ಪ್ರಶ್ನೆಗಳನ್ನು ಕೇಳುವುದು. ಮಾದಕ ವಸ್ತುಗಳ ಸೇವನೆಯಿಂದ ಉಂಟಾಗುವ ತೊಂದರೆಗಳು ಯಾವುವು? ಇದರ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸಲು ಏನು ಮಾಡಬಹುದು? ಮಕ್ಕಳ ಪ್ರತಿಕ್ರಿಯೆಯನ್ನು ಕ್ರೋಡೀಕರಿಸುವುದು. ಭಿತ್ತಿಪತ್ರ ತಯಾರಿಸುವುದು ಹೇಗೆ? ಭಿತ್ತಿಪತ್ರ ತಯಾರಿಗೆ ಅಧ್ಯಾಪಕರು ಮಾಹಿತಿ ನೀಡುವುದು.

- ಭಿತ್ತಿಪತ್ರಿಕೆ ಆಕರ್ಷಣೀಯವಾಗಲು ಚಿತ್ರಗಳನ್ನು ಬಳಸಬಹುದು.
- ಚಿಕ್ಕ ವಾಕ್ಯಗಳಲ್ಲಿ ಆಶಯ ಪ್ರಕಟವಾಗುವಂತಿರಬೇಕು.
- ಸುಲಭವಾಗಿ ಆಶಯ ವಿನಿಮಯ.
- ಕಲಾತ್ಮಕವಾಗಿರಬೇಕು.

ಮಕ್ಕಳು ವೈಯಕ್ತಿಕವಾಗಿ ಭಿತ್ತಿಪತ್ರ ತಯಾರಿಸಲಿ. ಮಂಡಿಸಲಿ. ಗುಂಪಿನಲ್ಲಿ ಉತ್ತಮಪಡಿಸಲಿ. ಗುಂಪಿನ ಮಂಡನೆ ಉತ್ತಮವಾದುದು ಯಾವುದು? ಯಾಕೆ? ಮಕ್ಕಳು ತಂತಮ್ಮ ಭಿತ್ತಿಪತ್ರಗಳನ್ನು ಉತ್ತಮಪಡಿಸಲಿ. ಅಧ್ಯಾಪಕರು ತಯಾರಿಸಿದ ಭಿತ್ತಿಪತ್ರಿಕೆಯನ್ನು ಪ್ರದರ್ಶಿಸುವುದು. ಪ್ರತಿಯೊಬ್ಬರು ತಂತಮ್ಮ ಭಿತ್ತಿಪತ್ರಗಳನ್ನು ಅಧ್ಯಾಪಕರ ಭಿತ್ತಪತ್ರದೊಂದಿಗೆ ಹೋಲಿಸಿ ಪರಿಷ್ಕರಿಸಲಿ.

### ❑ ಸರಿಪಡಿಸುವ

ಮಕ್ಕಳು ಬರವಣಿಗೆಯ ಸಂದರ್ಭದಲ್ಲಿ ಹಲವಾರು ತಪ್ಪುಗಳನ್ನು ಮಾಡುತ್ತಾರೆ. ಅವುಗಳನ್ನು ತಿದ್ದಿ ಸರಿಪಡಿಸುವ ಹಲವಾರು ಸಂದರ್ಭಗಳನ್ನು ತರಗತಿಯಲ್ಲಿ ನೀಡಬೇಕಾಗಿದೆ. ಮಕ್ಕಳು ವಾಕ್ಯವನ್ನು ಓದಲಿ. ಅಕ್ಷರಗಳಿಗೆ ಸರಿಯಾದ ಕಾಗುಣಿತವನ್ನು ಸೇರಿಸಿ ವಾಕ್ಯವನ್ನು ಸರಿಪಡಿಸಿ ಬರೆಯಲಿ, ಮಂಡಿಸಲಿ. ಅಧ್ಯಾಪಕರು ಕರಿಹಲಗೆಯಲ್ಲಿ ಬರೆದು ಓದುವುದು.  ಮಕ್ಕಳೂ ಓದುವುದು. ಬರೆದ ವಾಕ್ಯದಲ್ಲಿ ತಪ್ಪಿದ್ದರೆ ಸರಿಪಡಿಸಲಿ.

### ಸರಿಪಡಿಸಿದ ವಾಕ್ಯ

ಲೋ ಬಚ್ಚ ಇದನ್ನು ಬಾಯಿಗೆ ಹಾಕಿದಾಗ ಸಿಗುವ ಮಜ ನಿನ್ನಂತಹ ಪೆದ್ದುಗಳಿಗೇನು ಗೊತ್ತು?

### ❑ ದಿನಚರಿ ಬರೆಯಿರಿ

ಮಕ್ಕಳಲ್ಲಿ ಸೃಜನಶೀಲತೆಯನ್ನು ಬೆಳೆಸಲು ಜೀವನದಲ್ಲಿ ನಡೆಯುವ ಘಟನೆಗಳನ್ನು ನೆನಪಿಸಿಕೊಳ್ಳಲು ಹಾಗೂ ಉತ್ತಮ ಅಭ್ಯಾಸಗಳನ್ನು ಬೆಳಸಲು ದಿನಚರಿಯ ಬರವಣಿಗೆಯು ಪೂರಕವಾಗಿದೆ. ಚಿಕ್ಕಂದಿನಿಂದಲೇ ದಿನಚರಿ ಬರೆಯುವ ಅಭ್ಯಾಸವನ್ನು ಮಕ್ಕಳಲ್ಲಿ ಬೆಳೆಸಬೇಕು. ಪ್ರತಿದಿನದ ಘಟನೆಗಳನ್ನು  ವಿಭಿನ್ನ ರೀತಿಗಳಲ್ಲಿ ಬರೆಯುವುದು ದಿನಚರಿ ಬರವಣಿಗೆಯ ಕ್ರಮವಾಗಿದೆ. ಮಕ್ಕಳು ದಿನಚರಿಯನ್ನು ವೈಯಕ್ತಿಕವಾಗಿ ಬರೆಯಲಿ. ಬರೆದ ದಿನಚರಿಯನ್ನು ಪರಸ್ಪರ ಬದಲಾಯಿಸಿ ಓದಲಿ. ಗುಂಪಿನಲ್ಲಿ ಉತ್ತಮವಾದುದನ್ನು ಆರಿಸಿ ಉತ್ತಮಪಡಿಸಿ ಮಂಡಿಸಲಿ. ತಪ್ಪುಗಳನ್ನು ತಿದ್ದಿ ಅಧ್ಯಾಪಕರು ಸರಿಪಡಿಸುವುದು. ಇದರ ಆಧಾರದಲ್ಲಿ ಮಕ್ಕಳು ತಮ್ಮ ವೈಯಕ್ತಿಕ ರಚನೆಯನ್ನು ಸರಿಪಡಿಸಲಿ. ದಿನಚರಿ ಬರೆಯುವ ಪ್ರಕ್ರಿಯೆಯು ಮುಂದುವರಿಯಬೇಕು. ಮನೆಕೆಲಸವಾಗಿ ಇದನ್ನು ಪ್ರತಿದಿನ ಮಾಡಬೇಕು.

## ಅಂಕಿತಾಳ ದಿನಚರಿ

30.1.2014 ಗುರುವಾರ

ಇಂದು ಬೆಳಿಗ್ಗೆ ಅಮ್ಮನ ಕರೆಕೇಳಿ ಎದ್ದೆನು. ಹಕ್ಕಿಗಳು ಚಿಲಿಪಿ
ಲಿ ಗುಟ್ಟುತ್ತಾ ಇದ್ದವು. ಸುತ್ತಲೂ ನೋಡಿದೆನು. ಯಾರೂ ಅಲ್ಲಿಯೇ
ಇರಲಿಲ್ಲ. ನನಗೆ ಬೇಸರವಾಯಿತು. ಗುಬ್ಬಚ್ಚಿಯ ಗೂಡು ಎಲ್ಲಿ
ಯಾದರೂ ಬಿದ್ದಿದೆಯೇ ಎಂದು ನೋಡಲು ಹೋದೆನು. ಆಗಾಗ
ಬಿದ್ದಿರಲೇ ಇಲ್ಲ. ಆದರೆ ಅದರ ಮರಿ ಕಾಣಿಸಲೇ ಇಲ್ಲ. ಎಲ್ಲಿಗೆ
ಹೋಯಿತಪ್ಪಾ? ಎಂದು ಆಲೋಚಿಸಿದೆನು. ಅದು ಬಿದ್ದಿರ
ಬಹುದೇ? ಎಂದು ಕೆಳಗೆ ನೋಡಿದೆನು. ಕೆಳಗೆ ಕಾಣಲೇ ಇ
ಲ್ಲ. ಆಚೆ ಈಚೆ ನೋಡಿದೆನು. ಆಗ ಮರಿಯು ಕೆಳಗೆ ಬಿದ್ದಿರು
ವುದನ್ನು ಕಂಡಿತು. ನನಗೆ ಬೇಸರವಾಯಿತು. ಅದರ ಬೆನ್ನಿಗೆ
ನೋವಾಗಿತ್ತು. ಬೆನ್ನಿಗೆ ನೋವಿನ ಎಣ್ಣೆಯನ್ನು ಹಚ್ಚಿದೆನು. ಅ
ದು ಕಂಗಾಲಾಗಿತ್ತು. ಅದನ್ನು ಎತ್ತಿಕೊಂಡು ಗೂಡಿನಲ್ಲಿ ಇಟ್ಟೆ
ನು. ಮತ್ತೆ ನಾನು ಈ ವಿಷಯವನ್ನು ಅಮ್ಮನಲ್ಲಿ ಹೇಳಿದೆ
ನು. ತೋಟಕ್ಕೆ ಹೋದೆನು. ಬಾಳೆಯ ಗಿಡದಲ್ಲಿ ಬಾಳೆಯ
ಹೂ ಆಗಿತ್ತು. ನಾನು ಅದನ್ನು ಕೋಲಿನಲ್ಲಿ ಕೊಯ್ದೆನು. ಹಲ್ಲು
ಜ್ಜಿ ಮುಖ ತೊಳೆದೆನು. ದೇವರಿಗೆ ಕೈಮುಗಿದು ತಿಂಡಿ ತಿಂ-
ದೆನು. ಸ್ನಾನಮಾಡಿದೆನು. ಅಂಗಿ ಹಾಕಿ ತಲೆಬಾಚಿದೆನು. [illegible]
ತಿಂದೆನು. ಬಾಯಿ ತೊಳೆದೆನು. ಸುಚಿತನ ಮನೆಗೆ
ಹೋದೆನು. ಅಲ್ಲಿಂದ ಶಾಲೆಗೆ ಬಂದೆನು. ಕಸ ಕಡ್ಡಿಗಳ
ನ್ನು ಹೆಕ್ಕಿದೆನು. ಇವತ್ತು ನಮ್ಮ ಅಧ್ಯಾಪಿಕೆ ಬರಲಿಲ್ಲ. ನನಗೆ

ಬೇಸರ ವಾಯಿತು. ಪ್ರಾರ್ಥನೆ ಹೇಳಲು ಗಂಟೆ ಹೊಡೆದರು. ಪ್ರಾರ್ಥನೆ ಹೇಳಿ ಕ್ಲಾಸಿಗೆ ಬಂದೆನು. ಗಾಯತ್ರಿ ಟೀಚರ್ ಕನ್ನಡ ಪುಸ್ತಕ ತೆಗೆಯಲು ಹೇಳಿದರು. ಅದರಲ್ಲಿ ತುಂಬಾ ಪದ್ಯ ವನ್ನು ಬರೆದೆವು. ಎಲ್ಲರೂ ಬರೆದದ್ದು ಚಂದ ವಾಯಿತು. ನಂತರ ಒಬ್ಬೊಬ್ಬರಲ್ಲಿ ಒಂದೊಂದು ಪದ್ಯ ಬರೆಯಲು ಹೇಳಿದರು. ನಾನು ಪದ್ಯವನ್ನು ಬರೆದೆನು. 1 ಗಂಟೆಗೆ ಊಟಕ್ಕೆ ಬಿಟ್ಟರು. ಊಟ ಮಾಡಿ ಕ್ಲಾಸಿಗೆ ಬಂದೆನು. ಕೋಪಿ ದಿನಚರಿ ಬರೆದೆನು. ಲೆಕ್ಕ ಕೊಟ್ಟರು. ಲೆಕ್ಕ ಮಾಡಿದೆನು. ಆಟ ಆಡಿದೆನು. ರಾಷ್ಟ್ರಗೀತೆ ಹೇಳಿ ಮನೆಗೆ ಬಂದೆನು. ಮನೆ ಕೆಲಸ ಮುಗಿಸಿ ಚಾಕುಲೆಟು ತಿಂಡಿ ತಿಂದೆನು. ಆಟ ಆಡಿ ಸ್ನಾನವೂ ಮಾಡಿದೆನು. ಭಜನೆ ಹೇಳಿದೆವು. ಊಟ ಮಾಡಿದೆನು. ಹುಣ್ಣಿಮೆ ಚಂದ್ರನು ನಗುತ್ತಿದ್ದನು. ನಕ್ಷತ್ರಗಳು ಹೊಳೆಯುತ್ತಿದ್ದವು. ನನಗೆ ಸಂತೋಷವಾಯಿತು. 8.30 ಕ್ಕೆ ಮಲಗಿದೆನು.

ಕಥೆಯ ಮಾದರಿ

# ಕೆಟ್ಟ ಮೇಲೆ ಬುದ್ಧಿ

ರವಿಯು ಶಾಲೆಗೆ ಹೋಗುತ್ತಿರುವ ಪುಟ್ಟ ಹುಡುಗ. ಅವನ ತಂದೆ ರಂಗಣ್ಣ. ರಂಗಣ್ಣನಿಗೆ ಇಬ್ಬರು ಗಂಡುಮಕ್ಕಳು. ದೊಡ್ಡ ಮಗನ ಹೆಸರು ರಾಮು. ಅವನು ಯಾರಲ್ಲೂ ಹೆಚ್ಚು ಮಾತನಾಡುವವನಲ್ಲ. ಅವನು ಶಾಲೆಯ ಕೆಲಸಗಳನ್ನು ಮಾಡುತ್ತಾ, ತನ್ನ ಪಾಡಿಗೆ ತಾನು ಇರುತ್ತಿದ್ದನು. ಆದರೆ ರವಿಯು ಹಾಗಲ್ಲ. ಅವನಿಗೆ ಅನೇಕ ಗೆಳೆಯರಿದ್ದರು. ಗೆಳೆಯರ ಜೊತೆಗೆ ಆಡುತ್ತಾ, ಮಾತನಾಡುತ್ತಾ ಮನೆಗೆ ಮರಳುತ್ತಿದ್ದನು.

ಒಂದು ದಿನ ರವಿಯು ಮನೆಗೆ ಮರಳುತ್ತಿರುವಾಗ ಅವನ ಗೆಳೆಯ ಕಿರಣ ಕಾಣ ಸಿಕ್ಕಿದನು. ರವಿಯು ಅವನನ್ನು ಕರೆದು ಶಾಲೆಗೆ ಗೈರು ಹಾಜರಾದ ಕಾರಣ ಕೇಳಿದನು. ಆಗ ಕಿರಣನು 'ನಾನು ಚಿಕ್ಕಮ್ಮನ ಮದುವೆಗೆ ಹೋಗಿದ್ದೆ' ಎನ್ನುತ್ತಾ ತನ್ನ ಕಿಸೆಯಿಂದ ಚಿಕ್ಕ ಪ್ಯಾಕೇಟನ್ನು ತೆಗೆದು ಅದನ್ನು ಕಚ್ಚಿ ಹರಿದು ಬಾಯಿಗೆ ಸುರಿದುಕೊಂಡನು. 'ಏಯ್ ಕಿರಣ, ಅದೇನು ತಿನ್ನುತ್ತಿರುವುದು? ಅದನ್ಯಾಕೆ ತಿನ್ನುತ್ತಿದ್ದೀಯಾ?' ಅದನ್ನೇ ನೋಡುತ್ತಿದ್ದ ರವಿಯು ಕಿರಣನಲ್ಲಿ ಕೇಳಿದನು. ಆಗ ಕಿರಣನು 'ಇದು ಪಾನ್‌ಪರಾಗ್, ಇದನ್ನು ತಿಂದು ನೋಡು, ಆಗ ನಿನಗೇ ಗೊತ್ತಾಗುತ್ತದೆ' ಎಂದು ರವಿಗೆ ಪ್ಯಾಕೇಟೊಂದನ್ನು ನೀಡಿದನು. ರವಿಯು ತನ್ನ ಕೈಗೆ ಸಿಕ್ಕಿದ ಪ್ಯಾಕೇಟನ್ನು ಹರಿದನು. ಆಗ ಅದರ ವಾಸನೆಯನ್ನು ಸಹಿಸಲಾಗದೇ 'ಅಬ್ಬಾ! ಎಂಥಾ ವಾಸನೆ! ಇದನ್ನೂ ತಿನ್ನುತ್ತೀಯಲ?' ಎಂದನು. ಆಗ ಕಿರಣನು "ವಾಸನೆ ಏನೂ ಇಲ್ಲ, ಒಮ್ಮೆ ಬಾಯಿಗೆ ಹಾಕಿ ನೋಡು...." ಎಂದನು. ಕೊನೆಗೆ ಕಿರಣನ ಒತ್ತಾಯಕ್ಕೆ ಮಣಿದು, ಅಸಹ್ಯವಾದರೂ, ಬಾಯಿಗೆ ಹಾಕಿ ಜಗಿಯತೊಡಗಿದನು. ಮೊದಲಿಗೆ ಅಸಹನೀಯವಾದರೂ ಕುತೂಹಲದಿಂದ ಜಗಿಯುತ್ತಾ ಮನೆಗೆ ನಡೆದನು.

ಮನೆಗೆ ಹೋದವನೇ, ನೇರವಾಗಿ ಬಚ್ಚಲು ಕೋಣೆಗೆ ಹೋಗಿ ಕೈ–ಬಾಯಿಯನ್ನು ಚೆನ್ನಾಗಿ ತೊಳೆದನು. ಬಾಯಿಯ ವಾಸನೆಯನ್ನು ಪರೀಕ್ಷಿಸುತ್ತಾ, ಅಳುಕುತ್ತಾ ಮನೆಯೊಳಗೆ ನಡೆದನು.

ರವಿಯ ವರ್ತನೆಯನ್ನು ಗಮನಿಸಿದ ಅಣ್ಣ ರಾಮುವು 'ರವೀ ಏನೋ ಅದು? ನಿನ್ನ ಬಾಯಿಯಿಂದ ಏನೋ ವಾಸನೆ ಬರುತ್ತಿದೆಯಲ್ಲಾ?' ಎಂದು ಕೇಳಿದನು. ರವಿಯು ತನ್ನ ಕಾರ್ಯವನ್ನು ಮರೆಮಾಚುತ್ತಾ, 'ವಾಸನೆಯೇ ಇಲ್ಲವಲ್ಲಾ...' ಎಂದು ತನ್ನ ಬಾಯಿಗೆ ಕೈಯನ್ನು ಹಿಡಿದನು. ರಾಮುವಿನ ನಿಷ್ಠುರ ಮಾತಿಗೆ ತನ್ನ ತಪ್ಪನ್ನು ಒಪ್ಪಿಕೊಂಡು ನಡೆದ ಘಟನೆಯನ್ನು ಅಣ್ಣನಿಗೆ ತಿಳಿಸಿದನು. ಅದಕ್ಕೆ ರಾಮುವು 'ರವಿ! ಇದೆಲ್ಲಾ ಕೆಟ್ಟ ಅಭ್ಯಾಸ! ಇದನ್ನು ಇಲ್ಲಿಗೆ ನಿಲ್ಲಿಸಿದರೆ ನಿನಗೆ ಒಳ್ಳೆಯದು'ಎನ್ನುತ್ತಾ ತನ್ನ ಕೆಲಸಕ್ಕೆ ನಡೆದನು.

ಮರುದಿನ ರವಿಯು ಶಾಲೆಗೆ ಹೋದ ಕೂಡಲೇ ಕಿರಣನಲ್ಲಿ ತನ್ನ ಹಿಂದಿನ ದಿನದ ಅನುಭವವನ್ನು ಹೇಳುತ್ತಾ 'ನಿನ್ನಲ್ಲಿ ಪ್ಯಾಕೇಟ್ ಇದ್ದರೆ ನನಗೊಂದು ಕೊಡು' ಎಂದನು. ರವಿಯ ಮಾತನ್ನು ಕೇಳಿ ಆಶ್ಚರ್ಯ ಪಡುತ್ತಾ 'ಯಾವಾಗಲೂ ಹಾಗೆ ಕೊಡಲಾರೆ., ಅದಕ್ಕೆ ಹಣ ನೀಡಬೇಕು. ಈಗ ಕೊಡುತ್ತೇನೆ. ನಾಳೆಯಿಂದ ಹಣ ಕೊಡಬೇಕು' ಎನ್ನುತ್ತಾ ಪ್ಯಾಕೇಟನ್ನು ನೀಡಿದನು. ಇವರ ವ್ಯವಹಾರ ಹಾಗೇ ಮುಂದುವರಿಯಿತು. ಹೀಗೆ ಕೆಲವು ತಿಂಗಳುಗಳು ಕಳೆದುವು.

ಒಂದು ದಿನ ರವಿಯು, ಶಾಲೆಯಿಂದ ಮನೆಗೆ ಬರುತ್ತಲೇ, ಅಣ್ಣನಲ್ಲಿ ನನಗೆ ಬಾಯಿ ನೋಯುತ್ತಿದೆ ಎಂದು

ಬಾಯಿಯನ್ನು ತೋರಿಸಿದನು. ರಾಮುವಿಗೆ ಅವನ ಬಾಯಿಯಲ್ಲಿ ಬಿಳಿ ಬಿಳಿ ಕಲೆಗಳು ಕಂಡವು. ಗಾಬರಿಗೊಂಡ ಅವನು ರವಿಯನು ತಂದೆಯ ಬಳಿಗೆ ಕರೆದುಕೊಂಡು ಹೋದನು. ರಂಗಣ್ಣನು ಮಗನ ಬಾಯಿಯನ್ನು ಗಮನಿಸಿ ಭಯಗೊಂಡನು. ಕೂಡಲೇ ಅಸ್ಪತ್ರೆಗೆ ಕರೆದುಕೊಂಡು ಹೋದನು.

ಆಸ್ಪತ್ರೆಯಲ್ಲಿ ಡಾಕ್ಟರರು ರವಿಯನ್ನು ಪರಿಶೀಲಿಸಿದರು. ಕೂಡಲೇ ರವಿಯು ಯಾವುದೋ ಮಾದಕ ದ್ರವ್ಯವನ್ನು ಸೇವಿಸುತ್ತಿದ್ದಾನೆ ಎಂದು ತಿಳಿದರು. ಅವರು ಕೆಲವು ಔಷಧಿಗಳನ್ನು ನೀಡುತ್ತಾ, 'ಇದು ರೋಗದ ಆರಂಭಿಕ ಹಂತ, ಈಗಲೇ ತಿಳಿದ ಕಾರಣ ರೋಗವನ್ನು ಗುಣಪಡಿಸಬಹುದು, ಇನ್ನಾದರೂ ಈ ಕೆಟ್ಟ ಅಭ್ಯಾಸ ಬಿಡು' ಎಂದು ರವಿಗೆ ಬುದ್ಧಿಯ ಮಾತುಗಳನ್ನು ಹೇಳಿದರು.

ಬಳಿಕ ರಂಗಣ್ಣನ ಕಡೆಗೆ ತಿರುಗುತ್ತಾ "ನೋಡಿ! ನಿಮ್ಮ ಮಗ ಮಾದಕ ದ್ರವ್ಯವನ್ನು ಸೇವಿಸಿದ ಕಾರಣ ಅವನಿಗೆ ಹೀಗಾಗಿದೆ. ಇಂಥ ಪದಾರ್ಥಗಳ ಸೇವನೆಯಿಂದ ಹಲವಾರು ರೋಗಗಳು ಬರುತ್ತವೆ. ಇದರಿಂದ ನಮಗೂ ಸಮಾಜಕ್ಕೂ ಹಾನಿ ತಪ್ಪಿದ್ದಲ್ಲ" ಎಂದು ಹೇಳಿದರು.

ರವಿಗೆ ತನ್ನ ತಪ್ಪಿನ ಅರಿವಾಗಿ, 'ನಾನು ಇನ್ನೆಂದಿಗೂ ಅಮಲು ಪದಾರ್ಥಗಳನ್ನು ಸೇವಿಸುವುದಿಲ್ಲ. ನನ್ನ ಗೆಳೆಯನಿಗೆ ಇದರ ಬಗ್ಗೆ ತಿಳಿಸುತ್ತೇನೆ' ಎಂದು ಹೇಳುತ್ತಾ ತನ್ನ ತಂದೆಯ ಜೊತೆ ಮನೆ ಕಡೆಗೆ ನಡೆದನು.

## ಮೌಲ್ಯನಿರ್ಣಯ ಚಟುವಟಿಕೆಗಳು

1. ಉತ್ತರಿಸಿರಿ

1) ಮುದ್ದು ಕಂದ ಬಾರೋ ಎಂದು ಮಗುವನ್ನು ಕರೆಯುವವರು ಯಾರು?

2) ಮಗುವಿಗೆ ದಾರಿದೀಪ ಯಾವುದು?

3) ರವಿಗೆ ರೋಗ ಬರಲು ಕಾರಣವೇನು?

4) ಪಿಕ್‌ನಿಕ್ ಪಾಠವನ್ನು ಬರೆದ ಲೇಖಕಿ ಯಾರು?

2. ಕಿರಣನಲ್ಲಿ ಡಾಕ್ಟರ್ ಹೇಳಿದ ಬುದ್ಧಿಮಾತುಗಳೇನು?

1) ಮಕ್ಕಳಿಗೆ ತಂದೆತಾಯಿಯರು ಹೇಳುವ ಬುದ್ಧಿಮಾತುಗಳು ಯಾವುವು?

2) ರವಿ ಅಮಲು ಪದಾರ್ಥದ ದಾಸನಾಗಲು ಕಾರಣವೇನು?

3. ಪದ ವಿಂಗಡಿಸಿ ಬರೆಯಿರಿ.

1) ಆಯಾಸವಾಗಿತ್ತು

2) ಕೂಗಲಾಗಲಿಲ್ಲ

3) ಕೋಲನ್ನು

4) ನೋಡುವುದೇನು

5) ಆಕೃತಿಯೊಂದು

4. ಪರ್ಯಾಯ ಪದಗಳನ್ನು ಬರೆಯಿರಿ.

1) ರವಿ

2) ಚಂದ್ರ

3) ಬಾನು

4) ಕಡಲು

5. ಯಾವುದಾದರೂ ಒಂದು ಹಬ್ಬದ ದಿನದ ದಿನಚರಿಯನ್ನು ಬರೆಯಿರಿ.

* * *

# 6. ಬಿತ್ತಿದಂತೆ ಬೆಳೆ

ಭಾರತವು ಕೃಷಿ ಪ್ರಧಾನ ದೇಶ. ದೇಶದ ಅಭಿವೃದ್ಧಿಯಲ್ಲಿ ಕೃಷಿಕರು ಪ್ರಧಾನ ಪಾತ್ರ ವಹಿಸುತ್ತಾರೆ. ಆದುದರಿಂದ 'ಕೃಷಿಕರೇ ದೇಶದ ಬೆನ್ನೆಲುಬು' ಎಂಬ ಮಾತು ರೂಢಿಯಲ್ಲಿದೆ. ಅನ್ನದಾತನಾಗಿ ಜನರ ಹಸಿವನ್ನು ನೀಗಿಸುವುದು ಮಾತ್ರವಲ್ಲದೆ ಕೆಲವು ಕೈಗಾರಿಕೆಗಳಿಗೆ ಬೇಕಾದ ಕಚ್ಚಾವಸ್ತುಗಳನ್ನು ಕೃಷಿಕರು ಒದಗಿಸಿ ಕೊಡುತ್ತಾರೆ. ಇಂತಹ ಕೃಷಿಕರ ದಿನಚರಿಯ ಬಗ್ಗೆ ತಿಳಿಯಪಡಿಸುವುದು ಹಾಗೂ ಮಕ್ಕಳಿಗೆ ಕೃಷಿಯಲ್ಲಿ ಆಸಕ್ತಿ ಮೂಡಿಸುವುದು ಈ ಘಟಕದ ಉದ್ದೇಶ.

'ಸುಗ್ಗಿಯ ಹಿಗ್ಗು' ಎಂಬ ಪದ್ಯದಲ್ಲಿ ಹೊಲದಲ್ಲಿ ದುಡಿಯುವ ರೈತನ ದಿನಚರಿಯನ್ನು ತಿಳಿಸುವುದರೊಂದಿಗೆ ಅವನಿಂದಾಗಿ ಎಲ್ಲ ಜನರೂ ಸುಖ ಸಮೃದ್ಧಿಯಿಂದ ಬಾಳುತ್ತಾರೆ ಎಂಬುದನ್ನು ಸೂಚಿಸಲಾಗಿದೆ. ಕಷ್ಟಪಟ್ಟು ದುಡಿಯುವ ರೈತನು ಸುಖದಿಂದ ಬಾಳಬೇಕು ಎಂದು ಹಾರೈಸುವುದು ಎಲ್ಲರ ಕರ್ತವ್ಯವಾಗಿದೆ.

ಈ ಘಟಕದ ಎರಡನೇ ಪಾಠವಾಗಿ ಶ್ರಮದ ಫಲ ಎಂಬ ಕಥೆಯನ್ನು ನೀಡಲಾಗಿದೆ. ಕೃಷಿಯನ್ನು ಮಾಡುವುದರಿಂದ ಕೃಷಿಕನ ಆರ್ಥಿಕ ಅಭಿವೃದ್ಧಿ ಆಗುತ್ತದೆ. ಆರ್ಥಿಕ ಅಭಿವೃದ್ಧಿ ಆತನ ಸರ್ವಾಂಗೀಣ ಅಭಿವೃದ್ಧಿಗೆ ಕಾರಣವಾಗುತ್ತದೆ. ಆ ಮೂಲಕ ದೇಶದ ಅಭಿವೃದ್ಧಿಯೂ ಆಗುತ್ತದೆ. ಕೃಷಿಕನು ತನ್ನ ಕೆಲಸದಲ್ಲಿ ವಿಮುಖನಾದರೆ ಉಂಟಾಗುವ ತೊಂದರೆಗಳು ಯಾವುವು? ಎಂಬುದನ್ನು ಈ ಕಥೆಯು ತಿಳಿಸುತ್ತದೆ.

ಪಾಠದ ಸಂದರ್ಭದಲ್ಲಿ I.C.T. ಯನ್ನು ತರಗತಿಕೋಣೆಯಲ್ಲಿ ಯೋಗ್ಯವಾದ ರೀತಿಯಲ್ಲಿ ಬಳಸಬೇಕು.

## ಕಲಿಕಾ ಸಾಧನೆಗಳು

- ಪದ ಪ್ರಯೋಗಗಳು, ಶೈಲಿಗಳು, ಆಲಿಸಿದ ನೂತನ ಪದಗಳು ಮೊದಲಾದವುಗಳನ್ನು ಸಂದರ್ಭಕ್ಕನುಗುಣವಾಗಿ ಮಾತುಗಾರಿಕೆಯಲ್ಲಿ ಬಳಸುವುದು.
- ಕಥೆ, ಕವಿತೆ, ಲಘು ಟಿಪ್ಪಣಿಗಳನ್ನು ಆಲಿಸಿ/ಓದಿ ತನ್ನದೇ ಭಾಷೆಯಲ್ಲಿ ಹೇಳುವುದು ಹಾಗೂ ಬರೆಯುವುದು.
- ಕವಿತೆಗಳನ್ನು ಆಲಿಸಿ, ಆಸ್ವಾದಿಸಿ, ಅವುಗಳ ಆಶಯವನ್ನು ಅರ್ಥೈಸಿಕೊಂಡು ರಾಗ, ತಾಳ, ಭಾವಗಳಿಂದ ಹಾಡುವುದು.
- ನಿರ್ದಿಷ್ಟ ಭಾಷಾ ವ್ಯವಹಾರ ರೂಪಗಳನ್ನು, ಶ್ರೋತೃಗಳಿಗೆ ಆಶಯಸ್ಪಷ್ಟವಾಗುವ ರೀತಿಯಲ್ಲಿ, ಉಚ್ಚಾರ ಸ್ಪಷ್ಟತೆಯಿಂದ ಸರಾಗವಾಗಿ ಓದುವುದು.
- ಸರಳ ಕವಿತೆಗಳನ್ನು ರಾಗ, ತಾಳ, ಭಾವದೊಂದಿಗೆ ಹಾಡುವುದು ಹಾಗೂ ಸಮಾನ ರಾಗ ತಾಳಗಳಲ್ಲಿ ಹಾಡಬಹುದಾದ ಸಾಲುಗಳನ್ನು ಬರೆಯುವುದು.
- ಓದಿ ಆಸ್ವಾದಿಸಿದ ಕತೆ, ಕವಿತೆಗಳಲ್ಲಿ ಬರುವ ಪಾತ್ರಗಳ ಅಭಿನಯ, ಮೂಕಾಭಿನಯ ಮಾಡುವುದು.
- ತನ್ನ ಆಶಯಗಳನ್ನು ತಪ್ಪಿಲ್ಲದೆ, ಸೂಕ್ತ ವ್ಯವಹಾರ ರೂಪದಲ್ಲಿ (ಕಥೆ, ಕವಿತೆ ಇತ್ಯಾದಿ) ಬರೆಯುವುದು.
- ವಾರ್ತಾಪತ್ರಿಕೆಗಳಿಂದ ಆಶಯಗಳನ್ನು ಸಂಗ್ರಹಿಸಿ ಬರೆದು ಭಿತ್ತಿಪತ್ರಿಕೆ ಹಾಗೂ ಹಸ್ತಪತ್ರಿಕೆ ಮೊದಲಾದವುಗಳಲ್ಲಿ ಪ್ರಕಟಿಸುವುದು.
- ಸೃಜನಾತ್ಮಕ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡು ತನ್ನ ರಚನೆಗಳನ್ನು ತರಗತಿಯ ಸಂಚಿಕೆಗಳು ಹಾಗೂ ಹಸ್ತಪತ್ರಿಕೆಗಳಿಗೆ ನೀಡುವುದು.
- ಸಹಪಾಠಿಗಳ ರಚನೆಗಳನ್ನು ಮೌಲ್ಯನಿರ್ಣಯ ಮಾಡಿ, ಇತರರ ರಚನೆಗಳಲ್ಲಿನ ಪ್ರಯೋಗಗಳು, ಶೈಲಿಗಳನ್ನು ವಿಶ್ಲೇಷಿಸಿ ತನ್ನ ರಚನೆಗಳನ್ನು ಉತ್ತಮಪಡಿಸುವುದು.
- ಕಥೆ, ಕವಿತೆಗಳನ್ನು ಆಲಿಸಿ ಅವುಗಳಿಗೆ ಸೂಕ್ತವಾದ ಶೀರ್ಷಿಕೆಯನ್ನು ಸೂಚಿಸಿ ಔಚಿತ್ಯವನ್ನು ತಿಳಿಸುವುದು.
- ಭಾಷಾ ವ್ಯವಹಾರ ರೂಪಗಳನ್ನು ಬೇರೆ ಬೇರೆ ರೀತಿಯಲ್ಲಿ ರೂಪಾಂತರಿಸುವುದು.
- ಒಗಟುಗಳು ಹಾಗೂ ಒಗಟುಪದ್ಯಗಳಿಗೆ ಉತ್ತರವನ್ನು ಕಂಡುಹಿಡಿಯುವುದು ಮತ್ತು ಸರಳ ಒಗಟುಗಳು ಹಾಗೂ ಒಗಟು ಪದ್ಯಗಳನ್ನು ರಚಿಸುವುದು.
- ಕಥೆ, ಕವಿತೆಗಳನ್ನು ಆಲಿಸಿ ಅವುಗಳಿಗೆ ಸೂಕ್ತವಾದ ಶೀರ್ಷಿಕೆಗಳನ್ನು ಸೂಚಿಸಿ ಔಚಿತ್ಯವನ್ನು ತಿಳಿಸುವುದು.
- ಭಾಷಾ ವ್ಯವಹಾರಗಳನ್ನು ಬೇರೆ ಬೇರೆ ರೀತಿಗಳಲ್ಲಿ ರೂಪಾಂತರಿಸುವುದು.
- ಒಗಟುಗಳು ಹಾಗೂ ಒಗಟು ಪದ್ಯಗಳಿಗೆ ಉತ್ತರವನ್ನು ಕಂಡುಹಿಡಿಯುವುದು ಮತ್ತು ಸರಳ ಒಗಟುಗಳು ಹಾಗೂ ಒಗಟು ಪದ್ಯಗಳನ್ನು ರಚಿಸುವುದು.

# ಯೂನಿಟ್ ಗ್ರಿಡ್ : 6. ಬಿತ್ತಿದಂತೆ ಬೆಳೆ

| ಆಶಯಗಳು | ಪ್ರಕ್ರಿಯೆಗಳು | ಕಲಿಕಾ ಸಾಧನೆಗಳು |
|---|---|---|
| **1. ಸುಗ್ಗಿಯ ಹಿಗ್ಗು** | | **ಸಮಯ : 6 ಗಂಟೆಗಳು** |
| • ರಾಗ, ತಾಳದೊಂದಿಗೆ ಭಾವಪೂರ್ಣವಾಗಿ ಮಂಡಿಸುವಾಗ ಕವಿತೆಯು ಆಸ್ವಾದಕರವೆನಿಸುವುದು. | • ಪದ್ಯವನ್ನು ರಾಗ, ತಾಳ,ಭಾವಗಳೊಂದಿಗೆ ವೈಯುಕ್ತಿಕವಾಗಿ ಯೂ ಗುಂಪಿನಲ್ಲಿಯೂ ರಾಗಹಾಕಿ ಹಾಡುವುದು. | • ಕೊಟ್ಟಂತಹ ಆಶಯಗಳಿಗೆ ಸರಿಯೋ ತಪ್ಪೋ ಎಂದು ಪಾಠಭಾಗವನ್ನು ವಿಶ್ಲೇಷಿಸಿ ಕಂಡುಕೊಳ್ಳುವುದು. |
| • ಕೃಷಿಕರ ಬಗೆಗೆ ಗೌರವ ಭಾವ ಬೆಳೆಸುವುದು ಕೃಷಿ ಕೆಲಸದಲ್ಲಿ ಆಸಕ್ತಿ ಮೂಡಿಸಿ ತಮ್ಮನ್ನು ತೊಡಗಿಸಿಕೊಳ್ಳುವುದು. | • ನವೀನ ಪದಗಳ ಅರ್ಥವನ್ನು ಅರ್ಥಕೋಶದ ಸಹಾಯದಿಂದಕಂಡುಕೊಳ್ಳುವುದು.<br>• ಪದ್ಯದಲ್ಲಿ ಯಾವ ಸಾಲು ಇಷ್ಟವಾಯಿತು ಯಾಕೆ ಎಂದು ಸಮರ್ಥಿಸಿ ಬರೆದು ತರಗತಿಯಲ್ಲಿ ಮಂಡಿಸುವುದು. | • ಕವಿತೆಗಳನ್ನು ಆಲಿಸಿ, ಆಸ್ವಾದಿಸಿ ಅವುಗಳ ಆಶಯಗಳನ್ನು ಅರ್ಥೈಸಿಕೊಂಡು ರಾಗ, ತಾಳ, ಭಾವಗಳೊಂದಿಗೆ ಹಾಡುವುದು. |
| • ಆಶಯ ಸ್ಪಷ್ಟತೆಯೊಂದಿಗೆ ಸೂಕ್ತವಾದ ಪದಗಳನ್ನು ಬಳಸಿಕೊಂಡು ಸಂಕ್ಷಿಪ್ತವಾದ ಶೀರ್ಷಿಕೆಯನ್ನು ಬರೆಯುವುದು. | • ಪದ್ಯಭಾಗದಿಂದ ಸಾಧ್ಯವಿದ್ದಷ್ಟು ಪ್ರಶ್ನೆಗಳನ್ನು ತಯಾರಿಸಲು ಉತ್ತರ ಬರೆದು ತರಗತಿಯಲ್ಲಿ ಮಂಡಿಸುವುದು.<br>• ಪದ್ಯದಿಂದ ಪ್ರಾಸ ಪದಗಳನ್ನು ಹುಡುಕಿ ಬರೆದು ತರಗತಿಯಲ್ಲಿ ಮಂಡಿಸುವುದು.<br>• ಅಡಿಗೆರೆ ಎಳೆದ ಪದಗಳಿಗೆ ಸಮಾನ ಅರ್ಥಕೊಡುವ ಪದಗಳನ್ನು ಪದ್ಯದಿಂದ ಹುಡುಕಿ ಬರೆದು ಮಂಡಿಸುವುದು. | • ಕಥೆ, ಕವಿತೆ ಲಘು ಟಿಪ್ಪಣಿಗಳನ್ನು ಆಲಿಸಿ/ಓದಿ ತನ್ನದೇ ಭಾಷೆಯಲ್ಲಿ ಹೇಳುವುದು ಹಾಗೂ ಬರೆಯುವುದು.<br>• ಕಥೆ, ಕವಿತೆಗಳನ್ನು ಆಲಿಸಿ ಅವುಗಳಿಗೆ ಸೂಕ್ತವಾದ ಶೀರ್ಷಿಕೆಯನ್ನು ಸೂಚಿಸಿ ಔಚಿತ್ಯವನ್ನು ತಿಳಿಸುವುದು. |

| ಆಶಯಗಳು | ಪ್ರಕ್ರಿಯೆಗಳು | ಕಲಿಕಾ ಸಾಧನೆಗಳು |
|---|---|---|
| • ಕೊಟ್ಟಿರುವ ಭಾಷಾ ವ್ಯವಹಾರ ರೂಪವನ್ನು ಓದಿ ಅರ್ಥೈಸಿಕೊಂಡು ಆಶಯ ಚ್ಯುತಿಯಾಗದೆ ಒಂದು ರೂಪದಿಂದ ಇನ್ನೊಂದು ರೂಪಕ್ಕೆ ಬದಲಾಯಿಸಬಹುದು. | • ಮಾದರಿಯಂತೆ ಪದ್ಯ ಭಾಗವನ್ನು ಗದ್ಯಭಾಗಕ್ಕೆ ರೂಪಾಂತರಿಸಿ ಬರೆದು ತರಗತಿಯಲ್ಲಿ ಮಂಡಿಸುವುದು. | • ಭಾಷಾ ವ್ಯವಹಾರ ರೂಪಗಳನ್ನು ಬೇರೆ ಬೇರೆ ರೀತಿಯಲ್ಲಿ ರೂಪಾಂತರಿಸುವುದು. |
| • ಪ್ರಧಾನ ಆಶಯಗಳಿಗೆ ಹೊಂದಿಕೊಂಡು ಯೋಗ್ಯವಾದ ಪದವಿನ್ಯಾಸ, ಪ್ರಾಸಪದಗಳು ಇವುಗಳನ್ನು ಒಳಗೊಂಡಂತೆ ಭಾವನಾಪೂರ್ಣ ಕವಿತೆಯನ್ನು ರಚಿಸುವುದು. | • ಕೊಟ್ಟಿರುವ ಸಾಲುಗಳನ್ನು ಓದಿ ಅರ್ಥೈಸಿಕೊಂಡು ಯೋಗ್ಯವಾದ ಪದವಿನ್ಯಾಸಗಳೊಂದಿಗೆ ಪದ್ಯವನ್ನು ಮುಂದುವರಿಸಿಬರೆದು ಶೀರ್ಷಿಕೆಯನ್ನು ನೀಡಿ ಮಂಡಿಸುವುದು. ಗೆಳೆಯರ ಬರವಣಿಗೆಯೊಂದಿಗೆ ಹೋಲಿಸಿ ಉತ್ತಮ ಪಡಿಸಿ ಭಿತ್ತಿ ಪತ್ರಿಕೆಯಲ್ಲಿ ಪ್ರದರ್ಶಿಸುವುದು. | • ಸರಳ ಕವಿತೆಗಳನ್ನು ರಾಗ, ತಾಳ, ಭಾವಗಳೊಂದಿಗೆ ಹಾಡುವುದು ಹಾಗೂ ಸಮಾನ ರಾಗಗಳಲ್ಲಿ ಹಾಡಬಹುದಾದ ಸಾಲುಗಳನ್ನು ಬರೆಯುವುದು.<br>• ತನ್ನ ಆಶಯವನ್ನು ತಪ್ಪಿಲ್ಲದೆ ಸೂಕ್ತ ವ್ಯವಹಾರ ರೂಪದಲ್ಲಿ (ಕಥೆ, ಕವಿತೆ ಇತ್ಯಾದಿ) ಬರೆಯುವುದು. |
| • ಆಶಯವನ್ನು ಪ್ರತಿಬಿಂಬಿಸುವ ಸಾಲುಗಳು, ಸಾಲುಗಳಲ್ಲಿ ಸೂಕ್ತವಾದ ಪದಗಳು ಸಾಲುಗಳ ಕ್ರಮೀಕರಣ, ತಾಳ ಎಂಬಿವುಗಳು ಕವಿತೆಯ ಸೌಂದರ್ಯವನ್ನು ಹೆಚ್ಚಿಸುತ್ತದೆ.<br>• ಸರಳ ಪದ್ಯದಲ್ಲಿ ಪದ, ವಾಕ್ಯ, ಅಕ್ಷರ ದೋಷವಿಲ್ಲದೆ ಆಶಯ ಕ್ರಮೀಕೃತ ರಚನೆಯಾಗಿದೆ. | | • ಸೃಜನಾತ್ಮಕ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡು ತನ್ನ ರಚನೆಗಳನ್ನು ತರಗತಿಯ ಸಂಚಿಕೆಗಳು ಹಾಗೂ ಹಸ್ತ ಪ್ರತಿಗಳಿಗೆ ನೀಡುವುದು.<br>• ವಾರ್ತಾ ಪತ್ರಿಕೆಗಳಿಂದ ಆಶಯಗಳನ್ನು ಸಂಗ್ರಹಿಸಿ ಬರೆದು ಭಿತ್ತಿ ಪತ್ರಿಕೆ ಹಾಗೂ ಹಸ್ತ ಪತ್ರಿಕೆ ಮೊದಲಾದವುಗಳನ್ನು ಪ್ರಕಟಿಸುವುದು. |

| ಆಶಯಗಳು | ಪ್ರಕ್ರಿಯೆಗಳು | ಕಲಿಕಾ ಸಾಧನೆಗಳು |
|---|---|---|
| **2. ಶ್ರಮದ ಫಲ** | | **ಸಮಯ : 10ಗಂಟೆಗಳು** |
| • ಕಥೆ, ಕವಿತೆ ಮೊದಲಾದವುಗಳನ್ನು ಉಚ್ಚಾರ ಸ್ಪಷ್ಟತೆಯೊಂದಿಗೆ ಸರಾಗವಾಗಿ ಓದುವುದು.<br>• ಕೃಷಿಯ ಪ್ರಾಧಾನ್ಯತೆಯನ್ನು ತಿಳಿಯುವುದು. ದುಡಿಮೆಯ ಮಹತ್ವವನ್ನು ತಿಳಿದು ಅಳವಡಿಸಿಕೊಳ್ಳುವುದು. | • ಪಾಠಭಾಗವನ್ನು ಉಚ್ಛಾರ ಸ್ಪಷ್ಟತೆಯೊಂದಿಗೆ ಸರಾಗವಾಗಿ ಓದುವುದು.<br>• ಪಾಠಭಾಗದ ನವೀನ ಪದಗಳ ಅರ್ಥಗಳನ್ನು ಅರ್ಥಕೋಶದ ಸಹಾಯದಿಂದ ಕಂಡುಕೊಳ್ಳುವುದು.<br>• ಅಡಿಗೆರೆ ಎಳೆದ ಪದಗಳು ಉತ್ತರವಾಗಿ ಬರುವಂತೆ ಪ್ರಶ್ನೆಗಳನ್ನು ತಯಾರಿಸಿ ಮಂಡಿಸುವುದು.<br>• ಕೊಟ್ಟಂಥ ಮಾತುಗಳನ್ನು ಯಾರು ಯಾರಿಗೆ ಹೇಳಿದರು ಎಂದು ಪಾಠಭಾಗವನ್ನು ಓದಿ ತಿಳಿದುಕೊಂಡು ತರಗತಿಯಲ್ಲಿ ಮಂಡಿಸುವುದು. | • ನಿರ್ದಿಷ್ಟವಾದ ಭಾಷಾ ವ್ಯವಹಾರ ರೂಪಗಳನ್ನು ಶ್ರೋತೃಗಳಿಗೆ ಆಶಯ ಸ್ಪಷ್ಟವಾಗುವ ರೀತಿಯಲ್ಲಿ ಉಚ್ಛಾರ ಸ್ಪಷ್ಟತೆಯಿಂದ ಸರಾಗವಾಗಿ ಓದುವುದು.<br>• ಕಥೆ, ಕವಿತೆ, ಲಘು ಟಿಪ್ಪಣಿಗಳನ್ನು ಆಲಿಸಿ/ ಓದಿ ತನ್ನದೇ ಭಾಷೆಯಲ್ಲಿ ಹೇಳುವುದು ಹಾಗೂ ಬರೆಯುವುದು. |
| • ದುಡಿಮೆಯ ಮಹತ್ವವನ್ನು, ಪ್ರಾಧಾನ್ಯತೆಯನ್ನು ತಿಳಿಯುವುದು.<br>• ಆಶಯಗಳನ್ನು ಚರ್ಚೆಯಲ್ಲಿ ಭಾಗವಹಿಸಿ ಸ್ವತಂತ್ರವಾಗಿ ವ್ಯಕ್ತಪಡಿಸುವುದು. | • ತಮ್ಮ ಕೆಲಸಗಳನ್ನು ನಾವೇ ಯಾಕೆ ಮಾಡಬೇಕು ಎಂದು ಚರ್ಚಿಸಿ ತಮ್ಮ ಅಭಿಪ್ರಾಯಗಳನ್ನು ಬರೆದು ಮಂಡಿಸುವುದು.<br>• ಆವರಣದಿಂದ ಸೂಕ್ತ ಪದಗಳನ್ನು ಆರಿಸಿ ಖಾಲಿ ಬಿಟ್ಟ ಸ್ಥಳಗಳನ್ನು ಪೂರ್ತಿಗೊಳಿಸಿ ತರಗತಿಯಲ್ಲಿ ಮಂಡಿಸುವುದು.<br>• ಪದಗಳನ್ನು ಅನುಕ್ರಮವಾಗಿ ಬರೆದು ಗಾದೆ ತಯಾರಿಸಿ ತರಗತಿಯಲ್ಲಿ ಮಂಡಿಸುವುದು. | • ಪದಪ್ರಯೋಗಗಳು, ಶೈಲಿಗಳು, ಆಲಿಸಿದ ನೂತನ ಪದಗಳು ಮೊದಲಾದವುಗಳನ್ನು ಸಂದರ್ಭಕ್ಕನುಗುಣವಾಗಿ ಮಾತುಗಾರಿಕೆಯಲ್ಲಿ ಬಳಸುವುದು.<br>• ಸಹಪಾಠಿಗಳ ರಚನೆಗಳನ್ನು ಮೌಲ್ಯನಿರ್ಣಯ ಮಾಡಿ ಇತರರ ರಚನೆಗಳಲ್ಲಿನ ಪ್ರಯೋಗಗಳು ಶೈಲಿಗಳನ್ನು ವಿಶ್ಲೇಷಿಸಿ ತನ್ನ ರಚನೆಗಳನ್ನು ಉತ್ತಮಪಡಿಸುವುದು. |

| ಆಶಯಗಳು | ಪ್ರಕ್ರಿಯೆಗಳು | ಕಲಿಕಾ ಸಾಧನೆಗಳು |
|---|---|---|
| • ಒಗಟುಗಳು ಗದ್ಯರೂಪದಲ್ಲಿಯೂ ಪದ್ಯರೂಪದಲ್ಲಿಯೂ ಇವೆ.<br>• ಒಗಟುಗಳು ಮಕ್ಕಳಲ್ಲಿ ಚಿಂತನಾ ಸಾಮರ್ಥ್ಯವನ್ನು ಬೆಳೆಸುತ್ತದೆ. | • ಒಗಟು ಪದ್ಯವನ್ನು ಓದಿ ಒಗಟಿನ ಉತ್ತರಗಳನ್ನು ಕಂಡುಕೊಳ್ಳುವುದು ಮತ್ತು ತರಗತಿಯಲ್ಲಿ ಮಂಡಿಸುವುದು.<br>• ಕೆಲವು ಒಗಟು ಪದ್ಯಗಳನ್ನು ರಚಿಸಿ ತರಗತಿಯಲ್ಲಿ ಮಂಡಿಸುವುದು. | • ಒಗಟುಗಳು ಹಾಗೂ ಒಗಟು ಪದ್ಯಗಳಿಗೆ ಉತ್ತರವನ್ನು ಕಂಡು ಹಿಡಿಯುವುದು ಮತ್ತು ಸರಳ ಒಗಟುಗಳು ಹಾಗೂ ಒಗಟು ಪದ್ಯಗಳ್ನು ರಚಿಸುವುದು. |
| • ಭಾಷಾ ವ್ಯವಹಾರ ರೂಪವನ್ನು ಓದಿ ಅರ್ಥೈಸಿ ಆಶಯ ಚ್ಯುತಿ ಬರದಂತೆ ಒಂದು ರೂಪದಿಂದ ಇನ್ನೊಂದು ರೂಪಕ್ಕೆ ಬಾರದಂತೆ ಒಂದು ರೂಪದಿಂದ ಇನ್ನೊಂದು ರೂಪಕ್ಕೆ ಬದಲಾಯಿಸಿ ಬರೆಯುವುದು. | • ಕೊಟ್ಟಿರುವ ಕಥಾಭಾಗವನ್ನು ಓದಿ ಯೋಗ್ಯ ಸಂಭಾಷಣೆಯನ್ನು ಬರೆದು ತರಗತಿಯಲ್ಲಿ ಅಭಿನಯ ಮಾಡುವುದು.<br>• ಕೊಟ್ಟಿರುವ ವಾಕ್ಯಗಳಲ್ಲಿ ಅಡಿಗೆರೆ ಎಳೆದ ಪದಗಳನ್ನು ಉಪಯೋಗಿಸಿ ವಾಕ್ಯಗಳನ್ನು ರಚಿಸಿ ತರಗತಿಯಲ್ಲಿ ಮಂಡಿಸುವುದು. | • ಭಾಷಾ ವ್ಯವಹಾರ ರೂಪಗಳನ್ನು ಬೇರೆ ಬೇರೆ ರೀತಿಯಲ್ಲಿ ರೂಪಾಂತರಿಸಿ ಬರೆಯುವುದು.<br>• ಓದಿ ಆಸ್ವಾದಿಸಿದ ಕಥೆ, ಕವಿತೆಗಳಲ್ಲಿ ಬರುವ ಪಾತ್ರಗಳ ಅಭಿನಯ, ಮೂಕಾಭಿನಯ ಮಾಡುವುದು. |
| • ಭಿತ್ತಿ ಪತ್ರಿಕೆಯಲ್ಲಿ ಒಂದು ಸಂದೇಶವನ್ನು ಆಕರ್ಷಕವಾಗಿ ಚಿತ್ರೀಕರಿಸಿ ಪ್ರದರ್ಶಿಸುವುದು.<br>• ಕೃಷಿಯ ಮಹತ್ವವನ್ನು, ಪ್ರಾಧಾನ್ಯತೆಯನ್ನು ತಿಳಿಯುವುದು. ಕೃಷಿ ಕೆಲಸಗಳಲ್ಲಿ ಆಸಕ್ತಿ ಮೂಡಿಸುವುದು. | • ವಾರ್ತಾ ಪತ್ರಿಕೆಗಳಲ್ಲಿ ಬರುವ ಕೃಷಿಗೆ ಸಂಬಂಧಿಸಿದ ವಿಚಾರಗಳನ್ನು ಸಂಗ್ರಹಿಸಿ ಭಿತ್ತಿ ಪತ್ರಿಕೆಯನ್ನು ತಯಾರಿಸಿ ಪ್ರದರ್ಶಿಸುವುದು. | • ವಾರ್ತಾ ಪತ್ರಿಕೆಗಳಿಂದ ಆಶಯಗಳನ್ನು ಸಂಗ್ರಹಿಸಿ ಬರೆದು ಭಿತ್ತಿ ಪತ್ರಿಕೆ ಹಾಗೂ ಹಸ್ತ ಪತ್ರಿಕೆ ಮೊದಲಾದವುಗಳನ್ನು ಪ್ರಕಟಿಸುವುದು. |

# ಸುಗ್ಗಿಯ ಹಿಗ್ಗು

'ಬಿತ್ತಿದಂತೆ ಬೆಳೆ' ಘಟಕದ ಆರಂಭದಲ್ಲಿ ಸುಂದರವಾದ ಪ್ರಕೃತಿ ಹಾಗೂ ಕೃಷಿ ಕೆಲಸದ ದೃಶ್ಯಗಳನ್ನು ನೀಡಲಾಗಿದೆ. ಪಾಠಭಾಗವನ್ನು ಆರಂಭಿಸುವ ಮೊದಲು ಚಿತ್ರ ಓದುವ ಚಟುವಟಿಕೆಯನ್ನು ನಡೆಸುವುದು. ಇದರ ಹೊರತಾಗಿ ICT ಉಪಯೋಗಿಸಿ ಅದರಲ್ಲಿರುವ ಕೃಷಿಗೆ ಸಂಬಂಧಿಸಿದ ಚಿತ್ರ ಅಥವಾ ಇತರ ದೃಶ್ಯಗಳನ್ನು ಉಪಯೋಗಿಸಬಹುದು.

- ಚಿತ್ರದಲ್ಲಿ ಏನೇನು ಇವೆ?
- ಯಾವ ಕೃಷಿ ಕೆಲಸದ ಚಿತ್ರಗಳು ಇಲ್ಲಿವೆ?
- ಸಾಮಾನ್ಯವಾಗಿ ಯಾವ ಕಾಲದಲ್ಲಿ ಕೃಷಿ ಕೆಲಸಗಳನ್ನು ಮಾಡುತ್ತಾರೆ?

  ಅಧ್ಯಾಪಕರು ಮಕ್ಕಳ ಅಭಿಪ್ರಾಯಗಳನ್ನು ಕ್ರೋಡೀಕರಿಸುವುದು. 'ಸುಗ್ಗಿಯ ಹಿಗ್ಗು' ಪದ್ಯವನ್ನು ಮಕ್ಕಳು ವೈಯಕ್ತಿಕವಾಗಿ ಓದಲಿ. ಅನಂತರ ಗುಂಪಿನಲ್ಲಿ ರಾಗ ಹಾಕಿ ಪದ್ಯ ಹಾಡಲು ಅವಕಾಶವನ್ನು ನೀಡುವುದು. ಉತ್ತಮವಾಗಿ ಹಾಡಿದ ಗುಂಪನ್ನು ಮಕ್ಕಳೇ ಕಂಡುಕೊಳ್ಳಲಿ.

  ಯಾವ ಗುಂಪಿನವರ ಮಂಡನೆ ಉತ್ತಮವಾಗಿದೆ ಎಂದು ಹೇಳಲಿ.

- ಅಧ್ಯಾಪಕರು ಹಾಡುವುದು. ಮಕ್ಕಳಿಗೆ ಹಾಡಿನ ಧ್ವನಿಮುದ್ರಿಕೆಯನ್ನು ಆಲಿಸಲು ಅವಕಾಶವನ್ನು ನೀಡುವುದು.

## ಚಟುವಟಿಕೆಗಳು

- ❑ **ಪದಗಳ ಅರ್ಥ ಕಂಡುಹಿಡಿಯುವ**

ಪದ್ಯದಲ್ಲಿ ಬಳಸಲಾದ ನವೀನ ಪದಗಳನ್ನು ಆರಿಸಿ ಬರೆಯಲಿ. ಅರ್ಥಕೋಶದ ಸಹಾಯದಿಂದ ಅರ್ಥವನ್ನು ಕಂಡುಕೊಳ್ಳಲಿ. ಅಧ್ಯಾಪಕರು ಅಗತ್ಯವಾದ ಸಹಾಯ ಮಾಡುವುದು.

- ❑ **ಇಷ್ಟವಾದ ಸಾಲುಗಳನ್ನು ಬರೆಯುವ**

  ಆಶಯ ಸ್ಪಷ್ಟತೆ, ಪದ ಪ್ರಯೋಗಗಳು ಮೊದಲಾದ ವಿಶೇಷತೆಗಳಿಂದಾಗಿ ಪದ್ಯದ ಕೆಲವು ಸಾಲುಗಳು ಮಕ್ಕಳಿಗೆ ಹೆಚ್ಚು ಇಷ್ಟವೆನಿಸಬಹುದು. ಇವುಗಳನ್ನು ಪದ್ಯದಿಂದ ಗುರುತಿಸಿ ಸಮರ್ಥಿಸಲಿ.

  ಇಷ್ಟವಾದ ಸಾಲು ಯಾವುದು? ಯಾಕೆ? ಎಂದು ಬರೆಯಲಿ. ತರಗತಿಯಲ್ಲಿ ಮಕ್ಕಳು ಮಂಡಿಸಲಿ. ಅಧ್ಯಾಪಕರು ತಮಗೆ ಇಷ್ಟವಾದ ಸಾಲು ಯಾವುದು, ಯಾಕೆ ಎಂದು ಹೇಳುವುದು. ಅದರ ಆಧಾರದಲ್ಲಿ ಮಕ್ಕಳಿಗೆ ತಮ್ಮ ಬರವಣಿಗೆಯನ್ನು ಉತ್ತಮಪಡಿಸಲು ಅವಕಾಶವನ್ನು ನೀಡುವುದು.

- ❑ **ಪ್ರಶ್ನೆ ತಯಾರಿಸುವ**

ಪದ್ಯದ ಆಶಯದ ಕುರಿತು ಮಕ್ಕಳಲ್ಲಿ ಚರ್ಚಿಸುವುದು.ಆಶಯಕ್ಕೆ ಹೊಂದಿಕೊಂಡು ಪ್ರಶ್ನೆಗಳನ್ನು ಮಕ್ಕಳು ವೈಯಕ್ತಿಕವಾಗಿ ತಯಾರಿಸಲಿ. ಗುಂಪಿನಲ್ಲಿ ಪ್ರಶ್ನೆಗಳನ್ನು ಪರಸ್ಪರ ಹಂಚಿ ಉತ್ತಮಪಡಿಸಿ, ಪ್ರಶ್ನೆಗಳಿಗೆ ಉತ್ತರಗಳನ್ನು ಕಂಡುಕೊಳ್ಳಲಿ. ಗುಂಪುಗಳೊಳಗೆ ಪ್ರಶ್ನೋತ್ತರ ಸ್ಪರ್ಧೆ ನಡೆಸುವುದು.

ಮಾದರಿ :

1. ರೈತನು ಯಾವಾಗ ಹೊಲಕ್ಕೆ ನಡೆಯುತ್ತಾನೆ?
2. ಮಳೆ ಸುರಿದಾಗ ಏನಾಯಿತು?
3. ಪೈರು ಬೆಳೆದಾಗ ಏನು ಸಿಗುತ್ತದೆ?
4. ಅನ್ನ ಕೊಡುವ ರೈತನ ಜೀವನ ಹೇಗಿರಬೇಕು?

### ❑ ಪ್ರಾಸಪದ ಬರೆಯುವ

ಪದ್ಯಭಾಗದಲ್ಲಿ ಬರುವ ಪ್ರಾಸ ಪದಗಳನ್ನು ಗುರುತಿಸಿ ವಿದ್ಯಾರ್ಥಿಗಳು ವೈಯುಕ್ತಿಕವಾಗಿ ಬರೆದು ತರಗತಿಯಲ್ಲಿ ಮಂಡಿಸಲಿ. ಅಧ್ಯಾಪಕರು ಅಗತ್ಯವಾದ ಸಹಾಯ ಮಾಡುವುದು. ಮಕ್ಕಳು ಹೇಳಿದ ಪ್ರಾಸಪದಗಳನ್ನು ಅಧ್ಯಾಪಕರು ಕರಿಹಲಗೆಯಲ್ಲಿ ಬರೆಯುವುದು. ಅದನ್ನು ಮಕ್ಕಳು ತಮ್ಮ ಪುಸ್ತಕದಲ್ಲಿ ಬರೆಯಲಿ.

### ❑ ಪದ ಕಂಡುಹಿಡಿಯುವ

ಪದ್ಯದ ಆರಂಭದ ನಾಲ್ಕು ಸಾಲುಗಳಲ್ಲಿ ಇರುವ ಕೆಲವು ಪದಗಳಿಗೆ ಬದಲಾಗಿ ಸಮಾನಾರ್ಥ ಬರುವ ಪದಗಳನ್ನು ನೀಡಲಾಗಿದೆ. ಆ ಪದಗಳನ್ನು ಪದ್ಯದ ಸಹಾಯದಿಂದ ಹುಡುಕಿ ಬರೆಯಲಿ.

| | | |
|---|---|---|
| ಗಗನ | – | ಬಾನು |
| ಭಾನು | – | ಸೂರ್ಯ |
| ಕೆಲಸ | – | ದುಡಿಮೆ |
| ಹೋದನು | – | ನಡೆದನು |

ಉಳಿದ ಸಾಲುಗಳಲ್ಲಿ ಬರುವ ಪದಗಳಿಗೆ ಬದಲಾಗಿ ಅವುಗಳ ಸಮಾನಾರ್ಥ ಪದಗಳನ್ನು ಅರ್ಥಕೋಶದ ಸಹಾಯದಿಂದ ಕಂಡುಹಿಡಿದು ಬರೆಯಲಿ. ತರಗತಿಯಲ್ಲಿ ಮಂಡಿಸಲಿ. ಅಧ್ಯಾಪಕರು ಕರಿಹಲಗೆಯಲ್ಲಿ ಬರೆಯುವುದು. ಮಕ್ಕಳಿಗೆ ಉತ್ತಮಪಡಿಸಲು ಅವಕಾಶವನ್ನು ನೀಡುವುದು.

### ❑ ಶೀರ್ಷಿಕೆ ಬರೆಯುವ

ಶೀರ್ಷಿಕೆಗಳು ಆಕರ್ಷಕ ಮತ್ತು ಆಶಯಭರಿತವಾಗಿರಬೇಕು. ಯಾವುದೇ ಲೇಖನದ ಶೀರ್ಷಿಕೆ ಮತ್ತು ಆಶಯಗಳೊಳಗೆ ಸಂಬಂಧವಿರಬೇಕು. ಉತ್ತಮವಾದಂತಹ ಶೀರ್ಷಿಕೆಯನ್ನು ನೀಡುವ ಸಾಮರ್ಥ್ಯ ಮಕ್ಕಳಲ್ಲಿ ಬೆಳೆಯುವಂತೆ ಮಾಡಲು ಈ ಚಟುವಟಿಕೆಯನ್ನು ನೀಡಲಾಗಿದೆ.ಅಧ್ಯಾಪಕರು ಪದ್ಯಕ್ಕೆ ಸಂಬಂಧಿಸಿದ ಕೆಲವು ಪ್ರಶ್ನೆಗಳನ್ನು ಕೇಳುವುದು.

ಉದಾ : ಈ ಪದ್ಯದಲ್ಲಿ ಯಾವುದರ ಬಗ್ಗೆ ಹೇಳಲಾಗಿದೆ? ಈ ಪದ್ಯದ ಪ್ರಧಾನ ಆಶಯ ಯಾವುದು? ಆಶಯಕ್ಕೂ ಶೀರ್ಷಿಕೆಗೂ ಸಂಬಂಧವಿದೆಯೇ? ಈ ಶೀರ್ಷಿಕೆ ಪದ್ಯಕ್ಕೆ ಸೂಕ್ತವಾಗಿದೆಯೇ? ಈ ಪದ್ಯಕ್ಕೆ ಸೂಕ್ತವಾಗುವಂತೆ ಇತರ ಶೀರ್ಷಿಕೆಗಳನ್ನು ನೀಡಬಹುದೇ?

- ಮಕ್ಕಳು ವೈಯುಕ್ತಿಕವಾಗಿ ಶೀರ್ಷಿಕೆ ಬರೆಯಲಿ. ಮಂಡಿಸಲಿ. ಅಧ್ಯಾಪಕರು ಕರಿಹಲಗೆಯಲ್ಲಿ ಬರೆಯುವುದು. ಉತ್ತಮವಾದ ಶೀರ್ಷಿಕೆ ಯಾವುದು? ಯಾಕೆ? ಎಂದು ಮಕ್ಕಳಲ್ಲಿ ಚರ್ಚಿಸಿ ಕಂಡುಕೊಳ್ಳುವುದು.
- ಮೌಲ್ಯನಿರ್ಣಯ ಸೂಚಕಗಳ ಆಧಾರದಲ್ಲಿ ಉತ್ತಮವಾದುದನ್ನು ಕಂಡುಕೊಳ್ಳುವುದು.

❑ **ಶೀರ್ಷಿಕೆ ಹೇಗಿರಬೇಕು?**

- ಕುತೂಹಲ ಕೆರಳಿಸುವಂತಿರಬೇಕು
- ಆಕರ್ಷಕ ಹಾಗೂ ಆಶಯ ಭರಿತವಾಗಿರಬೇಕು.
- ಯೋಗ್ಯ ಪದಗಳ ಜೋಡಣೆ ಇರಬೇಕು.

❑ **ಮಾದರಿ ಶೀರ್ಷಿಕೆಗಳು**

- ರೈತನ ಹಿಗ್ಗು
- ನಾಡ ರೈತ
- ಕೃಷಿಯ ಸಂಭ್ರಮ

❑ **ಸಂಗ್ರಹಿಸಿ ಹಾಡುವ**

ವಿದ್ಯಾರ್ಥಿಗಳು ಪದ್ಯ ಪುಸ್ತಕದಿಂದ ಕೃಷಿಗೆ ಸಂಬಂಧಿಸಿದ ಪದ್ಯಗಳನ್ನು ಸಂಗ್ರಹಿಸಲಿ. ಇದಕ್ಕಾಗಿ ಗ್ರಂಥಾಲಯದ ಉಪಯೋಗವನ್ನು ಮಾಡುವುದು.

## ಕೃಷಿಯ ಕಡೆಗೆ

ಊರ ಮಂದಿ ಎಲ್ಲ ಬನ್ನಿ
ಹೊಲದ ಕಡೆಗೆ ಹೋಗುವ
ಮಳೆಯ ಕಾಲದಲ್ಲಿ ಬೆಳೆವ
ಕೃಷಿಗೆ ನಾವು ತೊಡಗುವ ॥

ಮಣ್ಣಿನಲ್ಲಿ ಚಿನ್ನ ಬೆಳೆಸಿ
ಇಳೆಗೆ ಕಳೆಯ ನೀಡುವ
ಕಷ್ಟಗಳನು ಸಹಿಸಿ ನಾವು
ಹೊಲದಿ ಪೈರು ಬೆಳೆಸುವ ॥

ಗದ್ದೆಯಲ್ಲಿ ಕೃಷಿಯ ಮಾಡಿ
ಧಾನ್ಯವನ್ನು ಬೆಳೆಯುವ
ಬೆಳೆದ ಧಾನ್ಯದಿಂದ ನಾವು
ಜಗದ ಹಸಿವ ನೀಗುವ ॥

ರಟ್ಟೆ ಮುರಿದು ರೊಟ್ಟಿ ತಿನುವ
ದಾರಿಯಲ್ಲಿ ಸಾಗುವ
ಇಳೆಗೆ ಹಸಿರು ಉಡುಪು ತೊಡಿಸಿ
ಹಸಿರ ಉಸಿರು ತುಂಬುವ ॥

– ಸಂಗ್ರಹ

❑ **ಸರಿ ತಪ್ಪು ಬರೆಯುವ**

ಪಾಠಪುಸ್ತಕದಲ್ಲಿ ನೀಡಲಾದ ಪ್ರತಿಯೊಂದು ವಾಕ್ಯವನ್ನು ಮಕ್ಕಳು ಗಮನವಿಟ್ಟು ಓದಲಿ. ಆಶಯಗಳನ್ನು ತಿಳಿದು ತಪ್ಪಾದ ವಾಕ್ಯಗಳನ್ನು ಸರಿಪಡಿಸಿ ಅಭ್ಯಾಸ ಪುಸ್ತಕದಲ್ಲಿ ಬರೆಯಲಿ. ಬರೆದ ವಾಕ್ಯಗಳನ್ನು ಮಂಡಿಸಲಿ. ಅಧ್ಯಾಪಕರು ಅಗತ್ಯವಾದ ಸಹಾಯವನ್ನು ಮಾಡುವುದು. ತಪ್ಪುಗಳಿದ್ದರೆ ಉತ್ತಮಪಡಿಸಲು ಮಕ್ಕಳಿಗೆ ಅವಕಾಶವನ್ನು ನೀಡುವುದು.

❑ **ಗದ್ಯದಲ್ಲಿ ಬರೆಯುವ**

ಒಂದು ವ್ಯವಹಾರ ರೂಪವನ್ನು ಇನ್ನೊಂದು ವ್ಯವಹಾರ ರೂಪಕ್ಕೆ ಬದಲಾಯಿಸಲು ಸಾಧ್ಯವಿದೆ. ಮಕ್ಕಳಲ್ಲಿ ಆ ಸಾಮರ್ಥ್ಯವನ್ನು ಬೆಳೆಸುವ ಉದ್ದೇಶದಿಂದ ಈ ಚಟುವಟಿಕೆಯನ್ನು ನೀಡಲಾಗಿದೆ.

ಪಾಠ ಪುಸ್ತಕದಲ್ಲಿ ಮಾದರಿಯಾಗಿ ನೀಡಿದ ಪದ್ಯ ಭಾಗ ಮತ್ತು ಅದರ ಗದ್ಯವನ್ನು ಮಕ್ಕಳು ವೈಯುಕ್ತಿಕವಾಗಿ

ಓದಲಿ. ಪದ್ಯವನ್ನು ಗದ್ಯಕ್ಕೆ ಬದಲಾಯಿಸಿದಾಗ ಉಂಟಾದ ಬದಲಾವಣೆಗಳನ್ನು ತಿಳಿಯಲಿ. ಅಧ್ಯಾಪಕರು ಅಗತ್ಯವಾದ ಸಹಾಯವನ್ನು ನೀಡುವುದು. ಅನಂತರ ನೀಡಿರುವ ಪದ್ಯ ಭಾಗವನ್ನು ಮಕ್ಕಳು ಗದ್ಯವಾಗಿ ಬರೆಯಲಿ.ಕೆಲವರು ತರಗತಿಯಲ್ಲಿ ಮಂಡಿಸಲಿ ಗುಂಪಿನಲ್ಲಿ ಚರ್ಚಿಸಿ ಉತ್ತಮ ಪಡಿಸಲಿ. ಗುಂಪಿನ ಮಂಡನೆ. ಅಧ್ಯಾಪಕರ ಸಹಾಯದಿಂದ ತಪ್ಪುಗಳನ್ನು ತಿದ್ದಿ ಸರಿಪಡಿಸುವುದು. ಅಧ್ಯಾಪಕರು ಬರೆದ ಗದ್ಯಭಾಗವನ್ನು ಮಕ್ಕಳಿಗೆ ನೋಡಲು ಅವಕಾಶವನ್ನು ನೀಡುವುದು.ಇದರ ಆಧಾರದಲ್ಲಿ ಮಕ್ಕಳು ಉತ್ತಮಪಡಿಸಿ ಬರೆಯಲು ಅವಕಾಶವನ್ನು ನೀಡುವುದು.

ಪದ್ಯದ ಇತರ ಸಾಲುಗಳನ್ನು ಗದ್ಯವಾಗಿ ಬದಲಾಯಿಸಿ ಬರೆಯಲಿ. ಅಧ್ಯಾಪಕರು ಮೌಲ್ಯನಿರ್ಣಯ ಮಾಡುವುದು.

ಮಾದರಿ :

ಕಷ್ಟಪಟ್ಟು ದುಡಿದು ಎಲ್ಲರಿಗೂ ಅನ್ನ ನೀಡುವ ರೈತನು ಸುಖದಿಂದ ಬಾಳಬೇಕು. ನಾವೆಲ್ಲರೂ ಅವನ ಕಷ್ಟ–ಸುಖವನ್ನು ತಿಳಿದು ಸಾಧ್ಯವಿರುವ ಸಹಾಯವನ್ನು ಮಾಡಬೇಕು.

- **ಪದ್ಯ ಬರೆಯುವ**

ಪದ್ಯದ ಹಲವು ವಿಶೇಷತೆಗಳ ಬಗ್ಗೆ ತಿಳಿದ ಮಕ್ಕಳು ತಮಗೆ ತಿಳಿದ ವಿಚಾರಗಳ ಆಧಾರದಲ್ಲಿ ಹೊಸತೊಂದು ಪದ್ಯವನ್ನು ಬರೆಯಲಿ. ಪಠ್ಯದಲ್ಲಿ ನೀಡಲಾದ ಪದ್ಯದ 2 ಸಾಲುಗಳನ್ನು ಮಕ್ಕಳು ಓದಲಿ. ಆಶಯಕ್ಕೆ ಸಂಬಂಧಿಸಿ ತಮ್ಮ ಅಭಿಪ್ರಾಯಗಳನ್ನು ತಿಳಿಸಲಿ. ತರಗತಿ ಚರ್ಚೆಯ ಬಳಿಕ ಪದ್ಯಕ್ಕೆ ಸಾಲುಗಳನ್ನು ಸೇರಿಸಲಿ. ಯೋಗ್ಯವಾದ ಶೀರ್ಷಿಕೆಯನ್ನು ನೀಡಲಿ. ತಾವು ಬರೆದ ಪದ್ಯವನ್ನು ಗೆಳೆಯರ ಪದ್ಯದೊಂದಿಗೆ ಹೋಲಿಸಲಿ. ಪರಸ್ಪರ ಮೌಲ್ಯನಿರ್ಣಯ ಮಾಡಲಿ. ಅಧ್ಯಾಪಕರ ಸಹಾಯದಿಂದ ತಪ್ಪುಗಳನ್ನು ತಿದ್ದಿ ಸರಿಪಡಿಸುವುದು. ಅಧ್ಯಾಪಕರು ಬರೆದ ಪದ್ಯವನ್ನು ಪ್ರದರ್ಶಿಸುವುದು. ಮಕ್ಕಳಿಗೆ ತಮ್ಮ ಪದ್ಯವನ್ನು ಉತ್ತಮಪಡಿಸಲು ಅವಕಾಶವನ್ನು ನೀಡುವುದು.

ಉತ್ತಮ ಪಡಿಸಿದ ಪದ್ಯವನ್ನು ಭಿತ್ತಿ ಪತ್ರಿಕೆಯಲ್ಲಿ ಪ್ರಕಟಿಸುವುದು.

- **ಪದ್ಯ ಹೇಗಿರಬೇಕು?**

- ಪ್ರಾಸ ಪದಗಳ ಬಳಕೆ, ಪದವಿನ್ಯಾಸ
- ಭಾಷಾ ಶೈಲಿ
- ಆಶಯ ಪೂರ್ಣತೆ
- ಸಾಲುಗಳ ಕ್ರಮೀಕರಣ
- ಯೋಗ್ಯವಾದ ಶೀರ್ಷಿಕೆ

## ನಮ್ಮ ರೈತ

ರೈತನು ಹೊಲದೆಡೆ ಸಾಗಿದನು
ಮಣ್ಣನು ಹಸನು ಮಾಡಿದನು
ಬೀಜಗಳನ್ನು ಬಿತ್ತಿದನು
ಬೂದಿ ಗೊಬ್ಬರ ಹಾಕಿದನು.
ಅನುದಿನ ನೀರನು ಉಣಿಸಿದನು
ಗಿಡಗಳ ಪೋಷಣೆ ಮಾಡಿದನು
ಬೆಳೆಯನು ಕಂಡು ಹಿಗ್ಗಿದನು
ಬುಟ್ಟಿಯ ತುಂಬಾ ಕೊಯ್ದಿಹನು

ಉತ್ತಮಪಡಿಸಿದ ಪದ್ಯವನ್ನು ಭಿತ್ತಿ ಪತ್ರಿಕೆಯಲ್ಲಿ ಪ್ರಕಟಿಸುವುದು.

# ಶ್ರಮದ ಫಲ

## ❑ ಪಾಠಭಾಗದೆಡೆಗೆ

ನಮ್ಮ ಕೆಲಸವನ್ನು ನಾವೇ ಮಾಡದೆ ಇತರರನ್ನು ಆಶ್ರಯಿಸಿದರೆ ಏನಾಗಬಹುದು? ಎಂದು ಚರ್ಚಿಸುವುದು. ಈ ಆಶಯವನ್ನು ನೀಡುವ ಕಥೆಯೊಂದು ನಿಮ್ಮ ಪುಸ್ತಕದಲ್ಲಿದೆ. ಅದನ್ನು ಓದೋಣ. ಶ್ರಮದ ಫಲ ಪಾಠಭಾಗವನ್ನು ಮಕ್ಕಳು ವೈಯಕ್ತಿಕವಾಗಿ ಓದಲಿ. ಕಥೆಯ ಆಶಯವನ್ನು ಕಂಡುಕೊಳ್ಳಲಿ. ಮಕ್ಕಳು ತಮ್ಮದೇ ವಾಕ್ಯಗಳಲ್ಲಿ ಕಥೆಯ ಸಾರಾಂಶವನ್ನು ಹೇಳಲಿ. ಮಕ್ಕಳ ಆಶಯಗಳನ್ನು ಅಧ್ಯಾಪಕರು ಕ್ರೋಡೀಕರಿಸುವುದು. ಅಧ್ಯಾಪಕರು ಪಾಠ ಭಾಗವನ್ನು ಸೂಕ್ತ ಸ್ವರಭಾರದೊಂದಿಗೆ ಓದುವುದು. ಬಿಟ್ಟು ಹೋದ ಆಶಯಗಳನ್ನು ಚರ್ಚೆಯ ಮೂಲಕ ಕಂಡುಕೊಳ್ಳುವುದು.

## ❑ ಪದಗಳ ಅರ್ಥ ಕಂಡುಹಿಡಿಯುವ

ಪಾಠಭಾಗದ ಆಶಯವನ್ನು ತಿಳಿಯಲು ನವೀನ ಪದಗಳ ಅರ್ಥವನ್ನು ತಿಳಿಯಬೇಕು. ಇದಕ್ಕಾಗಿ ಈ ಚಟುವಟಿಕೆಯನ್ನು ನೀಡಲಾಗಿದೆ. ಮಕ್ಕಳು ಕಥೆಯಲ್ಲಿ ಬಂದಿರುವ ನವೀನ ಪದಗಳನ್ನು ಗುರುತಿಸಲಿ. ಆ ಪದಗಳ ಅರ್ಥಗಳನ್ನು ಅರ್ಥಕೋಶದ ಸಹಾಯದಿಂದ ಕಂಡುಕೊಳ್ಳಲಿ ಹಾಗೂ ಬರೆಯಲಿ.

## ❑ ಪ್ರಶ್ನೆ ತಯಾರಿಸುವ

ಓದಿದ ಪಾಠಭಾಗದ ಆಶಯವನ್ನು ತಿಳಿಯಲು ಮತ್ತು ಅವುಗಳನ್ನು ಸೂಕ್ತವಾದ ಸಂದರ್ಭಗಳಲ್ಲಿ ಬಳಸುವ ಸಾಮರ್ಥ್ಯವನ್ನು ಬೆಳೆಸಲು ಈ ಚಟುವಟಿಕೆಯನ್ನು ನೀಡಲಾಗಿದೆ.

ಕೊಟ್ಟಿರುವ ವಾಕ್ಯಗಳನ್ನು ಮಕ್ಕಳು ವೈಯುಕ್ತಿಕವಾಗಿ ಓದಲಿ. ಅಡಿಗೆರೆ ಎಳೆದ ಪದಗಳನ್ನು ಗಮನಿಸಲಿ. ಅಡಿಗೆರೆ ಎಳೆದ ಪದಗಳು ಉತ್ತರವಾಗಿ ಬರುವಂತೆ ಪ್ರಶ್ನೆಗಳನ್ನು ವೈಯುಕ್ತಿಕವಾಗಿ ತಯಾರಿಸಲಿ. ಕೆಲವರು ಮಂಡಿಸಲಿ. ಅಧ್ಯಾಪಕರು ಕರಿಹಲಗೆಯಲ್ಲಿ ಬರೆಯುವುದು. ತಪ್ಪುಗಳು ಇದ್ದರೆ ಮಕ್ಕಳು ಸರಿಪಡಿಸಿ ಬರೆಯಲಿ.

ಮಾದರಿ :

1. ಬೇಸಾಯದ ಕೆಲಸಗಳನ್ನು ಯಾರು ಮಾಡುತ್ತಿದ್ದರು?
2. ಗೇಣಿದಾರನು ಜಮೀನುದಾರನ ಮನೆಗೆ ಯಾಕೆ ಬಂದನು?
3. ಆನಂದರಾಯನು ಯಾವ ಊರಿನಲ್ಲಿ ವಾಸಿಸುತ್ತಿದ್ದನು?
4. ಜಮೀನುದಾರನ ಸಂಪತ್ತು ದೂರವಾಗಲು ಕಾರಣವೇನು?

## ಯಾರು ಹೇಳಿದವರು? ಬರೆಯುವ

ಪಾಠಭಾಗದ ಆಶಯವನ್ನು ತಿಳಿಯಲು ಈ ಚಟುವಟಿಕೆಯನ್ನು ನೀಡಲಾಗಿದೆ. ಪಾಠಭಾಗವನ್ನು ಓದಿ, ಅದರಲ್ಲಿ ಬಂದಿರುವ ಕೆಲವು ವಾಕ್ಯಗಳನ್ನು ಯಾರು ಯಾರಿಗೆ ಹೇಳಿದರೆಂದು ಕಂಡುಹಿಡಿದು ಬರೆಯಲಿ.

ಕೆಲವರಿಂದ ಮಂಡನೆ. ತರಗತಿಯಲ್ಲಿ ಚರ್ಚಿಸಿ ಯಾರು, ಯಾರಿಗೆ, ಯಾವ ಸಂದರ್ಭದಲ್ಲಿ ಹೇಳಿದರು ಎಂದು ತಿಳಿದುಕೊಳ್ಳಲಿ.

## ❑ ಚರ್ಚಿಸುವ

ಒಂದು ನಿರ್ದಿಷ್ಟ ಆಶಯವನ್ನು ಕೇಂದ್ರೀಕರಿಸಿ ತಮ್ಮ ಅಭಿಪ್ರಾಯಗಳನ್ನು ಇತರರ ಮುಂದೆ ಮಂಡಿಸುವ ಸಾಮರ್ಥ್ಯವನ್ನು ಬೆಳೆಸುವ ಉದ್ದೇಶದಿಂದ ಈ ಚಟುವಟಿಕೆಯನ್ನು ನೀಡಲಾಗಿದೆ.

'ನಮ್ಮ ಕೆಲಸಗಳನ್ನು ನಾವೇ ಮಾಡಿಕೊಳ್ಳಬೇಕು' ಎಂಬ ವಿಷಯದ ಆಧಾರದಲ್ಲಿ ತರಗತಿಯಲ್ಲಿ ಚರ್ಚೆ ನಡೆಸುವುದು. ಇದಕ್ಕಾಗಿ ಕೆಲವು ಪೂರಕ ಪ್ರಶ್ನೆಗಳ ಮೂಲಕ ಮಕ್ಕಳಲ್ಲಿ ವಿಷಯದ ಬಗ್ಗೆ ಸ್ವಯಂ ಚಿಂತನೆಗೆ ಅವಕಾಶ ನೀಡುವುದು.

- ನಮ್ಮ ಕೆಲಸಗಳು ಯಾವುವು?
- ಮಕ್ಕಳು ಹೇಳುವುದನ್ನು ಅಧ್ಯಾಪಕರು ಕರಿಹಲಗೆಯಲ್ಲಿ ಬರೆಯುವುದು.
- ಇವುಗಳಲ್ಲಿ ನೀವು ಮಾಡುವ ಕೆಲಸಗಳು ಯಾವುವು? ಇತರರ ಸಹಾಯದೊಂದಿಗೆ ಮಾಡುವ ಕೆಲಸಗಳು ಯಾವುವು?
- ನಮ್ಮ ಕೆಲಸವನ್ನು ನಾವೇ ಮಾಡುವುದರಿಂದ ಇರುವ ಪ್ರಯೋಜನಗಳೇನು?
- ಇಂತಹ ಪ್ರಶ್ನೆಗಳನ್ನು ಕೇಳುವುದರ ಮೂಲಕ ಮಕ್ಕಳ ಅಭಿಪ್ರಾಯ ಮಂಡನೆಗೆ ಅವಕಾಶ ನೀಡುವುದು. ಅಭಿಪ್ರಾಯಗಳನ್ನು ಮಕ್ಕಳು ವೈಯಕ್ತಿಕವಾಗಿ ಬರೆಯಲಿ.

## ❑ ಪೂರ್ತಿಗೊಳಿಸುವ

ವಾಕ್ಯ ರಚನೆಯಲ್ಲಿ ನಾವು ಪದಗಳು ಪುನರಾವರ್ತನೆಗೊಳ್ಳುವ ಸಂದರ್ಭದಲ್ಲಿ ಅದನ್ನು ದೂರೀಕರಿಸಲು ಬಳಕೆಗೊಳ್ಳುವ ಪದಗಳನ್ನು ಸರ್ವನಾಮಗಳು ಎನ್ನಲಾಗುತ್ತದೆ. ಇದರಿಂದ ವಾಕ್ಯಗಳ ಸೌಂದರ್ಯ ಹೆಚ್ಚುತ್ತದೆ. ಇದರ ಬಳಕೆಯ ಪ್ರಾಥಮಿಕ ಪರಿಚಯವನ್ನು ಮಾಡುವುದು ಈ ಚಟುವಟಿಕೆಯ ಉದ್ದೇಶವಾಗಿದೆ.

ಆವರಣದಿಂದ ಸೂಕ್ತವಾದ ಸರ್ವನಾಮಪದಗಳನ್ನು ಆರಿಸಿ ಬಿಟ್ಟ ಸ್ಥಳದಲ್ಲಿ ಬರೆದು ಗದ್ಯಭಾಗವನ್ನು ವೈಯುಕ್ತಿಕವಾಗಿ ಪೂರ್ತಿಗೊಳಿಸಲಿ. ತಪ್ಪುಗಳಿದ್ದರೆ ಅಧ್ಯಾಪಕರು ತಿದ್ದಿ ಸರಿಪಡಿಸುವುದು.

> ಡೇವಿಡ್ ಒಬ್ಬ ಉತ್ತಮ ಕೃಷಿಕ. ಅವನು ಮುಂಜಾನೆಯಿಂದ ಮುಸ್ಸಂಜೆಯವರೆಗೆ ಕೃಷಿ ಕೆಲಸಗಳಲ್ಲಿ ನಿರತನಾಗಿರುತ್ತಿದ್ದನು. ಅವನ ಮನೆಯಲ್ಲಿ ಎರಡು ಎತ್ತುಗಳೂ ನಾಲ್ಕು ದನಗಳೂ ಇದ್ದುವು. ಅವುಗಳ ಸೆಗಣಿ ಗಂಜಲಗಳನ್ನು ಕೃಷಿಗೆ ಉಪಯೋಗಿಸುತ್ತಿದ್ದನು. ಆ ಊರಿನ ಜನರು ಅವನನ್ನು ತುಂಬಾ ಪ್ರೀತಿಯಿಂದ ಕಾಣುತ್ತಿದ್ದರು. ಅವನ ಬಳಿ ಉತ್ತಮ ತಳಿಯ ಬೀಜಗಳ ಸಂಗ್ರಹವೇ ಇತ್ತು. ಬೇರೆ ಬೇರೆ ಊರುಗಳ ರೈತರು ಅವನಿಂದ ಕೃಷಿ ಮಾಹಿತಿಯನ್ನು ಹಾಗೂ ಬೀಜಗಳನ್ನು ಪಡೆಯಲು ಬರುತ್ತಿದ್ದರು. ಇತ್ತೀಚೆಗೆ ಅವನಿಗೆ ಪಂಚಾಯತ್ ಮಟ್ಟದ 'ಉತ್ತಮ ಕೃಷಿಕ' ಎಂಬ ಪ್ರಶಸ್ತಿ ಲಭಿಸಿತು.

## ❑ ಗಾದೆಗಳನ್ನು ಬರೆಯುವ

ಗಾದೆಗಳ ಕೆಲವು ಪದಗಳನ್ನು ಕ್ರಮ ರಹಿತವಾಗಿ ನೀಡಲಾಗಿದೆ.

- ಪದಗಳನ್ನು ಕ್ರಮಬದ್ಧಗೊಳಿಸಿ ಕೋಣೆಗಳಲ್ಲಿ ಬರೆಯಲಿ.
- ವೃತ್ತದೊಳಗಿನ ಅಕ್ಷರಗಳನ್ನು ಆರಿಸಿ ಬರೆಯಲಿ.

- ಆ ಅಕ್ಷರಗಳನ್ನು ಕ್ರಮಬದ್ಧಗೊಳಿಸಿ ಅಡಗಿರುವ ಗಾದೆಯನ್ನು ಕಂಡುಹಿಡಿಯಲಿ.

**ಉತ್ತರ**

1. ಬೆಳೆಯ ಸಿರಿ ಮೊಳಕೆಯಲ್ಲಿ
2. ಕಬ್ಬು ಡೊಂಕಾದರೆ ಸಿಹಿ ಡೊಂಕೆ
3. ಕೈ ಕೆಸರಾದರೆ ಬಾಯಿ ಮೊಸರು
4. ಕೈಲಾಗದವನು ಮೈ ಪರಚಿಕೊಂಡಂತೆ
5. ಆರೋಗ್ಯವೇ ಭಾಗ್ಯ

| | | | | | | |
|---|---|---|---|---|---|---|
| ಕಾ | ಯ | ಕ | ವೇ | ಕೈ | ಲಾ | ಸ |

### ❑ ಚಿಣ್ಣರ ಒಗಟು

ಒಗಟುಗಳು ವಾಕ್ಯರೂಪದಲ್ಲಿಯೂ, ಪದ್ಯ ರೂಪದಲ್ಲಿಯೂ ಇರುತ್ತವೆ. ಪದ್ಯರೂಪದಲ್ಲಿರುವ ಒಗಟುಗಳನ್ನು ಒಗಟು ಪದ್ಯಗಳೆಂದು ಕರೆಯುತ್ತಾರೆ. ಒಗಟುಗಳು ಚಿಂತನ ಸಾಮರ್ಥ್ಯವನ್ನು ಹೆಚ್ಚಿಸುವಲ್ಲಿ ಸಹಾಯಕವಾಗಿವೆ. ಇಂತಹ ಒಗಟು ಹಾಗೂ ಒಗಟು ಪದ್ಯಗಳಿಗೆ ಉತ್ತರಗಳನ್ನು ಕಂಡುಕೊಳ್ಳುವುದು ಹಾಗೂ ಸ್ವತಃ ಒಗಟುಗಳನ್ನು ರಚಿಸುವಂತೆ ಮಕ್ಕಳನ್ನು ಪ್ರೇರೇಪಿಸುವುದು ಈ ಚಟುವಟಿಕೆಯ ಉದ್ದೇಶವಾಗಿದೆ.

ಮಕ್ಕಳು ವೈಯುಕ್ತಿಕವಾಗಿ ಒಗಟು ಪದ್ಯಗಳನ್ನು ಓದಲಿ. ಚರ್ಚೆಯ ಮೂಲಕ ಉತ್ತರಗಳನ್ನು ಕಂಡುಕೊಳ್ಳಲಿ. ತಪ್ಪುಗಳಿದ್ದಲ್ಲಿ ಅಧ್ಯಾಪಕರು ತಿದ್ದಿ ಸರಿಪಡಿಸುವುದು.

**ಉತ್ತರಗಳು**

1. ಹಲಸಿನಕಾಯಿ
2. ಕಬ್ಬು
3. ಅಡಿಕೆ
4. ಕುಂಬಳಕಾಯಿ
5. ಮೆಣಸು
6. ಅರಸಿನ
7. ಗದ್ದೆ ಉಳುವುದು

### ❑ ಒಗಟು ಪದ್ಯಗಳನ್ನು ರಚಿಸುವ

ಮಕ್ಕಳು ಓದುವ ಮೂಲೆ ಹಾಗೂ ವಾಚನಾಲಯಗಳಿಂದ ಒಗಟುಗಳನ್ನು ಸಂಗ್ರಹಿಸಲಿ. ಸಂಗ್ರಹಿಸಿದ ಒಗಟುಗಳನ್ನು ಭಿತ್ತಿ ಪತ್ರಿಕೆಯಲ್ಲಿ ಪ್ರದರ್ಶಿಸಲಿ. ಇವುಗಳ ಆಧಾರದಲ್ಲಿ ಮಕ್ಕಳು ಸ್ವತಂತ್ರವಾಗಿ ಒಗಟು ಪದ್ಯಗಳನ್ನು ರಚಿಸುವ ಪ್ರಯತ್ನವನ್ನು ಮಾಡಲಿ. ರಚಿಸಿದ ಒಗಟುಗಳನ್ನು ತರಗತಿಯಲ್ಲಿ ಮಂಡಿಸಲಿ. ತರಗತಿಯಲ್ಲಿ ಒಗಟು ಸ್ಪರ್ಧೆ ನಡೆಸುವುದು.

### ❑ ಸಂಭಾಷಣೆ ಬರೆದು ಅಭಿನಯಿಸುವ

ಒಂದು ಭಾಷಾ ವ್ಯವಹಾರ ರೂಪವನ್ನು ಇನ್ನೊಂದು ವ್ಯವಹಾರ ರೂಪಕ್ಕೆ ಬದಲಾಯಿಸುವ ಸಾಮರ್ಥ್ಯವನ್ನು ಬೆಳೆಸಲು ಈ ಚಟುವಟಿಕೆಯನ್ನು ನೀಡಲಾಗಿದೆ. “ದುಡುಕದೆ ನಡೆದವರು” ಕಥೆಯನ್ನು ವೈಯಕ್ತಿಕವಾಗಿ ಓದಲಿ. ಮಕ್ಕಳನ್ನು ಇಬ್ಬಿಬ್ಬರ ಗುಂಪುಗಳಾಗಿ ಮಾಡುವುದು. ಗುಂಪಿನಲ್ಲಿ ಚರ್ಚಿಸಿ ಪಾತ್ರಗಳ ಆಯ್ಕೆ ಮಾಡಿ ಆಶಯದ ಆಧಾರದಲ್ಲಿ ತಮ್ಮ ಸ್ವಂತ ಮಾತುಗಳ ಮೂಲಕ ಅಭಿನಯ

ಮಾಡಲಿ. ಯಾವ ಗುಂಪಿನ ಮಂಡನೆ ಉತ್ತಮವಾಗಿದೆ? ಯಾಕೆ? ಎಂದು ಚರ್ಚಿಸುವುದು. ಗುಂಪಿನಲ್ಲಿ ಸಂಭಾಷಣೆ ಬರೆಯಲಿ. ಬರೆದ ಸಂಭಾಷಣೆಯನ್ನು ಮಂಡಿಸಲಿ. ಅಧ್ಯಾಪಕರ ಸಹಾಯದೊಂದಿಗೆ ತಿದ್ದಿ ಉತ್ತಮಪಡಿಸಲಿ. ಅಧ್ಯಾಪಕರು ಬರೆದ ಸಂಭಾಷಣೆಯನ್ನು ಪ್ರದರ್ಶಿಸುವುದು. ಮಕ್ಕಳಿಗೆ ಉತ್ತಮಪಡಿಸಲು ಅವಕಾಶವನ್ನು ನೀಡುವುದು.

ಆಮೆ : ಕಪ್ಪೆಯಣ್ಣಾ ಎಲ್ಲಿಗೆ ಹೊರಟೆ?

ಕಪ್ಪೆ : ಎಲ್ಲಿಯಾದರೂ ನೀರು ಕಾಣಿಸುತ್ತಿದೆಯೇ ಎಂದು ಹುಡುಕುತ್ತಾ ಹೊರಟಿರುವೆ.

ಆಮೆ : ನಾನೂ ಬರುತ್ತೇನೆ. ನನಗೂ ನೀರು ಬೇಕು.

ಕಪ್ಪೆ : ಹಾಗಾದರೆ ಬಾ. ಇಬ್ಬರೂ ಜೊತೆಯಲ್ಲೇ ಹೋಗೋಣ.

ಆಮೆ : ಅದೋ! ಅಲ್ಲೊಂದು ಬಾವಿ ಕಾಣಿಸುತ್ತಿದೆಯಲ್ಲಾ!

ಕಪ್ಪೆ : ಹೌದಲ್ಲವೇ? ಆ ಬಾವಿಯಲ್ಲಿ ನೀರಿದೆಯೇ ಎಂದು ಕಟ್ಟೆಯ ಮೇಲೆ ಕುಳಿತು ನೋಡೋಣ.

ಆಮೆ : ಹೌದು. ಹೌದು. ಬಾ ನೋಡೋಣ.

ಕಪ್ಪೆ : ಅದೋ, ಅಲ್ಲಿ ನೀರಿರುವ ಹಾಗೆ ಕಾಣುತ್ತಿದೆಯಲ್ಲಾ! ಹಾರಿ ಬಿಡೋಣವೇ?

ಆಮೆ : ನೀನು ಹೇಳುವುದೇನೋ ಸರಿ. ಆದ್ರೆ ನೀರಿರುವುದು ಖಾತರಿ ಇಲ್ಲ. ಒಂದು ವೇಳೆ ಬಾವಿಯೊಳಗಿನ ನೀರು ಬತ್ತಿ ಹೋಗಿದ್ದರೆ ಏನು ಮಾಡುವುದು? ನಾವು ಅಲ್ಲಿಂದ ಹೊರಗೆ ಬರುವುದಾದರೂ ಹೇಗೆ?

ಕಪ್ಪೆ : ನೀನು ಹೇಳಿದ್ದು ಸರಿ. ಹಿಂದೆ ಮುಂದೆ ನೋಡದೆ ದುಡುಕುವುದು ಒಳ್ಳೆಯದಲ್ಲ.

ಆಮೆ : ಬೇರೆ ಎಲ್ಲಿಯಾದರೂ ನೀರು ಇದೆಯೇ? ಹುಡುಕೋಣ ಬಾ.

ಕಪ್ಪೆ : ಸರಿ. ಸರಿ. ಹೋಗೋಣ.

## ❑ ವಾಕ್ಯ ರಚಿಸುವ

ಮಕ್ಕಳಿಗೆ ವಾಕ್ಯರಚನೆ ಮಾಡುವ ಸಾಮರ್ಥ್ಯವನ್ನು ಬೆಳೆಸಲು ಈ ಚಟುವಟಿಕೆಯನ್ನು ನೀಡಲಾಗಿದೆ.

- ಪಠ್ಯದಲ್ಲಿ ನೀಡಿರುವ ವಾಕ್ಯಗಳಲ್ಲಿ ಅಡಿಗೆರೆ ಎಳೆದ ಪದಗಳನ್ನುಪಯೋಗಿಸಿ ವಾಕ್ಯಗಳನ್ನು ರಚಿಸಲಿ.

## ❑ ಮಾದರಿ

ಸಹಾಯ : ಕಷ್ಟದಲ್ಲಿದ್ದವರಿಗೆ ಸಹಾಯ ಮಾಡುವುದು ನಮ್ಮ ಕರ್ತವ್ಯ.

ಉಪಾಯ : ಬೆಕ್ಕು ಇಲಿಯನ್ನು ಹಿಡಿಯಲು ಉಪಾಯ ಮಾಡಿತು.

ಪೇಟೆ : ಪೇಟೆಯಲ್ಲಿ ತುಂಬಾ ವಾಹನಗಳು ಓಡಾಡುತ್ತವೆ.

ನಿಧಾನ : ಆಮೆ ನಿಧಾನವಾಗಿ ಚಲಿಸುತ್ತದೆ.

## ❑ ಭಿತ್ತಿಪತ್ರಿಕೆ ತಯಾರಿಸುವ

ವಾರ್ತಾ ಪತ್ರಿಕೆಗಳ ಸಂಚಿಕೆಗಳಲ್ಲಿ ಬರುವ, ಕೃಷಿಗೆ ಸಂಬಂಧಿಸಿದ ಚಿತ್ರ ಹಾಗೂ ಲೇಖನಗಳನ್ನು ಸಂಗ್ರಹಿಸಿ ಭಿತ್ತಿ ಪತ್ರಿಕೆಯಲ್ಲಿ ಪ್ರದರ್ಶಿಸಲಿ.

## ಮೌಲ್ಯನಿರ್ಣಯ ಚಟುವಟಿಕೆಗಳು

1. ಉತ್ತರಿಸಿರಿ.
   1) ಆನಂದರಾಯ ಯಾರು?
   2) ರಾಮಪ್ಪನು ಜಮೀನುದಾರನ ಮನೆಗೆ ಬಂದದ್ದು ಯಾಕೆ?
   3) ದುಡಿದು ಅನ್ನ ಕೊಡುವಾತ ಯಾರು?

2. 1) ಜಮೀನುದಾರನು ತನ್ನ ಆಸ್ತಿಯನ್ನು ಕಳೆದುಕೊಳ್ಳಲು ಕಾರಣವೇನು?
   2) ರೈತನು ಸುಖದಿಂದ ಬಾಳಲಿ ಎಂದು ಯಾಕೆ ಹೇಳುತ್ತಾರೆ?

3. "ದುಡುಕದೆ ನಡೆದವರು" ಕಥೆಯನ್ನು ಸ್ವಂತ ವಾಕ್ಯಗಳಲ್ಲಿ ಬರೆಯಿರಿ.

4. ಕೃಷಿಗೆ ಸಂಬಂಧಿಸಿದ ಒಗಟುಗಳನ್ನು ತಯಾರಿಸಿರಿ.

* * *

# 7. ಕೂಡಿ ಬಾಳೋಣ

ಸಮಾಜದಲ್ಲಿ ಶಾಂತಿ, ನೆಮ್ಮದಿ ನೆಲೆಗೊಂಡು ಆರೋಗ್ಯವಂತ ಸಮಾಜ ನಿರ್ಮಾಣಗೊಳ್ಳಲು ಪರಸ್ಪರ ಸಹಕಾರ ಅಗತ್ಯ. ನಮ್ಮ ಬದುಕಿನ ನೆಮ್ಮದಿಯನ್ನು ನಾವು ಕಂಡುಕೊಳ್ಳಬೇಕು. ಇದಕ್ಕಾಗಿ ನಮ್ಮ ಪರಿಸರವನ್ನು ನಾವು ಅರ್ಥೈಸಿಕೊಳ್ಳುವುದು ಅಗತ್ಯ. ನಮ್ಮ ಕೆಲಸ ಕಾರ್ಯಗಳು ನಮ್ಮ ಜೀವನದ ಅಂಗ ಎಂದು ಭಾವಿಸಬೇಕು. ಇತರರನ್ನು ನಾವು ಗೌರವಿಸಬೇಕು. ಪರಸ್ಪರ ಸಹಕಾರದಿಂದ ಸಂತೋಷದ ಜೀವನವನ್ನು ನಡೆಸಬೇಕು.

ಎಲ್ಲ ಪ್ರಾಣಿಗಳು ಪರಸ್ಪರ ಹೊಂದಿಕೊಂಡು ಬದುಕುತ್ತವೆ. ಸಹಕಾರವಿಲ್ಲದೆ ಜಗತ್ತಿನಲ್ಲಿ ಯಾವುದೇ ಪ್ರಾಣಿಗೂ ಬದುಕಲು ಸಾಧ್ಯವಿಲ್ಲ. ಪರಸ್ಪರ ಸಹಕಾರ ಬದುಕಿನ ಅಡಿಪಾಯ. ಅವುಗಳಿಂದ ಮನುಷ್ಯನು ಕಲಿಯಬೇಕಾದ ಹಲವಾರು ಉತ್ತಮ ಗುಣಗಳಿವೆ. ಪ್ರತಿಯೊಂದು ಜೀವಿಗೂ ತನ್ನ ಕರುಳ ಕುಡಿ ಪ್ರಾಣಕ್ಕೆ ಸಮಾನವಾದುದು ಎಂಬ ವಿಚಾರವನ್ನು 'ಕರಡಿಗಳ ಕಾರುಬಾರು' ಎಂಬ ಕಥೆಯಲ್ಲಿ ನೀಡಲಾಗಿದೆ. ಕರಡಿ ಮೂಕಪ್ರಾಣಿಯಾದರೂ ತನ್ನ ಮಗುವಿನ ರಕ್ಷಣೆಗೆ ಯಾವಯಾವ ಪ್ರಯತ್ನಗಳನ್ನು ಮಾಡುತ್ತವೆ ಎಂಬುದು ಕಥೆಯ ಅಂತಃಸತ್ವವಾಗಿದೆ.

'ನೀ ನನಗಿದ್ದರೆ ನಾ ನಿನಗೆ' ಎಂಬ ಪದ್ಯಭಾಗವು ಪರಸ್ಪರ ಸಹಕಾರವಿಲ್ಲದೆ ಬದುಕುವುದು ಕಷ್ಟಸಾಧ್ಯ. ತನ್ನಂತೆಯೇ ಇತರರು ಎಂಬುದಾಗಿ ತಿಳಿದುಕೊಂಡು ಇನ್ನೊಬ್ಬರ ಸುಖದುಃಖಗಳಲ್ಲಿ ಭಾಗಿಗಳಾಗಬೇಕು ಎಂಬ ಸಂದೇಶವನ್ನು ನೀಡುತ್ತದೆ.

'ನಗರದಲ್ಲಿ ನಡೆದಾಗ' ಪಾಠದಲ್ಲಿ ರಸ್ತೆ ನಿಯಮಗಳ ಪ್ರಾಧಾನ್ಯ, ಅವುಗಳನ್ನು ಪಾಲಿಸಬೇಕಾದ ಅವಶ್ಯಕತೆ ಮೊದಲಾದವುಗಳ ಕುರಿತು ಮಾಹಿತಿಗಳನ್ನು ನೀಡಲಾಗಿದೆ. ಮಕ್ಕಳಿಗೆ ರಸ್ತೆ ನಿಯಮಗಳ ಕುರಿತು ತಿಳುವಳಿಕೆಯನ್ನು ನೀಡುವುದು ಪಾಠಭಾಗದ ಉದ್ದೇಶ.

ಪಾಠದ ಸಂದರ್ಭದಲ್ಲಿ I.C.T. ಯನ್ನು ತರಗತಿಕೋಣೆಯಲ್ಲಿ ಯೋಗ್ಯವಾದ ರೀತಿಯಲ್ಲಿ ಬಳಸಬೇಕು.

**ಕಲಿಕಾ ಸಾಧನೆಗಳು**

- ವಾರ್ತಾಪತ್ರಿಕೆಗಳಲ್ಲಿ ಬರುವ ವಾರ್ತೆಗಳನ್ನು ಓದಿ ಅವುಗಳನ್ನು ಅರ್ಥೈಸಿ ಆಶಯವನ್ನು ಹೇಳುವುದು ಮತ್ತು ಬರೆಯುವುದು.
- ಪದ ಪ್ರಯೋಗಗಳು, ಶೈಲಿಗಳು, ಆಲಿಸಿದ ನೂತನ ಪದಗಳು ಮೊದಲಾದವುಗಳನ್ನು ಸಂದರ್ಭಕ್ಕನು ಗುಣವಾಗಿ ಮಾತುಗಾರಿಕೆಯಲ್ಲಿ ಬಳಸುವುದು.
- ಕಥೆ, ಕವಿತೆ, ಲಘು ಟಿಪ್ಪಣಿಗಳನ್ನು ಆಲಿಸಿ/ಓದಿ ತನ್ನದೇ ಭಾಷೆಯಲ್ಲಿ ಹೇಳುವುದು ಹಾಗೂ ಬರೆಯುವುದು.
- ಕವಿತೆಗಳನ್ನು ಆಲಿಸಿ, ಆಸ್ವಾದಿಸಿ ಅವುಗಳ ಆಶಯವನ್ನು ಅರ್ಥೈಸಿಕೊಂಡು ರಾಗ, ತಾಳ, ಭಾವಗಳಿಂದ ಹಾಡುವುದು.
- ವಾರ್ತಾಪತ್ರಿಕೆಗಳಿಂದ ಆಶಯಗಳನ್ನು ಸಂಗ್ರಹಿಸಿ ಬರೆದು ಭಿತ್ತಿಪತ್ರಿಕೆ ಹಾಗೂ ಹಸ್ತಪತ್ರಿಕೆ ಮೊದಲಾದವುಗಳಲ್ಲಿ ಪ್ರಕಟಿಸುವುದು.
- ನಿರ್ದಿಷ್ಟ ಭಾಷಾ ವ್ಯವಹಾರ ರೂಪಗಳನ್ನು ಶ್ರೋತೃಗಳಿಗೆ ಆಶಯಸ್ಪಷ್ಟವಾಗುವ ರೀತಿಯಲ್ಲಿ, ಉಚ್ಚಾರ ಸ್ಪಷ್ಟತೆಯಿಂದ ಸರಾಗವಾಗಿ ಓದುವುದು.
- ಸೃಜನಾತ್ಮಕ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡು ತನ್ನ ರಚನೆಗಳನ್ನು ತರಗತಿಯ ಸಂಚಿಕೆಗಳು ಹಾಗೂ ಹಸ್ತಪತ್ರಿಕೆಗಳಿಗೆ ನೀಡುವುದು.
- ಓದಿ ಅಸ್ವಾದಿಸಿದ ಕತೆ, ಕವಿತೆಗಳಲ್ಲಿ ಬರುವ ಪಾತ್ರಗಳ ಅಭಿನಯ, ಮೂಕಾಭಿನಯ ಮಾಡುವುದು.
- ತನ್ನ ಆಶಯಗಳನ್ನು ತಪ್ಪಿಲ್ಲದೆ, ಸೂಕ್ತ ವ್ಯವಹಾರರೂಪದಲ್ಲಿ (ಕಥೆ, ಕವಿತೆ ಇತ್ಯಾದಿ) ಬರೆಯುವುದು.
- ಭಾಷಾ ವ್ಯವಹಾರ ರೂಪಗಳನ್ನು ಬೇರೆ ಬೇರೆ ರೀತಿಯಲ್ಲಿ ರೂಪಾಂತರಿಸುವುದು.

# ಯೂನಿಟ್ ಗ್ರಿಡ್ : 7. ಕೂಡಿ ಬಾಳೋಣ

| ಆಶಯಗಳು | ಪ್ರಕ್ರಿಯೆಗಳು | ಕಲಿಕಾ ಸಾಧನೆಗಳು |
|---|---|---|
| **1. ಕರಡಿಗಳ ಕಾರುಬಾರು** | | **ಸಮಯ : 6 ಗಂಟೆಗಳು** |
| • ಪರಸ್ಪರ ಸಹಕಾರವಿಲ್ಲದೆ ಜಗತ್ತಿನಲ್ಲಿ ಯಾರಿಗೂ ಬದುಕಲು ಸಾಧ್ಯವಿಲ್ಲ.<br>• ವಿಭಿನ್ನ ಆಖ್ಯಾನ ಶೈಲಿಯಿಂದ ಕೂಡಿದ ಕಥೆಗಳಿವೆ. | • ಕಥೆಗಳನ್ನು ಓದಿ ಆಶಯವನ್ನು ತಿಳಿಯುವುದು. ಚಿತ್ರವನ್ನು ನಿರೀಕ್ಷಿಸಿ ಆಶಯವನ್ನು ಕಂಡುಕೊಳ್ಳುವುದು.<br>• ಆಶಯವನ್ನು ತಿಳಿದುಕೊಂಡು ಪ್ರಶ್ನೆಗಳಿಗೆ ಉತ್ತರವನ್ನು ಬರೆಯುವುದು.<br>• ಕಥೆಯಆಶಯದ ಆಧಾರದಲ್ಲಿ ಪ್ರಶ್ನೆಗಳನ್ನು ತಯಾರಿಸುವುದು. | • ನಿರ್ದಿಷ್ಟ ಭಾಷಾ ವ್ಯವಹಾರ ರೂಪಗಳನ್ನು ಉಚ್ಚಾರ ಸ್ಪಷ್ಟತೆಯಿಂದ ಶ್ರೋತೃಗಳಿಗೆ ಆಶಯ ಸ್ಪಷ್ಟವಾಗುವ ರೀತಿಯಲ್ಲಿ ಸರಾಗವಾಗಿ ಓದುವುದು. |
| • ಕಥೆಯ ಆಶಯವನ್ನು ತಿಳಿದುಕೊಂಡು ತಮ್ಮ ಅಭಿಪ್ರಾಯಗಳನ್ನು ಸ್ವತಂತ್ರವಾಗಿ ಪ್ರಕಟಿಸುವುದು.<br>• ಕಥಾಪಾತ್ರಗಳ ಸ್ವಭಾವ, ಘಟನೆಗಳು, ದೃಶ್ಯಗಳ ಕ್ರಮೀಕರಣ ಕಥಾಪಾತ್ರಗಳಿಗನುಸರಿಸಿದ ಸಂಭಾಷಣೆ ಇವುಗಳನ್ನು ಕಂಡುಕೊಂಡು ಅಭಿನಯಿಸಬಹುದು. | • ಕಥೆಯ ಆಶಯವನ್ನು ತಿಳಿದುಕೊಂಡು ತನ್ನನ್ನು ಕಥಾಪಾತ್ರವಾಗಿ ಕಲ್ಪಿಸಿಕೊಂಡು ಊಹಿಸಿ ಬರೆಯುವುದು.<br>• ಕಥೆಯನ್ನು ಏಕಪಾತ್ರಾಭಿನಯ ಮಾಡುವುದು. | • ಕಥೆ, ಕವಿತೆ, ಲಘುಟಿಪ್ಪಣಿಗಳನ್ನು ಆಲಿಸಿ/ ಓದಿ ತನ್ನದೇ ಭಾಷೆಯಲ್ಲಿ ಹೇಳುವುದು ಹಾಗೂ ಬರೆಯುವುದು.<br>• ಓದಿ ಆಸ್ವಾದಿಸಿದ ಕಥೆ, ಕವಿತೆಗಳಲ್ಲಿ ಬರುವ ಪಾತ್ರಗಳ ಅಭಿನಯ, ಮೂಕಾಭಿನಯ ಮಾಡುವುದು. |
| • ಅಕ್ಷರ, ಪದ, ಕಾಗುಣಿತ, ವಾಕ್ಯಗಳನ್ನುಪಯೋಗಿಸಿ ಭಾಷಾ ಆಟಗಳನ್ನು ಆಡಬಹುದು. | • ಸರಿಯಾದ ವಾಕ್ಯಗಳನ್ನು ಬರೆದು ಮಂಡಿಸುವುದು.<br>• ವಿರೋಧಾರ್ಥ ಪದಗಳನ್ನು ಬರೆದು ವಾಕ್ಯಗಳನ್ನು ಪೂರ್ತಿಗೊಳಿಸುವುದು.<br>• ಕಥೆಯ ಘಟನೆಗಳಿಗೆ ಅನುಸಾರವಾಗಿ ವಾಕ್ಯಗಳನ್ನು ಕ್ರಮೀಕರಿಸಿ ಬರೆಯುವುದು.<br>• ಸಮಾನ ಪದಗಳನ್ನು ಕಂಡುಕೊಂಡು ಜೊತೆಗೊಳಿಸಿ ಬರೆದು ಮಂಡಿಸುವುದು. | • ತನ್ನ ಸಹಪಾಠಿಗಳ ರಚನೆಗಳನ್ನು ಮೌಲ್ಯ ನಿರ್ಣಯ ಮಾಡಿ ಇತರರ ರಚನೆಗಳಲ್ಲಿನ ಪ್ರಯೋಗಗಳು, ಶೈಲಿಗಳನ್ನು ವಿಶ್ಲೇಷಿಸಿಗಳನ್ನು ವಿಶ್ಲೇಷಿಸಿ ತನ್ನ ರಚನೆಗಳನ್ನು ಉತ್ತಮ ಪಡಿಸುವುದು. |

| ಆಶಯಗಳು | ಪ್ರಕ್ರಿಯೆಗಳು | ಕಲಿಕಾ ಸಾಧನೆಗಳು |
|---|---|---|
| **2. ನೀ ನಗಿದ್ದರೆ ನಾ ನಿನಗೆ** | | **ಸಮಯ : 6 ಗಂಟೆಗಳು** |
| • ಇತರರ ಕಷ್ಟಕಾಲದಲ್ಲಿ ಸಹಾಯ ಮಾಡುವುದು ಎಲ್ಲರ ಕರ್ತವ್ಯ.<br>• ಆಶಯವನ್ನು ರಾಗ, ತಾಳಗಳಿಂದ ಭಾವನಾತ್ಮಕವಾಗಿ ಮಂಡಿಸಿ ಕವಿತೆಯನ್ನು ಆಸ್ವಾದಿಸಬಹುದು.<br>• ಕವಿತೆಯನ್ನು ಓದಿ ಅದರ ಆಶಯವನ್ನು ತಿಳಿಯುವುದು. | • ಕವಿತೆಯನ್ನು ವೈಯಕ್ತಿಕವಾಗಿಯೂ, ಗುಂಪಾಗಿಯೂ ಹಾಡಿ ಆಸ್ವಾದಿಸುವುದು.<br>• ಕವಿತೆಯ ಆಶಯದ ಆಧಾರದಲ್ಲಿ ಪ್ರಶ್ನೆಗಳಿಗೆ ಉತ್ತರ ಬರೆಯುವುದು.<br>• ಪದ್ಯದ ಸಾಲುಗಳನ್ನು ಓದಿ ಅವುಗಳನ್ನು ವಾಕ್ಯದಲ್ಲಿ ಬರೆದು ಮಂಡಿಸುವುದು.<br>• ಪದ್ಯದ ಆಶಯದ ಆಧಾರದಲ್ಲಿ ವಾಕ್ಯಗಳನ್ನು ಕ್ರಮೀಕರಿಸಿ ಬರೆಯುವುದು. | • ಕವಿತೆಗಳನ್ನು ಆಲಿಸಿ, ಆಸ್ವಾದಿಸಿ ಅವುಗಳ ಆಶಯವನ್ನು ಅರ್ಥೈಸಿಕೊಂಡು ರಾಗ, ತಾಳ, ಭಾವಗಳಿಂದ ಹಾಡುವುದು. |
| • ತಮ್ಮ ಅಭಿಪ್ರಾಯಗಳನ್ನು ಕಾರ್ಯಕಾರಣ ಸಂಬಂಧಗಳ ಸಹಿತ ವಿವರಿಸಿ ಸಮರ್ಥಿಸುವುದು. | • ಕಥೆಯ ಸಂದರ್ಭಗಳು ಬದಲಾದರೆ ಏನು ಸಂಭವಿಸುತ್ತಿದ್ದುವು ಎಂಬುದನ್ನು ತಮ್ಮದೇ ಮಾತುಗಳಲ್ಲಿ ಹೇಳುವುದು. | • ಪದ ಪ್ರಯೋಗಗಳು, ಶೈಲಿಗಳು, ಆಲಿಸಿದ ನೂತನ ಪದಗಳು ಮೊದಲಾದವುಗಳನ್ನು ಸಂದರ್ಭಕ್ಕನುಗುಣವಾಗಿ ಮಾತುಗಾರಿಕೆಯಲ್ಲಿ ಬಳಸುವುದು. |
| • ಒಂದು ಘಟನೆಯನ್ನು ಪತ್ರಿಕಾವರದಿಯಾಗಿ ಬದಲಾಯಿಸುವಾಗ ಯೋಗ್ಯ ಭಾಷೆ, ಶೀರ್ಷಿಕೆ, ಘಟನೆಗಳ ಕ್ರಮೀಕರಣ ಮೊದಲಾದ ಅಂಶಗಳನ್ನು ಗಮನಿಸಬೇಕು. | • ಪ್ರಕೃತಿಯಲ್ಲಿ ನಡೆಯುವ ವಿಚಿತ್ರ ಘಟನೆಗಳಿಗೆ ಸಂಬಂಧಿಸಿದ ಪತ್ರಿಕಾ ವರದಿಯನ್ನು ಓದುವುದು. ಅಂತಹ ಇತರ ವಾರ್ತೆಗಳನ್ನು ಸಂಗ್ರಹಿಸಿ ಭಿತ್ತಿ ಪತ್ರಿಕೆಯಲ್ಲಿ ಪ್ರದರ್ಶಿಸುವುದು. | • ಭಾಷಾ ವ್ಯವಹಾರ ರೂಪಗಳನ್ನು ಬೇರೆ ಬೇರೆ ರೀತಿಯಲ್ಲಿ ರೂಪಾಂತರಿಸುವುದು. |

| ಆಶಯಗಳು | ಪ್ರಕ್ರಿಯೆಗಳು | ಕಲಿಕಾ ಸಾಧನೆಗಳು |
|---|---|---|
| **3. ನಗರದಲ್ಲಿ ನಡೆದಾಗ** | | **ಸಮಯ : 6 ಗಂಟೆಗಳು** |
| • ರಸ್ತೆ ನಿಯಮಗಳನ್ನು ಪಾಲಿಸುವುದು ಪಾದಚಾರಿಗಳ ಹಾಗೂ ವಾಹನ ಚಾಲಕರ ಕರ್ತವ್ಯವಾಗಿದೆ.<br>• ರಸ್ತೆ ನಿಯಮಗಳನ್ನು ಪಾಲಿಸುವುದರಿಂದ ಅಪಘಾತಗಳನ್ನು ತಪ್ಪಿಸಬಹುದು.<br>• ಘಟನೆ ಅಥವಾ ಸಂದರ್ಭಗಳ ವಿಶೇಷವನ್ನೊಳಗೊಂಡ ಆಶಯ ವಿನಿಮಯವೇ ಸಂಭಾಷಣೆಯಾಗಿದೆ. | • ಸಂಭಾಷಣೆಯನ್ನು ಸೂಕ್ತ ಸ್ವರಭಾರದೊಂದಿಗೆ ಉಚ್ಚಾರಸ್ಫುಟತೆ ಮತ್ತು ಆಶಯ ಸ್ಪಷ್ಟತೆಯೊಂದಿಗೆ ಸರಾಗವಾಗಿ ಓದುವುದು. ಆಶಯವನ್ನು ತಿಳಿಯುವುದು.<br>• ಸಂಭಾಷಣೆಯನ್ನು ಓದಿ ಪ್ರಶ್ನೆಗಳಿಗೆ ಉತ್ತರ ಬರೆಯುವುದು. | • ನಿರ್ದಿಷ್ಟ ಭಾಷಾ ವ್ಯವಹಾರ ರೂಪಗಳನ್ನು ಉಚ್ಚಾರ ಸ್ಫುಟತೆಯಿಂದ ಶ್ರೋತೃಗಳಿಗೆ ಆಶಯಸ್ಪಷ್ಟವಾಗುವ ರೀತಿಯಲ್ಲಿ ಸರಾಗವಾಗಿ ಓದುವುದು. |
| • ತಮ್ಮ ಅಭಿಪ್ರಾಯಗಳನ್ನು ಸ್ವತಂತ್ರವಾಗಿ ವ್ಯಕ್ತಪಡಿಸುವುದು.<br>• ತಮ್ಮ ಅಭಿಪ್ರಾಯಗಳನ್ನು ಕಾರ್ಯಕಾರಣ ಸಂಬಂಧಗಳ ಸಹಿತ ವಿವರಿಸಿ ಸಮರ್ಥಿಸುವುದು. | • ಚಿತ್ರವನ್ನು ನಿರೀಕ್ಷಿಸಿ ಅಭಿಪ್ರಾಯಗಳನ್ನು ಬರೆಯುವುದು.<br>• ರಸ್ತೆ ನಿಯಮಗಳನ್ನು ಪಾಲಿಸಬೇಕಾದ ಅಗತ್ಯದ ಕುರಿತು ಚರ್ಚಿಸುವುದು. | • ಪದ ಪ್ರಯೋಗಗಳು, ಶೈಲಿಗಳು, ಆಲಿಸಿದ ನೂತನ ಪದಗಳು ಮೊದಲಾದವುಗಳನ್ನು ಸಂದರ್ಭಕ್ಕನುಗುಣವಾಗಿ ಮಾತುಗಾರಿಕೆಯಲ್ಲಿ ಬಳಸುವುದು. |
| • ಅಕ್ಷರ, ಪದ, ಕಾಗುಣಿತ, ವಾಕ್ಯಗಳನ್ನುಪಯೋಗಿಸಿ ಭಾಷಾ ಆಟಗಳನ್ನು ಆಡುವುದು. | • ಪಾಠದಲ್ಲಿರುವ ಪದಗಳನ್ನು ಆಯ್ದು ಪದಸಂಕೋಲೆಯನ್ನು ರಚಿಸುವುದು.<br>• ಮಾದರಿಯಾಗಿ ನೀಡಿದ ವಾಕ್ಯಗಳನ್ನೋದಿ ನೀಡಲಾದ ವಾಕ್ಯಗಳನ್ನು ಬದಲಾಯಿಸಿ ಬರೆಯುವುದು. | • ತನ್ನ ಸಹಪಾಠಿಗಳ ರಚನೆಗಳನ್ನು ಮೌಲ್ಯ ನಿರ್ಣಯ ಮಾಡಿ ಇತರರ ರಚನೆಗಳಲ್ಲಿನ ಪ್ರಯೋಗಗಳು ಶೈಲಿಗಳನ್ನು ವಿಶ್ಲೇಷಿಸಿ ತನ್ನ ರಚನೆಯನ್ನು ಉತ್ತಮ ಪಡಿಸುವುದು. |
| • ಸೂಚನೆಗಳನ್ನು ಸಂಕ್ಷಿಪ್ತವಾಗಿ ಮತ್ತು ಸ್ಪಷ್ಟವಾಗಿ ಬರೆದು ಸೂಚನಾ ಫಲಕದಲ್ಲಿ ಪ್ರದರ್ಶಿಸುವುದು. | • ರಸ್ತೆ ನಿಯಮಕ್ಕೆ ಸಂಬಂಧಿಸಿದ ಸೂಚನಾ ಫಲಕಗಳನ್ನು ತಯಾರಿಸುವುದು.<br>• ಸೃಜನಾತ್ಮಕ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡು ತನ್ನ ರಚನೆಗಳನ್ನು ತರಗತಿಯ ಸಂಚಿಕೆಗಳಿಗೆ ಹಾಗೂ ಹಸ್ತಪತ್ರಿಕೆಗಳಿಗೆ ನೀಡುವುದು. | • ತನ್ನ ಸಹಪಾಠಿಗಳ ರಚನೆಗಳನ್ನು ಮೌಲ್ಯನಿರ್ಣಯ ಮಾಡಿ ಇತರರ ರಚನೆಗಳಲ್ಲಿನ ಪ್ರಯೋಗಗಳು ಶೈಲಿಗಳನ್ನು ವಿಶ್ಲೇಷಿಸಿ ತನ್ನ ರಚನೆಯನ್ನು ಉತ್ತಮಪಡಿಸುವುದು. |

# ಕರಡಿಗಳ ಕಾರುಬಾರು

❑ **ಪಾಠಭಾಗದೆಡೆಗೆ**

'ಕರಡಿಗಳ ಕಾರುಬಾರು' ಕಥೆಯಲ್ಲಿ ನೀಡಲಾದ ಚಿತ್ರವನ್ನು ನೋಡಲು ಹೇಳುವುದು ಚಿತ್ರದ ಕುರಿತು ಚರ್ಚಿಸುವುದು. ಪ್ರಾಣಿಗಳ ಕುರಿತು ಮಕ್ಕಳು ತಮ್ಮ ಅಭಿಪ್ರಾಯಗಳನ್ನು ಹೇಳಲಿ.

❑ **ಓದುವ**

ಮಕ್ಕಳು ಪಾಠಭಾಗವನ್ನು ಓದಲಿ. ಕಥೆಯ ಆಶಯವನ್ನು ಕಂಡುಕೊಳ್ಳಲಿ. ಬಳಿಕ ಕೆಲವರಿಗೆ ಕಥೆಯನ್ನು ಸಂಕ್ಷಿಪ್ತವಾಗಿ ಹೇಳಲು ಸೂಚಿಸುವುದು. ಅಧ್ಯಾಪಕರು ಪಾಠಭಾಗವನ್ನು ಓದುವುದು. ಕಥೆಯ ಆಶಯವನ್ನು ಕ್ರೋಢೀಕರಿಸುವುದು.

❑ **ಪದಗಳ ಅರ್ಥ ಕಂಡುಹಿಡಿಯುವ**

ಪಾಠಭಾಗವನ್ನು ಓದಿ ನವೀನ ಪದಗಳನ್ನು ಗುರುತಿಸಲು ಹೇಳುವುದು. ಮಕ್ಕಳು ಅವುಗಳ ಅರ್ಥಗಳನ್ನು ಅರ್ಥಕೋಶದ ಸಹಾಯದಿಂದ ಕಂಡು ಹುಡುಕಿ ಬರೆಯಲಿ. ಅಧ್ಯಾಪಕರು ಮೌಲ್ಯನಿರ್ಣಯ ಮಾಡುವುದು.

❑ **ಉತ್ತರಿಸುವ**

ಪಾಠಭಾಗದ ಆಶಯವನ್ನು ತಿಳಿಯಲು ಈ ಚಟುವಟಿಕೆಯನ್ನು ನೀಡಲಾಗಿದೆ. ಪಾಠಭಾಗದ ಕುರಿತು ಕೊಟ್ಟಿರುವ ಪ್ರಶ್ನೆಗಳ ಆಧಾರದಲ್ಲಿ ತರಗತಿಯಲ್ಲಿ ಚರ್ಚೆ ನಡೆಸುವುದು. ಕೊಟ್ಟಿರುವ ಪ್ರಶ್ನೆಗಳಿಗೆ ಮಕ್ಕಳು ಉತ್ತರಗಳನ್ನು ಬರೆಯಲಿ. ಅದನ್ನು ಅಧ್ಯಾಪಕರು ಕರಿಹಲಗೆಯಲ್ಲಿ ಬರೆಯುವುದು. ಮಕ್ಕಳಿಗೆ ತಮ್ಮ ಉತ್ತರಗಳನ್ನು ಉತ್ತಮಪಡಿಸಲು ಅವಕಾಶವನ್ನು ನೀಡುವುದು. ಅಧ್ಯಾಪಕರು ಮೌಲ್ಯನಿರ್ಣಯ ಮಾಡುವುದು.

❑ **ವಾಕ್ಯ ಬರೆಯುವ**

ವಾಕ್ಯದಲ್ಲಿ ಉಂಟಾಗುವ ಬದಲಾವಣೆಗಳನ್ನು ತಿಳಿಯುವುದು ಮತ್ತು ಬೇರೆ ಬೇರೆ ಸಂದರ್ಭಗಳಲ್ಲಿ ಉಪಯೋಗಿಸುವ ಸಾಮರ್ಥ್ಯವನ್ನು ಮಕ್ಕಳು ಪಡೆಯಲು ಈ ಚಟುವಟಿಕೆ ನೀಡಲಾಗಿದೆ. ವಾಕ್ಯದಲ್ಲಿ ಉಂಟಾದ ಬದಲಾವಣೆಯನ್ನು ಚರ್ಚೆಯ ಮೂಲಕ ತಿಳಿಯುವುದು. ಅನಂತರ ಉಳಿದ ವಾಕ್ಯಗಳನ್ನು ಮಾದರಿಯಂತೆ ಬದಲಾಯಿಸಿ ಬರೆಯಲಿ. ಅಧ್ಯಾಪಕರು ಅಗತ್ಯ ಸಲಹೆ ಸೂಚನೆಗಳನ್ನು ನೀಡುವುದು. ಕೆಲವರಿಂದ ಮಂಡನೆ ಮಾಡಿಸುವುದು. ಅಧ್ಯಾಪಕರು ಕರಿಹಲಗೆಯಲ್ಲಿ ಬರೆಯುವುದು. ಮಕ್ಕಳಿಗೆ ಸರಿಪಡಿಸಲು ಅವಕಾಶವನ್ನು ನೀಡುವುದು. ಅಧ್ಯಾಪಕರು ಮೌಲ್ಯನಿರ್ಣಯ ಮಾಡುವುದು.

- ಕರಡಿಯು ಮಾದನನ್ನು ನೋಡುತ್ತಾ ನಿಂತಿತು.
- ಮಂಗ ಮರದಲ್ಲಿ ಲಾಗ ಹಾಕುತ್ತಿತ್ತು.
- ಹುಡುಗನು ಶಾಲೆಗೆ ಹೋಗುತ್ತಾನೆ.
- ಹೂವು ಗಿಡದಲ್ಲಿ ಅರಳಿದೆ.

❑ **ಪ್ರಶ್ನೆ ತಯಾರಿಸುವ**

ಪ್ರಶ್ನೆ ತಯಾರಿಯ ಸಾಮರ್ಥ್ಯ ಬೆಳೆಯಲು ಈ ಚಟುವಟಿಕೆಯನ್ನು ನೀಡಲಾಗಿದೆ. ಕೊಟ್ಟಿರುವ ವಾಕ್ಯವು ಉತ್ತರವಾಗಿ ಬರುವಂತೆ ಸಾಧ್ಯವಿದ್ದಷ್ಟು ಪ್ರಶ್ನೆಗಳನ್ನು

ತಯಾರಿಸಲಿ. ತಯಾರಿಸಿದ ಪ್ರಶ್ನೆಗಳನ್ನು ಗುಂಪಿನಲ್ಲಿ ಮಂಡಿಸಲಿ. ಪರಸ್ಪರ ಮೌಲ್ಯನಿರ್ಣಯ ಮಾಡಿ ಉತ್ತಮಪಡಿಸಲಿ. ಗುಂಪಿನಿಂದ ಪ್ರಶ್ನೆಗಳನ್ನು ಮಂಡಿಸುವುದು. ಅಧ್ಯಾಪಕನು ತಿದ್ದುವುದು. ಅಧ್ಯಾಪಕರು ಬರೆದ ಪ್ರಶ್ನೆಗಳನ್ನು ಪ್ರದರ್ಶಿಸುವುದು. ಮಕ್ಕಳಿಗೆ ಪ್ರಶ್ನೆಗಳನ್ನು ಉತ್ತಮಪಡಿಸಲು ಅವಕಾಶವನ್ನು ನೀಡುವುದು.

ಮಾದರಿ :

1. ಮಾದನು ಯಾಕೆ ಹೆದರಿದನು?
2. ಮಾದನು ಕರಡಿಮರಿಯನ್ನು ಹೇಗೆ ಪಾರುಮಾಡಿದನು?
3. ಮಾದನು ಯಾವುದರ ಮೂಲಕ ಮರದಿಂದ ಕೆಳಗಿಳಿದನು?
4. ಕರಡಿಯು ಗಿಡಮೂಲಿಕೆಯನ್ನು ತಂದು ಏನು ಮಾಡಿತು?

### ❑ ವಿರೋಧಾರ್ಥ ಪದಗಳನ್ನು ಬರೆಯುವ

ಪದಗಳಿಗೆ ಸಮಾನಾರ್ಥ ಪದಗಳು ಇರುವ ಹಾಗೆ ಕೆಲವು ಪದಗಳಿಗೆ ವಿರೋಧಾರ್ಥ ಪದಗಳೂ ಇರುತ್ತವೆ. ಮಕ್ಕಳು ಅರ್ಥಕೋಶದ ಸಹಾಯದಿಂದ ಅಡಿಗೆರೆ ಎಳೆದ ಪದಗಳ ಅರ್ಥವನ್ನು ಕಂಡುಕೊಳ್ಳಲಿ. ಅನಂತರ ವಿರೋಧಾರ್ಥ ಪದಗಳನ್ನು ತಿಳಿದು ಅದನ್ನು ಬಳಸಿಕೊಂಡು ವಾಕ್ಯವನ್ನು ಪೂರ್ಣಗೊಳಿಸಲಿ. ತರಗತಿಯಲ್ಲಿ ಮಂಡಿಸಲಿ. ಅಧ್ಯಾಪಕರು ಅಗತ್ಯವಾದ ಸಲಹೆಯನ್ನು ನೀಡುವುದು. ಅಧ್ಯಾಪಕರು ಬರೆದ ಪದಗಳನ್ನು ಪ್ರದರ್ಶಿಸುವುದು. ಮಕ್ಕಳಿಗೆ ಉತ್ತಮಪಡಿಸಲು ಅವಕಾಶಗಳನ್ನು ನೀಡುವುದು. ಅಧ್ಯಾಪಕರು ಮೌಲ್ಯನಿರ್ಣಯ ಮಾಡುವುದು.

ಮಾದರಿ :

ಮೇಲೆ X ಕೆಳಗೆ

ಮುಂದೆ X ಹಿಂದೆ

ಕಡಿಮೆ X ಹೆಚ್ಚು

ದೊಡ್ಡ X ಸಣ್ಣ

ಹಗಲು X ರಾತ್ರಿ

### ❑ ಊಹಿಸಿ ಬರೆಯುವ

ಮಾದ ಕಾಡಿಗೆ ಹೋಗಲು ಕಾರಣ, ಅಲ್ಲಿ ಕರಡಿಗಳನ್ನು ಕಂಡ ಸಂದರ್ಭ, ಕರಡಿ ಮರಿಯನ್ನು ಪಾರುಮಾಡಿದ ರೀತಿ ಮೊದಲಾದ ಸನ್ನಿವೇಶಗಳನ್ನು ಮಕ್ಕಳಿಂದ ಹೇಳಿಸುವುದು. ಮಾದನ ಸ್ಥಾನದಲ್ಲಿ ನೀವಿರುತ್ತಿದ್ದರೆ ಏನು ಮಾಡುತ್ತಿದ್ದಿರಿ? ಎಂದು ಪ್ರಶ್ನಿಸಿ ವಿವಿಧ ಸಾಧ್ಯತೆಗಳ ಕುರಿತು ಚರ್ಚಿಸುವುದು. ಮಕ್ಕಳು ತಮ್ಮ ಅಭಿಪ್ರಾಯಗಳನ್ನು ವೈಯಕ್ತಿಕವಾಗಿ ಬರೆಯಲಿ. ಕೆಲವರು ತರಗತಿಯಲ್ಲಿ ಮಂಡಿಸಲಿ. ಅಧ್ಯಾಪಕರು ತಮ್ಮ ಊಹೆಯನ್ನು ಬರೆದು ಪ್ರದರ್ಶಿಸಲಿ. ಮಕ್ಕಳಿಗೆ ಉತ್ತಮಪಡಿಸಲು ಅವಕಾಶವನ್ನು ನೀಡುವುದು. ಗುಂಪಿನ ಮಂಡನೆ. ಅಧ್ಯಾಪಕ ಬರೆದುದನ್ನು ಪ್ರದರ್ಶಿಸುವುದು.

**ಮಾದನ ಸ್ಥಾನದಲ್ಲಿ ನಾನಿರುತ್ತಿದ್ದರೆ**

ಮಾದನ ಸ್ಥಾನದಲ್ಲಿ ನಾನಿರುತ್ತಿದ್ದರೆ ನಾನು ಊರಿಗೆ ಹೋಗಿ ನನ್ನ ಗೆಳೆಯರನ್ನು ಕರೆದುಕೊಂಡು ಮರಕಡಿಯಲು ಅಗತ್ಯವಾದ ಸಲಕರಣೆಗಳೊಂದಿಗೆ ಬರುತ್ತಿದ್ದೆ. ಅವರೆಲ್ಲರನ್ನು ಸೇರಿಸಿ ಮರದ ಗೆಲ್ಲನ್ನು ಕಡಿದು ಕರಡಿಮರಿಯನ್ನು ಪಾರು ಮಾಡುತ್ತಿದ್ದೆ. ಮರಿಗೆ ಗಾಯವಾಗಿದ್ದರೆ ಅದಕ್ಕೆ ಚಿಕಿತ್ಸೆಯನ್ನು ನೀಡುತ್ತಿದ್ದೆ.

ಚರ್ಚೆಯ ಕೊನೆಯಲ್ಲಿ ಕಷ್ಟದಲ್ಲಿರುವವರಿಗೆ ಸಹಾಯ ಮಾಡುವುದು ನಮ್ಮ ಕರ್ತವ್ಯ ಎಂಬ ಮನೋಭಾವನೆ ಮಕ್ಕಳಲ್ಲಿ ಮೂಡುವಂತೆ ಕ್ರೋಡೀಕರಿಸುವುದು.

## ❑ ಅಭಿನಯಿಸುವ

ಪಾಠಭಾಗದಿಂದ ಏಕಪಾತ್ರಾಭಿನಯಕ್ಕೆ ಯೋಗ್ಯವಾದ ಸಂದರ್ಭವನ್ನು ಚರ್ಚೆಯ ಮೂಲಕ ಕಂಡುಕೊಳ್ಳುವುದು. ಅನಂತರ ಏಕಪಾತ್ರಾಭಿನಯದ ಕುರಿತು ಮಾಹಿತಿಯನ್ನು ಅಧ್ಯಾಪಕರು ನೀಡುವುದು. ಮಕ್ಕಳನ್ನು ಗುಂಪುಗಳನ್ನಾಗಿ ಮಾಡುವುದು. ಕಥಾಪಾತ್ರ, ಸಂದರ್ಭ, ಸಂಭಾಷಣೆ ಮೊದಲಾದವುಗಳ ಕುರಿತು ಗುಂಪಿನಲ್ಲಿ ಚರ್ಚಿಸಿ ಸಂಭಾಷಣೆ ತಯಾರಿಸಲಿ. ಅಧ್ಯಾಪಕರು ಅಗತ್ಯವಾದ ಸಲಹೆ, ಸೂಚನೆಗಳನ್ನು ನೀಡುವುದು. ಗುಂಪಿನಿಂದ ಒಬ್ಬನಂತೆ ಏಕಪಾತ್ರಾಭಿನಯ ಮಾಡಲಿ. ಮಕ್ಕಳು ಮೌಲ್ಯನಿರ್ಣಯ ಮಾಡಿ ಚರ್ಚಿಸಿ ಉತ್ತಮವಾಗಿ ಅಭಿನಯಿಸಿದ್ದು ಯಾರು? ಯಾಕೆ? ಎಂದು ಕಂಡುಕೊಳ್ಳಲಿ.

### ಏಕಪಾತ್ರಾಭಿನಯ ಹೇಗಿರಬೇಕು?

ಏಕಪಾತ್ರಾಭಿನಯವು ಅಭಿನಯ ಕಲೆಯನ್ನು ಬೆಳೆಸುವ ಒಂದು ಚಟುವಟಿಕೆಯಾಗಿದೆ. ಒಬ್ಬ ವ್ಯಕ್ತಿಯು ಒಂದಕ್ಕಿಂತ ಹೆಚ್ಚು ಪಾತ್ರಗಳನ್ನು ಏಕಕಾಲಕ್ಕೆ ಅಭಿನಯಿಸುವ, ಕಥೆಯ ಪಾತ್ರಗಳಿಗೆ ಹೊಂದಿಕೊಂಡು ಸೂಕ್ತ ಹಾವ–ಭಾವ, ಸ್ವರಭಾರದೊಂದಿಗೆ ಪ್ರಸ್ತುತಪಡಿಸುವ ಮೂಲಕ ಒಂದು ಕಥೆಯ ಸನ್ನಿವೇಶವನ್ನು ಸಮರ್ಪಕವಾಗಿ ಪ್ರೇಕ್ಷಕರಿಗೆ ತಲುಪಿಸುವ ಕಲೆಯೇ ಏಕಪಾತ್ರಾಭಿನಯ.

ಒಂದು ಕಥಾಸನ್ನಿವೇಶದ ವಿವಿಧ ಪಾತ್ರಗಳನ್ನು ಯೋಗ್ಯ ರೀತಿಯಲ್ಲಿ ಒಬ್ಬ ವ್ಯಕ್ತಿಯೇ ಅಭಿನಯಿಸುವುದಾದರೆ ಅದನ್ನು ಏಕಪಾತ್ರಾಭಿನಯವೆನ್ನುತ್ತಾರೆ.

ಒಂದು ಕಥಾ ಸನ್ನಿವೇಶದ ಕಥಾಪಾತ್ರಗಳನ್ನು ಬೇರೆ ಬೇರೆ ಜನರು ಪ್ರಸ್ತುತಪಡಿಸುವುದಾದರೆ ಅದನ್ನು ನಾಟಕಾಭಿನಯ ಎನ್ನುತ್ತಾರೆ.

ಐ.ಸಿ.ಟಿ. ಯ ಮೂಲಕ ಏಕಪಾತ್ರಾಭಿನಯದ ವೀಡಿಯೋ ತೋರಿಸುವುದು. (ಇದು ಏಕಪಾತ್ರಾಭಿನಯ ಎಂದರೆ ಏನು? ಎಂದು ತಿಳಿಯಲು ಉಪಯೋಗಿಸುವುದು.)

### ಮೌಲ್ಯನಿರ್ಣಯ ಸೂಚಕಗಳು

- ಯೋಗ್ಯವಾದ ಸಂಭಾಷಣೆ
- ಪಾತ್ರಗಳ ಆಯ್ಕೆ
- ಹಾವಭಾವಗಳಿಂದೊಡಗೂಡಿದ ಅಭಿನಯ
- ಕಥಾಸಂದರ್ಭ

## ❑ ಕ್ರಮೀಕರಿಸಿ ಬರೆಯುವ

ಪಾಠಭಾಗದ ಆಶಯವನ್ನು ತಿಳಿಯಲು ಈ ಚಟುವಟಿಕೆ ನೀಡಲಾಗಿದೆ. ಪಾಠಭಾಗದ ಘಟನೆಗಳ ಕುರಿತು ಮಕ್ಕಳಿಂದ ಹೇಳಿಸುವುದು. ಕೊಟ್ಟ ವಾಕ್ಯಗಳನ್ನು ಘಟನೆಗಳಿಗೆ ಅನುಸಾರವಾಗಿ ಕ್ರಮೀಕರಿಸಿ ಅಭ್ಯಾಸ ಪುಸ್ತಕದಲ್ಲಿ ಬರೆಯಲಿ. ಕೆಲವರು ಮಂಡಿಸಲಿ. ಅಧ್ಯಾಪಕರು ಕರಿಹಲಗೆಯಲ್ಲಿ ಬರೆಯುವುದು. ಮಕ್ಕಳಿಗೆ ಉತ್ತಮಪಡಿಸಲು ಅವಕಾಶವನ್ನು ನೀಡುವುದು. ಅಧ್ಯಾಪಕರು ಮೌಲ್ಯನಿರ್ಣಯ ಮಾಡುವುದು.

ಮಾದ ಕಟ್ಟಿಗೆ ಮಾರಿ ಜೀವಿಸುತ್ತಿದ್ದನು.

ಕರಡಿಗಳು ಹತ್ತಿರ ಬರುವುದನ್ನು ಕಂಡು ಮಾದನು ಹೆದರಿದನು.

ಮರದ ಗೆಲ್ಲಿನ ಅಡಿಯಲ್ಲಿ ಸಿಲುಕಿದ್ದ ಕರಡಿಮರಿಯನ್ನು ಮಾದನು ಪಾರು ಮಾಡಿದನು.

ಕರಡಿಮರಿ ಎಚ್ಚರಗೊಂಡು ಎದ್ದು ನಿಂತಿತು.

ಕರಡಿಗಳು ಮಾದನಿಗೆ ತಮ್ಮ ಕೃತಜ್ಞತೆಯನ್ನು ಸೂಚಿಸಿದವು.

## ❑ ಜೊತೆಗೊಳಿಸುವ

ಸಮಾನಾರ್ಥಕ ಪದಗಳನ್ನು ಕಂಡುಕೊಳ್ಳುವ ಚಟುವಟಿಕೆಯಾಗಿ ಇದನ್ನು ನೀಡಲಾಗಿದೆ.

ಅರ್ಥಕೋಶದ ಸಹಾಯದಿಂದ ಕೊಟ್ಟಿರುವ ಪದಗಳ ಅರ್ಥವನ್ನು ಕಂಡುಹಿಡಿದು, ಕೋಣೆಗಳಲ್ಲಿ ಹೊಂದಿಸಿ ಬರೆಯಲಿ. ತರಗತಿಯಲ್ಲಿ ಮಂಡಿಸಲಿ. ಅಧ್ಯಾಪಕರು ಮೌಲ್ಯನಿರ್ಣಯ ಮಾಡುವುದು.

| | | |
|---|---|---|
| ಭೂಮಿ | – | ಪೃಥ್ವಿ |
| ಮಮತೆ | – | ಪ್ರೀತಿ |
| ಹರ್ಷ | – | ಸಂತೋಷ |
| ಕಮಲ | – | ತಾವರೆ |
| ಆನೆ | – | ಗಜ |
| ಗೆಳೆಯ | – | ಸ್ನೇಹಿತ |
| ಕಾಡು | – | ಅರಣ್ಯ |

# ನೀ ನನಗಿದ್ದರೆ ನಾ ನಿನಗೆ

ಪರಸ್ಪರ ಸಹಕಾರವಿದ್ದರೆ ಕಷ್ಟದ ಕೆಲಸಗಳನ್ನು ಸುಲಭದಲ್ಲಿ ಸಾಧಿಸಬಹುದು. ಒಬ್ಬರು ಕಷ್ಟದಲ್ಲಿರುವಾಗ ಅವರಿಗೆ ಸಹಾಯ ಮಾಡಬೇಕು. ಇಲ್ಲದಿದ್ದರೆ ನಮ್ಮ ಕಷ್ಟಕಾಲದಲ್ಲಿ ಇತರರು ಸಹಾಯ ಮಾಡಲಾರರು. ಇಂತಹ ಒಂದು ಸಂದರ್ಭವನ್ನು ತಿಳಿಯಪಡಿಸುವ ಪದ್ಯವನ್ನು ಪಠ್ಯದಲ್ಲಿ ಕೊಡಲಾಗಿದೆ.

ಮಾದ ಕರಡಿಗಳಿಗೆ ಮಾಡಿದ ಸಹಾಯದ ಬಗ್ಗೆ ಸರಳ ಚರ್ಚೆ ಮಾಡುವುದು.

ಮಾದನು ಮಾಡಿದ ಸಹಾಯದಿಂದ ಕರಡಿಗಳಿಗೆ ಆದ ಪ್ರಯೋಜನ ಏನು ಎಂದು ಚರ್ಚಿಸುವುದು. ಕಷ್ಟದಲ್ಲಿರುವವರಿಗೆ ನಾವು ಸಹಾಯ ಮಾಡದಿದ್ದರೆ ಏನು ಸಂಭವಿಸಬಹುದು? 'ನೀ ನನಗಿದ್ದರೆ ನಾ ನಿನಗೆ' ಪದ್ಯವನ್ನು ಓದಿ ತಿಳಿಯಿರಿ ಎಂದು ಮಕ್ಕಳಿಗೆ ಪದ್ಯವನ್ನು ವೈಯಕ್ತಿಕವಾಗಿ ಓದಲು ನೀಡುವುದು.

## ಚಟುವಟಿಕೆಗಳು

### ❑ ಪದ್ಯ ಹಾಡುವ

ಪದ್ಯ ಓದುವಿಕೆಯ ವಿವಿಧ ಹಂತಗಳನ್ನು ಪಾಲಿಸಿ ಮಕ್ಕಳಿಂದ ರಾಗವಾಗಿ ಹಾಡಿಸುವುದು. ಹಾಡಿನ ಧ್ವನಿಮುದ್ರಿಕೆಯನ್ನು ಆಲಿಸಲು ಅವಕಾಶವನ್ನು ನೀಡುವುದು.

### ❑ ಪದಗಳ ಅರ್ಥ ಕಂಡುಹಿಡಿಯುವ

ನವೀನ ಪದಗಳ ಅರ್ಥಗಳನ್ನು ಮಕ್ಕಳು ಅರ್ಥಕೋಶದ ಸಹಾಯದಿಂದ ಕಂಡುಹುಡುಕಿ ಬರೆಯಲಿ.

## ❑ ಉತ್ತರಿಸುವ

ಪದ್ಯದ ಆಶಯುವನ್ನು ತಿಳಿಯಲು ಈ ಚಟುವಟಿಕೆಯನ್ನು ನೀಡಲಾಗಿದೆ. ಪಠ್ಯಭಾಗದ ಆಶಯವನ್ನು ತಿಳಿದು ಪ್ರಶ್ನೆಗಳಿಗೆ ಉತ್ತರವನ್ನು ಕಂಡುಕೊಳ್ಳಲಿ. ವೈಯಕ್ತಿಕವಾಗಿ ಬರೆಯಲಿ. ಕೆಲವರಿಂದ ಮಂಡನೆ. ತಪ್ಪುಗಳು ಇದ್ದರೆ ಉತ್ತಮ ಪಡಿಸಲು ಅವಕಾಶವನ್ನು ನೀಡುವುದು. ಅಧ್ಯಾಪಕರು ಮೌಲ್ಯನಿರ್ಣಯ ಮಾಡುವುದು.

## ❑ ಪದ್ಯದ ಸಾಲುಗಳನ್ನು ಬರೆಯುವ

ಪದ್ಯವನ್ನು ಗದ್ಯವಾಗಿ ಬದಲಾಯಿಸಿ ಬರೆಯುವ ಸಾಮರ್ಥ್ಯವನ್ನು ಬೆಳೆಸಲು ಈ ಚಟುವಟಿಕೆಯನ್ನು ನೀಡಲಾಗಿದೆ. ಪದ್ಯದ ಕೆಲವು ಸಾಲುಗಳನ್ನು ನೀಡಿ ಅವುಗಳನ್ನು ಗದ್ಯವಾಗಿ ಬದಲಾಯಿಸಲು ಮಕ್ಕಳಿಗೆ ಅವಕಾಶವನ್ನು ನೀಡುವುದು. ಮಕ್ಕಳು ವೈಯುಕ್ತಿಕವಾಗಿ ಬರೆಯಲಿ. ಕೆಲವರಿಂದ ಮಂಡನೆ. ಅಧ್ಯಾಪಕರು ಕರಿಹಲಗೆಯಲ್ಲಿ ಕ್ರೋಡೀಕರಿಸುವುದು. ಮಕ್ಕಳಿಗೆ ಉತ್ತಮಪಡಿಸಲು ಅವಕಾಶವನ್ನು ನೀಡುವುದು. ಅಧ್ಯಾಪಕರು ಮೌಲ್ಯನಿರ್ಣಯ ಮಾಡುವುದು.

ಇದೇ ರೀತಿಯ ಪದ್ಯದ ಇತರ ಸಾಲುಗಳನ್ನು ಗದ್ಯ ರೂಪದಲ್ಲಿ ಬರೆಯಲಿ.

ಯಜಮಾನನು ಬರುತ್ತಿದ್ದಾನೆ, ಮುಂದಕ್ಕೆ ನಡೆ
ಹತ್ತು ಮಣವನ್ನು ಕುದುರೆಗೆ ಹೊರಿಸಿದನು
ಕುದುರೆಯು ಹೊರೆಯನ್ನು ಹೊತ್ತಿತು
ಈ ಮಾತು ನಮ್ಮೊಳಗೆ ನೆನಪಿರಲಿ

## ❑ ಪದ ವಿಂಗಡಿಸಿ ಬರೆಯುವ

ಕೆಲವು ಪದಗಳಲ್ಲಿ ಒಂದಕ್ಕಿಂತ ಹೆಚ್ಚು ಅರ್ಥಪೂರ್ಣ ಪದಗಳು ಸೇರಿಕೊಂಡಿವೆ ಎಂದು ತಿಳಿಯಲು ಈ ಚಟುವಟಿಕೆಯನ್ನು ನೀಡಲಾಗಿದೆ. ಮಾದರಿಯಂತೆ ಪದಗಳನ್ನು ಮಕ್ಕಳು ವಿಂಗಡಿಸಿ ಬರೆದು ಮಂಡಿಸಲಿ. ಅಧ್ಯಾಪಕರು ಕರಿಹಲಗೆಯಲ್ಲಿ ಬರೆಯುವುದು. ಮಕ್ಕಳಿಗೆ ಉತ್ತಮಪಡಿಸಲು ಅವಕಾಶವನ್ನು ನೀಡುವುದು. ಅಧ್ಯಾಪಕರಿಂದ ಮೌಲ್ಯನಿರ್ಣಯ ಮಾಡುವುದು.

ದನಿ + ಅದೋ
ಬಗ್ಗಿಸಿತು + ಅದು
ನಿನ್ನ + ಉಪಕಾರವನು
ಆಗ + ಏನು + ಅಂದಿಯ
ಈಗ + ಆದರೂ
ನೆನಪು + ಇರಲಿ + ಈ ನುಡಿ
ನಮ್ಮ + ಒಳಗೆ

## ❑ ಪ್ರಾಸಪದ ಬರೆಯುವ

ಪ್ರಾಸಪದಗಳಿಂದ ಪದ್ಯದ ಸೌಂದರ್ಯ ಹೆಚ್ಚುತ್ತದೆ ಎಂದು ತಿಳಿಯಲು ಮತ್ತು ಕವಿತೆಗಳನ್ನು ರಚಿಸುವಾಗ ಪ್ರಾಸಪದಗಳನ್ನು ಉಪಯೋಗಿಸುವ ಸಾಮರ್ಥ್ಯವನ್ನು ಬೆಳೆಸಲು ಈ ಚಟುವಟಿಕೆಯನ್ನು ನೀಡಲಾಗಿದೆ.

ಪದ್ಯದಲ್ಲಿ ಬರುವ ಪ್ರಾಸಪದಗಳನ್ನು ಆರಿಸುವುದು. ಮಕ್ಕಳು ಪ್ರಾಸಪದಗಳನ್ನು ಪಟ್ಟಿಮಾಡಲಿ.ಅಭ್ಯಾಸ ಪುಸ್ತಕದಲ್ಲಿ ಬರೆದು ಮಂಡಿಸಲಿ. ಅಧ್ಯಾಪಕರು ಕರಿಹಲಗೆಯಲ್ಲಿ ಬರೆಯುವುದು. ಇದರ ಆಧಾರದಲ್ಲಿ ಮಕ್ಕಳು ತಮ್ಮ ಪಟ್ಟಿಯನ್ನು ಬೆಳೆಸಲಿ. ಅಧ್ಯಾಪಕರು ಮೌಲ್ಯನಿರ್ಣಯ ಮಾಡುವುದು.

## ❑ ಕ್ರಮೀಕರಿಸಿ ಬರೆಯುವ

ಯಾವುದೇ ಬರಹವು ವ್ಯವಸ್ಥಿತವಾಗಿದ್ದರೆ ಅದನ್ನು ಅರ್ಥಮಾಡಿಕೊಳ್ಳಲು ಸುಲಭವಾಗುತ್ತದೆ. ವಾಕ್ಯಗಳನ್ನು ಕ್ರಮೀಕರಿಸಿ ಬರೆಯುವ ಸಾಮರ್ಥ್ಯವನ್ನು ಮಕ್ಕಳಲ್ಲಿ ಬೆಳೆಸಬೇಕಾಗಿದೆ. ಈ ಉದ್ದೇಶದಿಂದ ಈ ಚಟುವಟಿಕೆಯನ್ನು ನೀಡಲಾಗಿದೆ.

ಪದ್ಯದ ಪ್ರಧಾನ ಆಶಯಗಳ ಬಗ್ಗೆ ಮಕ್ಕಳಲ್ಲಿ ಚರ್ಚೆ ಮಾಡುವುದು. ಆಶಯಗಳನ್ನು ಕ್ರಮವಾಗಿ ಹೇಳಿಸುವುದು. ಪಾಠಪುಸ್ತಕದ ಚಟುವಟಿಕೆಯನ್ನು ಮಕ್ಕಳು ಮಾಡಲಿ. ತರಗತಿಯಲ್ಲಿ ಮಂಡಿಸಲಿ. ಅಧ್ಯಾಪಕರು ಕರಿಹಲಗೆಯಲ್ಲಿ ಬರೆಯುವುದು. ಮಕ್ಕಳಿಗೆ ಉತ್ತಮಪಡಿಸಲು ಅವಕಾಶವನ್ನು ನೀಡುವುದು. ಅಧ್ಯಾಪಕರು ಮೌಲ್ಯನಿರ್ಣಯ ಮಾಡುವುದು.

## ❑ ಚರ್ಚಿಸುವ

ತಮ್ಮ ಅಭಿಪ್ರಾಯಗಳನ್ನು ಆಶಯಕ್ಕನುಗುಣವಾಗಿ ಸ್ವತಂತ್ರವಾಗಿ ವ್ಯಕ್ತಪಡಿಸುವ ಸಾಮರ್ಥ್ಯ ಮಕ್ಕಳಲ್ಲಿ ಬೆಳೆಯಬೇಕಾಗಿದೆ. ಇದಕ್ಕಾಗಿ ಈ ಚಟುವಟಿಕೆಯನ್ನು ನೀಡಲಾಗಿದೆ. 'ಕತ್ತೆಗೆ ಕುದುರೆ ಸಹಾಯ ಮಾಡಲಿಲ್ಲ, ಕುದುರೆ ಸಹಾಯ ಮಾಡುತ್ತಿದ್ದರೆ ಏನಾಗುತ್ತಿತ್ತು' ಮಕ್ಕಳಿಗೆ ತಮ್ಮ ಅಭಿಪ್ರಾಯಗಳನ್ನು ಹೇಳಲು ಅವಕಾಶವನ್ನು ನೀಡುವುದು. ಚರ್ಚೆಯ ಮೂಲಕ ಪರೋಪಕಾರ ಮತ್ತು ಪರಸ್ಪರ ಸಹಕಾರದ ಮನೋಭಾವವನ್ನು ತಿಳಿಯುವುದು. ಸಹಾಯ ಸಹಕಾರದಿಂದ ಒಳ್ಳೆಯ ಸಂಬಂಧಗಳು ಬೆಳೆಯುತ್ತವೆ ಎಂದು ತಿಳಿಯುವುದು.

## ❑ ಸಂಗ್ರಹಿಸುವ

ಪತ್ರಿಕಾ ವರದಿಗಳ ಸ್ವರೂಪ, ಭಾಷಾ ವಿಶೇಷತೆಗಳನ್ನು ತಿಳಿದುಕೊಳ್ಳಲು ಮತ್ತು ಪತ್ರಿಕಾ ವರದಿಯನ್ನು ತಯಾರಿಸುವ ಸಾಮರ್ಥ್ಯವನ್ನು ಬೆಳೆಸಲು ಈ ಚಟುವಟಿಕೆಯನ್ನು ನೀಡಲಾಗಿದೆ.

ಕೊಟ್ಟ ಪತ್ರಿಕಾ ವರದಿಯನ್ನು ಓದುವುದು. ಅದೇ ರೀತಿಯ ಅಥವಾ ವಿವಿಧ ರೀತಿಯ ಪತ್ರಿಕಾವರದಿಗಳನ್ನು ಸಂಗ್ರಹಿಸುವುದು. ಪತ್ರಿಕಾ ವರದಿಗಳಲ್ಲಿ ಉಪಯೋಗಿಸುವ ಭಾಷಾ ಶೈಲಿಯನ್ನು ತಿಳಿಯುವುದು. ಪತ್ರಿಕಾ ವರದಿಗಳ ಸಂಗ್ರಹಕ್ಕೆ ಅಗತ್ಯವಾದ ಸಲಹೆ, ಸೂಚನೆಗಳನ್ನು ಅಧ್ಯಾಪಕರು ನೀಡುವುದು. ಸಂಗ್ರಹಿಸಿದ ಪತ್ರಿಕಾವರದಿಗಳ ಪ್ರದರ್ಶನವನ್ನು ತರಗತಿಯಲ್ಲಿ ಏರ್ಪಡಿಸುವುದು. ಪತ್ರಿಕಾ ಪ್ರದರ್ಶನದ ಉದ್ಘಾಟನ ಸಮಾರಂಭದ ವರದಿಯನ್ನು ವಿದ್ಯಾರ್ಥಿಗಳು ತರಗತಿಯಲ್ಲಿ ತಯಾರಿಸುವುದು.

# ರಸ್ತೆಯಲ್ಲಿ ನಡೆದಾಗ

## ❑ ಪಾಠಭಾಗದೆಡೆಗೆ

ರಸ್ತೆ ಅಪಘಾತದ ಚಿತ್ರವನ್ನು ಮಕ್ಕಳಿಗೆ ತೋರಿಸುವುದು. ಅಪಘಾತ ಉಂಟಾಗಲು ಕಾರಣವೇನು ಎಂದು ಚರ್ಚಿಸುವುದು. ರಸ್ತೆ ನಿಯಮವನ್ನು ಪಾಲಿಸದಿರುವುದೇ ರಸ್ತೆ ಅಪಘಾತಕ್ಕೆ ಕಾರಣ ಎಂಬ ನಿಗಮನಕ್ಕೆ ಬರುವುದು. ರಸ್ತೆಯಲ್ಲಿ ನಡೆಯುವಾಗ ತಿಳಿದಿರಬೇಕಾದ ಪ್ರಧಾನವಾದ ರಸ್ತೆ ನಿಯಮಗಳನ್ನು ತಿಳಿಯಲು 'ನಗರದಲ್ಲಿ ನಡೆದಾಗ' ಪಾಠಭಾಗವನ್ನು ಮಕ್ಕಳು ಓದಲಿ.

ICT ಉಪಯೋಗಿಸಿ 'ಪಪ್ಪು ಜೀಬ್ರಾ'ದ ವೀಡಿಯೋ ತೋರಿಸುವುದು.

### ❑ ಪದಗಳ ಅರ್ಥ ಕಂಡುಹಿಡಿಯುವ

ಪಾಠಭಾಗಳಲ್ಲಿ ಬಂದಿರುವ ನವೀನ ಪದಗಳನ್ನು ಮಕ್ಕಳು ಗುರುತಿಸಿ ಬರೆಯಲಿ. ಅರ್ಥಕೋಶದ ಸಹಾಯದಿಂದ ಅವುಗಳ ಅರ್ಥಗಳನ್ನು ಕಂಡುಕೊಂಡು ವೈಯಕ್ತಿಕವಾಗಿ ಬರೆಯಲಿ.

### ❑ ಉತ್ತರಿಸುವ

ಪಾಠಪುಸ್ತಕದಲ್ಲಿ ಕೊಡಲಾದ ಪ್ರಶ್ನೆಗಳಿಗೆ ಉತ್ತರವನ್ನು ಯೋಗ್ಯ ರೀತಿಯಲ್ಲಿ ಕಂಡುಕೊಳ್ಳಲಿ. ಅಭ್ಯಾಸ ಪುಸ್ತಕದಲ್ಲಿ ಉತ್ತರವನ್ನು ಬರೆಯಲಿ. ಅಧ್ಯಾಪಕರು ಮೌಲ್ಯ ನಿರ್ಣಯ ಮಾಡುವುದು.

### ❑ ಬದಲಾಯಿಸಿ ಬರೆಯುವ

ಮಾದರಿಯಲ್ಲಿ ಕೊಟ್ಟಿರುವ ವಾಕ್ಯದಲ್ಲಿ ಉಂಟಾದ ಬದಲಾವಣೆಯನ್ನು ಚರ್ಚೆಯ ಮೂಲಕ ತಿಳಿಯಲಿ.

ಕೊಟ್ಟಿರುವ ವಾಕ್ಯವನ್ನು ಮಾದರಿಯಂತೆ ಬದಲಾಯಿಸಲಿ. ಇದೇ ರೀತಿಯ ಇತರ ಉದಾಹರಣೆಗಳನ್ನು ನೀಡಿ ಬದಲಾವಣೆ ಉಂಟಾದ ರೀತಿಯು ಮಕ್ಕಳಿಗೆ ಮನವರಿಕೆಯಾಗುವಂತೆ ಮಾಡುವುದು.

ಪಾಠಭಾಗದ ಚಟುವಟಿಕೆಯನ್ನು ವೈಯುಕ್ತಿಕವಾಗಿ ಮಾಡಲಿ. ಕೆಲವರಿಂದ ಮಂಡನೆ. ಅಧ್ಯಾಪಕರು ಕರಿಹಲಗೆಯಲ್ಲಿ ಕ್ರೋಢೀಕರಿಸುವುದು. ಮಕ್ಕಳಿಗೆ ಉತ್ತಮಪಡಿಸಲು ಅವಕಾಶವನ್ನು ನೀಡುವುದು. ಅಧ್ಯಾಪಕರು ಮೌಲ್ಯನಿರ್ಣಯ ಮಾಡುವುದು.

- ಶರಣ್ಯ ಜಾಗ್ರತೆಯಾಗಿ ನಡೆದಳು.
- ಜನರು ಇಲ್ಲೇ ರಸ್ತೆಯನ್ನು ದಾಟಿದರು.
- ನಾನು ಎಲ್ಲವನ್ನೂ ತಿಳಿಸಿದೆನು.

### ❑ ಅಭಿಪ್ರಾಯ ಬರೆಯುವ

ಮಕ್ಕಳಿಗೆ ತಮ್ಮ ಅಭಿಪ್ರಾಯಗಳನ್ನು ಸ್ವತಂತ್ರವಾಗಿ ಪ್ರಕಟಪಡಿಸುವ ಸಾಮರ್ಥ್ಯ ಬೆಳೆಸಲು ಈ ಚಟುವಟಿಕೆಯನ್ನು ನೀಡಲಾಗಿದೆ. ಚಿತ್ರವನ್ನು ಗಮನಿಸಲು ಹೇಳುವುದು. ಚಿತ್ರದಲ್ಲಿ ಕಂಡುಕೊಂಡ ವಿಚಾರಗಳ ಕುರಿತು ಮಕ್ಕಳ ಅಭಿಪ್ರಾಯವನ್ನು ಹೇಳಿಸುವುದು. ಮಕ್ಕಳ ಅಭಿಪ್ರಾಯಗಳ ಆಧಾರದಲ್ಲಿ ಚರ್ಚೆ ನಡೆಸುವುದು. ಮಕ್ಕಳು ಅವರ ಅಭಿಪ್ರಾಯ ಬರೆಯಲಿ. ಕೆಲವರಿಂದ ಮಂಡನೆ. ಅಧ್ಯಾಪಕರು ಮೌಲ್ಯನಿರ್ಣಯ ಮಾಡುವುದು.

### ❑ ಚರ್ಚಿಸುವ

ಚಿತ್ರ/ವೀಡಿಯೋ ಮಕ್ಕಳಿಗೆ ವೀಕ್ಷಿಸಲು ಅವಕಾಶ ನೀಡುವುದು. ರಸ್ತೆ ನಿಯಮಗಳ ಉಲ್ಲಂಘನೆಯಿಂದ ಉಂಟಾಗುವ ವಿವಿಧ ಅಪಘಾತಗಳ ಕುರಿತು ಚರ್ಚೆ ನಡೆಸುವುದು. ರಸ್ತೆ ನಿಯಮವನ್ನು ಪಾಲಿಸಬೇಕಾದ ಅಗತ್ಯವನ್ನು ತಿಳಿಯುವುದು. ವಿದ್ಯಾರ್ಥಿಗಳು ಅಭಿಪ್ರಾಯ ಹೇಳುವುದು. ಅಧ್ಯಾಪಕರು ಕ್ರೋಢೀಕರಿಸುವುದು.

### ❑ ಪದಸಂಕೋಲೆ ರಚಿಸುವ

ಮಕ್ಕಳಲ್ಲಿ ಪದ ಸಂಪತ್ತನ್ನು ಹೆಚ್ಚಿಸಲು ಇರುವ ಚಟುವಟಿಕೆ. ಪದ ಸಂಕೋಲೆ ರಚಿಸುವ ರೀತಿಯನ್ನು ಚರ್ಚೆಯ ಮೂಲಕ ತಿಳಿಯುವುದು. ಮೊದಲ ಪದವನ್ನು ಪಾಠಭಾಗದಿಂದ ಆಯ್ಕೆ ಮಾಡಿ ಪದಸಂಕೋಲೆ ರಚಿಸಲು ಮಕ್ಕಳಿಗೆ ಹೇಳುವುದು. ಮಕ್ಕಳು ಪದಸಂಕೋಲೆ ರಚಿಸಲಿ. ಪರಸ್ಪರ ಮೌಲ್ಯನಿರ್ಣಯ ಮಾಡಲಿ ಉತ್ತಮಪಡಿಸಲಿ.

ಅಧ್ಯಾಪಕರು ಮೌಲ್ಯನಿರ್ಣಯ ಮಾಡುವುದು.

### ❑ ಸೂಚನಾ ಫಲಕವನ್ನು ತಯಾರಿಸುವ

ವಿಚಾರಗಳನ್ನು ಸಂಕ್ಷಿಪ್ತವಾಗಿ, ಸ್ಪಷ್ಟವಾಗಿ ಹಾಗೂ ಪರಿಪೂರ್ಣವಾಗಿ ಬರೆಯುವ ಸಾಮರ್ಥ್ಯವನ್ನು ಬೆಳೆಸಲು ಈ ಚಟುವಟಿಕೆಯನ್ನು ನೀಡಲಾಗಿದೆ. ರಸ್ತೆ ನಿಯಮಗಳ ಕುರಿತಾಗಿ ಚರ್ಚಿಸುವುದು. ಚರ್ಚೆಯ ಮೂಲಕ ಸೂಚನಾ ಫಲಕದ ವಿಶೇಷತೆಯನ್ನು ತಿಳಿಯುವುದು. ಗುಂಪಿನಲ್ಲಿ ಸೂಚನಾ ಫಲಕವನ್ನು ತಯಾರಿಸಲಿ. ತರಗತಿಯಲ್ಲಿ ಮಂಡಿಸಲಿ. ಅಧ್ಯಾಪಕರ ಸಲಹೆ, ಸೂಚನೆಗಳಂತೆ ಸೂಚನಾ ಫಲಕವನ್ನು ಉತ್ತಮ ಪಡಿಸಲು ಅವಕಾಶ ನೀಡುವುದು. ಶಾಲೆಯ ಪರಿಸರದಲ್ಲಿ ಸೂಚನಾ ಫಲಕ ಪ್ರದರ್ಶಿಸುವುದು.

- ಅಗಲ ಕಿರಿದಾದ ರಸ್ತೆ
- ಬಲಕ್ಕೆ ತಿರುಗಿರಿ
- ಮುಂದೆ ತಿರುವು ಇದೆ
- ಶಾಲಾವಠಾರ, ನಿಧಾನವಾಗಿ ಚಲಿಸಿರಿ

### ಮೌಲ್ಯನಿರ್ಣಯ ಚಟುವಟಿಕೆಗಳು

1. ಸೂಚನೆಯ ಆಧಾರದಲ್ಲಿ ಕಥೆಯನ್ನು ಬರೆಯಿರಿ. ಯೋಗ್ಯವಾದ ಶೀರ್ಷಿಕೆಯನ್ನು ನೀಡಿರಿ. ಒಂದು ಊರು – ಇಬ್ಬರು ಗೆಳೆಯರು – ಕಾಡಿನ ದಾರಿಯಲ್ಲಿ ಸಂಚರಿಸು – ಕರಡಿ ಬಂತು – ಹೆದರು – ಒಬ್ಬ ಮರ ಏರಿದ – ಸತ್ತಂತೆ ಮಲಗು – ಕರಡಿ ಮೂಸಿ ನೋಡಿ ಬಿಟ್ಟು ಹೋಗು – ಮರದಿಂದ ಕೆಳಕ್ಕೆ ಇಳಿ – ಕಿವಿಯಲ್ಲಿ ಕರಡಿ ಏನು ಹೇಳಿತು? – ಗೆಳೆಯನಲ್ಲಿ ಕೇಳು – ಆಪತ್ಕಾಲದಲ್ಲಿ ಸಹಾಯ ಮಾಡುವವನೇ ನಿಜವಾದ ಗೆಳೆಯ.

2. ವಿರೋದಾರ್ಥ ಪದಗಳನ್ನು ಬರೆಯಿರಿ.
   1) ಅರ್ಥ
   2) ಸಂತೋಷ
   3) ಕಷ್ಟ
   4) ಹಿಗ್ಗು

3. ಶಾಲೆಯಲ್ಲಿ ನಡೆದ ಯಾವುದಾದರೂ ದಿನಾಚರಣೆಯ ಕುರಿತು ಪತ್ರಿಕಾವರದಿಯನ್ನು ತಯಾರಿಸಿರಿ.

* * *

# 8. ಮಮತೆಯ ಮಡಿಲು

"ಸ್ತ್ರೀ"ಎಂದರೆ ಪ್ರೀತಿ, ಸ್ನೇಹ, ದಯೆ, ಕರುಣೆ, ಕ್ಷಮೆ, ತಾಳ್ಮೆ ಮೊದಲಾದ ಗುಣಗಳ ಸಾಕಾರ ರೂಪ. ಕುಟುಂಬದ ಬೆಳವಣಿಗೆಯಿಂದ ತೊಡಗಿ ದೇಶದ ಬೆಳವಣಿಗೆಯ ಪ್ರತಿಯೊಂದು ಹಂತದಲ್ಲಿಯೂ ಅವಳ ಕೊಡುಗೆ ಅಪಾರ. ಯಾವುದೇ ವ್ಯಕ್ತಿಯ ಯಶಸ್ಸಿನ ಹಿಂದೆ ಮಹಿಳೆಯ ಪಾತ್ರ ಇದ್ದೇ ಇರುತ್ತದೆ. 'ಸ್ತ್ರೀ'ಯು 'ತಾಯಿ'ಯಾಗಿ ತನ್ನ ಕರ್ತವ್ಯಗಳನ್ನು ಪಾಲಿಸುವುದು ಮಾತ್ರವಲ್ಲದೆ 'ಸ್ನೇಹಿತೆ'ಯಾಗಿ ಸೂಕ್ತ ಸಲಹೆ ಸೂಚನೆಗಳನ್ನು ನೀಡುತ್ತಾಳೆ. ಮಕ್ಕಳು ತಪ್ಪು ಮಾಡಿದಾಗ ತಿದ್ದಿ ಬುದ್ಧಿ ಹೇಳುವ 'ಗುರು'ವಾಗುತ್ತಾಳೆ. ಕರ್ತವ್ಯ ಪಾಲನೆಯ ಜೊತೆಯಲ್ಲಿ ಸಾಧನೆಯ ಮೆಟ್ಟಲುಗಳನ್ನು ಏರುತ್ತಿರುವ 'ಸಬಲೆ'ಯರ ಬಗ್ಗೆ ತಿಳಿಸುವುದು ಈ ಘಟಕದ ಉದ್ದೇಶ.

'ತಾಯಿ'ಎಂಬ ಪದ್ಯಭಾಗದಲ್ಲಿ ಮಗುವಿನ ಪಾಲನೆ ಪೋಷಣೆಯೊಂದಿಗೆ ತಾಯಿ ತನ್ನ ಮಗುವಿನ ಪಾಲಿಗೆ ಯಾವ ರೀತಿ ದಾರಿದೀಪವಾಗುತ್ತಾಳೆ ಎಂಬುದನ್ನು ತಿಳಿಸಲಾಗಿದೆ. ತಾಯಿಯ ಮಮತೆ, ತ್ಯಾಗಗಳನ್ನು ಮಕ್ಕಳಿಗೆ ತಿಳಿಯಪಡಿಸಿ ಮಾತೃಭಕ್ತಿಯನ್ನು ಹೆಚ್ಚಿಸುವುದು ಈ ಪಾಠದ ಉದ್ದೇಶ.

"ಮಹಾನ್ ಚೇತನ" ಎಂಬ ಪಾಠಭಾಗದಲ್ಲಿ ವಿಕಲಚೇತನ ಮಹಿಳೆಯೊಬ್ಬಳು ಮಾಡಿದ ಸಾಧನೆಗಳು ಹಾಗೂ ಅವಳ ಸಾಧನೆಯ ಹಿಂದಿರುವ ಅಧ್ಯಾಪಿಕೆಯ ಪ್ರಯತ್ನಗಳನ್ನು ತಿಳಿಸಲಾಗಿದೆ. ಏಕಾಗ್ರತೆಯಿಂದ ಕೆಲಸ ಮಾಡಿದರೆ ಏನನ್ನೂ ಸಾಧಿಸಬಹುದು. ಯಾವ ವೈಕಲ್ಯವೂ ಸಾಧನೆಗೆ ಅಡ್ಡಿಯಲ್ಲ ಎಂಬುದನ್ನು ತಿಳಿಯಪಡಿಸಿ ಮಕ್ಕಳು ತಮ್ಮ ಕೆಲಸಕಾರ್ಯಗಳಲ್ಲಿ ಶ್ರದ್ಧೆಯಿಂದ ತೊಡಗುವಂತೆ ಪ್ರೇರೇಪಿಸಬೇಕು.

ದಯೆ, ಕರುಣೆ, ಪ್ರೀತಿ, ವಿಶ್ವಾಸ ಎಂಬೀ ಗುಣಗಳು ಕೇವಲ ಮನುಷ್ಯರಲ್ಲಿ ಮಾತ್ರವಲ್ಲ, ಪ್ರಾಣಿಗಳಲ್ಲೂ ಇರುತ್ತವೆ. ಕ್ರೂರ ಪ್ರಾಣಿಗಳು ಸಹ ಕೆಲವೊಂದು ಸಂದರ್ಭಗಳಲ್ಲಿ ಅಂಥ ಗುಣಗಳನ್ನು ತೋರ್ಪಡಿಸುತ್ತವೆ. ಯಾವ ರೀತಿ ಪ್ರಾಣಿಗಳು, ಪ್ರೀತಿ, ಸ್ನೇಹ, ಕರುಣೆ, ದಯೆಗಳನ್ನು ಪ್ರದರ್ಶಿಸುತ್ತವೆ ಎಂಬುದನ್ನು "ಚಂಪಕಾರಣ್ಯದಲ್ಲಿ" ಎಂಬ ಕಥೆಯು ತಿಳಿಸುತ್ತದೆ. ಪ್ರೀತಿ, ಸ್ನೇಹ, ದಯೆ, ಪರಸ್ಪರ ಸಹಕಾರ ಮೊದಲಾದ ಮನೋಭಾವಗಳನ್ನು ಬೆಳೆಸುವುದು ಈ ಪಾಠದ ಉದ್ದೇಶ.

ಪಾಠದ ಸಂದರ್ಭದಲ್ಲಿ I.C.T. ಯನ್ನು ತರಗತಿಕೋಣೆಯಲ್ಲಿ ಯೋಗ್ಯವಾದ ರೀತಿಯಲ್ಲಿ ಬಳಸಬೇಕು.

**ಕಲಿಕಾ ಸಾಧನೆಗಳು**

- ಪದ ಪ್ರಯೋಗಗಳು, ಶೈಲಿಗಳು, ಆಲಿಸಿದ ನೂತನ ಪದಗಳು ಮೊದಲಾದವುಗಳನ್ನು ಸಂದರ್ಭಕ್ಕನು ಗುಣವಾಗಿ ಮಾತುಗಾರಿಕೆಯಲ್ಲಿ ಬಳಸುವುದು.
- ಕವಿತೆಗಳನ್ನು ಆಲಿಸಿ, ಆಸ್ವಾದಿಸಿ ಅವುಗಳ ಆಶಯವನ್ನು ಅರ್ಥೈಸಿಕೊಂಡು ರಾಗ, ತಾಳ, ಭಾವಗಳಿಂದ ಹಾಡುವುದು.
- ಸಮಾನ ಪದಗಳು ಮತ್ತು ಸರ್ವನಾಮಗಳನ್ನು ಉಪಯೋಗಿಸಿಕೊಂಡು ಸೃಜನಾತ್ಮಕ ರಚನೆಗಳಾದ ಲಘುಟಿಪ್ಪಣಿಗಳು, ಸರಳಕಥೆಗಳು ಮೊದಲಾದವು ಗಳನ್ನು ರಚಿಸುವುದು.
- ಸೃಜನಾತ್ಮಕ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡು ತನ್ನ ರಚನೆಗಳನ್ನು ತರಗತಿಯ ಸಂಚಿಕೆಗಳು ಹಾಗೂ ಹಸ್ತಪತ್ರಿಕೆಗಳಿಗೆ ನೀಡುವುದು.
- ತನ್ನ ಆಶಯುಗಳನ್ನು ತಪ್ಪಿಲ್ಲದೆ ಸೂಕ್ತ ವ್ಯವಹಾರರೂಪದಲ್ಲಿ (ಕಥೆ, ಕವಿತೆ ಇತ್ಯಾದಿ) ಬರೆಯುವುದು.
- ತನ್ನ ಇಷ್ಟ, ಆಸಕ್ತಿ ಹಾಗೂ ಆದ್ಯತೆಯನ್ನು ಪರಿಗಣಿಸಿಕೊಂಡು ಪುಸ್ತಕಗಳು ಮತ್ತು ಇತರ ಓದುವ ಸಾಮಗ್ರಿಗಳನ್ನು ಓದಿ ಆಶಯಗಳನ್ನು ವಿಭಿನ್ನ ರೀತಿಯಲ್ಲಿ ಇತರರೊಂದಿಗೆ ಹಂಚಿಕೊಳ್ಳುವುದು.
- ಚಿತ್ರಗಳು ಹಾಗೂ ದೃಶ್ಯಗಳನ್ನು ನೋಡಿ, ಅವುಗಳಿಗೆ ಸೂಕ್ತವಾದ ಶೀರ್ಷಿಕೆಗಳನ್ನು ನೀಡಿ, ಕಾರಣಗಳನ್ನು ವಿವರಿಸುವುದು, ಅಡಿಟಿಪ್ಪಣಿಗಳನ್ನು ಸೂಚಿಸುವುದು.
- ರಚನೆಗಳಲ್ಲಿ ಬಳಸುವ ಲೇಖನ ಚಿಹ್ನೆಗಳನ್ನು (ಪೂರ್ಣವಿರಾಮ, ಅರ್ಧವಿರಾಮ, ಅಲ್ಪವಿರಾಮ, ಪ್ರಶ್ನಾರ್ಥಕ, ಭಾವಸೂಚಕ, ಉದ್ಧರಣ) ತಿಳಿದುಕೊಂಡು ತನ್ನ ರಚನೆಗಳಲ್ಲಿ ಬಳಸಿಕೊಳ್ಳುವುದು.
- ನಿರ್ದಿಷ್ಟ ಭಾಷಾ ವ್ಯವಹಾರ ರೂಪಗಳನ್ನು, ಶ್ರೋತೃಗಳಿಗೆ ಆಶಯಸ್ಪಷ್ಟವಾಗುವ ರೀತಿಯಲ್ಲಿ, ಉಚ್ಚಾರ ಸ್ಪಷ್ಟತೆಯಿಂದ ಸರಾಗವಾಗಿ ಓದುವುದು.

# ಯೂನಿಟ್ ಗ್ರಿಡ್ : 8. ಮಮತೆಯ ಮಡಿಲು

| ಆಶಯಗಳು | ಪ್ರಕ್ರಿಯೆಗಳು | ಕಲಿಕಾ ಸಾಧನೆಗಳು |
|---|---|---|
| **1. ತಾಯಿ** | | **ಸಮಯ : 6 ಗಂಟೆಗಳು** |
| • ತಾಯಿಯು ತನ್ನ ಮಗುವಿನ ಏಳಿಗೆಗಾಗಿ ಹಲವಾರು ತ್ಯಾಗಗಳನ್ನು ಮಾಡುತ್ತಾಳೆ.<br>• ಮಕ್ಕಳನ್ನು ಎಳವೆಯಿಂದಲೇ ತಿದ್ದಿ ಬುದ್ಧಿ ಹೇಳುವ ತಾಯಿಯೇ ಮಗುವಿನ ಪಾಲಿಗೆ ಮೊದಲ ಗುರು.<br>• ರಾಗ, ತಾಳಗಳೊಂದಿಗೆ ಭಾವಪೂರ್ಣವಾಗಿ ಮೂಡಿಸುವಾಗ ಕವಿತೆಯು ಆಸ್ವಾದಕರವೆನಿಸುವುದು.<br>• ಆಶಯ ಸ್ಪಷ್ಟತೆ, ಪದಗಳ ಪ್ರಯೋಗ ಮೊದಲಾದ ಕಾರಣಗಳಿಂದ ಹಾಡುಗಳ ಕೆಲವು ಸಾಲುಗಳು ಹೆಚ್ಚು ಇಷ್ಟವೆನಿಸುತ್ತದೆ. | • ಪದ್ಯದಲ್ಲಿ ಬಂದಿರುವ ನವೀನ ಪದಗಳ ಅರ್ಥಗಳನ್ನು ಅರ್ಥಕೋಶದ ಸಹಾಯದಿಂದ ಕಂಡುಹಿಡಿದು ಬರೆಯುವುದು.<br>• ಪದ್ಯವನ್ನು ರಾಗ, ತಾಳ, ಭಾವಗಳೊಂದಿಗೆ ವೈಯಕ್ತಿಕವಾಗಿಯೂ ಗುಂಪಾಗಿಯೂ ಹಾಡುವುದು.<br>• ಪದ್ಯದಲ್ಲಿ ಬರುವ ಪ್ರಾಸಪದಗಳನ್ನು ಪಟ್ಟಿ ಮಾಡಿ ಬರೆಯುವುದು.<br>• ಪದ್ಯದ ಸಾಲುಗಳಲ್ಲಿ ಹೆಚ್ಚು ಇಷ್ಟವಾದ ಸಾಲು ಯಾವುದು ಮತ್ತು ಯಾಕೆ ಎಂದು ಕಾರ್ಯಕಾರಣ ಸಂಬಂಧಗಳೊಂದಿಗೆ ಸಮರ್ಥಿಸಿ ಬರೆಯುವುದು. | • ಕವಿತೆಗಳನ್ನು ಆಲಿಸಿ, ಆಸ್ವಾದಿಸಿ ಅವುಗಳ ಆಶಯವನ್ನು ಅರ್ಥೈಸಿಕೊಂಡು ರಾಗ, ತಾಳ, ಭಾವಗಳಿಂದ ಹಾಡುವುದು. |
| • ಅಕ್ಷರ, ಪದ, ಕಾಗುಣಿತ ಹಾಗೂ ವಾಕ್ಯಗಳನ್ನು ಉಪಯೋಗಿಸಿ ಭಾಷಾ ಆಟಗಳನ್ನು ಆಡಬಹುದು. | • ಕೋಣೆಯಲ್ಲಿ ಕೊಟ್ಟಿರುವ ಅಕ್ಷರಗಳನ್ನು ಉಪಯೋಗಿಸಿ ಪದ್ಯದಲ್ಲಿ ಇರುವ ಪದಗಳನ್ನು ಗುರುತಿಸುವುದು ಹಾಗೂ ಆ ಪದಗಳಿಂದ ವಾಕ್ಯರಚನೆ ಮಾಡುವುದು. | • ತನ್ನ ಸಹಪಾಠಿಗಳ ರಚನೆಗಳನ್ನು ಮೌಲ್ಯನಿರ್ಣಯ ಮಾಡಿ ಇತರರ ರಚನೆಗಳಲ್ಲಿನ ಪ್ರಯೋಗಗಳು, ಶೈಲಿಗಳನ್ನು ವಿಶ್ಲೇಷಿಸಿ ತನ್ನ ರಚನೆಯನ್ನು ಉತ್ತಮಪಡಿಸುವುದು. |

| ಆಶಯಗಳು | ಪ್ರಕ್ರಿಯೆಗಳು | ಕಲಿಕಾ ಸಾಧನೆಗಳು |
|---|---|---|
| • ಅಡಿಟಿಪ್ಪಣಿಯನ್ನು ಚಿತ್ರದ ಆಶಯ ಸಂದರ್ಭಗಳನ್ನೊಳಗೊಂಡು ಸೃಜನಾತ್ಮಕವಾಗಿ ಬರೆಯಬೇಕು. | • ಪಾಠಪುಸ್ತಕದಲ್ಲಿರುವ ಚಿತ್ರವನ್ನು ನೋಡಿ ಸೂಕ್ತವಾದ ಅಡಿಟಿಪ್ಪಣಿಯನ್ನು ಬರೆಯುವುದು. | • ಚಿತ್ರಗಳು ಹಾಗೂ ದೃಶ್ಯಗಳನ್ನು ನೋಡಿ ಅವುಗಳಿಗೆ ಸೂಕ್ತವಾದ ಶೀರ್ಷಿಕೆಗಳನ್ನು ನೀಡಿ ಕಾರಣಗಳನ್ನು ವಿವರಿಸುವುದು, ಅಡಿಟಿಪ್ಪಣಿಗಳನ್ನು ಸೂಚಿಸುವುದು.<br>• ಪ್ರತಿಯೊಂದು ಪದಕ್ಕೂ ಒಂದಕ್ಕಿಂತ ಹೆಚ್ಚು ಸಮಾನಾರ್ಥ ಪದಗಳಿವೆ. |
| **2. ಮಹಾನ್ ಚೇತನ** | | **ಸಮಯ : 6 ಗಂಟೆಗಳು** |
| • ವಿಕಲ ಚೇತನರಿಗೂ ಸಮಾಜದಲ್ಲಿ ಸ್ಥಾನಮಾನಗಳಿವೆ. | • ಪಾಠ ಭಾಗದಲ್ಲಿರುವ ಪದಗಳ ಅರ್ಥ ಕಂಡುಹಿಡಿಯುವುದು.<br>• ಪಾಠ ಭಾಗದ ಪ್ರಶ್ನೆಗಳಿಗೆ ಉತ್ತರಿಸುವುದು. | • ನಿರ್ದಿಷ್ಟ ಭಾಷಾ ವ್ಯವಹಾರ ರೂಪವನ್ನು ಶ್ರೋತೃಗಳಿಗೆ ಆಶಯ ಸ್ಪಷ್ಟವಾಗುವ ರೀತಿಯಲ್ಲಿ ಉಚ್ಚಾರ ಸ್ಪಷ್ಟತೆಯಿಂದ ಸರಾಗವಾಗಿ ಓದುವುದು. |
| • ವಾಕ್ಯರಚನೆಯಲ್ಲಿ ಪದಗಳ ಬಳಕೆ ತಮ್ಮದೇ ಆದ ಸ್ಥಾನ ಪಡೆದಿದೆ.<br>• ಭಾಷಾ ಆಟಗಳು ಸಂತೋಷವನ್ನು ಮತ್ತು ಪದ ಸಂಪತ್ತನ್ನು ಬೆಳೆಸುತ್ತವೆ. | • ಪಾಠ ಭಾಗದಲ್ಲಿ ನೀಡಿದ ಪದಗಳನ್ನು ಕ್ರಮೀಕರಿಸಿ ಸರಿಯಾದ ವಾಕ್ಯ ಬರೆಯುವುದು.<br>• ಪಾಠಭಾಗದಲ್ಲಿ ನೀಡಲಾದ ಪದ ಸಂಕೋಲೆಯನ್ನು ಬೆಳೆಸುವುದು ಮತ್ತು ಅಕ್ಷರ ಸೇರಿಸಿ ಪದ ರಚಿಸುವುದು. | • ರಚನೆಗಳಲ್ಲಿ ಬಳಸುವ ಲೇಖನ ಚಿಹ್ನೆಗಳನ್ನು (ಪೂರ್ಣ ವಿರಾಮ, ಪ್ರಶ್ನಾರ್ಥಕ, ಭಾವ ಸೂಚಕ, ಉದ್ಧರಣ) ತಿಳಿದುಕೊಂಡು ತನ್ನ ರಚನೆಯಲ್ಲಿ ಬಳಸಿಕೊಳ್ಳುವುದು. |

| ಆಶಯಗಳು | ಪ್ರಕ್ರಿಯೆಗಳು | ಕಲಿಕಾ ಸಾಧನೆಗಳು |
|---|---|---|
| • ಸವಾಲುಗಳನ್ನೆದುರಿಸುವವರಿಗೆ ಸಹಾಯ ಮಾಡುವುದು ಕರ್ತವ್ಯವೆಂದು ತಿಳಿಯುವುದು.<br>• ಸಾಧನೆಯಿಂದ ಸವಾಲುಗಳನ್ನು ಮೆಟ್ಟಿನಿಲ್ಲಬಹುದು. | • ಪಾಠ ಭಾಗದಲ್ಲಿ ನೀಡಲಾದ ಚರ್ಚೆಯನ್ನು ತರಗತಿಯಲ್ಲಿ ನಡೆಸುವುದು.<br>• ಮಹಾನ್ ವ್ಯಕ್ತಿಗಳ ಜೀವನ ಕಥೆಗಳನ್ನು ಓದುವುದು.<br>• ಸವಾಲುಗಳನ್ನೆದುರಿಸಿ ಯಶಸ್ಸು ಪಡೆದವರ ಜೀವನಕ್ಕೆ ಸಂಬಂಧಿಸಿದ ಕಿರುಚಿತ್ರ ವೀಕ್ಷಿಸುವುದು. | • ತನ್ನ ಇಷ್ಟ, ಆಸಕ್ತಿ ಹಾಗೂ ಆದ್ಯತೆಯನ್ನು ಪರಿಗಣಿಸಿಕೊಂಡು ಪುಸ್ತಕಗಳು ಮತ್ತು ಇತರ ಓದುವ ಸಾಮಾಗ್ರಿಗಳನ್ನು ಓದಿ ಆಶಯಗಳನ್ನು ವಿಭಿನ್ನ ರೀತಿಯಲ್ಲಿ ಇತರರೊಂದಿಗೆ ಹಂಚಿಕೊಳ್ಳುವುದು. |
| • ಭಾಷಾ ಆಟಗಳಿಂದ ವಾಕ್ಯರಚನಾ ಕೌಶಲವನ್ನು ಹೆಚ್ಚಿಸಬಹುದು. | • ಪಾಠಪುಸ್ತಕದಲ್ಲಿರುವ ಹೊಂದಿಸಿ ಬರೆಯುವ ಚಟುವಟಿಕೆಯಲ್ಲಿ ನೀಡಲಾದ ಪದಗಳನ್ನು ಹೊಂದಿಸಿ ವಾಕ್ಯ ರಚಿಸುವುದು. | |
| **3. ಚಂಪಾರಣ್ಯದಲ್ಲಿ** | | **ಸಮಯ : 6 ಗಂಟೆಗಳು** |
| • ಕಥೆಗಳನ್ನು ಕೇಳುವುದು, ಹೇಳುವುದು ಮತ್ತು ಓದುವುದರಿಂದ ಭಾಷಾ ಸಾಮರ್ಥ್ಯ ಬೆಳೆಯುವುದು.<br>• ಮಾತೃ ವಾತ್ಸಲ್ಯದ ಕುರಿತು ತಿಳಿಯುವುದು.<br>• ಪದಗಳ ಅರ್ಥವನ್ನು ತಿಳಿದು ಕಥೆ ಓದಿದರೆ ಆಶಯವು ಹೆಚ್ಚು ಸ್ಪಷ್ಟವಾಗುವುದು. | • ಪಾಠಭಾಗದಲ್ಲಿ ನೀಡಲಾದ ಕಥೆಯನ್ನು ಓದುವುದು.<br>• ಪಾಠ ಭಾಗದಲ್ಲಿ ನೀಡಲಾದ ನವೀನ ಪದಗಳ ಅರ್ಥವನ್ನು ಅರ್ಥಕೋಶದ ಸಹಾಯದಿಂದ ಕಂಡುಹಿಡಿದು ಬರೆಯುವುದು.<br>• ಪಾಠ ಭಾಗದಲ್ಲಿ ನೀಡಲಾದ ಪ್ರಶ್ನೆಗಳಿಗೆ ಉತ್ತರಿಸುವುದು. | • ನಿರ್ದಿಷ್ಟ ಭಾಷಾ ವ್ಯವಹಾರ ರೂಪಗಳನ್ನು ಶ್ರೋತೃಗಳಿಗೆ ಆಶಯ ಸ್ಪಷ್ಟವಾಗುವ ರೀತಿಯಲ್ಲಿ ಉಚ್ಛಾ ಸ್ಪಷ್ಟತೆಯಿಂದ ಸರಾಗವಾಗಿ ಓದುವುದು. |

| ಆಶಯಗಳು | ಪ್ರಕ್ರಿಯೆಗಳು | ಕಲಿಕಾ ಸಾಧನೆಗಳು |
|---|---|---|
| • ಕಥೆಗಳನ್ನು ಓದಿ ಅರ್ಥೈಸುವುದರಿಂದ ಉತ್ತಮ ಮನೋಭಾವ ಬೆಳಸಬಹುದು. | • ಕಥೆಯ ಸಂಭಾಷಣೆಯನ್ನು ಊಹಿಸಿ ಬರೆಯುವುದು.<br>• ಪಾಠಭಾಗದಲ್ಲಿ ಬರುವ, ಕಥಾಪಾತ್ರಗಳ ಮಾತುಗಳನ್ನು ಹೇಳಿದವರು ಯಾರು ಎಂದು ಹೇಳುವುದು ಬರೆಯುವುದು. | • ತನ್ನ ಇಷ್ಟ, ಆಸಕ್ತಿ ಹಾಗೂ ಆದ್ಯತೆಯನ್ನು ಪರಿಗಣಿಸಿಕೊಂಡು ಪುಸ್ತಕಗಳು ಮತ್ತು ಇತರ ಓದುವ ಸಾಮಾಗ್ರಿಗಳನ್ನು ಓದಿ ಆಶಯಗಳನ್ನು ವಿಭಿನ್ನ ರೀತಿಯಲ್ಲಿ ಇತರರೊಂದಿಗೆ ಹಂಚಿಕೊಳ್ಳುವುದು. |
| • ಒತ್ತಕ್ಷರವನ್ನು ಬಳಸುವಾಗ ಅರ್ಥ ವ್ಯತ್ಯಾಸವಾಗುತ್ತದೆ ಎಂದು ತಿಳಿಯುವುದು. | • ಪಾಠಭಾಗದಲ್ಲಿ ನೀಡಲಾದ ಪದಗಳಿಗೆ ಒತ್ತಕ್ಷರ ಸೇರಿಸಿ ಬರೆಯುವುದು. | • ರಚನೆಗಳಲ್ಲಿ ಬಳಸುವ ಲೇಖನ ಚಿಹ್ನೆಗಳನ್ನು ತಿಳಿದು ತನ್ನ ರಚನೆಗಳಲ್ಲಿ ಬಳಸಿಕೊಳ್ಳುವುದು. |
| • ಸಂಭಾಷಣೆ ಬರೆಯುವ ರೀತಿಯನ್ನು ತಿಳಿಯುವುದು.<br>• ಅರ್ಥವತ್ತಾದ ಸಂಭಾಷಣೆಗೆ ಯೋಗ್ಯವಾದ ಭಾಷೆಯನ್ನು ಬಳಸಬೇಕು ಎಂದು ತಿಳಿಯುವುದು. | • ನರಿ ಮತ್ತು ಸಿಂಹದ ಮರಿಗಳೊಳಗಿನ ಸಂಭಾಷಣೆಯನ್ನು ಬರೆಯುವುದು. | • ತನ್ನ ಆಶಯಗಳನ್ನು ತಪ್ಪಿಲ್ಲದೆ ಸೂಕ್ತ ವ್ಯವಹಾರ ರೂಪದಲ್ಲಿ ಬರೆಯುವುದು.<br>• ನವೀನ ಪದಗಳು ಮತ್ತು ಸರ್ವನಾಮಗಳನ್ನು ಉಪಯೋಗಿಸಿಕೊಂಡು ಸೃಜನಾತ್ಮಕ ರಚನೆಗಳಾದ ಲಘು ಟಿಪ್ಪಣಿಗಳು ಸರಳ ಕಥೆಗಳು ಮೊದಲಾದವುಗಳನ್ನು ರಚಿಸುವುದು. |

# ತಾಯಿ

ಮಕ್ಕಳಲ್ಲಿ ಕೆಲವು ಪ್ರಶ್ನೆಗಳನ್ನು ಕೇಳುವುದು.

- ನಿಮ್ಮ ಮನೆಯಲ್ಲಿ ಯಾರೆಲ್ಲಾ ಇದ್ದಾರೆ?
- ಇವರಲ್ಲಿ ನಿಮಗೆ ತುಂಬಾ ಇಷ್ಟ ಯಾರು? ಯಾಕೆ?
- ತಾಯಿ ನಿಮಗೆ ಇಷ್ಟವಾ? ಯಾಕೆ?

ಇತ್ಯಾದಿ ಪ್ರಶ್ನೆಗಳನ್ನು ಕೇಳಿ ಚರ್ಚಿಸುವುದು. ಪಾಠಪುಸ್ತಕದಲ್ಲಿರುವ ತಾಯಿಯ ಕುರಿತಾದ ಪದ್ಯವನ್ನು ಮಕ್ಕಳು ಓದಲಿ. ಇದಕ್ಕೆ ಹೊರತಾಗಿ ಇತರ ವಿಧಾನವನ್ನು ಅಧ್ಯಾಪಕರು ಉಪಯೋಗಿಸಬಹುದು. ಪದ್ಯವನ್ನು ಗುಂಪಿನಲ್ಲಿ ರಾಗ ಹಾಕಿ ಹಾಡಲಿ. ಉತ್ತಮವಾಗಿ ಹಾಡಿದ ಗುಂಪನ್ನು ಮಕ್ಕಳೇ ಮೌಲ್ಯನಿರ್ಣಯ ಮಾಡಿ ಕಂಡುಕೊಳ್ಳಲಿ.

ತಾಯಿ ಪದ್ಯದ ಧ್ವನಿಮುದ್ರಿಕೆಯನ್ನು ಆಲಿಸಲು ಅವಕಾಶ ನೀಡುವುದು.

### ❑ ಪದಗಳ ಅರ್ಥ ಕಂಡುಹಿಡಿಯುವ

ಪದ್ಯದ ಆಶಯವನ್ನು ತಿಳಿಯಲು ಪದ್ಯದಲ್ಲಿ ಬಂದಿರುವ ನವೀನ ಪದಗಳ ಅರ್ಥವನ್ನು ಅರ್ಥಕೋಶದ ಸಹಾಯದಿಂದ ಕಂಡು ಹಿಡಿದು ಮಕ್ಕಳು ವೈಯುಕ್ತಿಕವಾಗಿ ಬರೆಯಲಿ. ಅಧ್ಯಾಪಕರು ಮೌಲ್ಯನಿರ್ಣಯವನ್ನು ಮಾಡುವುದು.

### ❑ ಪ್ರಾಸಪದ ಬರೆಯುವ

ಪದ್ಯವನ್ನು ಓದಿ ಪದ್ಯದಲ್ಲಿರುವ ಪ್ರಾಸಪದಗಳನ್ನು ಕಂಡುಹಿಡಿದು ಅಭ್ಯಾಸ ಪುಸ್ತಕದಲ್ಲಿ ಬರೆದು ಮಂಡಿಸಲಿ. ಅಧ್ಯಾಪಕರು ಕರಿಹಲಗೆಯಲ್ಲಿ ಕ್ರೋಢೀಕರಿಸಿ ಬರೆಯುವುದು ಮಕ್ಕಳಿಗೆ ಉತ್ತಮಪಡಿಸಲು ಅವಕಾಶವನ್ನು ನೀಡುವುದು.

ಪ್ರಾಸ ಪದಗಳು :

| | | |
|---|---|---|
| ತಂದವಳು | – | ಹಾಡುವಳು |
| ಸುರಿಸುವಳು | – | ಕಲಿಸುವಳು |
| ಕಲಿಸಿ | – | ಬೆಳೆಸಿ |
| ಹೆಣೆದು | – | ಕುಣಿದು |
| ಬೀಳದೆ | – | ನೋಯದೆ |
| ಸ್ಪರ್ಷ | – | ಹರ್ಷ |
| ಬರಲಿ | – | ಇರಲಿ |
| ಮಮತೆ | – | ಕವಿತೆ |

### ❑ ಇಷ್ಟವಾದ ಸಾಲು ಬರೆಯುವ

ವಿದ್ಯಾರ್ಥಿಗಳು ಪದ್ಯವನ್ನು ವೈಯುಕ್ತಿಕವಾಗಿ ಆಶಯಗ್ರಹಣ ದೊಂದಿಗೆ ಓದಲಿ.

- ಇಷ್ಟವಾದ ಸಾಲುಗಳನ್ನು ಆರಿಸಿ, ಇಷ್ಟವಾಗಲಿರುವ ಕಾರಣಗಳನ್ನು ಬರೆಯಲಿ.
- ಅಧ್ಯಾಪಕರು ಮಕ್ಕಳು ಬರೆದುದನ್ನು ಮೌಲ್ಯನಿರ್ಣಯ ಮಾಡುವುದು.

### ವಾಕ್ಯ ರಚಿಸುವ

ಪದ್ಯದಲ್ಲಿ ನೀಡಿರುವ 'ವಾಕ್ಯ ರಚಿಸುವ' ಚಟುವಟಿಕೆಯಲ್ಲಿ ಎರಡು ಹಂತಗಳಿವೆ. ಪದ್ಯದಲ್ಲಿ ಬಂದ ಕೆಲವು ಪದಗಳ ಅಕ್ಷರಗಳನ್ನು ಕೋಣೆಯಿಂದ ಆರಿಸಿ ಪದಗಳನ್ನು ಬರೆಯಲಿ ಮತ್ತು ಈ ಪದಗಳನ್ನುಪಯೋಗಿಸಿ

ವಾಕ್ಯ ರಚನೆ ಮಾಡಲಿ. ಮಕ್ಕಳಲ್ಲಿ ವಾಕ್ಯ ರಚನೆಯ ಸಾಮರ್ಥ್ಯವನ್ನು ಬೆಳೆಸುವ ಉದ್ದೇಶದಿಂದ ಈ ಚಟುವಟಿಕೆ ನೀಡಲಾಗಿದೆ.

ಮಕ್ಕಳು ವೈಯುಕ್ತಿಕವಾಗಿ ಪಟ್ಟಿಯನ್ನು ನೋಡಿ ಪದಗಳನ್ನು ಬರೆಯಲಿ.

ನಗು, ತಾರೆ, ಹಾಡು, ಜಾರು, ತಂಪು, ಅಂದ, ನಲಿ, ಬೆಳಕು, ಕಥೆ, ತಾಯಿ.

ಬರೆದ ಪದಗಳನ್ನು ಉಪಯೋಗಿಸಿ ವಾಕ್ಯ ರಚಿಸಿ ತರಗತಿಯಲ್ಲಿ ಮಂಡಿಸಲಿ. ಅಧ್ಯಾಪಕರು ಮೌಲ್ಯನಿರ್ಣಯ ಮಾಡುವುದು.

| | |
|---|---|
| ತಾರೆ | – ಆಕಾಶದಲ್ಲಿ ತುಂಬಾ ತಾರೆಗಳಿವೆ |
| ಜಾರು | – ಮಕ್ಕಳಿಗೆ ಜಾರುಬಂಡಿಯಲ್ಲಿ ಜಾರಲು ತುಂಬಾ ಇಷ್ಟ |
| ತಂಪು | – ಚಳಿಗಾಲದಲ್ಲಿ ತುಂಬಾ ತಂಪು ಇರುತ್ತದೆ. |
| ........................................................ | |
| ........................................................ | |

- ಮಕ್ಕಳು ತಾವು ರಚಿಸಿದ ವಾಕ್ಯಗಳನ್ನು ಅಧ್ಯಾಪಕರ ಸಹಾಯದೊಂದಿಗೆ ಸರಿಪಡಿಸಲಿ.

### ಅಡಿ ಟಿಪ್ಪಣಿ ಬರೆಯುವ

ಚಿತ್ರವನ್ನು ವಿಶ್ಲೇಷಿಸಿ ವಿಶಾಲವಾದ ಆಶಯವನ್ನು ಚುಟುಕಾಗಿ ಬರೆಯುವ ಸಾಮರ್ಥ್ಯ ಬೆಳೆಸಲು ಅಡಿ ಟಿಪ್ಪಣಿ ಬರೆಯುವ ಚಟುವಟಿಕೆಯನ್ನು ನೀಡಲಾಗಿದೆ.

ಮಕ್ಕಳು ಚಿತ್ರವನ್ನು ಸೂಕ್ಷ್ಮವಾಗಿ ಗಮನಿಸಲಿ. ಚಿತ್ರದ ಆಶಯವು ತಿಳಿಯುವಂತೆ ಚರ್ಚೆಯನ್ನು ನಡೆಸುವುದು. ಆಶಯಗ್ರಹಣಕ್ಕೆ ಪೂರಕವಾದ ಪ್ರಶ್ನೆಗಳನ್ನು ಅಧ್ಯಾಪಕರು ಕೇಳುವುದು. ವಿದ್ಯಾರ್ಥಿಗಳು ವೈಯುಕ್ತಿಕವಾಗಿ ಅಡಿಟಿಪ್ಪಣಿ ಬರೆಯಲಿ. ತರಗತಿಯಲ್ಲಿ ಮಂಡಿಸಲಿ. ಅಧ್ಯಾಪಕರು ಬರೆದ ಅಡಿಟಿಪ್ಪಣಿಯನ್ನು ಪ್ರದರ್ಶಿಸುವುದು. ಮಕ್ಕಳಿಗೆ ಉತ್ತಮಪಡಿಸಲು ಅವಕಾಶವನ್ನು ನೀಡುವುದು.

- ಗಿಡವನ್ನು ನೆಡುವೆನು ನಾನು, ನೀರೆರೆದು ಪೋಷಿಸುವ ನಾವು
- ಗಿಡವ ನೆಟ್ಟು ಬೆಳೆಸುವ, ಪ್ರಕೃತಿಯನ್ನು ಉಳಿಸುವ
- ಗಿಡಗಳನ್ನು ಬೆಳೆಸುವ, ಪರಿಸರವ ಉಳಿಸುವ

## ಮಹಾನ್ ಚೇತನ

### ❑ ಪಾಠಭಾಗದೆಡೆಗೆ

ವಿಕಲಚೇತನರ ಸಾಧನೆಗಳನ್ನು ಬಿಂಬಿಸುವ ವೀಡಿಯೋ ದೃಶ್ಯ / ಚಿತ್ರ ಪ್ರದರ್ಶಿಸುವುದು. ವೀಕ್ಷಿಸಿದ ದೃಶ್ಯ ಚಿತ್ರದ ಬಗ್ಗೆ ಚರ್ಚಿಸುವುದು. ಇದರ ಆಧಾರದಲ್ಲಿ ಪಾಠವನ್ನು ಮಕ್ಕಳಿಗೆ ಓದಲು ನೀಡುವುದು. 'ಹೆಲೆನ್ ಕೆಲ್ಲರ್' ಳ ಚಿತ್ರ ಮಕ್ಕಳಿಗೆ ತೋರಿಸಿ ಇವರು ಯಾರು? ಇವರ ಸಾಧನೆ ಏನು ಎಂದು ಚರ್ಚಿಸುವುದು. ಪಾಠವನ್ನು ಮಕ್ಕಳು ಓದಲಿ. ಬಳಿಕ ಅಧ್ಯಾಪಕರು ಓದುವುದು.



***

## ❑ ಪದಗಳ ಅರ್ಥವನ್ನು ಕಂಡುಹಿಡಿಯುವ

ಪಾಠಭಾಗದಲ್ಲಿ ಬಂದಿರುವ ನವೀನ ಪದಗಳನ್ನು ಗುರುತಿಸಿ, ಪಟ್ಟಿಮಾಡಲಿ. ಅರ್ಥಕೋಶದ ಸಹಾಯದಿಂದ ಅರ್ಥವನ್ನು ಬರೆಯಲಿ. ಅಧ್ಯಾಪಕರು ಮೌಲ್ಯನಿರ್ಣಯ ಮಾಡುವುದು.

## ❑ ಉತ್ತರಿಸುವ

ಪಾಠಭಾಗದ ಆಶಯವನ್ನು ತಿಳಿಯಲು ಈ ಚಟುವಟಿಕೆಯನ್ನು ನೀಡಲಾಗಿದೆ. ಪಾಠಕ್ಕೆ ಸಂಬಂಧಿಸಿದ ಕೆಲವು ಪ್ರಶ್ನೆಗಳನ್ನು ಕೊಡಲಾಗಿದೆ. ಇವುಗಳಿಗೆ ವಿದ್ಯಾರ್ಥಿಗಳು ಉತ್ತರವನ್ನು ಬರೆಯಲಿ. ಬರೆದ ಉತ್ತರಗಳನ್ನು ವಿದ್ಯಾರ್ಥಿಗಳು ಮಂಡಿಸಲಿ. ಅಧ್ಯಾಪಕರು ಮೌಲ್ಯನಿರ್ಣಯ ಮಾಡುವುದು.

## ❑ ಕ್ರಮೀಕರಿಸಿ ಬರೆಯುವ

ಪಠ್ಯದಲ್ಲಿ ವಾಕ್ಯಗಳ ಪದಗಳನ್ನು ಕ್ರಮೀಕರಿಸಿ ಬರೆಯುವ ಚಟುವಟಿಕೆಯನ್ನು ನೀಡಲಾಗಿದೆ. ವ್ಯಾಕರಣದ ಭಾಗವಾಗಿರುವ ವಾಕ್ಯರಚನಾ ಕ್ರಮದ ಪ್ರಾಥಮಿಕ ಮಾಹಿತಿಯನ್ನು ವಿದ್ಯಾರ್ಥಿಗಳಿಗೆ ತಿಳಿಸುವುದು ಈ ಚಟುವಟಿಕೆಯ ಉದ್ದೇಶವಾಗಿದೆ.

ಪಠ್ಯದಲ್ಲಿ ಕ್ರಮ ತಪ್ಪಿಸಿ ನೀಡಿರುವ ವಾಕ್ಯದ ಪದಗಳನ್ನು ಮಕ್ಕಳು ಓದಲಿ. ಪಾಠಭಾಗದ ಸಹಾಯದಿಂದ ಪದಗಳನ್ನು ಕ್ರಮೀಕರಿಸಿ ವಾಕ್ಯ ಸರಿಪಡಿಸಲಿ. ತರಗತಿಯಲ್ಲಿ ಮಂಡಿಸಲಿ. ಅಧ್ಯಾಪಕರು ಮೌಲ್ಯನಿರ್ಣಯ ಮಾಡುವುದು.

1) 1968 ಜೂನ್ 1 ರಂದು ಹೆಲನ್ ಕೆಲ್ಲರ್ ನಮ್ಮಿಂದ ಮರೆಯಾದಳು.
2) ಹೆಲನ್ ಚಿಕ್ಕವಳಾಗಿರುವಾಗ ವಿಷಮ ಜ್ವರದಿಂದಾಗಿ ಕುರುಡಿ ಮತ್ತು ಕಿವುಡಿಯಾದಳು.
3) 1880 ಜೂನ್ 27 ರಂದು ಹೆಲನ್ ಜನಿಸಿದಳು.
4) 1904 ರಲ್ಲಿ ಹೆಲನ್ ಕಲಾ ವಿಭಾಗದಲ್ಲಿ ಪದವಿ ಪಡೆದಳು.
5) ಹೆಲನ್‌ಳ ಬದುಕಿನಲ್ಲಿ ಆಶಾಕಿರಣವಾಗಿ ಬಂದ ಶಿಕ್ಷಕಿ ಆನ್‌ಸುಲ್ಲಿವಾನ್ ಮ್ಯಾಸಿ.

## ❑ ಪದಸಂಕೋಲೆ ಮುಂದುವರಿಸುವ

'ಪದಸಂಕೋಲೆ' ಚಟುವಟಿಕೆಯ ಮೂಲಕ, ವಿದ್ಯಾರ್ಥಿಗಳ ಪದಸಂಪತ್ತನ್ನು ಹೆಚ್ಚಿಸುವ ಹಾಗೂ ಪದಗಳನ್ನು ಮರು ಬಳಕೆ ಮಾಡುವ ಸಾಮರ್ಥ್ಯವನ್ನು ಪಡೆಯಲು ಈ ಚಟುವಟಿಕೆಯನ್ನು ನೀಡಲಾಗಿದೆ. ಕೊಟ್ಟಿರುವ ಪದಗಳಿಂದ ಪದಸಂಕೋಲೆ ರಚಿಸಲು ಅಗತ್ಯವಾದ ಮಾಹಿತಿಯನ್ನು ಚರ್ಚಿಸಿ ತಿಳಿಯಲಿ.

ವಿದ್ಯಾರ್ಥಿಗಳು ಒಬ್ಬರ ಅನಂತರ ಒಬ್ಬರಂತೆ ಪದಗಳನ್ನು ಹೇಳಲಿ. ಅಧ್ಯಾಪಕರು ಅದನ್ನು ಕರಿಹಲಗೆಯಲ್ಲಿ ಬರೆಯುವುದು. ವಿದ್ಯಾರ್ಥಿಗಳು ಆ ಪದಗಳನ್ನು ಅಭ್ಯಾಸ ಪುಸ್ತಕದಲ್ಲಿ ಬರೆಯಲಿ.

- ನೋಡಬೇಕು – ಕತ್ತಲೆ –ಲೋಕ – ಕಿವುಡ – ಡಬ್ಬಿ
- ಭರವಸೆ – ಸಕ್ಕರೆ – ರವಿ – ವಿನಯ – ಯಮ – ಮನೆ
- ಹಗಲು – ಲಾಡು – ಡಮರು – ರಾಗಿ – ಗಿಡುಗ – ಗೆಳೆಯ.

ಇದೇ ರೀತಿಯಲ್ಲಿ ಮಕ್ಕಳು ಬೇರೊಂದು ಪದ ಸಂಕೋಲೆಯನ್ನು ರಚಿಸಲಿ.

### ❑ ಪದ ರಚಿಸುವ

ಪದಸಂಪತ್ತನ್ನು ಹೆಚ್ಚಿಸಲು ಹಾಗೂ ಒಂದೇ ರೀತಿಯ ಅಕ್ಷರಗಳಿಂದ ಕೊನೆಗೊಳ್ಳುವ ಪದಗಳನ್ನು ಪರಿಚಯಿಸಲು ಈ ಚಟುವಟಿಕೆಯನ್ನು ನೀಡಲಾಗಿದೆ. ಬಿಟ್ಟ ಸ್ಥಳದಲ್ಲಿ ಬೇರೆ ಬೇರೆ ಅಕ್ಷರಗಳನ್ನು ಸೇರಿಸಿ ಪದಗಳನ್ನು ರಚಿಸಲಿ. ಅಧ್ಯಾಪಕರು ಅಗತ್ಯವಾದ ಸಲಹೆ, ಸೂಚನೆಗಳನ್ನು ನೀಡುವುದು.

ಮಕ್ಕಳು ವೈಯುಕ್ತಿಕವಾಗಿ ಪದಗಳನ್ನು ಬರೆಯಲಿ. ಬರೆದ ಪದಗಳನ್ನು ವಿದ್ಯಾರ್ಥಿಗಳು ಮಂಡಿಸಲಿ. ಅಧ್ಯಾಪಕರು ಕರಿಹಲಗೆಯಲ್ಲಿ ಬರೆಯಲಿ. ಇಂತಹ ಇತರ ಪದಗಳನ್ನು ಅಧ್ಯಾಪಕರ ಸಹಾಯದೊಂದಿಗೆ ಸಂಗ್ರಹಿಸಿ ಬರೆಯಲಿ.

| ಸಕ್ಕರೆ | ಮಲ್ಲಿಗೆ | ತೋರಣ | ಚಿನ್ನ | ಮಣ್ಣು | ಬಿಳಿ | ಸ್ವಾಭಿಮಾನ |
|---|---|---|---|---|---|---|
| ಅಕ್ಕರೆ | ಎಲ್ಲಿಗೆ | ಹೂರಣ | ರನ್ನ | ಕಣ್ಣು | ತಿಳಿ | ವರಮಾನ |
| ನಕ್ಕರೆ | ಕಲ್ಲಿಗೆ | ಕಾರಣ | ಕನ್ನ | ಗಿಣ್ಣು | ಗಿಳಿ | ಅವಮಾನ |
| ಸಿಕ್ಕರೆ | ಅಲ್ಲಿಗೆ | ಮರಣ | ಅನ್ನ | ಹುಣ್ಣು | ಬಿಳಿ | ಅನುಮಾನ |
| ಕೊಕ್ಕರೆ | ಇಲ್ಲಿಗೆ | ಹರಣ | ಬನ್ನ | ಹೆಣ್ಣು | ಚಳಿ | ಅಪಮಾನ |
| ಹೊಕ್ಕರೆ | ಹಲ್ಲಿಗೆ | ಕಿರಣ | ಮುನ್ನ | | ಹಳಿ | ತಾಪಮಾನ |
| | | ಚರಣ | | | ಹುಳಿ | ಹವಾಮಾನ |
| | | ಚಾರಣ | | | | |

### ❑ ಚರ್ಚಿಸುವ

ಹೆಲನ್ ಕೆಲ್ಲರ್ ನಂತಹ ವಿಕಲ ಚೇತನರು ನಮ್ಮ ಊರಿನಲ್ಲಿ /ಶಾಲೆಯಲ್ಲಿ ಇದ್ದಾರೆ. ಅಂಥವರಿಗೆ ನಾವು ಸಹಾಯ ಮಾಡುವುದು ಅತ್ಯಗತ್ಯ. ಇದು ಅವರಿಗೆ ಜೀವನದಲ್ಲಿ ಮುಂದುವರಿಯಲು ಪ್ರೇರಣೆಯಾಗಬಹುದು. ಈ ಉದ್ದೇಶದಿಂದ ಚರ್ಚೆಯನ್ನು ನಡೆಸುವುದು. ಸಹಾಯ ಮಾಡಲು ಸಾಧ್ಯವಿರುವ ವಿವಿಧ ಸಾಧ್ಯತೆಗಳನ್ನು ತಿಳಿಯುಉವುದು. ಅವುಗಳನ್ನು ಅಧ್ಯಾಪಕರು ಕ್ರೋಡೀಕರಿಸುವುದು.

### ❑ ಜೀವನ ಕಥೆಗಳನ್ನು ಓದುವ

ಜೀವನದಲ್ಲಿ ಕಷ್ಟಗಳನ್ನೆದುರಿಸಿ ಮುಂದೆ ಬಂದು, ಸಾಧನೆ ಮಾಡಿದ ಮಹಾನ್ ವ್ಯಕ್ತಿಗಳ ಜೀವನದ ಕಥೆಗಳನ್ನು ಓದಿ ತಿಳಿಯುವುದು.

ಓದುವ ಮೂಲೆಯಿಂದ ಪುಸ್ತಕಗಳನ್ನು ಸಂಗ್ರಹಿಸಿ ವೈಯುಕ್ತಿಕವಾಗಿ ಓದಲಿ. ವಿದ್ಯಾರ್ಥಿಗಳು ತಾವು ಓದಿದ ಜೀವನ ಕಥೆಗಳನ್ನು ಸಂಕ್ಷಿಪ್ತವಾಗಿ ಅಭ್ಯಾಸ ಪುಸ್ತಕದಲ್ಲಿ ಬರೆಯಲಿ. ವಿದ್ಯಾರ್ಥಿಗಳು ಬರೆದ ವಿಚಾರವನ್ನು ತರಗತಿಯಲ್ಲಿ ಮಂಡಿಸುವುದು. ಉತ್ತಮವಾಗಿ ಬರೆದವರನ್ನು ಅಭಿನಂದಿಸುವುದು.

- **ವೀಕ್ಷಿಸಿರಿ**

ಪ್ರಪಂಚದಲ್ಲಿ ವಿಕಲಚೇತನರಾಗಿ ಹುಟ್ಟಿ, ಜೀವನದಲ್ಲಿ ಬಂದ ಸವಾಲುಗಳನ್ನು ಎದುರಿಸಿ, ದೊಡ್ಡ ದೊಡ್ಡ ಸಾಧನೆಗಳನ್ನು ಮಾಡಿದ ವ್ಯಕ್ತಿಗಳ ಜೀವನದ ಕಿರು ಚಿತ್ರಗಳನ್ನು ದೃಶ್ಯ ಮಾಧ್ಯಮದ ಮೂಲಕ ತೋರಿಸುವುದು. ಅನಂತರ ತರಗತಿಯಲ್ಲಿ ಮಕ್ಕಳು ತಮ್ಮ ಅಭಿಪ್ರಾಯವನ್ನು ಹೇಳಲಿ. ಅಧ್ಯಾಪಕರು ಕ್ರೋಢೀಕರಣವನ್ನು ಮಾಡುವುದು.

- **ಹೊಂದಿಸಿ ಬರೆಯುವ**

ಮಕ್ಕಳಲ್ಲಿ ವಾಕ್ಯ ರಚನಾ ಸಾಮರ್ಥ್ಯವನ್ನು ಹೆಚ್ಚಿಸಲು ಈ ಚಟುವಟಿಕೆಯನ್ನು ನೀಡಲಾಗಿದೆ. 'ಅ' ವಿಭಾಗಕ್ಕೆ ಯೋಗ್ಯವಾದ ಪದಗಳನ್ನು 'ಆ' ವಿಭಾಗದಿಂದ ಆರಿಸಿ ಬರೆದು ವಾಕ್ಯವನ್ನು ಪೂರ್ತಿಗೊಳಿಸಲಿ.

ವಿದ್ಯಾರ್ಥಿಗಳು ವೈಯಕ್ತಿಕವಾಗಿ ವಾಕ್ಯಗಳನ್ನು ಅಭ್ಯಾಸ ಪುಸ್ತಕದಲ್ಲಿ ಬರೆಯಲಿ. ತರಗತಿಯಲ್ಲಿ ಮಂಡಿಸಲಿ. ಅಧ್ಯಾಪಕರು ಕರಿಹಲಗೆಯಲ್ಲಿ ವಾಕ್ಯಗಳನ್ನು ತಿದ್ದಿ ಬರೆಯುವುದು. ಮಕ್ಕಳು ತಮ್ಮದನ್ನು ಸರಿಪಡಿಸಿ ಬರೆದುಕೊಳ್ಳಲಿ.

1. ಅವಳು ಒಳ್ಳೆಯ ಹುಡುಗಿ
2. ಅವಳಲ್ಲಿ ಪುಸ್ತಕಗಳ ಸಂಗ್ರಹವೇ ಇದೆ
3. ಅವಳಿಂದ ಗೆಳತಿಯರು ಪುಸ್ತಕಗಳನ್ನು ಪಡೆದು ಓದುತ್ತಾರೆ
4. ಅವಳಿಗೆ ಇಬ್ಬರು ಗೆಳತಿಯರು
5. ಅವಳ ಹೆಸರು ರಾಧೆ
6. ಅವಳನ್ನು ಗೆಳತಿಯರು ತುಂಬಾ ಇಷ್ಟ ಪಡುತ್ತಾರೆ.

ಇಂತಹ ಇತರ ಚಟುವಟಿಕೆಗಳನ್ನು ಅಧ್ಯಾಪಕರು ನೀಡುವುದು.

## ಚಂಪಾರಣ್ಯದಲ್ಲಿ

ತಾಯಿಗೆ ಮಗುವಿನ ಮೇಲಿನ ಪ್ರೀತಿಯೆನ್ನುವುದು ಮನುಷ್ಯನಿಗೆ ಮಾತ್ರ ಸೀಮಿತವಲ್ಲ. ಪ್ರಾಣಿಗಳು ಕೂಡ ತಮ್ಮ ಮರಿಗಳನ್ನು ಪ್ರೀತಿಸುತ್ತವೆ. ಪ್ರಾಣಿಗಳ ಮಾತೃ ಸ್ನೇಹವನ್ನು ತಿಳಿಸುವ ಕಥಾಭಾಗ ಪಾಠಪುಸ್ತಕದಲ್ಲಿದೆ. ಇದನ್ನು ಮಕ್ಕಳಿಗೆ ಓದಲು ನೀಡುವುದು. ಇತರ ಯೋಗ್ಯವಾದ ವಿಧಾನಗಳನ್ನು ಪಾಠಪ್ರವೇಶಕ್ಕೆ ಅಧ್ಯಾಪಕರು ಉಪಯೋಗಿಸಬಹುದು.

- **ಪಾಠಭಾಗದೆಡೆಗೆ**

'ಚಂಪಾರಣ್ಯದಲ್ಲಿ' ಪಾಠಭಾಗವನ್ನು ವಿದ್ಯಾರ್ಥಿಗಳು ವೈಯುಕ್ತಿಕವಾಗಿ ಓದಲಿ. ಕಥೆಯ ಆಶಯವನ್ನು ಬಾಯ್ದೆರೆಯಾಗಿ ಹೇಳಲಿ. ಅಧ್ಯಾಪಕರು ಗಟ್ಟಿಯಾಗಿ ಓದುವುದು. ಕಥೆಯ ಧ್ವನಿ ಮುದ್ರಿಕೆಯನ್ನು ಆಲಿಸಲು ಮಕ್ಕಳಿಗೆ ಅವಕಾಶವನ್ನು ನೀಡುವುದು. ಆಶಯವನ್ನು ಕ್ರೋಢೀಕರಿಸುವುದು.

### ಚಟುವಟಿಕೆಗಳು

- **ಪದಗಳ ಅರ್ಥ ಕಂಡುಹಿಡಿಯುವ**

ಪಾಠಭಾಗದ ಪೂರ್ಣ ಆಶಯವನ್ನು ತಿಳಿಯಲು

ನವೀನ ಪದಗಳನ್ನು ಗುರುತಿಸಿ, ಅವುಗಳ ಅರ್ಥವನ್ನು, ಅರ್ಥಕೋಶದ ಸಹಾಯದಿಂದ ಮಕ್ಕಳು ಕಂಡುಕೊಳ್ಳಲಿ. ಅಧ್ಯಾಪಕರು ಮೌಲ್ಯನಿರ್ಣಯ ಮಾಡುವುದು.

- ❑ **ಉತ್ತರಿಸುವ**

ಪಾಠದ ಆಶಯವನ್ನು ತಿಳಿದುಕೊಳ್ಳುವ ಉದ್ದೇಶದಿಂದ ಪ್ರಶ್ನೆಗಳನ್ನು ನೀಡಲಾಗಿದೆ.

ವಿದ್ಯಾರ್ಥಿಗಳು ಪಾಠಭಾಗವನ್ನು ಓದಲಿ. ಕೊಟ್ಟಿರುವ ಪ್ರಶ್ನೆಗಳಿಗೆ ಸೂಕ್ತ ಉತ್ತರವನ್ನು ಪಾಠಭಾಗದಿಂದ ಕಂಡುಹಿಡಿದು ಬರೆಯಲಿ. ಕೆಲವು ವಿದ್ಯಾರ್ಥಿಗಳು ಮಂಡಿಸಲಿ. ಅಧ್ಯಾಪಕರ ಸಹಾಯದೊಂದಿಗೆ ಸರಿಪಡಿಸಲಿ.

- ❑ **ಸಂಭಾಷಣೆ ಬರೆಯುವ**

ಭಾಷಾ ವ್ಯವಹಾರ ರೂಪಗಳಲ್ಲಿ ಒಂದಾದ ಸಂಭಾಷಣೆಯನ್ನು ಬರೆಯುವ ಸಾಮರ್ಥ್ಯವನ್ನು ಮಕ್ಕಳಲ್ಲಿ ಬೆಳೆಸುವ ಉದ್ದೇಶದಿಂದ ಈ ಚಟುವಟಿಕೆಯನ್ನು ನೀಡಲಾಗಿದೆ.

ವಿದ್ಯಾರ್ಥಿಗಳು ವೈಯಕ್ತಿಕವಾಗಿ ಪಾಠಭಾಗವನ್ನು ಓದಿ, ಕಥಾಪಾತ್ರಗಳನ್ನು ಗುರುತಿಸಿ ಅವುಗಳನ್ನು ಹೆಸರಿಸಲಿ. ಸಂಭಾಷಣೆ ನಡೆಸಬೇಕಾದ ಸಂದರ್ಭದ ಕುರಿತು ಚರ್ಚಿಸುವುದು. ಅಧ್ಯಾಪಕರು ಸೂಕ್ತ ಮಾರ್ಗದರ್ಶನವನ್ನು ಮಕ್ಕಳಿಗೆ ನೀಡುವುದು. ಮಕ್ಕಳು ವೈಯಕ್ತಿಕವಾಗಿ ಸಂಭಾಷಣೆ ಬರೆಯಲಿ. ವಿದ್ಯಾರ್ಥಿಗಳನ್ನು ಗುಂಪುಗಳಾಗಿ ಮಾಡಿ ಗುಂಪಿನಲ್ಲಿ ಪರಸ್ಪರ ಸಂಭಾಷಣೆಗಳನ್ನು ಹೋಲಿಸಿ ಉತ್ತಮಪಡಿಸಲಿ. ಪ್ರತಿ ಗುಂಪಿನಿಂದ ಆಯ್ದ ಸಂಭಾಷಣೆಯನ್ನು ತರಗತಿಯಲ್ಲಿ ಮಂಡಿಸಲಿ. ಉತ್ತಮವಾದುದನ್ನು ಕಂಡುಕೊಳ್ಳುವುದು. ಅಧ್ಯಾಪಕರು ಬರೆದ ಸಂಭಾಷಣೆಯನ್ನು ಪ್ರದರ್ಶಿಸುವುದು. ಮಕ್ಕಳಿಗೆ ತಾವು ಬರೆದ ಸಂಭಾಷಣೆಯನ್ನು ಉತ್ತಮಪಡಿಸಲು ಅವಕಾಶವನ್ನು ನೀಡುವುದು.

- ❑ **ಯಾರು ಹೇಳಿದರು? ಬರೆಯುವ**

ಮಕ್ಕಳು ಕಥೆಯ ಬಗ್ಗೆ ಮತ್ತು ಅದರಲ್ಲಿ ಬರುವ ಕಥಾಪಾತ್ರಗಳ ಕುರಿತು ಅಭಿಪ್ರಾಯಗಳನ್ನು ಹೇಳಲಿ. ಪ್ರಶ್ನೆಯಲ್ಲಿ ಕೊಟ್ಟಿರುವ ವಾಕ್ಯಗಳನ್ನು ಓದಿ, ಅವು ಯಾರು ಯಾರಿಗೆ ಹೇಳಿದ ಮಾತುಗಳೆಂದು ಕಂಡುಕೊಂಡು ಬರೆಯಲಿ. ಕೆಲವರು ಮಂಡಿಸಲಿ. ಅಧ್ಯಾಪಕರು ಕರಿಹಲಗೆಯಲ್ಲಿ ಬರೆಯಲಿ. ತರಗತಿಯಲ್ಲಿ ಚರ್ಚೆಯ ಮೂಲಕ, ತಪ್ಪುಗಳಿದ್ದರೆ ಸರಿಪಡಿಸುವುದು. ಮಕ್ಕಳಿಗೆ ಉತ್ತಮಪಡಿಸಲು ಅವಕಾಶವನ್ನು ನೀಡುವುದು.

- ❑ **ಒತ್ತಕ್ಷರ ಸೇರಿಸುವ**

ಒತ್ತಕ್ಷರವಿರುವ ಪದಗಳನ್ನು ಓದುವ ಹಾಗೂ ಬರೆಯುವ ಕ್ರಮವನ್ನು ಪರಿಚಯಿಸುವುದು. ಒತ್ತಕ್ಷರದಿಂದ ಪದದ ಅರ್ಥದಲ್ಲಿ ಉಂಟಾಗುವ ಬದಲಾವಣೆಯನ್ನು ತಿಳಿಯಲು ಈ ಚಟುವಟಿಕೆಯನ್ನು ನೀಡಲಾಗಿದೆ.

ವಿದ್ಯಾರ್ಥಿಗಳು ವೈಯಕ್ತಿಕವಾಗಿ ಮಾದರಿಯನ್ನು ಓದಿ ಅರ್ಥೈಸಲಿ. ಅಡಿಗೆರೆ ಎಳೆದ ಪದಗಳಿಗೆ ಒತ್ತಕ್ಷರವನ್ನು ಸೇರಿಸಿ' ಬಿಟ್ಟ ಸ್ಥಳದಲ್ಲಿ ಬರೆದು ವಾಕ್ಯವನ್ನು ಓದಿ ಪದದ ಅರ್ಥವನ್ನು ತಿಳಿದುಕೊಳ್ಳಲಿ. ಅಧ್ಯಾಪಕರು ಮಕ್ಕಳಿಗೆ ಅಗತ್ಯ ಸಹಾಯವನ್ನು ಮಾಡುವುದು.

ಒದೆ – ಒದ್ದೆ

ಗಿಡ – ಗಿಡ್ಡ

ಕತೆ – ಕತ್ತೆ

ಪುಟ – ಪುಟ್ಟ

- ಅಧ್ಯಾಪಕರು ಇಂತಹ ಇತರ ಪದಗಳನ್ನು ಪರಿಚಯಿಸುವುದು.

## ಮೌಲ್ಯನಿರ್ಣಯ ಚಟುವಟಿಕೆಗಳು

1. 'ತಾಯಿ' ಕವನದ ಕೊನೆಯ ಎಂಟು ಸಾಲುಗಳನ್ನು ಗದ್ಯರೂಪದಲ್ಲಿ ಬರೆಯಿರಿ.

2. ನಿಮ್ಮ ಜೀವನದಲ್ಲಿ ನಡೆದ ಮರೆಯಲಾಗದ ಘಟನೆಯನ್ನು ಬರೆಯಿರಿ.

3. ಈ ವಾಕ್ಯಗಳನ್ನು ಯಾರು ಹೇಳಿದರು?

   1) ಮುದ್ದಾದ ಮರಿಯಾದ್ದರಿಂದ ನನಗೆ ಕೊಲ್ಲಲು ಮನಸ್ಸು ಬರಲಿಲ್ಲ.

   2) ನನ್ನನ್ನು ತಮಾಷೆ ಮಾಡಲು ಅವರಿಗೇನು ಹಕ್ಕಿದೆ?

   3) ನೀನು ಇಲ್ಲಿಂದ ಓಡಿ ಹೋಗಿ ನಿನ್ನ ಗುಂಪಿನವರನ್ನು ಸೇರಿಕೋ.

4. ಪದಗಳ ಅರ್ಥ ಬರೆಯಿರಿ.

   1) ಹಿಂಬಾಲಿಸು

   2) ಹರ್ಷ

   3) ಆತುರಪಡು

   4) ಬೆರಗು

* * *

# 9. ಕಲ್ಲು ಸಕ್ಕರೆ

ಬಾಲ್ಯವು ಮನುಷ್ಯ ಜೀವನದ ಒಂದು ಸುಂದರ ಅನುಭವ. ಯಾವುದರ ಚಿಂತೆಯೂ ಇರದ ಒಂದು ಸ್ವಚ್ಛಂದ ಜೀವನ. ನಿಷ್ಕಳಂಕ ಮನಸ್ಸಿನಿಂದ ಮುಗ್ಧತೆಯನ್ನು ಮೆರೆಯುತ್ತಾ ಎಲ್ಲರ ಮನಸ್ಸನ್ನೂ ಗೆದ್ದು ಬಿಡುವ ಬಾಲ್ಯದ ತುಂಟತನ ಒಂದು ಮರೆಯಲಾಗದ ಅನುಭವ. ಆ ಬಾಲ್ಯ ಜೀವನ ನಿಜಕ್ಕೂ ಅದ್ಭುತವೇ ಸರಿ.

ಬಾಲ್ಯದಲ್ಲಿ ಕಲಿತ ಒಳ್ಳೆಯ ವಿಚಾರಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಲು ಸುಲಭ ಸಾಧ್ಯ. ಮಕ್ಕಳು ಎಳವೆಯಲ್ಲಿಯೇ ಇತರರನ್ನು ಗೌರವಿಸುವುದು, ಪ್ರೀತಿಸುವುದು ಮುಂತಾದ ಉತ್ತಮ ಗುಣಗಳನ್ನು ಮತ್ತು ಆದರ್ಶಗಳನ್ನು ಮೈಗೂಡಿಸಿಕೊಳ್ಳಬೇಕೆಂಬ ಉದ್ದೇಶದಿಂದ ಈ ಘಟಕದ ಪಾಠಗಳನ್ನು ಆಯ್ಕೆ ಮಾಡಿಕೊಳ್ಳಲಾಗಿದೆ.

ಬಾಲ್ಯದಲ್ಲಿ ಮಲತಾಯಿಯಿಂದ ಕಡೆಗಣಿಸಲ್ಪಟ್ಟು, ಬಾಲ್ಯವನ್ನು ಕಳೆದುಕೊಂಡ ಸಿಂಡ್ರೆಲ್ಲಾ ಎಂಬ ಹುಡುಗಿಯ ಕಥೆಯನ್ನು ನೀಡಲಾಗಿದೆ. ಗೊಂಬೆ ಎಂಬ ಪದ್ಯದಲ್ಲಿ ಮಗುವಿನ ಬಾಲ್ಯದ ಆಟಗಳ ಕುರಿತು ಹೇಳಲಾಗಿದೆ. ಚಂದಮಾಮನನ್ನು ತೋರಿಸುತ್ತಾ ತಾಯಿಯೊಡನೆ ಮಗು ಬಾಲ್ಯ ಸಹಜವಾಗಿ ತನ್ನ ಸಂಶಯವನ್ನು ಕೇಳುವ ವಿಚಾರವನ್ನು 'ಚಂದಿರನೇತಕೆ ಓಡುವನಮ್ಮ' ಎಂಬ ಪದ್ಯದಲ್ಲಿ ಹೇಳಲಾಗಿದೆ.

ಪಾಠದ ಸಂದರ್ಭದಲ್ಲಿ I.C.T. ಯನ್ನು ತರಗತಿಕೋಣೆಯಲ್ಲಿ ಯೋಗ್ಯವಾದ ರೀತಿಯಲ್ಲಿ ಬಳಸಬೇಕು.

**ಕಲಿಕಾ ಸಾಧನೆಗಳು**

- ಪದ ಪ್ರಯೋಗಗಳು, ಶೈಲಿಗಳು, ಆಲಿಸಿದ ನೂತನ ಪದಗಳು ಮೊದಲಾದವುಗಳನ್ನು ಸಂದರ್ಭಕ್ಕನು ಗುಣವಾಗಿ ಮಾತುಗಾರಿಕೆಯಲ್ಲಿ ಬಳಸುವುದು.
- ಕಥೆ, ಕವಿತೆ, ಲಘು ಟಿಪ್ಪಣಿಗಳನ್ನು ಆಲಿಸಿ/ಓದಿ ತನ್ನದೇ ಭಾಷೆಯಲ್ಲಿ ಹೇಳುವುದು ಹಾಗೂ ಬರೆಯುವುದು.
- ಕವಿತೆಗಳನ್ನು ಆಲಿಸಿ, ಆಸ್ವಾದಿಸಿ ಅವುಗಳ ಆಶಯವನ್ನು ಅರ್ಥೈಸಿಕೊಂಡು ರಾಗ, ತಾಳ, ಭಾವಗಳಿಂದ ಹಾಡುವುದು.
- ಸಮಾನ ಪದಗಳು ಮತ್ತು ಸರ್ವನಾಮಗಳನ್ನು ಉಪಯೋಗಿಸಿಕೊಂಡು ಸೃಜನಾತ್ಮಕ ರಚನೆಗಳಾದ ಲಘುಟಿಪ್ಪಣಿಗಳು, ಸರಳಕಥೆಗಳು ಮೊದಲಾದವುಗಳನ್ನು ರಚಿಸುವುದು.
- ಸೃಜನಾತ್ಮಕ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡು ತನ್ನ ರಚನೆಗಳನ್ನು ತರಗತಿಯ ಸಂಚಿಕೆಗಳು ಹಾಗೂ ಹಸ್ತಪತ್ರಿಕೆಗಳಿಗೆ ನೀಡುವುದು.
- ತನ್ನ ಆಶಯಗಳನ್ನು ತಪ್ಪಿಲ್ಲದೆ ಸೂಕ್ತ ವ್ಯವಹಾರರೂಪದಲ್ಲಿ (ಕಥೆ, ಕವಿತೆ ಇತ್ಯಾದಿ) ಬರೆಯುವುದು.
- ತನ್ನ ಇಷ್ಟ, ಆಸಕ್ತಿ ಹಾಗೂ ಆದ್ಯತೆಯನ್ನು ಪರಿಗಣಿಸಿಕೊಂಡು ಪುಸ್ತಕಗಳು ಮತ್ತು ಇತರ ಓದುವ ಸಾಮಗ್ರಿಗಳನ್ನು ಓದಿ ಆಶಯವನ್ನು ವಿಭಿನ್ನ ರೀತಿಯಲ್ಲಿ ಇತರರೊಂದಿಗೆ ಹಂಚಿಕೊಳ್ಳುವುದು.
- ಭಾಷಾ ವ್ಯವಹಾರಗಳನ್ನು ಬೇರೆ ಬೇರೆ ರೀತಿಗಳಲ್ಲಿ ರೂಪಾಂತರಿಸುವುದು.
- ನಿರ್ದಿಷ್ಟ ಭಾಷಾ ವ್ಯವಹಾರ ರೂಪಗಳನ್ನು, ಶ್ರೋತೃಗಳಿಗೆ ಆಶಯಸ್ಪಷ್ಟವಾಗುವ ರೀತಿಯಲ್ಲಿ, ಉಚ್ಚಾರ ಸ್ಪಷ್ಟತೆಯಿಂದ ಸರಾಗವಾಗಿ ಓದುವುದು.

# ಯೂನಿಟ್ ಗ್ರಿಡ್ : 9. ಕಲ್ಲು ಸಕ್ಕರೆ

| ಆಶಯಗಳು | ಪ್ರಕ್ರಿಯೆಗಳು | ಕಲಿಕಾ ಸಾಧನೆಗಳು |
|---|---|---|
| **1. ಸಿಂಡ್ರೆಲ್ಲಾ** | | **ಸಮಯ : 8 ಗಂಟೆಗಳು** |
| • ಕಥಾವಸ್ತು, ಸೂಕ್ತವಾದ ಕಥಾಪಾತ್ರಗಳು, ಯೋಗ್ಯವಾದ ಭಾಷೆ ಎಂಬಿವುಗಳೊಂದಿಗೆ ನೈಜವಾಗಿ ಆವಿಷ್ಕರಿಸುವ ಕಥೆ ಉತ್ತಮವಾಗುವುದು.<br>• ಸಮಾಜದಲ್ಲಿ ಅವಗಣನೆಗೆ ಒಳಗಾಗುವ ಜನ ವಿಭಾಗಗಳಿವೆ ಎಂದು ತಿಳಿಯುವುದು. | • ಕಥೆಯನ್ನು ಓದಿ ಆಶಯವನ್ನು ತಿಳಿಯುವುದು.<br>• ಕಥೆಯನ್ನೋದಿ ಪ್ರಶ್ನೆಗಳಿಗೆ ಉತ್ತರ ಬರೆಯುವುದು.<br>• ನವೀನ ಪದಗಳ ಅರ್ಥಗಳನ್ನು ಕಂಡುಕೊಂಡು ಬರೆಯುವುದು. | • ಕಥೆ, ಕವಿತೆ,ಲಘು ಟಿಪ್ಪಣಿಗಳನ್ನು ಆಲಿಸಿ/ಓದಿ ತನ್ನದೇ ಭಾಷೆಯಲ್ಲಿ ಹೇಳುವುದು ಹಾಗೂ ಬರೆಯುವುದು.<br>• ನಿರ್ದಿಷ್ಟ ಭಾಷಾ ವ್ಯವಹಾರ ರೂಪಗಳನ್ನು, ಶ್ರೋತೃಗಳಿಗೆ ಆಶಯಸ್ಪಷ್ಟವಾಗುವ ರೀತಿಯಲ್ಲಿ, ಉಚ್ಚಾರ ಸ್ಪಷ್ಟತೆಯಿಂದ ಸರಾಗವಾಗಿ ಓದುವುದು. |
| • ಕಥಾವಸ್ತು, ಸೂಕ್ತ ಕಥಾಪಾತ್ರಗಳು, ನೈಜವಾದ ಭಾಷೆ ಎಂಬಿವುಗಳನ್ನೊಳಗೊಂಡು ಬರೆದಾಗ ಸಂಭಾಷಣೆಯು ಉತ್ತಮವಾಗುತ್ತದೆ. | • ಸಂಭಾಷಣೆಯನ್ನು ಬರೆಯುವುದು. | • ಪದ ಪ್ರಯೋಗಗಳು, ಶೈಲಿಗಳು, ಆಲಿಸಿದ ನೂತನ ಪದಗಳು ಮೊದಲಾದವುಗಳನ್ನು ಸಂದರ್ಭಕ್ಕನುಗುಣವಾಗಿ ಮತುಗಾರಿಕೆಯಲ್ಲಿ ಬಳಸುವುದು.<br>• ಭಾಷಾ ವ್ಯವಹಾರಗಳನ್ನು ಬೇರೆ ಬೇರೆ ರೀತಿಗಳಲ್ಲಿ ರೂಪಾಂತರಿಸುವುದು. |
| • ಕಥೆಗಳನ್ನು ಸಂಗ್ರಹಿಸಿ ಓದುವುದರಿಂದ ಓದುವಿಕೆಯಲ್ಲಿ ಆಸಕ್ತಿ ಮೂಡುವುದು. | • ಗ್ರಂಥಾಲಯದಿಂದ ಇಷ್ಟವಾದ ಕಥೆಗಳನ್ನು ಸಂಗ್ರಹಿಸಿ ಓದುವುದು. ತನ್ನದೇ ಆದ ರೀತಿಯಲ್ಲಿ ಹೇಳುವುದು. | • ಕಥೆ, ಕವಿತೆ,ಲಘು ಟಿಪ್ಪಣಿಗಳನ್ನು ಆಲಿಸಿ/ಓದಿ ತನ್ನದೇ ಭಾಷೆಯಲ್ಲಿ ಹೇಳುವುದು ಹಾಗೂ ಬರೆಯುವುದು. |

| ಆಶಯಗಳು | ಪ್ರಕ್ರಿಯೆಗಳು | ಕಲಿಕಾ ಸಾಧನೆಗಳು |
|---|---|---|
| • ಅಕ್ಷರ, ಪದ, ಕಾಗುಣಿತ ವಾಕ್ಯಗಳನ್ನು ಉಪಯೋಗಿಸಿ ಭಾಷಾ ಆಟಗಳನ್ನು ಆಡಬಹುದು. | • ಪರಿಚಿತ ಪದಗಳ ಅಕ್ಷರಗಳನ್ನುಪಯೋಗಿಸಿ ಹೊಸ ಪದಗಳನ್ನು ಬರೆಯುವುದು.<br>• ನವೀನ ಪದಗಳನ್ನುಪಯೋಗಿಸಿ ಹೊಸ ವಾಕ್ಯಗಳನ್ನು ರಚನೆ ಮಾಡುವುದು.<br>• ಬಿಟ್ಟ ಸ್ಥಳಗಳಲ್ಲಿ ಸೂಕ್ತವಾದ ಪದಗಳನ್ನು ಬರೆಯುವುದು. | • ತನ್ನ ಸಹಪಾಠಿಗಳ ರಚನೆಗಳನ್ನು ಮೌಲ್ಯನಿರ್ಣಯ ಮಾಡಿ ಇತರರ ರಚನೆಗಳಲ್ಲಿನ ಪ್ರಯೋಗಗಳು, ಶೈಲಿಗಳನ್ನು ವಿಶ್ಲೇಷಿಸಿ ತನ್ನ ರಚನೆಗಳನ್ನು ಉತ್ತಮಪಡಿಸುವುದು. |
| **2. ಗೊಂಬೆ** | | **ಸಮಯ : 6 ಗಂಟೆಗಳು** |
| • ರಾಗ, ತಾಳದೊಂದಿಗೆ ಭಾವಪೂರ್ಣವಾಗಿ ಮಂಡಿಸುವಾಗ ಕವಿತೆಯು ಆಸ್ವಾದಕರವೆನಿಸುವುದು. | • ಕವಿತೆಯನ್ನು ವೈಯುಕ್ತಿಕವಾಗಿಯೂ, ಗುಂಪಾಗಿಯೂ ಹಾಡಿ ಆಸ್ವಾದಿಸುವುದು.<br>• ಕವಿತೆಯ ಆಶಯವನ್ನು ತಿಳಿದುಕೊಂಡು ಪ್ರಶ್ನೆಗಳಿಗೆ ಉತ್ತರ ಬರೆಯುವುದು. | • ಕವಿತೆಗಳನ್ನು ಆಲಿಸಿ, ಆಸ್ವಾದಿಸಿ ಅವುಗಳ ಆಶಯವನ್ನು ಅರ್ಥೈಸಿಕೊಂಡು ರಾಗ, ತಾಳ, ಭಾವಗಳಿಂದ ಹಾಡುವುದು. |
| • ನಾವು ಹೇಳಿದ ವಿಷಯಗಳು ಕೇಳುವವನಿಗೆ ಸಂವಹನಗೊಳ್ಳಬೇಕಾದರೆ ಭಾಷೆಯು ವ್ಯಾಕರಣ ಬದ್ಧವಾಗಿರಬೇಕು.<br>• ಭಾಷೆಯ ಸ್ವರೂಪವನ್ನು ಚೆನ್ನಾಗಿ ತಿಳಿಯಬೇಕಾದರೆ ಆ ಭಾಷೆಯ ವ್ಯಾಕರಣವನ್ನು ತಿಳಿದಿರಬೇಕು. | • ಪದ್ಯದಲ್ಲಿ ಬಂದಿರುವ ಪ್ರಾಸಪದಗಳನ್ನು ಬರೆಯುವುದು. | • ತನ್ನ ಆಶಯಗಳನ್ನು ತಪ್ಪಿಲ್ಲದೆ ಸೂಕ್ತ ವ್ಯವಹಾರರೂಪದಲ್ಲಿ (ಕಥೆ, ಕವಿತೆ ಇತ್ಯಾದಿ) ಬರೆಯುವುದು. |
| • ಆಶಯಕ್ಕೆ ಸಂಬಂಧಿಸಿದ ಹೆಚ್ಚಿನ ವಿಚಾರಗಳನ್ನು ಕ್ರಮೀಕರಿಸಿ ವಿವರಣೆ ತಯಾರಿಸಬಹುದು. | • ಬಿಡುವಿನ ವೇಳೆಯ ಸದುಪಯೋಗದ ಕುರಿತು ವಿವರಣೆ ಬರೆಯುವುದು. | • ಕಥೆ, ಕವಿತೆ, ಲಘು ಟಿಪ್ಪಣಿಗಳನ್ನು ಆಲಿಸಿ/ಓದಿ ತನ್ನದೇ ಭಾಷೆಯಲ್ಲಿ ಹೇಳುವುದು ಹಾಗೂ ಬರೆಯುವುದು. |

| ಆಶಯಗಳು | ಪ್ರಕ್ರಿಯೆಗಳು | ಕಲಿಕಾ ಸಾಧನೆಗಳು |
|---|---|---|
| • ಪದ್ಯಗಳನ್ನು ಸಂಗ್ರಹಿಸಿ ಹಾಡುವುದರಿಂದ ಮನರಂಜನೆ ಮತ್ತು ಪದ್ಯ ಓದಿನಲ್ಲಿ ಆಸಕ್ತಿ ಮೂಡುವುದು. | • ಗ್ರಂಥಾಲಯದಿಂದ ಗೊಂಬೆಗೆ ಸಂಬಂಧಿಸಿದ ಪದ್ಯಗಳನ್ನು ಆರಿಸಿ ತರಗತಿಯಲ್ಲಿ ಹಾಡುವುದು.<br>• ಸಂಗ್ರಹಿಸಿದ ಪದ್ಯಗಳನ್ನು ಭಿತ್ತಿ ಪತ್ರಿಕೆಯಲ್ಲಿ ಪ್ರದರ್ಶಿಸುವುದು. | • ತನ್ನ ಇಷ್ಟ, ಆಸಕ್ತಿ ಹಾಗೂ ಆದ್ಯತೆಯನ್ನು ಪರಿಗಣಿಸಿಕೊಂಡು ಪುಸ್ತಕಗಳು ಮತ್ತು ಇತರ ಓದುವ ಸಾಮಗ್ರಿಗಳನ್ನು ಓದಿ ಆಶಯವನ್ನು ವಿಭಿನ್ನ ರೀತಿಯಲ್ಲಿ ಇತರರೊಂದಿಗೆ ಹಂಚಿಕೊಳ್ಳುವುದು. |
| • ಇಷ್ಟವಿರುವ ಚಿತ್ರಗಳನ್ನು ರಚಿಸಿ ಬಣ್ಣ ಹಚ್ಚುವುದು. | • ಆಟಿಕೆಯ ಚಿತ್ರಬಿಡಿಸಿ ಬಣ್ಣ ಹಚ್ಚುವುದು. | • ಸೃಜನಾತ್ಮಕ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡು ತನ್ನ ರಚನೆಗಳನ್ನು ತರಗತಿಯ ಸಂಚಿಕೆಗಳು ಹಾಗೂ ಹಸ್ತಪತ್ರಿಕೆಗಳಿಗೆ ನೀಡುವುದು. |
| • ಅಕ್ಷರ, ಪದ, ಕಾಗುಣಿತ, ವಾಕ್ಯಗಳನ್ನುಪಯೋಗಿಸಿ ಭಾಷಾ ಆಟಗಳನ್ನು ಆಡಬಹುದು. | • ಗುಂಪಿಗೆ ಸೇರದ ಪದಗಳನ್ನು ಹುಡುಕಿ ಬರೆಯುವುದು.<br>• ಪದಗಳನ್ನು ಕ್ರಮೀಕರಿಸಿ ಬರೆದು ವಾಕ್ಯಗಳನ್ನು ಬರೆಯುವುದು. | • ತನ್ನ ಸಹಪಾಠಿಗಳ ರಚನೆಗಳನ್ನು ಮೌಲ್ಯನಿರ್ಣಯ ಮಾಡಿ ಇತರರ ರಚನೆಗಳಲ್ಲಿನ ಪ್ರಯೋಗಗಳು, ಶೈಲಿಗಳನ್ನು ವಿಶ್ಲೇಷಿಸಿ ತನ್ನ ರಚನೆಗಳಲ್ಲಿನ ಉತ್ತಮಪಡಿಸುವುದು. |
| **3. ಚಂದಿರನೇತಕೆ ಓಡುವನಮ್ಮ** | | **ಸಮಯ : 6 ಗಂಟೆಗಳು** |
| • ರಾಗ, ತಾಳದೊಂದಿಗೆ ಭಾವಪೂರ್ಣವಾಗಿ ಮಂಡಿಸುವಾಗ ಕವಿತೆಯು ಆಸ್ವಾದ್ಯಕರವೆನಿಸುವುದು. | • ಕವಿತೆಯನ್ನು ವೈಯುಕ್ತಿಕವಾಗಿಯೂ, ಗುಂಪಾಗಿಯೂ ಹಾಡಿ ಆಸ್ವದಿಸುವುದು.<br>• ಕವಿತೆಯ ಆಶಯವನ್ನು ತಿಳಿದುಕೊಂಡು ಪ್ರಶ್ನೆಗಳಿಗೆ ಉತ್ತರಿಸುವುದು.<br>• ಇಷ್ಟವಾದ ಸಾಲುಗಳನ್ನು ಬರೆದು, ಇಷ್ಟವಾಗಲಿರುವ ಕಾರಣಗಳನ್ನು ಬರೆದು ಮಂಡಿಸುವುದು. | • ಕವಿತೆಗಳನ್ನು ಆಲಿಸಿ, ಆಸ್ವಾದಿಸಿ ಅವುಗಳ ಆಶಯವನ್ನು ಅರ್ಥೈಸಿಕೊಂಡು ರಾಗ, ತಾಳ, ಭಾವಗಳಿಂದ ಹಾಡುವುದು. |

| ಆಶಯಗಳು | ಪ್ರಕ್ರಿಯೆಗಳು | ಕಲಿಕಾ ಸಾಧನೆಗಳು |
|---|---|---|
| • ನಾವು ಹೇಳಿದ ವಿಷಯಗಳು ಕೇಳುವವನಿಗೆ ಸಂವಹನಗೊಳ್ಳಬೇಕಾದರೆ ಭಾಷೆಯು ವ್ಯಾಕರಣಬದ್ಧವಾಗಿರಬೇಕು.<br>• ಆಶಯಕ್ಕೆ ಸಂಬಂಧಿಸಿದ ಹೆಚ್ಚಿನ ವಿಚಾರಗಳನ್ನು ಕ್ರಮೀಕರಿಸಿ ವಿವರಣೆ ತಯಾರಿಸಬಹುದು. | • ಪದ್ಯದಲ್ಲಿ ಬಂದಿರುವ ಪ್ರಾಸಪದಗಳನ್ನು ಬರೆಯುವುದು.<br>• ಚಿತ್ರ ನೋಡಿ ವಿವರಣೆ ಬರೆಯುವುದು. | • ಸಮಾನ ಪದಗಳು ಮತ್ತು ಸರ್ವನಾಮಗಳನ್ನು ಉಪಯೋಗಿಸಿಕೊಂಡು ಸೃಜನಾತ್ಮಕ ರಚನೆಗಳಾದ ಲಘುಟಿಪ್ಪಣಿಗಳು, ಸರಳಕಥೆಗಳು ಮೊದಲಾದವುಗಳನ್ನು ರಚಿಸುವುದು. |
| • ಚಿತ್ರಗಳನ್ನು ಬಿಡಿಸುವುದರಿಂದ ಚಿತ್ರರಚನೆಯಲ್ಲಿ ಆಸಕ್ತಿ ಮೂಡುವುದು. | • ಚಿತ್ರ ಬಿಡಿಸಿ ಬಣ್ಣ ಹಚ್ಚಿ ತರಗತಿಯಲ್ಲಿ ಪ್ರದರ್ಶಿಸುವುದು. | • ಸೃಜನಾತ್ಮಕ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡು ತನ್ನ ರಚನೆಗಳನ್ನು ತರಗತಿಯ ಸಂಚಿಕೆಗಳು ಹಾಗೂ ಹಸ್ತಪ್ರತಿಗಳಿಗೆ ನೀಡುವುದು. |
| • ಕಥೆಗಳನ್ನು ಸಂಗ್ರಹಿಸಿ ಓದುವುದರಿಂದ ಓದುವಿಕೆಯಲ್ಲಿ ಆಸಕ್ತಿ ಮೂಡುವುದು. | • ಚಂದ್ರನ ಕುರಿತಾದ ಕಥೆಗಳನ್ನು ಸಂಗ್ರಹಿಸಿ ತರಗತಿಯಲ್ಲಿ ಹೇಳುವುದು.<br>• ಚಂದ್ರನ ಕುರಿತಾದ ಕವಿತೆಗಳನ್ನು ಆಲಿಸುವುದು/ ಶಿಶುಗೀತೆಗಳನ್ನು ಸಂಗ್ರಹಿಸುವುದು. | • ಕಥೆ, ಕವಿತೆ, ಲಘು ಟಿಪ್ಪಣಿಗಳನ್ನು ಆಲಿಸಿ/ಓದಿ ತನ್ನದೇ ಭಾಷೆಯಲ್ಲಿ ಹೇಳುವುದು ಹಾಗೂ ಬರೆಯುವುದು. |
| • ಓದಿದ ಆಶಯಗಳು ಸ್ಪಷ್ಟವಾಗುವಂತೆ ಪ್ರಶ್ನೆಗಳನ್ನು ತಯಾರಿಸಬಹುದು. | • ಗದ್ಯಭಾಗವನ್ನೋದಿ ಪ್ರಶ್ನೆಗಳನ್ನು ತಯಾರಿಸಬಹುದು. | • ತನ್ನ ಸಹಪಾಠಿಗಳ ರಚನೆಗಳಲ್ಲಿನ ಮೌಲ್ಯನಿರ್ಣಯ ಮಾಡಿ ಇತರರ ರಚನೆಗಳಿಲ್ಲದ ಪ್ರಯೋಗಗಳು, ಶೈಲಿಗಳನ್ನು ವಿಶ್ಲೇಷಿಸಿ ತನ್ನ ರಚನೆಗಳನ್ನು ಉತ್ತಮ ಪಡಿಸುವುದು. |

# ಸಿಂಡ್ರೆಲ್ಲಾ

## ❑ ಪಾಠದೆಡೆಗೆ

ಸಿಂಡ್ರೆಲ್ಲಾ ಕಥೆಯ ಕೆಲವು ಚಿತ್ರಗಳನ್ನು ತರಗತಿಯಲ್ಲಿ ಪ್ರದರ್ಶಿಸುವುದು. ಅನಂತರ ಕೆಲವು ಪ್ರಶ್ನೆಗಳನ್ನು ಕೇಳುವುದು. ಇವಳು ಯಾರು? ಇವಳಿಗೆ ಮುಂದೆ ಏನಾಗಿರಬಹುದು? ಹೀಗೆ ಮಕ್ಕಳಿಗೆ ಕಥೆಯಲ್ಲಿ ಆಸಕ್ತಿ ಮೂಡುವಂತೆ ಮಾಡುವುದು. ಅವರು ನೋಡಿದ ದೃಶ್ಯಗಳಿಗೆ ಸಂಬಂಧಿಸಿದ ಕಥೆಯು ಪಾಠಪುಸ್ತಕದಲ್ಲಿದೆ ಎಂದು ಹೇಳಿ ಮಕ್ಕಳಿಗೆ ಪಾಠಭಾಗವನ್ನು ಓದಲು ನೀಡುವುದು. ಯೋಗ್ಯವಾದ ಇತರ ವಿಧಾನಗಳನ್ನು ಪಾಠಪ್ರವೇಶಕ್ಕೆ ಬಳಸಬಹುದು.

- ಓದುವಿಕೆಯ ವಿವಿಧ ರೀತಿಗಳನ್ನು ಪಾಲಿಸಿ ಓದಿಸುವುದು. ಕಥೆಯನ್ನು ಸಂಕ್ಷಿಪ್ತವಾಗಿ ಹೇಳಲು ಸೂಚಿಸುವುದು.

## ❑ ಪದಗಳ ಅರ್ಥ ಕಂಡುಹಿಡಿಯುವ

ನವೀನ ಪದಗಳನ್ನು ಪಾಠಭಾಗದಿಂದ ಆರಿಸಿ, ಅರ್ಥಕೋಶದ ಸಹಾಯದಿಂದ ಮಕ್ಕಳು ಅರ್ಥವನ್ನು ಕಂಡುಹಿಡಿಯಲಿ.

ಅಧ್ಯಾಪಕರು ಮೌಲ್ಯನಿರ್ಣಯ ಮಾಡುವುದು.

## ❑ ಉತ್ತರಿಸುವ

ಕೊಟ್ಟಿರುವ ಪ್ರಶ್ನೆಗಳಿಗೆ ಪಾಠ ಭಾಗದಿಂದ ಸೂಕ್ತವಾದ ಉತ್ತರಗಳನ್ನು ಮಕ್ಕಳು ಕಂಡುಕೊಳ್ಳಲಿ. ಉತ್ತರಗಳನ್ನು ಅಭ್ಯಾಸ ಪುಸ್ತಕದಲ್ಲಿ ಬರೆಯಲಿ. ತರಗತಿಯಲ್ಲಿ ಮಂಡಿಸಲಿ. ಅಧ್ಯಾಪಕರು ಮೌಲ್ಯ ನಿರ್ಣಯ ಮಾಡುವುದು.

## ❑ ಸಂಭಾಷಣೆ ಬರೆಯುವ

ಕಿನ್ನರಿ ಸಿಂಡ್ರೆಲ್ಲಾಳ ಬಳಿಗೆ ಬಂದ ಸಂದರ್ಭದ ಕುರಿತು ಚರ್ಚಿಸುವುದು. ಕಿನ್ನರಿ ಮತ್ತು ಸಿಂಡ್ರೆಲ್ಲಾ ಪರಸ್ಪರ ಏನೆಲ್ಲಾ ಮಾತನಾಡಿರಬಹುದು. ಮಕ್ಕಳಲ್ಲಿ ಚರ್ಚಿಸುವುದು. ಅನಂತರ ಸಂಭಾಷಣೆಯನ್ನು ಮಕ್ಕಳು ವೈಯಕ್ತಿಕವಾಗಿ ಬರೆಯಲಿ. ಗುಂಪಿನಲ್ಲಿ ಪರಸ್ಪರ ಚರ್ಚಿಸಿ ಸಂಭಾಷಣೆಯನ್ನು ಉತ್ತಮಪಡಿಸಲಿ. ಗುಂಪಿನಿಂದ ಮಂಡನೆ. ಮಕ್ಕಳು ತಮ್ಮದನ್ನು ತಿದ್ದಿ ಉತ್ತಮಪಡಿಸಲಿ. ಅಧ್ಯಾಪಕರು ಬರೆದ ಸಂಭಾಷಣೆಯನ್ನು ಪ್ರದರ್ಶಿಸುವುದು. ಮಕ್ಕಳಿಗೆ ತಮ್ಮ ಉತ್ಪನ್ನವನ್ನು ಉತ್ತಮಪಡಿಸಲು ಅವಕಾಶ ನೀಡುವುದು. ಅಧ್ಯಾಪಕರು ಮೌಲ್ಯನಿರ್ಣಯ ಮಾಡುವುದು.

## ❑ ಸಂಭಾಷಣೆ

ಕಿನ್ನರಿ : ಯಾರು ನೀನು?

ಸಿಂಡ್ರೆಲ್ಲಾ : ನಾನು ಸಿಂಡ್ರೆಲ್ಲಾ

ಕಿನ್ನರಿ : ನೀನು ಅಳುವುದು ಯಾಕೆ? ನಿನಗೆ ಏನಾಯಿತು?

ಸಿಂಡ್ರೆಲ್ಲಾ : ನನ್ನ ಚಿಕ್ಕಮ್ಮ ಮತ್ತು ತಂಗಿಯರು ನನ್ನನ್ನು ಬಿಟ್ಟು ನರ್ತನ ಭೋಜನ ಕೂಟಕ್ಕೆ ಹೋದರು. ನನಗೆ ಧರಿಸಲು ಹೊಸ ಉಡುಪುಗಳನ್ನು ಕೊಡದೆ ಮನೆ ಕೆಲಸ ಮಾಡಿಕೊಂಡು ಇರಲು ಹೇಳಿದ್ದಾರೆ.

| | | |
|---|---|---|
| ಕಿನ್ನರಿ | : | ಆದಕ್ಕೇಕೆ ಅಳುತ್ತಿಯಾ? ನಿನ್ನನ್ನು ನರ್ತನ ಭೋಜನ ಕೂಟಕ್ಕೆ ಕಳುಹಿಸುವ ವ್ಯವಸ್ಥೆಯನ್ನು ನಾನು ಮಾಡುತ್ತೇನೆ. ಆಗಬಹುದೇ? |
| ಸಿಂಡ್ರೆಲ್ಲಾ | : | ಅದು ಹೇಗೆ? |
| ಕಿನ್ನರಿ | : | ನೀನು ಹಿತ್ತಿಲಿನಿಂದ ಕುಂಬಳ ಕಾಯಿ, ಬೋನಿನಲ್ಲಿರುವ ಇಲಿ, ಹೆಗ್ಗಣಗಳನ್ನು ತಾ. |
| ಸಿಂಡ್ರೆಲ್ಲಾ | : | ಆಗಲಿ, ತರುತ್ತೇನೆ. |
| ಕಿನ್ನರಿ | : | ನಾನು ಈ ಮಂತ್ರದಂಡದಿಂದ ಇಲಿಗಳನ್ನು ಕುದುರೆಗಳನ್ನಾಗಿಯೂ ಹೆಗ್ಗಣವನ್ನು ಸಾರಥಿಯನ್ನಾಗಿಯೂ ಮಾಡುತ್ತೇನೆ. ನಿನ್ನ ಬಟ್ಟೆ ಬರೆಗಳನ್ನು ಬಹಳ ಚಂದವಾಗಿ ಕಾಣುವಂತೆ ಬದಲಾಯಿಸುತ್ತೇನೆ. |
| ಸಿಂಡ್ರೆಲ್ಲಾ | : | ಅಹಾ! ನನ್ನ ಬಟ್ಟೆ ಸುಂದರವಾದ ರೇಷ್ಮೆ ಬಟ್ಟೆಯಾಗಿ ಬದಲಾಯಿತು. |
| ಕಿನ್ನರಿ | : | ಈ ಗಾಜಿನ ಚಪ್ಪಲಿಯನ್ನು ಧರಿಸಿಕೋ. |
| ಸಿಂಡ್ರೆಲ್ಲಾ | : | ಆಗಲಿ. |
| ಕಿನ್ನರಿ | : | ಆದರೆ ಒಂದು ಮಾತು ನೆನಪಿನಲ್ಲಿಟ್ಟುಕೋ. ರಾತ್ರಿ ಹನ್ನೆರಡು ಗಂಟೆ ಹೊಡೆಯುವುದರೊಳಗೆ ನೀನು ಮರಳಿ ಮನೆಗೆ ತಲುಪಬೇಕು. ಅನಂತರ ಎಲ್ಲವೂ ಮಾಯವಾಗುತ್ತವೆ. |
| ಸಿಂಡ್ರೆಲ್ಲಾ | : | ಆಗಲಿ. ಹಾಗೆಯೇ ಮಾಡುತ್ತೇನೆ! |

### ❑ ಪದ ಮತ್ತು ವಾಕ್ಯ ಬರೆಯುವ

ಕೊಟ್ಟಿರುವ ಪದಗಳ ಅಕ್ಷರಗಳನ್ನು ಬಳಸಿಕೊಂಡು ಸಾಧ್ಯವಿರುವಷ್ಟು ಪದಗಳನ್ನು ಮಕ್ಕಳು ಬರೆಯಲಿ.

| ಬಾಲಗಂಗಾಧರ ತಿಲಕ | ವಿದ್ಯಾನಗರ | ಹಿಮಕರಡಿ |
|---|---|---|
| ಬಾಲ | ನರ | ಹಿಮ |
| ಗಂಗಾಧರ | ಗರ | ಕರಡಿ |
| ತಿಲಕ | ನಗರ | ಕಡಿ |
| ಧರ | ವಿದ್ಯಾ | ಹಿಡಿ |
| ಗಂಗಾ | ನಗ | ಮಡಿ |
| ರತಿ | ರವಿ | ಕಹಿ |
| ತಿಲ | ಗವಿ | ಕರ |
| ಗತಿ | | ಮರ |

ಮಕ್ಕಳು ತಮಗೆ ಇಷ್ಟವಾದ ಪದಗಳನ್ನು ಉಪಯೋಗಿಸಿ ಬೇರೆ ಬೇರೆ ವಾಕ್ಯಗಳನ್ನು ವೈಯಕ್ತಿಕವಾಗಿ ಬರೆಯಲಿ.

ಬರೆದ ವಾಕ್ಯಗಳನ್ನು ಮಂಡಿಸಲಿ. ಅಧ್ಯಾಪಕರು ಆ ವಾಕ್ಯಗಳನ್ನು ಕರಿಹಲಗೆಯಲ್ಲಿ ಬರೆಯುವುದು. ಅಧ್ಯಾಪಕರು ಮೌಲ್ಯನಿರ್ಣಯ ಮಾಡುವುದು.

- ಕಾಡಿನಲ್ಲಿ ತುಂಬಾ ಮರಗಳಿವೆ.
- ರವಿಯು ಪೂರ್ವದಲ್ಲಿ ಉದಯಿಸುತ್ತಾನೆ.
- ನಗರದಲ್ಲಿ ತುಂಬಾ ವಾಹನಗಳಿವೆ.
- ಹಾಗಲಕಾಯಿ ಕಹಿಯಾಗಿದೆ.
- ಮರಗಳನ್ನು ಕಡಿಯಬಾರದು.
- ಅವನು ಗರಬಡಿದಂತೆ ನಿಂತನು.
- 

❑ **ಗದ್ಯಭಾಗವನ್ನು ಪೂರ್ತಿಗೊಳಿಸುವ**

ಗದ್ಯಭಾಗವನ್ನು ಓದಿ ಅಡಿಗೆರೆ ಎಳೆದ ಪದಗಳನ್ನು ಆರಿಸಿ ಬರೆಯುವುದು. ಆರಿಸಿದ ಪದಗಳನ್ನು ಕೊಟ್ಟಿರುವ ಗದ್ಯ ಭಾಗದ ಬಿಟ್ಟ ಸ್ಥಳದಲ್ಲಿ ಯೋಗ್ಯ ರೀತಿಯಲ್ಲಿ ತುಂಬಿಸಿ ಪೂರ್ತಿಗೊಳಿಸಿ ಮಂಡಿಸಲಿ. ಅಧ್ಯಾಪಕರು ಮೌಲ್ಯನಿರ್ಣಯ ಮಾಡುವುದು.

❑ **ವಾಕ್ಯ ಬರೆಯುವ**

ಕೋಣೆಯಲ್ಲಿ ಕೊಟ್ಟಿರುವ ಪದಗಳನ್ನು ಬಳಸಿ ಅರ್ಥಪೂರ್ಣವಾದ ವಾಕ್ಯಗಳನ್ನು ಮಕ್ಕಳು ವೈಯಕ್ತಿಕವಾಗಿ ಬರೆದು ಮಂಡಿಸಲಿ. ಬರೆದ ವಾಕ್ಯಗಳನ್ನು ಪರಸ್ಪರ ಮೌಲ್ಯನಿರ್ಣಯ ಮಾಡಲಿ. ಅಧ್ಯಾಪಕರು ಮೌಲ್ಯನಿರ್ಣಯ ಮಾಡುವುದು.

- ಹೊಳೆಯಲ್ಲಿ ನೀರು ಹರಿಯುತ್ತದೆ.
- ಆಕಾಶದಲ್ಲಿ ನಕ್ಷತ್ರಗಳಿವೆ.
- ಕೆರೆಯಲ್ಲಿ ಮೀನು ಇದೆ.
- ಮನೆಯ ಬಳಿ ಹೊಳೆ ಇದೆ.
- ಮಗು ನಿದ್ದೆ ಮಾಡುತ್ತಿದೆ.
- ಮಳೆ ಬರುವಾಗ ಕೊಡೆ ಹಿಡಿಯುತ್ತೇವೆ.
- ಬಸ್ಸಿನಲ್ಲಿ ಶಾಲೆಗೆ ಹೋಗುತ್ತೇವೆ.
- ಕಡಲಿನಲ್ಲಿ ತುಂಬಾ ಮೀನುಗಳು ಇವೆ.

❑ **ಕಥೆಗಳನ್ನು ಸಂಗ್ರಹಿಸುವ**

- ಶಾಲಾ ಗ್ರಂಥಾಲಯದಿಂದ ಅಥವಾ ಇತರ ಮೂಲಗಳಿಂದ ಮಕ್ಕಳಿಗೆ ಇಷ್ಟವಿರುವ ಕಥೆ ಪುಸ್ತಕಗಳನ್ನು ಓದಲು ನೀಡುವುದು.
- ಓದಿದ ಕಥೆಗಳಲ್ಲಿ ಮಕ್ಕಳಿಗೆ ಇಷ್ಟವಾದ ಕಥೆಯನ್ನು ತರಗತಿಯಲ್ಲಿ ಹೇಳಲು ಅವಕಾಶವನ್ನು ನೀಡುವುದು.

## ಗೊಂಬೆ

ಮಕ್ಕಳು ಬಾಲ್ಯದಲ್ಲಿ ಆಡುವ ಆಟಗಳನ್ನು ನೆನಪಿಸಲು ಹೇಳಿ. ನಿಮಗೆ ಗೊಂಬೆ ಇಷ್ಟವೇ? ಯಾಕೆ? ಇತ್ಯಾದಿ ಪ್ರಶ್ನೆಗಳ ಮೂಲಕ 'ಗೊಂಬೆ' ಪದ್ಯವನ್ನು ಓದಲು ಮಕ್ಕಳಲ್ಲಿ ಹೇಳುವುದು.

❑ **ಪದ್ಯ ಹಾಡುವ**

ಮಕ್ಕಳು ಪದ್ಯವನ್ನು ವೈಯಕ್ತಿಕವಾಗಿ ಓದಲಿ, ಆಶಯವನ್ನು ಕಂಡುಕೊಳ್ಳಲಿ. ಮಕ್ಕಳನ್ನು ಗುಂಪುಗಳಾಗಿ ಮಾಡುವುದು. ಗುಂಪಿನಲ್ಲಿ ಪದ್ಯವನ್ನು ಹಾಡಲಿ. ಮೌಲ್ಯನಿರ್ಣಯದ ಮೂಲಕ ಉತ್ತಮವಾಗಿ ಹಾಡಿದ್ದು ಯಾವ ಗುಂಪು ಎಂದು ಮಕ್ಕಳೇ ಕಂಡುಕೊಳ್ಳಲಿ. ಅಧ್ಯಾಪಕರು ಸಹಾಯವನ್ನು ನೀಡುವುದು.

ಹಾಡಿನ ಧ್ವನಿಮುದ್ರಿಕೆಯನ್ನು ಆಲಿಸಲು ಅವಕಾಶವನ್ನು ನೀಡುವುದು.

❑ **ಪದಗಳ ಅರ್ಥ ಕಂಡುಹಿಡಿಯುವ**

ಪಾಠಭಾಗದಿಂದ ನವೀನ ಪದಗಳನ್ನು ಆರಿಸಲಿ. ಅರ್ಥಕೋಶದ ಸಹಾಯದಿಂದ ಪದಗಳ ಅರ್ಥಗಳನ್ನು

ಕಂಡುಹಿಡಿದು ಬರೆಯಲಿ. ಅಧ್ಯಾಪಕರು ಮೌಲ್ಯನಿರ್ಣಯ ಮಾಡುವುದು.

### ❑ ಉತ್ತರಿಸುವ

ಪಾಠಭಾಗದಿಂದ ಮಕ್ಕಳು ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳಲಿ. ಉತ್ತರಗಳನ್ನು ವೈಯುಕ್ತಿಕವಾಗಿ ಬರೆದು ಮಂಡಿಸಲಿ. ಅಧ್ಯಾಪಕರು ಮೌಲ್ಯನಿರ್ಣಯ ಮಾಡುವುದು.

### ❑ ಪ್ರಾಸ ಪದಗಳನ್ನು ಬರೆಯುವ

ಕೊಟ್ಟಿರುವ ಪದಗಳ ವಿಶೇಷತೆಯನ್ನು ತಿಳಿಯಲಿ. ಅದೇ ರೀತಿಯ ಇತರ ಪ್ರಾಸಪದಗಳನ್ನು ಪದ್ಯದಿಂದ ಹುಡುಕಿ ಬರೆಯಲಿ. ಬರೆದ ಪ್ರಾಸಪದಗಳನ್ನು ಮಕ್ಕಳು ಪರಸ್ಪರ ಹೋಲಿಸಿ ನೋಡಲಿ.

ಕೆಲವರು ಮಂಡನೆ ಮಾಡಲಿ.

ಅಧ್ಯಾಪಕರು ಕರಿಹಲಗೆಯಲ್ಲಿ ಬರೆಯುವುದು. ಪ್ರಾಸಪದಗಳ ಪಟ್ಟಿಯನ್ನು ಬೆಳೆಸಲು ಅವಕಾಶವನ್ನು ನೀಡುವುದು.

### ಪ್ರಾಸ ಪದಗಳು

| | | |
|---|---|---|
| ನೋಡಿ | – | ಕೋಡಿ |
| ಹಾಡಿ | – | ಬುಗಡಿ |
| ನಲಿಯುವೆನು | – | ಕುಣಿಯುವೆನು |
| ಅಕ್ಕರೆ | – | ಸಕ್ಕರೆ |
| ನಾರೆ | – | ಹೀರೆ |
| ಸಿಂಗರಿಸಿ | – | ತಂದಿರಿಸಿ |

### ❑ ವಿವರಿಸುವ

ಉತ್ತಮ ಹವ್ಯಾಸಗಳಲ್ಲಿ ತಮ್ಮನ್ನು ತೊಡಗಿಸಿಕೊಂಡು ಪ್ರತಿಯೊಬ್ಬ ವ್ಯಕ್ತಿಯೂ ಬಿಡುವಿನ ವೇಳೆಯನ್ನು ಸದುಪಯೋಗಗೊಳಿಸಬೇಕು.

ಮಕ್ಕಳ ಒಳ್ಳೆಯ ಹವ್ಯಾಸವನ್ನು ಗುರುತಿಸುವುದು. ಅವುಗಳಿಗೆ ಅಗತ್ಯವಾದ ಪ್ರೋತ್ಸಾಹ ನೀಡುವುದು. ಸಲಹೆ ಸೂಚನೆಗಳನ್ನು ನೀಡುವುದರಿಂದ ಮಕ್ಕಳಲ್ಲಿ ಬಿಡುವಿನ ವೇಳೆಯನ್ನು ಸದುಪಯೋಗಗೊಳಿಸುವ ಮನೋಭಾವವನ್ನು ಬೆಳೆಸಬಹುದು.

## ICT ಉಪಯೋಗಿಸಿ ಹವ್ಯಾಸಗಳ ಚಿತ್ರಗಳ ವೀಕ್ಷಣೆ ಮಾಡುವುದು

ಬಿಡುವಿನ ವೇಳೆಯಲ್ಲಿ ಏನೆಲ್ಲಾ ಮಾಡುತ್ತೀರಿ ಎಂದು ಮಕ್ಕಳಲ್ಲಿ ಕೇಳುತ್ತಾ ಸರಳ ಚರ್ಚೆ ನಡೆಸುವುದು. ಆಶಯ ಭೂಪಟ ತಯಾರಿಸುವುದು.




ಇದರ ಆಧಾರದಲ್ಲಿ ಬಿಡುವಿನ ವೇಳೆಯನ್ನು ಹೇಗೆ ಸದುಪಯೋಗ ಪಡಿಸುವುದೆಂದು ವೈಯುಕ್ತಿಕವಾಗಿ ವಿವರಿಸಿ ಬರೆಯಲಿ. ತರಗತಿಯಲ್ಲಿ ಮಂಡಿಸಲಿ.

## ನನ್ನ ಹವ್ಯಾಸ

ನಾವು ನಮ್ಮ ಬಿಡುವಿನ ವೇಳೆಯನ್ನು ಯೋಗ್ಯವಾದ ಕೆಲಸಗಳಿಗಾಗಿ ಉಪಯೋಗಿಸಬೇಕು. ಇದಕ್ಕಾಗಿ ಕೆಲವು ಹವ್ಯಾಸಗಳನ್ನು ಬೆಳೆಸಿಕೊಳ್ಳಬೇಕು. ಇದರಿಂದ ನಮಗೆ ಉತ್ತಮ ಆರೋಗ್ಯ, ಮಾನಸಿಕ ನೆಮ್ಮದಿ ಮೊದಲಾದ ಹಲವಾರು ಪ್ರಯೋಜನಗಳು ಲಭಿಸುತ್ತದೆ.

ಬಿಡುವಿನ ವೇಳೆಯಲ್ಲಿ ತರಕಾರಿ ತೋಟವನ್ನು ಮಾಡುವುದು ನನ್ನ ಹವ್ಯಾಸ. ತರಕಾರಿ ಗಿಡಗಳನ್ನು ಬೆಳೆಸುವುದು, ಅವುಗಳಿಗೆ ಮಣ್ಣು, ಗೊಬ್ಬರ, ನೀರು ಹಾಕುವುದು, ಕಳೆಗಳನ್ನು ಕೀಳುವುದು, ಬಲಿತ ತರಕಾರಿಗಳನ್ನು ಕೊಯ್ಯುವುದು ಮೊದಲಾದ ಕೆಲಸಗಳನ್ನು ಮಾಡುತ್ತೇನೆ. ಈ ಕೆಲಸಗಳಿಂದ ನನ್ನ ಮನಸ್ಸಿಗೆ ತುಂಬಾ ಸಂತೋಷವಾಗುತ್ತದೆ. ಮಾತ್ರವಲ್ಲದೆ ಮನೆಗೆ ಅಗತ್ಯವಾದ ಬೆಂಡೆಕಾಯಿ, ತೊಂಡೆಕಾಯಿ, ಬದನೆ, ಸೌತೆ, ಅಲಸಂಡೆ ಮೊದಲಾದ ಒಳ್ಳೆಯ ತರಕಾರಿಗಳು ಲಭಿಸುತ್ತವೆ. ತರಕಾರಿಗಳಿಗೆ ಖರ್ಚುಮಾಡುವ ಹಣವೂ ಉಳಿತಾಯವಾಗುತ್ತದೆ. ರಾಸಾಯನಿಕ ಕೀಟನಾಶಕಗಳ ಉಪಯೋಗ ಮಾಡದಿರುವುದರಿಂದ ಉತ್ತಮವಾದ ತರಕಾರಿ ಸಿಗುತ್ತದೆ. ಇದರಿಂದ ನಮ್ಮ ಆರೋಗ್ಯವೂ ವರ್ಧಿಸುತ್ತದೆ.

❑ **ಸಂಗ್ರಹಿಸಿ ಪದ್ಯ ಹಾಡುವ**

ಮಕ್ಕಳಲ್ಲಿ ಓದುವ ಹವ್ಯಾಸವನ್ನು ಬೆಳೆಸಲು ಈ ಚಟುವಟಿಕೆಯನ್ನು ನೀಡಲಾಗಿದೆ. ಶಾಲಾ ಗ್ರಂಥಾಲಯ ಅಥವಾ ಇತರ ಮೂಲಗಳಿಂದ ಗೊಂಬೆಯ ಕುರಿತಾದ ಪದ್ಯಗಳನ್ನು ಸಂಗ್ರಹಿಸುವುದು. ಆ ಪದ್ಯಗಳನ್ನು ತರಗತಿಯಲ್ಲಿ ಹಾಡಲು ಅವಕಾಶವನ್ನು ನೀಡುವುದು. ಉತ್ತಮವಾಗಿ ಹಾಡಿದ ಮಗುವನ್ನು ಅಭಿನಂದಿಸುವುದು. ಬಾಲಸಭೆಯಲ್ಲಿ ಹಾಡಲು ಅವಕಾಶವನ್ನು ನೀಡುವುದು.

- 'ಗೊಂಬೆ' ಯ ಕುರಿತು ಪದ್ಯ.

**ಪೂರಕ ಓದಿಗೆ**

## ಮುದ್ದಿನ ಗೊಂಬೆ

ಗಿಜಿ ಗಿಜಿ ಗೊಂಬೆ
ಪುಟಾಣಿ ಗೊಂಬೆ
ಕಣ್ಣನು ಅರಳಿಸಿ ನೋಡುವ ಗೊಂಬೆ
ಗಿಲಿ ಗಿಲಿ ಗೊಂಬೆ
ಚೆಲುವಿನ ಗೊಂಬೆ
ಕಾಲನು ಎತ್ತುತ ಕುಣಿಯುವ ಗೊಂಬೆ
ಟ್ರೇಂ ಟ್ರೇಂ ಗೊಂಬೆ
ಮುದ್ದಿನ ಗೊಂಬೆ
ಕೈಯನು ಬೀಸುತ ಓಡುವ ಗೊಂಬೆ

**– ಭಾಸ್ಕರ ಅಡ್ವಳ**

## ಬೊಂಬೆ ಬೊಂಬೆ ಬೊಂಬೇ

ಬೊಂಬೆ ಬೊಂಬೆ ಬೊಂಬೇ
ಬೊಂಬೆ ಬೊಂಬೆ ಬೊಂಬೇ
ಬೊಂಬೆ ಬೊಂಬೆ ಬೊಂಬೇ ।।3।। ।।ಬೊಂಬೆ।।
ತಂದಿರುವೆ ನಿಮಗೆ ಬೊಂಬೆ
ವಿಧವಿಧವಾದ ಆಟದ ಬೊಂಬೆ
ಎಲ್ಲ ಊರಿನ ಸುಂದರ ಬೊಂಬೆ ।।3।। ।।ಬೊಂಬೆ।।

ಕೀಲಿ ಕೊಟ್ಟರೆ ಕುಣಿಯುವ ಬೊಂಬೆ
ಥೈ ಥೈ ಥಕ ಥೈ
ಥೈ ಥೈ ಥಕ ಥೈ
ಥೈ ಥೈ ಥಕ ಥೈ
ಥೈ ಥೈ ॥3॥ ॥ಬೊಂಬೆ॥
ಕೀಲಿ ಕೊಟ್ಟರೆ ಆಡುವ ಗೊಂಬೆ
ಲಾ ಲ ಲಾ ಲ ಲಾ ಲ ಲಾ ಲ
ಲಾ ಲ ಲಾ ಲ ಲಾ ॥3॥ ॥ಬೊಂಬೆ॥
ಚೆನ್ನಪಟ್ಟದ ಬಣ್ಣದ ಗೊಂಬೆ
ಟಕ ಟಕ ಟಕ ಟಕ
ಟಕ್ ಟಕ್ ಟಕ್ ॥3॥
ಪಾಂಡಿಚೇರಿಯ ಮಣ್ಣಿನ ಗೊಂಬೆ
ಠಣ್ ಠಣ್ ಠಣ್ ಠಣ್
ಠಣ್ ಠಣ್ ಠಣ್ ಠಣ್ ಠಣ್
ಲಾಗ ಹಾಕುವ ಕೋತಿಯ ಗೊಂಬೆ
ಗೇರ್ ಗೇರ್ ಮಂಗಣ್ಣ
ಗೇರ್ ಗೇರ್ ಮಂಗಣ್ಣ ॥3॥ ॥ಬೊಂಬೆ॥
ತಾಳ ಹಾಕುವ ಕರಡಿಯ ಗೊಂಬೆ
ಥಕ್ಕ ಧಿಮಿ ಥಕ್ಕ ಧಿಮಿ
ಥಕ್ಕ ಧಿಮಿ ಧಕ್ಕ ಧಿರಿ ॥3॥ ॥ಬೊಂಬೆ॥
ಸಿಟ್ಟಲಿ ನಡೆವ ಸಿಪಾಯಿ ಬೊಂಬೇ
ಲೆಫ್ಟ್ ರೈಟ್ ಲೆಫ್ಟ್ ರೈಟ್
ಲೆಫ್ಟ್ ರೈಟ್ ಲೆಫ್ಟ್ ॥3॥ ॥ಬೊಂಬೆ॥
ನಗುವ ಹುಡುಗಿಯ ಚಂದದ ಗೊಂಬೆ
ಹ್ಹ ಹ್ಹ ಹ್ಹ ಹ್ಹ ಹ್ಹ ಹ್ಹ ಹ್ಹ ಹ್ಹ ॥ಬೊಂಬೆ॥

### ❑ ಪ್ರದರ್ಶಿಸುವ

ಮಕ್ಕಳು ಸಂಗ್ರಹಿಸಿದ ಗೊಂಬೆಗೆ ಸಂಬಂಧಿಸಿದ ಪದ್ಯಗಳನ್ನು ಭಿತ್ತಿಪತ್ರಿಕೆಯಲ್ಲಿ ಪ್ರದರ್ಶಿಸಲಿ. ಅವುಗಳನ್ನು ಸಂಗ್ರಹಿಸಿ ಸಂಚಿಕೆ ತಯಾರಿಸುವುದು.

### ❑ ಚಿತ್ರ ಬಿಡಿಸಿ ಬಣ್ಣ ಹಚ್ಚುವ

ತಮಗೆ ಇಷ್ಟವಾದ ಆಟಿಕೆಯ ಚಿತ್ರವನ್ನು ಬಿಡಿಸಿ ಬಣ್ಣ ಹಚ್ಚಲು ಮಕ್ಕಳಿಗೆ ಹೇಳುವುದು. ಉತ್ತಮವಾದ ಚಿತ್ರ ಯಾವುದು? ಯಾಕೆ? – ಸೂಚಕಗಳ ಆಧಾರದಲ್ಲಿ ಮೌಲ್ಯ ನಿರ್ಣಯ ಮಾಡುವುದು. ಮಕ್ಕಳು ಬಿಡಿಸಿದ ಚಿತ್ರಗಳನ್ನು ಭಿತ್ತಿಪತ್ರಿಕೆಯಲ್ಲಿ ಪ್ರದರ್ಶಿಸಲಿ.

### ❑ ಹುಡುಕಿ ಬರೆಯುವ

ಭಾಷಾ ಆಟಗಳು ಮಕ್ಕಳಿಗೆ ಸಂತೋಷವನ್ನು ಉಂಟುಮಾಡುವುದಲ್ಲದೆ ಅವರ ಪದ ಸಂಪತ್ತು ಬೆಳೆಯಲು ಸಹಾಯಕವಾಗುತ್ತವೆ. ನೀಡಲಾದ ಪದಗಳಲ್ಲಿ ಗುಂಪಿಗೆ ಸೇರದ ಪದಗಳಿವೆ. ಅಂಥ ಪದಗಳನ್ನು ಮಕ್ಕಳು ಕಂಡುಕೊಳ್ಳಲಿ.

ಮಕ್ಕಳು ಪಾಠಪುಸ್ತಕದ ಚಟುವಟಿಕೆಯನ್ನು ವೈಯುಕ್ತಿಕವಾಗಿ ಮಾಡಲಿ. ಕೆಲವರು ಮಂಡಿಸಲಿ. ಅಧ್ಯಾಪಕರು ಕರಿಹಲಗೆಯಲ್ಲಿ ಬರೆಯುವುದು. ಅಧ್ಯಾಪಕರು ಮೌಲ್ಯನಿರ್ಣಯ ಮಾಡುವುದು.

- ಬೆಕ್ಕು
- ಬೆಂಚು
- ಅಣ್ಣ
- ಕತ್ತೆ
- ಪಾಯಸ

- ❑ **ಕ್ರಮೀಕರಿಸಿ ಬರೆಯುವ**

ಪದಗಳನ್ನು ಯೋಗ್ಯವಾದ ರೀತಿಯಲ್ಲಿ ಕ್ರಮೀಕರಿಸಿ, ಅರ್ಥಪೂರ್ಣ ವಾಕ್ಯಗಳನ್ನು ತಯಾರಿಸುವುದಕ್ಕಾಗಿ ಈ ಚಟುವಟಿಕೆಯನ್ನು ನೀಡಲಾಗಿದೆ.

ಚಟುವಟಿಕೆಯನ್ನು ವೈಯಕ್ತಿಕವಾಗಿ ಮಕ್ಕಳು ಮಂಡಿಸಲಿ. ಪರಸ್ಪರ ಹೋಲಿಸಿ ಸರಿಪಡಿಸಲಿ. ಅಧ್ಯಾಪಕರು ಮಕ್ಕಳಿಗೆ ಮಾದರಿಯನ್ನು ಪ್ರದರ್ಶಿಸುವುದು. ಮಕ್ಕಳಿಗೆ ಸರಿಪಡಿಸಲು ಅವಕಾಶವನ್ನು ನೀಡುವುದು. ಅಧ್ಯಾಪಕರು ಮೌಲ್ಯನಿರ್ಣಯ ಮಾಡುವುದು.

- ಕುಂಬಾರನಿಗೆ ವರುಷ ದೊಣ್ಣೆಗೆ ನಿಮಿಷ
- ರಸ್ತೆಯ ನಿಮಯಗಳನ್ನು ಪಾಲಿಸಬೇಕು
- ಕಾಗೆ ಸುತ್ತಲೂ ನೋಡಿತು
- ನರಿಯೊಂದು ದ್ರಾಕ್ಷೆಯ ತೋಟಕ್ಕೆ ನುಗ್ಗಿತು
- ಮರದ ಅಡಿಯಲ್ಲಿ ಮಲಗಿತು

# ಚಂದಿರನೇತಕೆ ಓಡುವನಮ್ಮ

- ❑ **ಪದ್ಯದೆಡೆಗೆ**

ಚಂದ್ರನ ಕುರಿತು ಚರ್ಚಿಸುವುದು. ಚಂದಿರನನ್ನು ನೋಡಿದ್ದೀರಾ? ಚಂದಿರನನ್ನು ನೋಡಿದಾಗ ನಿಮಗೆ ಏನೇನು ಅನಿಸುತ್ತವೆ? ಚಂದ್ರನ ಕುರಿತಾದ ಪದ್ಯ ತಿಳಿದಿದೆಯೇ?

ಆ ಬಳಿಕ ಚಂದ್ರನ ಕುರಿತಾದ ಕೆಳಗಿನ ಪದ್ಯವನ್ನು ಮಕ್ಕಳಿಂದ ಹಾಡಿಸುವುದು.

## ಅಮ್ಮಾ ಚಂದಿರ ನನ್ನವನು

ಎಲ್ಲಿಗೆ ನಾ ಹೋದರಲ್ಲಿಗೆ ಬರುವನು<br>
ಅಮ್ಮಾ ಚಂದಿರ ನನ್ನವನು!<br>
ನಿನ್ನವ ನಾನಾಗಿರುವುದರಿಂದ<br>
ಅಮ್ಮಾ ಚಂದಿರ ನಿನ್ನವನು<br>
ಅಮ್ಮಾ ಚಂದಿರ ನನ್ನವನು ।।ಎಲ್ಲಿಗೆ।।

ಮೂಡಣದೆಸೆಯೊಳು ಗಿರಿಗಳನೇರುತ<br>
ಓಡುತ ಬರುತಿದೆ ನನಗಾಗಿ।<br>
ಮೂಡುವನೆಂಬರು ಜನರೆಲ್ಲಮ್ಮ<br>
ಕೂಡಲು ಬರುತಿರೆ ಮೂರ್ತಿಯನು।।<br>
ನಮ್ಮನೆಯಂಗಳದಲ್ಲಾಡುತಿರೆ<br>
ನೆತ್ತಿಯ ಮೇಲೆಯೆ ತೋರುವನು।<br>
ಮಾವನ ಮನೆಯೊಳಗುಳಿಯಲು ಹೋದರೆ<br>
ಅಲ್ಲಿಗು ಬರುವನು ಚಂದಿರನು ।।<br>
ನೆರೆಮನೆ ಕಿಟ್ಟು ಕರೆದರೆ ಹೋಗನು<br>
ಮೂರ್ತಿಯನೆಂದು ಬಿಟ್ಟಿರನು<br>
ಎಲ್ಲಿಗೆ ನಾ ಹೋದರಲ್ಲಿಗೆ ಬರುವನು<br>
ಅಮ್ಮಾ ಚಂದಿರ ನನ್ನವನು।।

**– ಕುವೆಂಪು**

❑ **ಪದ್ಯಹಾಡುವ**

ಪದ್ಯವನ್ನು ವೈಯಕ್ತಿಕವಾಗಿ ಓದಲಿ. ಪದ್ಯ ಓದುವ ವಿವಿಧ ಹಂತಗಳನ್ನು ಪಾಲಿಸಿಕೊಂಡು ಓದುವಿಕೆ ನಡೆಸುವುದು. ಮಕ್ಕಳು ಗುಂಪುಗಳಲ್ಲಿ ಪದ್ಯವನ್ನು ರಾಗ ಹಾಕಿ ಹಾಡಲಿ. ಮೌಲ್ಯನಿರ್ಣಯ ಸೂಚಕಗಳ ಆಧಾರದಲ್ಲಿ, ಉತ್ತಮವಾಗಿ ಹಾಡಿದ ಗುಂಪನ್ನು ಅಭಿನಂದಿಸುವುದು.

❑ **ಪದಗಳ ಅರ್ಥ ಕಂಡುಹಿಡಿಯುವ**

ಮಕ್ಕಳು ಪಾಠ ಭಾಗದಿಂದ ನವೀನ ಪದಗಳನ್ನು ಆರಿಸಲಿ. ಅರ್ಥಕೋಶದ ಸಹಾಯದಿಂದ ಅರ್ಥವನ್ನು ವೈಯಕ್ತಿಕವಾಗಿ ಬರೆದು ಮಂಡಿಸಲಿ. ಅಧ್ಯಾಪಕರು ಮೌಲ್ಯನಿರ್ಣಯ ಮಾಡುವುದು.

❑ **ಉತ್ತರಿಸುವ**

ಮಕ್ಕಳು ಪ್ರಶ್ನೆಗಳಿಗೆ ಸೂಕ್ತವಾದ ಉತ್ತರಗಳನ್ನು ಕಂಡುಕೊಳ್ಳಲಿ. ವೈಯಕ್ತಿಕವಾಗಿ ಅಭ್ಯಾಸ ಪುಸ್ತಕದಲ್ಲಿ ಬರೆಯಲಿ. ಮಕ್ಕಳು ಪರಸ್ಪರ ಉತ್ತರಗಳನ್ನು ಹೋಲಿಸಿ ನೋಡಲಿ. ಅಧ್ಯಾಪಕರು ಮೌಲ್ಯನಿರ್ಣಯ ಮಾಡುವುದು.

❑ **ಇಷ್ಟವಾದ ಸಾಲನ್ನು ಬರೆಯುವ**

ಪದ್ಯದ ಆಶಯದ ಕುರಿತಾಗಿ ಚರ್ಚಿಸುವುದು. ಮಕ್ಕಳು ಪದ್ಯದಿಂದ ತಮಗೆ ಇಷ್ಟವಾದ ಸಾಲನ್ನು ಆರಿಸಲಿ. ಯಾಕೆ ಇಷ್ಟವಾಯಿತು ಎಂದು ಸಮರ್ಥಿಸಲಿ. ತರಗತಿಯಲ್ಲಿ ಮಂಡಿಸಲಿ. ಅಧ್ಯಾಪಕರು ತಮಗೆ ಇಷ್ಟವಾದ ಸಾಲು ಯಾವುದು? ಯಾಕೆ? ಎಂದು ಹೇಳುವುದು ಮತ್ತು ಬರೆದು ಪ್ರದರ್ಶಿಸುವುದು. ಮಕ್ಕಳಿಗೆ ತಮ್ಮ ಬರವಣಿಗೆಯನ್ನು ಉತ್ತಮಪಡಿಸಲು ಅವಕಾಶವನ್ನು ನೀಡುವುದು. ಅಧ್ಯಾಪಕರು ಮೌಲ್ಯನಿರ್ಣಯ ಮಾಡುವುದು.

❑ **ಪ್ರಾಸಪದ ಬರೆಯುವ**

ಪದ್ಯದಲ್ಲಿರುವ ಪ್ರಾಸ ಪದಗಳನ್ನು ಮಕ್ಕಳು ಆರಿಸಿ ಬರೆಯಲಿ. ತರಗತಿಯಲ್ಲಿ ಕೆಲವರು ಮಂಡಿಸಲಿ. ಅಧ್ಯಾಪಕರು ಮೌಲ್ಯನಿರ್ಣಯ ಮಾಡುವುದು.

| | | |
|---|---|---|
| ಹೆದರಿಹನೆ | – | ಬೆದರಿಹನೆ |
| ಆಗಿಹನೇ | – | ಬಿಗಿಯುವನೇ |
| ಮನೆಗೀಗ | – | ಬೆಳಗೀಗ |
| ನಾನು | – | ತಾನು |
| ತೇಲುವನು | – | ಆಡುವನು |

❑ **ವಿವರಿಸುವ**

ಪಾಠಪುಸ್ತಕದಲ್ಲಿರುವ ಚಿತ್ರವನ್ನು ತೋರಿಸುವುದು. ಚಿತ್ರದ ಕುರಿತು ಚರ್ಚೆ ನಡೆಸುವುದು. ಚಿತ್ರದಲ್ಲಿ ಏನಿದೆ? ಬೆಳದಿಂಗಳ ರಾತ್ರಿಯಲ್ಲಿ ಆಕಾಶದಲ್ಲಿ ಏನೇನು ಕಾಣಿಸುತ್ತವೆ? ಮೊದಲಾದ ಪ್ರಶ್ನೆಗಳನ್ನು ಕೇಳುವುದು. ಮಕ್ಕಳು ಬರೆಯಲಿ. ಗುಂಪಿನಲ್ಲಿ ಮಂಡಿಸಲಿ, ಗುಂಪಿನ ಮಂಡನೆಯ ಬಳಿಕ ಉತ್ತಮವಾದುದನ್ನು ಆಯ್ಕೆ ಮಾಡಲಿ. ಅಧ್ಯಾಪಕರು ಬರೆದುದನ್ನು ಪ್ರದರ್ಶಿಸುವುದು. ಮಕ್ಕಳು ಅದನ್ನು ನೋಡಿ ತಾವು ಬರೆದುದನ್ನು ಉತ್ತಮಪಡಿಸಲಿ.

ಹುಣ್ಣಿಮೆಯ ಚಂದಿರನು ಆಗಸದಲ್ಲಿ ಕಾಣುತ್ತಿದ್ದಾನೆ. ಸುತ್ತಲೂ ಹಾಲುಚೆಲ್ಲಿದಂತೆ ಬೆಳದಿಂಗಳು ಹರಡಿದೆ. ಬೆಟ್ಟದ ತಪ್ಪಲಿನಲ್ಲಿ ಬೆಳೆದಿರುವ ಮರದಡಿಯಲ್ಲಿ ನಿಂತ ಮಕ್ಕಳು ಬೆಳದಿಂಗಳ ಚೆಲುವನ್ನು ಸವಿಯುತ್ತಿದ್ದಾರೆ. ಆಕಾಶದಲ್ಲಿ ಓಡುತ್ತಿರುವ ಚಂದ್ರನನ್ನು ತೋರಿಸುತ್ತಾ ಮಕ್ಕಳು ಸಂಭ್ರಮಿಸುತ್ತಿದ್ದಾರೆ. ಎತ್ತ ನೋಡಿದರೂ ಸಾಲು ಸಾಲು ನಕ್ಷತ್ರಗಳು ಮಿರಮಿರನೆ ಮಿನುಗುತ್ತವೆ. ಆಗೊಮ್ಮೆ ಈಗೊಮ್ಮೆ ಚಂದ್ರನು ಮೋಡಗಳೆಡೆಯಲ್ಲಿ ನುಸುಳಿ ಕಣ್ಣು ಮುಚ್ಚಾಲೆ ಆಟ ಆಡುತ್ತಿದ್ದಾನೆ.

### ❑ ಪ್ರದರ್ಶಿಸುವ

ಮಕ್ಕಳು ತಾವು ಬರೆದ ವಿವರಣೆಯ ಆಧಾರದಲ್ಲಿ ಚಿತ್ರವನ್ನು ಬಿಡಿಸಲಿ. ತರಗತಿಯಲ್ಲಿ ಪ್ರದರ್ಶಿಸಲಿ. ಚಿತ್ರಗಳನ್ನು ಒಟ್ಟು ಸೇರಿಸಿ ಸಂಚಿಕೆ ತಯಾರಿಸಲಿ.

### ❑ ಕಥೆ ಹೇಳುವ

ಮಕ್ಕಳಲ್ಲಿ ಕಥೆ ಹೇಳುವ ಸಾಮರ್ಥ್ಯವನ್ನು ಬೆಳೆಸಲು ಈ ಚಟುವಟಿಕೆಯನ್ನು ಕೊಡಲಾಗಿದೆ. ಮಕ್ಕಳು ಕಥೆಗಳನ್ನು ಹಿರಿಯರಿಂದ ಕೇಳಿ ತಿಳಿಯಲಿ. ಆ ಕಥೆಗಳನ್ನು ತರಗತಿಯಲ್ಲಿ ಹೇಳಲು ಅವಕಾಶವನ್ನು ನೀಡುವುದು.

### ❑ ಆಲಿಸುವ

'ಚಂದಿರನೇತಕೆ ಓಡುವನಮ್ಮ....' ಪದ್ಯದ ಧ್ವನಿ ಮುದ್ರಿಕೆಯನ್ನು ಆಲಿಸಲು ಮಕ್ಕಳಿಗೆ ಅವಕಾಶವನ್ನು ನೀಡುವುದು. ಈ ಚಟುವಟಿಕೆಯನ್ನು 'ಪದ್ಯ ಹಾಡುವ' ಚಟುವಟಿಕೆಯ ಕೊನೆಯಲ್ಲಿಯೂ ನಡೆಸಬಹುದು.

### ❑ ಪ್ರಶ್ನೆ ತಯಾರಿಸುವ

ಕೊಟ್ಟಿರುವ ಗದ್ಯ ಭಾಗವನ್ನು ವೈಯಕ್ತಿಕವಾಗಿ ಓದಲು ಹೇಳುವುದು. ಪ್ರಶ್ನೆಗಳನ್ನು ವೈಯಕ್ತಿಕವಾಗಿ ಬರೆದು, ಬಳಿಕ ಉತ್ತರವನ್ನು ಬರೆಯಲಿ. ಅಧ್ಯಾಪಕರು ಅಗತ್ಯವಾದ ಸಲಹೆ, ಸೂಚನೆಗಳನ್ನು ನೀಡುವುದು. ಗುಂಪಿನಲ್ಲಿ ಮಕ್ಕಳು ಪರಸ್ಪರ ಮೌಲ್ಯ ನಿರ್ಣಯ ಮಾಡಿ, ಹೋಲಿಸಿ ನೋಡಿ ಉತ್ತರಗಳನ್ನು ಉತ್ತಮಪಡಿಸಲಿ. ಅಧ್ಯಾಪಕರು ಮೌಲ್ಯನಿರ್ಣಯ ಮಾಡುವುದು.

### ❑ ಸಂಗ್ರಹಿಸುವ

ಮಕ್ಕಳು ಶಿಶು ಗೀತೆಗಳನ್ನು ಸಂಗ್ರಹಿಸಲಿ. ಶಿಶು ಗೀತೆಗಳನ್ನು ಹಾಡಲು ತರಗತಿಯಲ್ಲಿ ಅವಕಾಶಗಳನ್ನು ನೀಡುವುದು.

### ಮೌಲ್ಯನಿರ್ಣಯ ಚಟುವಟಿಕೆಗಳು

1. ಸಿಂಡ್ರೆಲ್ಲಾಳಲ್ಲಿ ಮಲತಾಯಿ ವರ್ತಿಸಿದ ರೀತಿ ಸರಿಯೇ? ನಿಮ್ಮ ಅಭಿಪ್ರಾಯವೇನು? ಬರೆಯಿರಿ.
2. ಬೊಂಬೆಯ ಕುರಿತು ಪದ್ಯವನ್ನು ರಚಿಸಿ ಶೀರ್ಷಿಕೆಯನ್ನು ಬರೆಯಿರಿ.
3. ಚಂದ್ರನಿಗೆ ಸಂಬಂಧಿಸಿದ ಒಗಟುಗಳನ್ನು ಬರೆಯಿರಿ.
4. ಪದ್ಯದಲ್ಲಿ ಬಂದಿರುವ ಪ್ರಾಸಪದಗಳನ್ನು ಓದಿದಿರಲ್ಲವೇ? ಇದೇ ರೀತಿಯ ಇತರ ಪ್ರಾಸಪದಗಳನ್ನು ಬರೆಯಿರಿ.

* * *